# THE EPISTLE OF PAUL THE APOSTLE TO THE ROMANS.

## ಅಪೊಸ್ತಲನಾದ ಪೌಲನು ರೋಮಾಯರಿಗೆ ಬರೆದ ಪತ್ರಿಕೆಯ ಪೀಠಿಕೆ.

ಈ ಪತ್ರಿಕೆಯು ಶ್ರೇಷ್ಠ ಪಟ್ಟಣವೆಂದು ಎಣಿಸಲ್ಪಟ್ಟ ರೋಮಪುರಿಯಲ್ಲಿದ್ದ ಕ್ರೈಸ್ತರಿಗೆ ಬರೆಯಲ್ಪಟ್ಟಿತು. ಅವರು ಪೌಲನಿಗೆ ಪರಿಚಿತಿ ಇಲ್ಲದಿದ್ದಾಗ್ಯೂ, ಜನಾಂಗಗಳ ಅಪೊಸ್ತಲನಾದ ಆತನು ಕ್ರಿಸ್ತನ ಮಾರ್ಗದ ದಿವ್ಯ ಸತ್ಯಗಳನ್ನು ಕುರಿತು ಅವರಿಗೆ ಉಪದೇಶಿಸುವದು ತನ್ನ ಕೆಲಸವೆಂದು ಗ್ರಹಿಸಿ ಈ ಪತ್ರಿಕೆಯನ್ನು ಬರೆದನು. (ರೋಮಾ. ೧, ೧೪, ೧೫.) ಇದರಲ್ಲಿ ಸುವಾರ್ತೆಯ ಮುಖ್ಯ ಬೋಧನೆಗಳನ್ನು ಬಹು ಅಲಂಕಾರವಾಗಿ ಬರೆದಿದ್ದಾನೆ.

ರೋಮಾಯ ಕ್ರೈಸ್ತರು ಒಂದು ಪಾಲು ಯೆಹೂದ್ಯರಾಗಿಯೂ, ಒಂದು ಪಾಲು ಜನಾಂಗಗಳವರಾಗಿಯೂ ಇದ್ದರು. ಆ ಸ್ಥಳದಲ್ಲಿ ಕ್ರೈಸ್ತ ಸಭೆಯುಂಟಾಗುವದಕ್ಕೆ ಸ್ವಲ್ಪ ಕಾಲಕ್ಕೆ ಮುಂಚೆ ಅನೇಕ ಯೆಹೂದ್ಯರು ಅಲ್ಲಿ ನಿವಾಸವಾಗಿದ್ದರು. ಅವರ ದೇಶಾಚಾರಗಳನ್ನೂ ಮತಾಚಾರಗಳನ್ನೂ ಜನಾಂಗಗಳವರಲ್ಲಿ ಅನೇಕರು ನೋಡಿ, ಅವುಗಳನ್ನು ಅನುಸರಿಸುವದಕ್ಕೆ ಮನಸ್ಸುಳ್ಳವರಾದದರಿಂದ ಕವಿಯಾಗಿದ್ದ (Juvenal) ಜೂವನಲ್ ಎಂಬವನು ತನ್ನ ದೇಶದವರಾದ ರೋಮಾಯರೆಲ್ಲರೂ ಯೆಹೂದ್ಯರಾಗಿ ಹೋದರೆಂದು ನಿಂದೆಯಾಗಿ ಹಾಡಿದನು. ಹೀಗೆ ಯೆಹೂದ್ಯರ ಆಚಾರಗಳನ್ನು ಅನುಷ್ಟಿಸಿದ ಜನಾಂಗಗಳವರು ಕ್ರಿಸ್ತನ ಮಾರ್ಗವನ್ನು ಕುರಿತು ಕೇಳಿ, ಅದರ ಸತ್ಯವನ್ನು ಗ್ರಹಿಸಿ, ಅದನ್ನು ಅನುಸರಿಸಿದರು. ಅವರ ಸಂಖ್ಯೆಯು ರೋಮಪುರಿಯಲ್ಲಿಯೂ ಬೇರೆ ಸ್ಥಳಗಳಲ್ಲಿಯೂ ಅಧಿಕವಾಗಿತ್ತು. ಅದರಿಂದ ಪೌಲನು ಅವರು ಯೆಹೂದ್ಯ ಪ್ರಮಾಣಗಳನ್ನು ಚನ್ನಾಗಿ ಅರಿತವರೆಂಬುವ ಭಾವನೆಯಿಂದ ಈ ಪತ್ರಿಕೆಯನ್ನು ಬರೆಯುತ್ತಾನೆ.

ರೋಮಪುರಿಯಲ್ಲಿ ಮೊದಲು ಕ್ರೈಸ್ತ ಸಭೆ ಯಾವ ಕಾಲದಲ್ಲಿ ಯಾರಿಂದ ಸ್ಥಾಪಿಸಲ್ಪಟ್ಟಿತೆಂದು ನಿಶ್ಚಯವಾಗಿ ಹೇಳುವದಕ್ಕೆ ಹೇತುವೆ ಇಲ್ಲ. ಆ ಪಟ್ಟಣದಲ್ಲಿ ಕ್ರೈಸ್ತರು ಇದ್ದರೆಂಬುವದೂ, ಅವರ ವಿಶ್ವಾಸವು ಲೋಕದಲ್ಲೆಲ್ಲಾ ಪ್ರಸಿದ್ಧಿಯಾಗಿದ್ದದರಿಂದ ಅವರು ನೂತನ ಕ್ರೈಸ್ತರಲ್ಲವೆಂಬುವದೂ ಈ ಪತ್ರಿಕೆಯಿಂದ ಸ್ಪಷ್ಟವಾಗಿ ತೋರುತ್ತದೆ. (೧. ೮.) ಪಂಚಾಶತ್ತಿನ ದಿವಸದಲ್ಲಿ ಯೆರೂಸಲೇಮಿಗೆ ಬಂದಿದ್ದ ರೋಮಪುರಿಯವರೂ, ಯೆಹೂದ್ಯರೂ, ಯೆಹೂದ್ಯ ಮತಕ್ಕೆ ಸೇರಿದವರೂ ಆದ ಕೆಲವರು ರೋಮಪುರಿಗೆ ಹಿಂತಿರುಗಿ ಹೋಗಿ ಸುವಾರ್ತೆಯನ್ನು ಪ್ರಸಂಗಿಸಿ, ಸಭೆಯನ್ನು ಸ್ಥಾಪಿಸಿರ ಬಹುದು. (ಅಪೊ. ಕ್ರಿ. ೨. ೧೦.) ಈ ಪ್ರಕಾರ ಪ್ರಾರಂಭಿಸಿದ ಆ ಸದ್ವೃತ್ತಿಯು ರೋಮಪುರಿಯಲ್ಲಿ ವಾಸವಾಗಿದ್ದ ಯೆಹೂದ್ಯರಿಗೂ, ಯೆಹೂದ, ಗ್ರೇಕ, ಚಿಕ್ಕ ಆಸ್ಯ ಮೊದಲಾದ ದೇಶಗಳಲ್ಲಿರುವ ಯೆಹೂದ್ಯರಿಗೂ ಉಂಟಾಗಿದ್ದ ಸಹವಾಸ ಸಮ್ಮಂಧಗಳಿಂದ ವೃದ್ಧಿ ಹೊಂದುತ್ತಾ ಬಂದಿರುವದು. ರೋಮಪುರಿಯಿಂದ ಸ್ವಲ್ಪ ಕಾಲ ಹೊರಡಿಸಲ್ಪಟ್ಟಿದ್ದ ಯೆಹೂದ್ಯರು ಕ್ರಿಸ್ತನ ಮಾರ್ಗವು ಸ್ಥಾಪಿಸಲ್ಪಟ್ಟಿದ್ದ ಕೆಲವು ದೇಶಗಳಲ್ಲಿ ವಾಸಿಸುತ್ತಾ ಬಂದದರಿಂದ ಅವರು ಆ ಮಾರ್ಗವನ್ನು ತಿಳಿದುಕೊಳ್ಳಲೂ, ಅದರ ಅಭಿವೃದ್ಧಿಗೆ ಅನುಕೂಲವಾದ ಪ್ರಯತ್ನಗಳನ್ನು ಮಾಡಲೂ ಹೇತುವೆಯಾಯಿತು. (ಅಪೊ. ಕ್ರಿ. ೧೮. ೨.)

ಅಪೊಸ್ತಲನಾದ ಪೇತ್ರನಿಂದ ರೋಮಪುರಿಯಲ್ಲಿ ಸಭೆಯು ಸ್ಥಾಪಿಸಲ್ಪಟ್ಟಿತೆಂದು ಸಭಾಪಿತೃಗಳಲ್ಲಿ ಕೆಲವರು ಬರೆದಿರುವ ಸಂಗತಿಗೆ ಅಪೊಸ್ತಲರ ಕ್ರಿಯೆಗಳಲ್ಲಾದರೂ ಈ ಪತ್ರಿಕೆಯಲ್ಲಾದರೂ ಎಷ್ಟು ಮಾತ್ರವೂ ಆಧಾರವಿಲ್ಲ. ಪೇತ್ರನು ರೋಮಪುರಿಯಲ್ಲಿದ್ದನೆಂದು ಅವರು ಹೇಳಿದ ಕಾಲದಲ್ಲಿಯೇ ಅವನು ಪಲೆಸ್ತೀನದಲ್ಲಿ ಇದ್ದನೆಂದು ಅಪೊಸ್ತಲರ ಕ್ರಿಯೆಗಳ ಗ್ರಂಥದಲ್ಲಿ ಪ್ರಕಟವಾಗಿದೆ. ಪೇತ್ರನು ರೋಮಪುರಿಯಲ್ಲಿ ಸಭೆಯನ್ನು ಸ್ಥಾಪಿಸಿದವನಾಗಿದ್ದರೆ, ಬೇರೊಬ್ಬನು ಹಾಕಿದ ಅಸ್ತಿವಾರದ ಮೇಲೆ ತಾನು ಕಟ್ಟುವದಿಲ್ಲವೆಂದು ನಿರ್ಣಯ ಮಾಡಿ ಕೊಂಡಿದ್ದ ಪೌಲನು (೧೫. ೨೯. ೨ ಕೊರಿ. ೧೦. ೧೫, ೧೬.) ತನ್ನ ಅಪೊಸ್ತಲೋದ್ಯೋಗವನ್ನು ಪೂರೈಸುವದಕ್ಕೆ ರೋಮಪುರಿಗೆ ಹೋಗ ಆಗಾಗ್ಯೆ ಪ್ರಯತ್ನ ಮಾಡಲಾರನು. (ರೋಮಾ. ೧. ೧೩; ೧೫. ೨೨—೨೪. ಅಪೊ. ಕ್ರಿ. ೧೯. ೨೧.) ಮತ್ತು ಆ ಸಭೆಯವರಿಗೆ ಇಷ್ಟು ದೊಡ್ಡ ನಿರೂಪವನ್ನು ಬರೆಯಲಾರನು. ಒಂದು ವೇಳೆ ಹಾಗೆ ಬರೆದಾಗ್ಯೂ ಸಭೆಯನ್ನು ಸ್ಥಾಪಿಸಿದವನಾದ ಪೇತ್ರನನ್ನು ಕುರಿತು ಒಂದು ಮಾತಾದರೂ ಹೇಳದೆ ಇರಲಾರನು. ಪೌಲನು ವಂದಿಸುವ ಅನೇಕ ಬೋಧಕರಲ್ಲಿ ಪೇತ್ರನ ಹೆಸರು ಹೇಳಲ್ಪಡಲೇ ಇಲ್ಲ. (೧೬. ಸಂಧಿ.)

ಈ ಪತ್ರಿಕೆಯು ಬರೆಯಲ್ಪಟ್ಟ ಕಾಲದಲ್ಲಿ ರೋಮ ಸಭೆಯವರ ಸ್ಥಿತಿಯು ಪೌಲನಿಗೆ ಸಂತೋಷ ಕೊಡ ತಕ್ಕದ್ದಾಗಿತ್ತು. (೧. ೮.) ಆದಾಗ್ಯೂ ಯೆಹೂದ್ಯರಾದ ಕ್ರೈಸ್ತರಿಗೂ ಜನಾಂಗಗಳವರಾದ ಕ್ರೈಸ್ತರಿಗೂ ಕ್ರಿಸ್ತನ ರಾಜ್ಯದಲ್ಲಿ ಮುಖ್ಯವಾದವರು ಯಾರು ಎಂಬುವದನ್ನು ಕುರಿತು ವಾಗ್ವಾದಗಳು ಉಂಟಾಗಿದ್ದವು. (೧೧. ಸಂಧಿ.) ಮತ್ತು ಹೊರಗಿನ ಆಚಾರಗಳನ್ನು ಕುರಿತು ಸಹ ವಿಕಲ್ಪಗಳು ಉಂಟಾಗಿದ್ದವೆಂದು ತೋರುತ್ತದೆ. (೧೪. ೧೫. ಸಂಧಿಗಳು.)

ಈ ಪತ್ರಿಕೆಯು ಬರೆಯಲ್ಪಟ್ಟ ಕಾಲವೂ ಸ್ಥಳವೂ ಯಾವವೆಂದು ನಿಶ್ಚಯವಾಗಿ ತಿಳಿದು ಕೊಳ್ಳ ಹೇತುವೆಯುಂಟು. ಮಕೆದೋನ್ಯ ಅಕಾಯ ದೇಶಗಳ ಕ್ರೈಸ್ತರು ಯೆಹೂದದಲ್ಲಿರುವ ಬಡ ಕ್ರೈಸ್ತರಿಗೆ ಕೊಟ್ಟ ಧರ್ಮಹಣವನ್ನು ಪೌಲನು



ಅಲ್ಲಿಗೆ ತೆಗೆದು ಕೊಂಡು ಹೋಗುವದಕ್ಕೆ ಪ್ರಯತ್ನ ಮಾಡಿದ್ದನು. (೧೫. ೨೫, ೨೬.) ಆ ಕಾಲದಲ್ಲಿ ರೋಮಪುರಿಯನ್ನು ನೋಡಿದವನಲ್ಲ. (೧. ೧೧—೧೫.) ಆತನು ಚಿಕ್ಕ ಆಸ್ಯದಲ್ಲಿಯೂ ಗ್ರೇಕ ದೇಶದಲ್ಲಿಯೂ ತನ್ನ ಊಳಿಗವನ್ನು ಪೂರೈಸಿದ ತರುವಾಯ (೧೫. ೧೯—೨೩.) ಯೆರೂಸಲೇಮಿಗೆ ಹೋಗಿ, ಅಲ್ಲಿಂದ ರೋಮಪುರಿಗೆ ಹೋಗ ಮನಸ್ಸಾಗಿದ್ದನು. (೧೫. ೨೮.) ಈ ಸಂಗತಿಗಳನ್ನೂ, ೧ ಕೊರಿ. ೧೬. ೧—೭ಲ್ಲಿಯೂ, ೨ ಕೊರಿ. ೮ನೇ ೯ನೇ ಸಂಧಿಗಳಲ್ಲಿಯೂ ಕಾಣಿಕೆಯನ್ನು ಕುರಿತು ಹೇಳಿದ ಸಂಗತಿಗಳನ್ನೂ, ಅಪೊ. ಕ್ರಿ. ೧೯—೨೧ನೇ ಸಂಧಿಯ ವರಿಗೂ ಪೌಲನ ಪ್ರಯಾಣಗಳನ್ನು ಕುರಿತು ಹೇಳಲ್ಪಟ್ಟ ವರ್ತಮಾನಗಳನ್ನೂ ಸರಿ ನೋಡುವಾಗ, ಆತನು ಕಡೆಯಾಗಿ ಯೆರೂಸಲೇಮಿಗೆ ಹೋಗ ಹೊರಡುವದಕ್ಕಿಂತ ಸ್ವಲ್ಪ ಮುಂಚೆ ಮೂರು ತಿಂಗಳು ಕೊರಿಂಥ ಪಟ್ಟಣದಲ್ಲಿರುವಾಗ, ನೇರೋ ಕೈಸರನು ಆಳಿದ ನಾಲ್ಕನೇ ವರುಷವಾದ (A. D.) ೫೮ನೇ ವರುಷದಲ್ಲಿ ಈ ಪತ್ರಿಕೆಯನ್ನು ಬರೆದನೆಂದು ಪ್ರತ್ಯಕ್ಷವಾಗಿ ತೋರುತ್ತದೆ. (ಅಪೊ. ಕ್ರಿ. ೧೯. ೨೧; ೨೦. ೩.) ಆಗ ಆತನ ಸಂಗಡ ಇದ್ದವರನ್ನು ಕುರಿತು ಹೇಳಲ್ಪಟ್ಟಿರುವ ವಿಶೇಷಗಳಿಂದ ಈ ಕಾರ್ಯವನ್ನು ಚನ್ನಾಗಿ ತಿಳಿದು ಕೊಳ್ಳ ಬಹುದು. (೧೬. ೧, ೨೧—೨೩. ವಚನಗಳ ವ್ಯಾಖ್ಯಾನ ನೋಡ ಬೇಕು.)

ಈ ಪತ್ರಿಕೆಯಲ್ಲಿ ರಕ್ಷಣೆಯ ಸುವಾರ್ತೆಗೂ ಪರಿಶುದ್ಧ ನ್ಯಾಯಪ್ರಮಾಣಕ್ಕೂ ಇರುವ ಸಮ್ಮಂಧವು ಚನ್ನಾಗಿ ತೋರುತ್ತದೆ. ಈ ಶ್ರೇಷ್ಠವಾದ ಸುವಾರ್ತೆಯ ಮಾರ್ಗವು ದೇವರ ನೀತಿಯನ್ನು ಪ್ರಕಟ ಮಾಡುವದಾಗಿಯೂ, ಪಾಪವನ್ನು ಖಂಡಿಸುವದಾಗಿಯೂ, ಭಕ್ತನನ್ನು ನೀತಿನಿರ್ಣಯಿಸುವದಾಗಿಯೂ, ನ್ಯಾಯಪ್ರಮಾಣವನ್ನು ಪೂರೈಸುವದಾಗಿಯೂ ಇರುತ್ತದೆ. (೧. ೧೭; ೩. ೨೪; ೮. ೪.) ಕ್ರಿಸ್ತನು ನ್ಯಾಯಪ್ರಮಾಣದ ಈಡೇರಿಕೆಯಾಗಿರುವದರಿಂದ ದೇವರ ನೀತಿ ಪ್ರಕಟವಾಗುವದಕ್ಕೂ, ಮನುಷ್ಯರ ಪಾಪವು ನಿವರ್ತಿಯಾಗುವದಕ್ಕೂ ಮೂಲಕಾರಣನಾಗಿದ್ದಾನೆ. ಆತನ ವಿಧೇಯತ್ವದಿಂದ ಅನೇಕರು ನೀತಿವಂತರಾಗುತ್ತಾರೆ. ಆತನನ್ನು ಹೊಂದಿದ ಭಕ್ತರಿಗೆ ದಂಡನೆ ಎಷ್ಟು ಮಾತ್ರವೂ ಬಾರದು. (೩. ೨೪—೨೬; ೧೦. ೪; ೫. ೧೯; ೮. ೧.)

ಈ ಪತ್ರಿಕೆಯು ನಾಲ್ಕು ಭಾಗಗಳಾಗಿದೆ. ಅವು ಯಾವವಂದರೆ:

I. ಪೀಠಿಕೆ. ಇದರಲ್ಲಿ ಪೌಲನು ತನ್ನ ಅಪೊಸ್ತಲೋದ್ಯೋಗವನ್ನು ಕುರಿತು ಹೇಳಿ, ರೋಮಪುರಿಯ ಕ್ರೈಸ್ತರ ಮೇಲೆ ತನಗುಂಟಾಗಿರುವ ವಾಂಛೆಯನ್ನು ತೋರಿಸಿ, ದೇವರ ನೀತಿಯಾಗಿಯೂ ರಕ್ಷಣೆಯಾಗಿಯೂ ಇರುವ ಸುವಾರ್ತೆಯನ್ನು ರೋಮಪುರಿಯಲ್ಲಿ ಪ್ರಸಂಗಿಸ ವಾಂಛೆಯುಳ್ಳವನಾಗಿದ್ಧೇನೆಂದು ಹೇಳುತ್ತಾನೆ. (೧. ೧—೧೭.)

II. ಉಪದೇಶವು. ಮೊದಲನೇದು: ಯೆಹೂದ್ಯರು, ಜನಾಂಗಗಳವರಾದ ಲೋಕದವರು ಎಲ್ಲರೂ ಪಾಪದಿಂದ ದೇವರ ಕೋಪಕ್ಕೆ ಒಳಗಾಗಿದ್ದಾರೆಂದೂ, (೧. ೧೮—೩. ೨೦ ವರಿಗೆ.) ಎರಡನೇದು: ರಕ್ಷಕನಾದ ಕ್ರಿಸ್ತನ ಶರಣು ಹೊಗುವ ಭಕ್ತರಿಗೆ ದೇವರ ನೇಮಕದ ಪ್ರಕಾರ ಪೂರ್ಣ ರಕ್ಷಣೆ ಉಂಟಾಗುವದೆಂದೂ, (೩. ೨೧—೮. ೩೯.) ಮೂರನೇದು: ದೇವರ ನೀತಿಯ ಪ್ರಕಾರ ಯೆಹೂದ್ಯರು ತಳ್ಳಲ್ಪಟ್ಟು, ಆತನ ಮಹಾ ಕೃಪೆಯಿಂದ ಜನಾಂಗಗಳವರು ಕರೆಯಲ್ಪಟ್ಟರೆಂದೂ ಹೇಳುತ್ತಾನೆ. (೯. ೧—೧೧. ೩೬. ವರಿಗೂ.)

III. ಬುದ್ಧಿಮತಿಗಳು. ಭಕ್ತರು ದೇವರ ಕನಿಕರಗಳನ್ನು ಗ್ರಹಿಸಿ, ತಮ್ಮನ್ನು ಪೂರ್ಣವಾಗಿ ಆತನಿಗೆ ಕಾಣಿಕೆಯಾಗಿ ಸಮರ್ಪಿಸಿ ಪರಿಶುದ್ಧರಾಗಿ ನಡಿಯ ಬೇಕೆಂದೂ, (೧೨ನೇ ೧೩ನೇ ಸಂಧಿ.) ವಿಶ್ವಾಸದಲ್ಲಿ ಬಲಹೀನರಾದ ಸಹೋದರರನ್ನು ಪ್ರೀತಿಯಿಂದ ನಡಿಸ ಬೇಕೆಂದೂ ಹೇಳುತ್ತಾನೆ. (೧೪. ೧—೧೫. ೧೩. ವರಿಗೂ.)

IV. ಅಂತ್ಯೋಕ್ತಿ. ಇದರಲ್ಲಿ ಪೌಲನು ರೋಮಪುರಿಯ ಕ್ರೈಸ್ತರ ಮೇಲಿರುವ ವಾಂಛೆಯನ್ನೂ, ಅವರನ್ನು ನೋಡ ಬೇಕೆಂಬುವ ಕೋರಿಕೆಯನ್ನೂ ತೋರಿಸಿ, (೧೫. ೧೬—೩೩.) ಕಡೆಯಲ್ಲಿ ಕೆಲವು ಆಲೋಚನೆಗಳನ್ನೂ ವಂದನೆಗಳನ್ನೂ ಹೇಳಿ ಪತ್ರಿಕೆಯನ್ನು ಮುಗಿಸುತ್ತಾನೆ. (೧೬. ಸಂಧಿ.)

# THE EPISTLE OF PAUL THE APOSTLE TO THE ROMANS.

## ಅಪೊಸ್ತಲನಾದ ಪೌಲನು

# ರೋಮಾಯರಿಗೆ ಬರೆದ ಪತ್ರಿಕೆ.

ಪೀಠಿಕೆ: ಪತ್ರಿಕೆಯ ಸಾರಾಂಶ.

1. [1]ಮಾಂಸದ ಪ್ರಕಾರ ದಾವೀದನ ಬೀಜದಿಂದ ಹುಟ್ಟಿ, (೨) ಪರಿಶುದ್ಧತ್ವದ ಆತ್ಮದ ಪ್ರಕಾರ ದೇವರ
ಮಗನೆಂದು ಸತ್ತವರ ಪುನರುತ್ಥಾನದಿಂದ ಬಲವಾಗಿ ನಿರ್ಣಯಿಸಲ್ಪಟ್ಟ ನಮ್ಮ [2]ಕರ್ತನಾದ ಯೇಸು ಕ್ರಿಸ್ತ
೩ ನೆಂಬ ತನ್ನ ಮಗನನ್ನು ಕುರಿತು, ದೇವರು ಪರಿಶುದ್ಧವಾದ ಬರಹಗಳಲ್ಲಿ ತನ್ನ [3]ಪ್ರವಾದಿಗಳ ಮುಖಾಂತರ
೪ ಪೂರ್ವದಲ್ಲಿ ವಾಗ್ದತ್ತ ಮಾಡಿದ ಸುವಾರ್ತೆಗೆ [4]ಏರ್ಪಡಿಸಲ್ಪಟ್ಟಂಥ, ಕರೆಯಲ್ಪಟ್ಟ ಅಪೊಸ್ತಲನಾದಂಥ,
೫ ಯೇಸು ಕ್ರಿಸ್ತನ ದಾಸನಾದ ಪೌಲನು, ರೋಮದಲ್ಲಿರುವ ದೇವರ ಪ್ರಿಯರೂ [5]ಕರೆಯಲ್ಪಟ್ಟ ಪರಿಶುದ್ಧರೂ

---

1. ೧—೧೭. ವರೆಗೂ ಈ ಪತ್ರಿಕೆಯ ಪೀಠಿಕೆ ಅಡಗಿ ಇರುತ್ತದೆ. ಮೊದಲನೇದು: ಆಶೀರ್ವಾದ. ಇದರಲ್ಲಿ ದೇವರ ಕುಮಾರನೂ ಸಭೆಯ ಶಿರಸ್ಸೂ ಆಗಿರುವ ಕ್ರಿಸ್ತನ ಸುವಾರ್ತೆಯನ್ನು ಸಮಸ್ತ ಜಾತಿಗಳವರಿಗೂ ಪ್ರಸಂಗಿಸುವದಕ್ಕೆ ಆತನಿಂದ ಪೌಲನಿಗುಂಟಾದ ಅಧಿಕಾರವನ್ನು ಕುರಿತು ಹೇಳಿ ಇದೆ. (೧—೭.) ಎರಡನೇದು: ರೋಮಾಯ ಕ್ರೈಸ್ತರನ್ನು ಕುರಿತು ಪೌಲನಿಗೆ ಉಂಟಾಗಿದ್ದ ಒಳ್ಳೇ ಭಾವನೆಯೂ, ಅವರನ್ನು ಕಂಡು ಅವರಿಗೆ ಆತ್ಮವರಗಳನ್ನು ಕೊಡ ಬೇಕೆಂಬುವ ಅಪೇಕ್ಷೆಯೂ ಸ್ಪಷ್ಟವಾಗಿ ತೋರುತ್ತದೆ. (೮—೧೭.)

2. ಪೂರ್ವ ಪ್ರವಾದನೆಗಳಲ್ಲಿಯೂ ಸುವಾರ್ತೆಯ ಗ್ರಂಥಗಳಲ್ಲಿಯೂ ಅರ್ಥವೂ ಸಾರವೂ ಆಗಿರುವವನು ಕ್ರಿಸ್ತನೇ. ಆತನನ್ನು ಕುರಿತು ಹೇಳಿದ ತರುವಾಯ ಆತನ ಶ್ರೇಷ್ಠ ಸ್ವಭಾವವನ್ನು ಕುರಿತು ಹೇಳಲ್ಪಟ್ಟದೆ. ಮಾಂಸದ ಪ್ರಕಾರ ಇಲ್ಲವೆ ಮನುಷ್ಯತ್ವದ ಪ್ರಕಾರ ಅರಸನಾದ ದಾವೀದನ ವಂಶದಲ್ಲಿ ಹುಟ್ಟಿದವನು. (ಯೋಹಾ. ೧. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ಪರಿಶುದ್ಧತ್ವದ ಆತ್ಮದ ಪ್ರಕಾರ ಅಥವಾ ದೈವತ್ವದ ಪ್ರಕಾರ ದೇವರ ಮಗನಾಗಿ ಪ್ರಕಟವಾದನು. ಆತನು ದೇವರ ಮಗನಾಗಿದ್ದಾನೆಂಬ ನಿಶ್ಚಯವು ಆತನು ಸತ್ತವರೊಳಗಿಂದ ಎದ್ದ ಕಾರಣದಿಂದ ಬಲವಾಗಿ ನಿರೂಪಿಸಲ್ಪಟ್ಟಿತು. ಪುನರುತ್ಥಾನಕ್ಕೆ ಆತನೇ ಕಾರಣನಾಗಿರುವದರಿಂದಲೂ, (ಯೋಹಾ. ೧೧. ೨೫, ೨೬.) ಪ್ರಥಮ ಫಲವಾಗಿರುವದರಿಂದಲೂ, (೧ ಕೊರಿ. ೧೫. ೨೦.) ಈ ಸತ್ಯವು ಚನ್ನಾಗಿ ತಿಳಿಯಲಾಯಿತು.

3. ಸುವಾರ್ತೆಯಲ್ಲಿ ಪ್ರಕಟ ಮಾಡಲ್ಪಟ್ಟಿರುವ ರಕ್ಷಣೆಯ ಮಾರ್ಗವು ಪೂರ್ವ ಪ್ರವಾದಿಗಳ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದರಿಂದ, ಹೊಸ ಒಡಂಬಡಿಕೆಗೂ ಹಳೇ ಒಡಂಬಡಿಕೆಗೂ ಸಮ್ಮಂಧ ಉಂಟಾಗಿರುತ್ತದೆಯೇ ಹೊರ್ತು ಸ್ವಲ್ಪವಾದರೂ ಭೇದವಿಲ್ಲ. ಉಭಯ ಒಡಂಬಡಿಕೆಗಳಲ್ಲಿಯೂ ಲೋಕರಕ್ಷಕನಾಗಿ ತೋರಲ್ಪಡುವವನು ಯೇಸು ಕ್ರಿಸ್ತನೇ.

4. ಪೌಲನು ದೇವರ ಸೇವೆ ಮಾಡುವದಕ್ಕೆ ಕರೆಯಲ್ಪಟ್ಟದ್ದನ್ನು ಕುರಿತು ಹೇಳಿರುತ್ತದೆ. ತಾನು ಕ್ರಿಸ್ತನಿಗೆ ಸೇವಕನಾಗಿರುವದು ಘನವೆಂದೆಣಿಸಿ ಅದನ್ನು ಮುಂದಾಗಿ ಹೇಳುತ್ತಾನೆ. ಆತನು ಕ್ರಿಸ್ತನಿಗೆ ಅಧೀನವಾಗಿಯೂ ಸೇವಕನಾಗಿಯೂ ಇದ್ದನು. ಅದಕ್ಕಾಗಿಯೇ ಆತನು ದೇವರಿಂದ ಕರೆಯಲ್ಪಟ್ಟವನಾಗಿಯೂ ಏರ್ಪಡಿಸಲ್ಪಟ್ಟವನಾಗಿಯೂ ಇದ್ದನು. ಅಂತರಂಗವಾಗಿ ಬಾಲ್ಯದಲ್ಲಿಯೂ (ಗಲಾ. ೧. ೧೫.) ಬಹಿರಂಗವಾಗಿ ಸಭೆಯಿಂದಲೂ ಏರ್ಪಡಿಸಲ್ಪಟ್ಟನು. (ಅಪೊ. ಕ್ರಿ. ೧೩. ೨, ೩.) ದೇವಾಲಯದಲ್ಲಿರುವ ಪಾತ್ರೆಗಳು ಆರಾಧನೆಗೆ ಉಪಯೋಗಿಸುವದಕ್ಕಾಗಿ ಏರ್ಪಡಿಸಲ್ಪಟ್ಟು ಪರಿಶುದ್ಧವಾಗಿದ್ದ ಪ್ರಕಾರ, ಪೌಲನೂ ಬೇರೆ ಉತ್ತಮರಾದ ದೇವರ ಸೇವಕರೆಲ್ಲರೂ ಲೋಕವನ್ನು ತ್ಯಜಿಸಿ ಬಿಟ್ಟು ತಮ್ಮನ್ನು ಪ್ರತ್ಯೇಕಿಸಿ ಕೊಂಡು ದೇವರ ಸೇವೆ ಮಾಡುವವರಾಗಿದ್ದಾರೆ. ದೇವರ ರಕ್ಷಣೆಯ ಮಾರ್ಗವನ್ನು ತಿಳಿಯ ಪಡಿಸುವ ಸುವಾರ್ತೆಯನ್ನು ಸಾರುವದೇ ಅವರಿಗೆ ಶ್ರೇಷ್ಠವಾದ ಕೆಲಸವು.

5. ರೋಮಾಯ ಕ್ರೈಸ್ತರು ಪರಿಶುದ್ಧರಾಗುವ ಹಾಗೆ ದೇವರಿಂದ ಕರೆಯಲ್ಪಟ್ಟವರಾಗಿದ್ದರು. ಪರಿಶುದ್ಧ ನಡತೆ ಇಲ್ಲದ ಕ್ರೈಸ್ತರು ದೇವರಿಂದ ಕರೆಯಲ್ಪಟ್ಟವರಲ್ಲವೆಂದು ನಿಶ್ಚಯಿಸ ಬಹುದು. ಪರಿಶುದ್ಧತ್ವದ ಅಲಂಕಾರವುಳ್ಳವರೇ ದೇವರಿಗೆ ಪ್ರಿಯರಾಗಿದ್ದಾರೆ.



ಆಗಿರುವವರೆಲ್ಲರಿಗೆ — ನಮ್ಮ ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ
೬ [1]ಕೃಪೆಯೂ ಸಮಾಧಾನವೂ ಆಗಲಿ. ಅವನ ಹೆಸರಿನ ನಿಮಿತ್ತ ಎಲ್ಲಾ ಜನಾಂಗಗಳಲ್ಲಿ ವಿಶ್ವಾಸದ ವಿಧೇ
೭ ಯತ್ವಕ್ಕೋಸ್ಕರ ಅವನ ಮುಖಾಂತರ [2]ಕೃಪೆಯನ್ನೂ ಅಪೊಸ್ತಲತನವನ್ನೂ ಹೊಂದಿದ್ದೇವೆ. ಅವರಲ್ಲಿ
ಯೇಸು ಕ್ರಿಸ್ತನಿಂದ [3]ಕರೆಯಲ್ಪಟ್ಟವರಾದ ನೀವು ಸಹ ಇದ್ದೀರಿ.

### ಪೌಲನು ರೋಮುಪುರಿಯಲ್ಲಿ ಸುವಾರ್ತೆ ಪ್ರಸಂಗಿಸ ಆಶಿಸಿದ್ದು.

೮ ಮೊದಲಾಗಿ, ನಿಮ್ಮ ವಿಶ್ವಾಸವು [4]ಸರ್ವಲೋಕದಲ್ಲಿ ಹೆಸರ್ಗೊಂಡಿರುವದರಿಂದ, ನಿಮ್ಮೆಲ್ಲರನ್ನು ಕುರಿತು
೯ [5]ಯೇಸು ಕ್ರಿಸ್ತನ ಮುಖಾಂತರ ನನ್ನ ದೇವರನ್ನು ಸ್ತುತಿಸುತ್ತೇನೆ. ಯಾಕಂದರೆ ಎಡೆ ಬಿಡದೆ ನಿಮ್ಮನ್ನು
೧೦ ಎಷ್ಟೋ ಜ್ಞಾಪಕ ಮಾಡಿ ಕೊಂಡು, ಯಾವಾಗಲೂ ನನ್ನ ಪ್ರಾರ್ಥನೆಗಳಲ್ಲಿ, ಇನ್ನು ಮೇಲೆ ಹ್ಯಾಗಾದರೂ
ನಿಮ್ಮ ಬಳಿಗೆ ಬರ, ದೇವರ ಚಿತ್ತದಿಂದ ನನಗೆ [6]ಒಳ್ಳೇ ಪಯಣವಾಗುವ ಹಾಗೆ ಬೇಡಿ ಕೊಳ್ಳುತ್ತೇನೆಂಬುವದಕ್ಕೆ,
ಅವನ ಮಗನ ಸುವಾರ್ತೆಯಲ್ಲಿ ನನ್ನ ಆತ್ಮದಿಂದ ನಾನು [7]ಸೇವಿಸುವ ದೇವರು ನನಗೆ [8]ಸಾಕ್ಷಿಯಾಗಿದ್ದಾನೆ.
೧೧ ಯಾಕಂದರೆ ನೀವು ಸ್ಥಿರ ಪಡುವದಕ್ಕೋಸ್ಕರ ನಿಮಗೆ ಯಾವದೊಂದು [9]ಆತ್ಮವರವನ್ನು ಕೊಟ್ಟು,

---

1. ಕೃಪೆ ಅಂದರೆ ದೇವರ ದಯೆಯು. ಸಮಾಧಾನವಂದರೆ, ದೇವರ ಮಹಾ ಕರುಣೆ ಎಂಬ ಬುಗ್ಗೆಯಿಂದ ಹರಿದು ಬರುವ ಮೇಲುಗಳು. ಇಂಥಾ ಆಶೀರ್ವಾದಗಳಿಗೆ ತಂದೆಯ ಹಾಗೆಯೇ ಮಗನು ಸಹ ಬುಗ್ಗೆಯೂ ಕಾರಣನೂ ಆಗಿದ್ದಾನೆ. ಒಂದೊಂದು ಪತ್ರಿಕೆಯಲ್ಲಿಯೂ ಪೌಲನು ಸಭೆಯವರಿಗೆ ಹೇಳುವ ಆಶೀರ್ವಾದವು ಇದೇ. ತಿಮೊಥೆಯನಿಗೂ ತೀತನಿಗೂ ಬರೆದ ಪತ್ರಿಕೆಗಳಲ್ಲಿ ಮಾತ್ರ ಕರುಣೆ ಎಂಬ ಶಬ್ದವನ್ನು ಕೂಡಿಸಿ ಬರೆಯುತ್ತಾನೆ. ದೇವರ ದಾಸರು ದೇವರ ಸೇವೆಯನ್ನು ಹೊಂದಿದ್ದೂ, ಅದನ್ನು ಯಥಾರ್ಥವಾಗಿ ಪೂರೈಸುವದೂ ಕರುಣೆಯಿಂದಲೇ.

2. ಪೌಲನು ತನ್ನನ್ನು ಕುರಿತು ಮಾತಾಡುವಾಗ, ತನ್ನಂತೆ ಬೇರೆ ಅಪೊಸ್ತಲರನ್ನು ಸಹ ಸೇರಿಸಿ ಕೊಳ್ಳುತ್ತಾನೆ. ತಾವು ಕ್ರೈಸ್ತರಾದದ್ದಕ್ಕೂ, ದೇವರಿಗೆ ಮಹಿಮೆಯಾಗಿ ಸಕಲ ದೇಶಗಳವರನ್ನೂ ರಕ್ಷಣೆಯ ಮಾರ್ಗಕ್ಕೆ ತಿರುಗಿಸುವ ಹಾಗೆ ಅಪೊಸ್ತಲೋದ್ಯೋಗವನ್ನು ಹೊಂದಿದ್ದಕ್ಕೂ ಕ್ರಿಸ್ತನ ಕೃಪೆಯೇ ಕಾರಣವೆಂದು ಹೇಳುತ್ತಾನೆ. (ಮತ್ತಾ. ೨೮. ೧೯. ಅಪೊ. ಕ್ರಿ. ೯. ೧೫. ೨ ಕೊರಿ. ೫. ೨೦.) ಕ್ರಿಸ್ತನ ಮಕ್ಕಳಾಗುವದು ದೊಡ್ಡ ಕೃಪೆ ಅಂದರೆ, ಆತನಿಗೆ ರಾಯಭಾರಿಗಳಾಗುವದು ಎಷ್ಟೋ ದೊಡ್ಡ ಮಹಿಮೆ.

3. ಯೆಹೂದ್ಯರು ಜನಾಂಗಗಳವರು ಎಲ್ಲರೂ ರಕ್ಷಕನಾದ ಕ್ರಿಸ್ತನು ಕೊಡುವ ಶ್ರೇಷ್ಠವಾದ ಮೇಲುಗಳನ್ನು ಹೊಂದಿ ಅನುಭವಿಸುವದಕ್ಕೆ ಕರೆಯಲ್ಪಡುತ್ತಾರೆ. (೧ ಕೊರಿ. ೭. ೧೭, ೧೮, ೨೧. ಇಬ್ರಿ. ೩. ೧.)

4. ಸರ್ವಲೋಕವೆಂಬುವದು ಜನರು ಸಾಧಾರಣವಾಗಿ ಹೇಳಿಕೊಳ್ಳುವ ಪ್ರಕಾರ ಎಲ್ಲಾ ಸ್ಥಳಗಳಲ್ಲಿ ಎಂಬ ಅರ್ಥವಾಗುತ್ತದೆ. ಇದು ಲೋಕದಲ್ಲಿ ಕ್ರೈಸ್ತರು ವಾಸ ಮಾಡುವ ಸ್ಥಳಗಳನ್ನೆಲ್ಲಾ ಕುರಿತದ್ದಾಗಿದೆ.

5. ಅವರ ವಿಶ್ವಾಸವು ಲೋಕದಲ್ಲೆಲ್ಲಾ ಪ್ರಸಿದ್ಧವಾಗಿದ್ದದ್ದೇ ಆತನು ದೇವರನ್ನು ಸ್ತುತಿಸುವದಕ್ಕೆ ಕಾರಣವಾಗಿತ್ತು. ಪರಿಶುದ್ಧಾತ್ಮನ ಪ್ರೇರಣೆಯಿಂದಲೂ, ಕ್ರಿಸ್ತನ ಮಧ್ಯಸ್ತಿಕೆಯ ಮೂಲಕವಾಗಿಯೂ ಅರ್ಪಿಸಲ್ಪಡದ ಸ್ತೋತ್ರವು ದೇವರಿಗೆ ಸಮರ್ಪಕವಾದದ್ದಲ್ಲ. (ಎಫೇ. ೫. ೨೦.) ಗಲಾತ್ಯರ ಪತ್ರಿಕೆಯ ಹೊರ್ತು ಉಳಿದ ಪತ್ರಿಕೆಗಳಲ್ಲೆಲ್ಲಾ ಅಪೊಸ್ತಲನಾದ ಪೌಲನು ಇಂಥಾ ಉಪಚರಣೆಯ ಮಾತುಗಳಿಂದಲೇ ಪ್ರಾರಂಭಿಸುತ್ತಾನೆ.

6. ಅವರನ್ನು ನೋಡುವದಕ್ಕೆ ಆತನು ಅಪೇಕ್ಷಿಸಿದ ಆತನ ಕೋರಿಕೆ ಈಡೇರುವ ಹಾಗೆ ದೇವರು ತನ್ನ ದಿವ್ಯ ಚಿತ್ತದಿಂದ ಕಾರ್ಯ ಸಫಲ ಮಾಡ ಬೇಕೆಂದು ಅಪೇಕ್ಷಿಸುತ್ತಾನೆ. ಅವರನ್ನು ನೋಡ ಬೇಕೆಂಬ ವಾಂಛೆಯು ಆತನಿಗೆ ಬಹು ಕಾಲದಿಂದ ಇತ್ತು.

7. ಅವರನ್ನು ಕುರಿತು ಆತನಿಗೆ ಉಂಟಾಗಿದ್ದ ಕೃತಜ್ಞತೆಯುಳ್ಳ ಮನಸ್ಸನ್ನು ಅವರನ್ನು ಮರಿಯದೆ ಅವರಿಗಾಗಿ ಪ್ರಾರ್ಥನೆ ಮಾಡಿದ್ದರಿಂದ ಪ್ರಕಟ ಮಾಡುತ್ತಾನೆ. ಅದಕ್ಕೆ ದೇವರೇ ಸಾಕ್ಷಿ ಅನ್ನುತ್ತಾನೆ. "ಸೇವಿಸುವ ದೇವರು" ಎಂಬುವದಕ್ಕೆ ನನ್ನ ಆತ್ಮದಿಂದ ನಾನು ಸೇವಿಸುವವನೆಂಬ ಅರ್ಥವಾಗುತ್ತದೆ. ಪೌಲನು ದೇವರನ್ನು ಬಹಿರಂಗವಾಗಿ ಮಾತ್ರವಲ್ಲ, ಆತನನ್ನು ತನ್ನ ಹೃದಯ ಕಮಲದಲ್ಲಿ ಇಟ್ಟು ಕೊಂಡು, ಯಥಾರ್ಥವಾಗಿ ಆತನಿಗೆ ಸೇವೆ ಮಾಡುತ್ತಾ ಬಂದನು.

8. ಪೌಲನು ತಾನು ಹೀಗೆ ಸೇವೆ ಮಾಡುವದಕ್ಕೆ ದೇವರೇ ಸಾಕ್ಷಿ ಎಂದು ಹೇಳುತ್ತಾನೆ. ತನ್ನ ಮನಸ್ಸಿನಲ್ಲಿ ಮಾಡಿ ಕೊಂಡ ಹರಿಕೆಗಳು ಮತ್ತೊಬ್ಬರಿಗೆ ವಿಶದವಾಗುವ ಉದ್ದಿಶ್ಯ ಇಂಥಾ ದೃಢ ವಾಕ್ಯಗಳನ್ನು ಹೇಳುವದು ಆತನಿಗೆ ಬಳಿಕೆಯಾಗಿತ್ತು. (೨ ಕೊರಿ. ೧. ೨೩. ಗಲಾ. ೧. ೨೦. ಫಿಲಿ. ೧. ೮.)

9. ಇದು ಪರಿಶುದ್ಧಾತ್ಮನ ಅದ್ಭುತವರಗಳನ್ನು ಮಾತ್ರವಲ್ಲ, ಪೌಲನ ಪ್ರಸಂಗದಿಂದಲೂ ಆತನು ಹೇಳುವ ಬುದ್ಧಿಮತಿಗಳಿಂದಲೂ ಅವರಿಗೆ ಉಂಟಾಗುವ ಮನೋತ್ಸಾಹವನ್ನೂ ಆದರಣೆಯನ್ನೂ ಜ್ಞಾನಾಭಿವೃದ್ಧಿಯನ್ನೂ ಕುರಿತದ್ದಾಗಿದೆ.

೧೨ ನಿಮ್ಮ ನನ್ನ ಅನ್ಯೋನ್ಯ ವಿಶ್ವಾಸದಿಂದ [1]ನಿಮ್ಮಲ್ಲಿ ಕೂಡ ಆದರಿಸಲ್ಪಡುವ ಹಾಗೆ, ನಿಮ್ಮನ್ನು ನೋಡ
ಅಪೇಕ್ಷಿಸುತ್ತೇನೆ.
೧೩ ಇದಲ್ಲದೆ, ಸಹೋದರರೇ, ಮಿಕ್ಕಾದ ಜನಾಂಗಗಳಲ್ಲಿಯೂ ಆದ ಹಾಗೆ, ನಿಮ್ಮಲ್ಲಿಯೂ ಏನಾದರೂ ಫಲ
ವನ್ನು ಹೊಂದುವ ಬಗ್ಯೆ, ನಿಮ್ಮ ಬಳಿಗೆ ಬರ, [2]ಅನೇಕ ಸಾರಿ ನಿಷ್ಕರ್ಷೆ ಮಾಡಿ ಕೊಂಡಾಗ್ಯೂ, ಈ ವರಿಗೂ
೧೪ [3]ತಡೆಯಲ್ಪಟ್ಟೆನೆಂದು ನಿಮಗೆ ತಿಳಿಯದಿರ ನನಗೆ ಮನಸ್ಸಿಲ್ಲ. ಗ್ರೇಕರಿಗೂ [4]ಬರ್ಬರರಿಗೂ ಜ್ಞಾನಿಗಳಿಗೂ
೧೫ ಮೂಢರಿಗೂ [5]ಹಂಗಿನವನಾಗಿದ್ದೇನೆ. ಹೀಗೆ, ನನ್ನಿಂದಲಾದ ಮಟ್ಟಿಗೂ, ರೋಮದಲ್ಲಿರುವ ನಿಮಗೂ
ಸುವಾರ್ತೆ ಪ್ರಸಂಗಿಸುವದಕ್ಕೆ ಸಿದ್ಧವಾಗಿದ್ದೇನೆ.
೧೬ ಯಾಕಂದರೆ [6]ಕ್ರಿಸ್ತನ ಸುವಾರ್ತೆಗೆ ನಾಚಿಕೆ ಪಡೆನು. ಅದು [7]ವಿಶ್ವಾಸಿಸುವವರೆಲ್ಲರಿಗೆ, [8]ಮೊದಲು ಯೆಹೂ
೧೭ ದ್ಯನಿಗೆ, ಗ್ರೇಕನಿಗೆ ಸಹ, ರಕ್ಷಣೆಗೋಸ್ಕರವಾದ ದೇವರ ಬಲವಾಗಿದೆ. ಹ್ಯಾಗಂದರೆ, [9]ನೀತಿವಂತನು ವಿಶ್ವಾ

1. ಇದಕ್ಕೆ ನಿಮ್ಮಲ್ಲಿ ನಾನು ಸಹ ಆದರಣೆ ಹೊಂದುವ ಹಾಗೆ ಎಂದು ಮೂಲಭಾಷೆಯ ಅರ್ಥವಾಗಿದೆ. ನಾನು ನಿಮ್ಮ ವಿಶ್ವಾಸವನ್ನೂ, ನೀವು ನನ್ನ ವಿಶ್ವಾಸವನ್ನೂ ಕಂಡು ಆದರಣೆ ಹೊಂದ ಬೇಕೆಂಬುವದೇ ಇದರ ತಾತ್ಪರ್ಯವು. ಅವರ ವಿಶ್ವಾಸವನ್ನು ಕಂಡು ಆದರಣೆ ಹೊಂದ ಬೇಕೆಂಬುವದರಲ್ಲಿ ಪೌಲನ ಮನೋತಾಳ್ಮೆಯು ತೋರುತ್ತದೆ.

2. (ಅಪೊ. ಕ್ರಿ. ೧೯. ೨೧. ರೋಮಾ. ೧೫. ೨೨—೨೪.) ಈ ವಚನಗಳನ್ನು ನೋಡುವಾಗ ಪೌಲನು ರೋಮುಪುರಿಗೆ ಹೋಗುವದಕ್ಕೆ ಮಾಡಿ ಕೊಂಡಿದ್ದ ತೀರ್ಮಾನವು ತಿಳಿಯ ಬರುತ್ತದೆ. ಆ ಕೋರಿಕೆಯು ಮುಂದಾಗಿ ಈಡೇರಿ ಇದ್ದರೆ, ರೋಮುಸಭೆಗೆ ಅಧಿಕ ಅನುಕೂಲವುಂಟಾದಾಗ್ಯೂ, ಲೋಕದಲ್ಲಿರುವ ಸರ್ವ ಸಭೆಗೂ ಬಹಳ ಮೇಲು ಉಂಟಾಗಲಾರದು. ಆತನ ಕೋರಿಕೆ ಆಗ್ಯೆ ಈಡೇರದೆ ಹೋದದ್ದರಿಂದಲೇ ನಮಗೆ ಅಮೃತದೋಪಾದಿಯಲ್ಲಿರುವ ಈ ಅಮೂಲ್ಯವಾದ ಪತ್ರಿಕೆಯು ದೊರಕಿತು.

3. ಬೇರೆ ದೇಶಗಳಲ್ಲಿ ಸುವಾರ್ತೆಯನ್ನು ಪ್ರಸಂಗಿಸ ಬೇಕಾಗಿದ್ದದರಿಂದಲೂ, (೧೫. ೨೨.) ದೇವರ ಸಂಕಲ್ಪದಿಂದಲೂ, (ಅಪೊ. ಕ್ರಿ. ೧೬. ೬, ೭.) ಪಿಶಾಚನು ಕಲ್ಪಿಸಿದ ಅಭ್ಯಂತರಗಳಿಂದಲೂ, (೧ ಥೆಸ್ಸ. ೨. ೧೮.) ಆತನಿಗೆ ತಡೆಯಾಗಿರ ಬಹುದು.

4. ಅಪೊ. ಕ್ರಿ. ೨೮. ೨. ೧ಕೊರಿ. ೧೪. ೧೧. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.

5. ಲೋಕದಲ್ಲಿರುವ ಸಮಸ್ತ ಜನರಿಗೂ, ವಿಶೇಷವಾಗಿ ಅನ್ಯ ಜನಾಂಗಗಳವರಿಗೂ ಆತನು ಸುವಾರ್ತೆಯನ್ನು ಪ್ರಸಂಗಿಸ ಹಂಗಿನವನಾಗಿದ್ದನು. (೭. ವ. ಅಪೊ. ಕ್ರಿ. ೯. ೧೫; ೨೬. ೧೬—೧೮. ೧ ಕೊರಿ. ೯. ೧೬.) ಜನಾಂಗಗಳ ಅಪೊಸ್ತಲನಾಗಿದ್ದ ಆತನು ಅನ್ಯ ದೇಶದವರಾದ ರೋಮಾಯರಿಗೂ ಸುವಾರ್ತೆಯನ್ನು ಪ್ರಸಂಗಿಸ ಬಾಧ್ಯತೆ ಪಟ್ಟದ್ದೇನೆಂದು ಹೇಳುತ್ತಾನೆ. ಕೃಪಾನಿಧಿಯಾದ ಕ್ರಿಸ್ತನ ಮಹಾ ಪ್ರೀತಿಯನ್ನು ರುಚಿ ನೋಡಿದವರು ತಮ್ಮ ಸ್ವಂತ ಸುಖವನ್ನು ಹುಡುಕದೆ ಲೋಕದಲ್ಲೆಲ್ಲಿಯೂ ಸಂಚರಿಸಿ ಸುವಾರ್ತೆಯನ್ನು ಸಾರುವದಕ್ಕೆ ಆಶೆಯಾಗಿರುವರು.

6. ಈ ವಚನದಲ್ಲಿ ಈ ಪತ್ರಿಕೆಯ ತಾತ್ಪರ್ಯವು ಅಡಗಿರುತ್ತದೆ. ಪೌಲನು ಕ್ರಿಸ್ತನ ಸುವಾರ್ತೆಯನ್ನು ಪ್ರಸಂಗಿಸ ಸ್ವಲ್ಪವಾದರೂ ನಾಚಿಕೆ ಪಡದೆ, ಅದರ ವಿಷಯ ಹೆಚ್ಚಳ ಪಡುತ್ತಾನೆ. (ಗಲಾ. ೬. ೧೪.) ಅದು ದೇವರಿಂದ ಉಂಟಾಗಿರುವದರಿಂದಲೂ, ದೇವರ ಬಲವನ್ನು ಹೊಂದಿದ್ದಾಗಿ ತೋರ ಬಂದದರಿಂದಲೂ, ಸಮಸ್ತ ಜನರ ಸ್ಥಿತಿಗೆ ತಕ್ಕದ್ದಾಗಿರುವದರಿಂದಲೂ, ಸ್ವಪುಣ್ಯದ ಮೇಲೆ ಆತುಕೊಳ್ಳದೆ, ಭಕ್ತಿವಿಶ್ವಾಸದಿಂದ ದೇವರನ್ನು ಹೊಂದಿ ಕೊಳ್ಳುವವರೆಲ್ಲರಿಗೂ ಮೇಲು ಮಾಡ ಶಕ್ತಿಯುಳ್ಳದ್ದಾಗಿರುವದರಿಂದಲೂ, ಅದನ್ನು ಕುರಿತು ಆತನು ಹೆಚ್ಚಳ ಪಟ್ಟದ್ದು ನ್ಯಾಯವಾಗಿದೆ.

7. ರಕ್ಷಣೆಯ ಸುವಾರ್ತೆಯು ಲೋಕದವರೆಲ್ಲರಿಗೂ ಮೇಲು ಮಾಡ ತಕ್ಕದ್ದಾಗಿದ್ದಾಗ್ಯೂ, (ಯೋಹಾ. ೩. ೧೬.) ಅದನ್ನು ಭಕ್ತಿವಿಶ್ವಾಸದಿಂದ ಅಂಗೀಕರಿಸುವವರಿಗೆ ಮಾತ್ರ ಪೂರ್ಣ ಫಲ ಕೊಡುವದು. (ಯೋಹಾ. ೩. ೩೬.) ಮಿಕ್ಕಾದವರಿಗೆ ಅದರಿಂದ ನಷ್ಟ ಉಂಟಾಗುವದು. (೨ ಕೊರಿ. ೨. ೧೫, ೧೬.)

8. ದೇವರ ಜನರಾಗಿದ್ದ ಯೆಹೂದ್ಯರಿಗೆ ಮುಂದಾಗಿಯೂ, ಅನ್ಯರಾದ ಜನಾಂಗಗಳವರಿಗೆ ಹಿಂದಾಗಿಯೂ ಸುವಾರ್ತೆ ಪ್ರಸಂಗಿಸಲ್ಪಟ್ಟಿತು. (ಲೂಕ. ೨೪. ೪೭. ಅಪೊ. ಕ್ರಿ. ೩. ೨೬; ೧೩. ೪೬.) ಸಮಸ್ತ ಜನರನ್ನೂ ಕುರಿತು ಹೇಳುವದಕ್ಕೆ, "ಯೆಹೂದ್ಯರು ಜನಾಂಗಗಳು" ಎಂಬದಾಗಿ ಯೆಹೂದ್ಯರೂ, "ಗ್ರೇಕರು ಅನ್ಯರು" ಎಂಬದಾಗಿ ಗ್ರೇಕರೂ, ಅನ್ನುವದುಂಟು. ದೊಡ್ಡ ಅಲೆಕ್ಸಾಂದ್ರನು ಜಯಿಸಿದ ನಾನಾ ದೇಶಗಳಲ್ಲಿಯೂ ಗ್ರೇಕ ಭಾಷೆ ಅಭಿವೃದ್ಧಿಯಾಗಿದ್ದ ಕಾಲದಲ್ಲಿ ಯೆಹೂದ್ಯರು ಜನಾಂಗಗಳು ಎಂಬುವದಕ್ಕೆ, ಯೆಹೂದ್ಯರೂ ಗ್ರೇಕರೂ ಅನ್ನುವದುಂಟು. (೨. ೯; ೩. ೯.)

9. ವಿಶ್ವಾಸಿಸುವವರನ್ನು ಕುರಿತು ಹೇಳಿದ ತರುವಾಯ ವಿಶ್ವಾಸದ ಮಹತ್ವವನ್ನು ತೋರಿಸಿ ಇದೆ. ರಕ್ಷಿಸಲ್ಪಡುವದಕ್ಕೆ ದೇವರು ಏರ್ಪಡಿಸಿದ ಮಾರ್ಗವು ಇದೇ ಎಂದು ತೋರಿಸುವದಕ್ಕೆ ಹಬಕೂಕನ ಗ್ರಂಥದಲ್ಲಿರುವ ಒಂದು ವಚನವನ್ನು ಎತ್ತಿ ಹೇಳುತ್ತಾನೆ. (ಹಬ. ೨. ೪.) ನೀತಿವಂತನು ವಿಶ್ವಾಸದಿಂದ ಸಕಲ ಭಾಗ್ಯವನ್ನು ಹೊಂದಿ ಬಾಳುವನೆಂಬುವದೇ ಇದರ ತಾತ್ಪರ್ಯವು; ಅಥವಾ ವಿಶ್ವಾಸದಿಂದ ನೀತಿವಂತನು ಬದುಕುವನೆಂದು ಹೇಳ ಬಹುದು. ಹ್ಯಾಗಾದರೂ ವಿಶ್ವಾಸದ ಸ್ವಭಾವವೂ ಶ್ರೇಷ್ಠತ್ವವೂ ಇದರಲ್ಲಿ ತೋರುತ್ತದೆ. ಎರಡನೇದಾಗಿ ಹೇಳಲ್ಪಟ್ಟ ತಾತ್ಪರ್ಯವೇ ಈ ವಚನಗಳ ಸಮ್ಮಂಧಕ್ಕೆ ಹೊಂದಿಕೆಯಾಗಿದೆ. ಇಸ್ರಯೇಲ್ಯರು ದೇವರ ಮಾತನ್ನು ನಂಬಿ ಸುಖವಾಗಿದ್ದ ಪ್ರಕಾರ, ದೇವಭಕ್ತರೆಲ್ಲರೂ ಕ್ರಿಸ್ತನಲ್ಲಿಡುವ ವಿಶ್ವಾಸದಿಂದಲೇ ಸುಖ ಹೊಂದಿ ಬಾಳುವರು.



ಸದಿಂದ ಬದುಕುವನೆಂದು (ಹಬ. ೨. ೪.) ಬರೆದಿರುವ ಹಾಗೆ, ದೇವರ ನೀತಿಯು [1]ಅದರಲ್ಲಿ [2]ವಿಶ್ವಾಸದಿಂದ
ವಿಶ್ವಾಸಕ್ಕೆ [3]ಪ್ರಕಟವಾಗುತ್ತಾ ಇದೆ.

### ಜನಾಂಗಗಳವರ ನೀಚ ಸ್ಥಿತಿಯು ದೆಸೆಯಿಂದ ಸುವಾರ್ತೆ ಅವಶ್ಯವಾಗಿದೆ ಎಂದು ನಿರೂಪಿಸಿದ್ದು.

೧೮ ಯಾಕಂದರೆ [4]ದೇವರ ಕೋಪವು [5]ಸತ್ಯವನ್ನು ಅನೀತಿಯಿಂದ [6]ಹಿಡಿದು ಕೊಳ್ಳುವ ಮನುಷ್ಯರ ಸಕಲ
೧೯ [7]ಭಕ್ತಿಹೀನತ್ವದ ಮೇಲೆಯೂ ಅನೀತಿಯ ಮೇಲೆಯೂ ಪರಲೋಕದಿಂದ ಪ್ರಕಟವಾಗುತ್ತಾ ಇದೆ. ಯಾಕಂ
ದರೆ [8]ದೇವರನ್ನು ಕುರಿತು ತಿಳಿಯ ತಕ್ಕದ್ದು ಅವರಲ್ಲಿ ತೋರಿ ಇದೆ; ಯಾಕಂದರೆ ದೇವರು ಅದನ್ನು ಅವರಿಗೆ

1. ಸುವಾರ್ತೆಯು ವಿಶ್ವಾಸದಿಂದುಂಟಾಗುವ ದೇವರ ನೀತಿಯನ್ನು ಪ್ರಕಟ ಮಾಡುವದರಿಂದ ಅದು ರಕ್ಷಣೆಯ ವಿಷಯದಲ್ಲಿ ದೇವರ ಬಲವುಳ್ಳದ್ದಾಗಿದೆ. ಈ ವಿಷಯದಲ್ಲಿ ಅದು ದೇವರ ನೀತಿಯಾದ ಆಳಿಕೆಗೆ ತಕ್ಕ ಪ್ರಮಾಣಗಳನ್ನೆಲ್ಲಾ ಸ್ಥಾಪಿಸುತ್ತದೆ. ನೀತಿಪರನಾದ ಕ್ರಿಸ್ತನು ಪಾಪಾತ್ಮರಿಗೆ ಹೊಣೆಯಾಗಿ ಪ್ರಾಣತ್ಯಾಗ ಮಾಡಿದ್ದರಿಂದ ದೇವರ ನ್ಯಾಯಪ್ರಮಾಣವು ಘನ ಪಡಿಸಲ್ಪಟ್ಟಿತು. ದೇವರು ನೀತಿಯುಳ್ಳವನಾಗಿಯೂ, ಕ್ರಿಸ್ತನನ್ನು ನಂಬಿದ ಪಾಪಿಷ್ಠರನ್ನು ನೀತಿವಂತರಾಗ ಮಾಡುವವನಾಗಿಯೂ ಇದ್ದಾನೆ. (೩. ೨೧—೨೬.) ಹೀಗೆ ಪಾಪಿಷ್ಠರನ್ನು ನೀತಿವಂತರಾಗ ಮಾಡುವ ವಿಶ್ವಾಸವು, ಅವರು ಲೋಕವನ್ನು ಜಯಿಸುವದಕ್ಕೂ, ಪರಿಶುದ್ಧಾತ್ಮನ ಸಹಾಯದಿಂದ ಪರಿಶುದ್ಧತ್ವದಲ್ಲಿ ಸಂಪೂರ್ಣರಾಗುವದಕ್ಕೂ ಒಂದು ವಿಶೇಷ ಯತ್ನವಾಗಿದೆ. (೮. ೧—೧೪.)

2. ಇದಕ್ಕೆ ನಾನಾ ಅರ್ಥಗಳನ್ನು ಹೇಳುವರು. ವಿಶ್ವಾಸವನ್ನು ಮುಖ್ಯ ಪಡಿಸುವದಕ್ಕೆ ವಿಶ್ವಾಸದಿಂದ ಮಾತ್ರವೇ ಎಂದು ಹೇಳಿರುವಂತೆ ಕೆಲವರು ನೆನಸುತ್ತಾರೆ. ಬೇರೆ ಕೆಲವರು ಇದು ವಿಶ್ವಾಸದ ವೃದ್ಧಿಯನ್ನು ಕುರಿತದ್ದೆಂದು ಹೇಳುತ್ತಾರೆ. ಹೆಚ್ಚೆಚ್ಚಾಗಿ ವೃದ್ಧಿ ಹೊಂದುವ ವಿಶ್ವಾಸವುಳ್ಳವರಿಗೆ ದೇವರ ನೀತಿ ಪ್ರಕಟ ಮಾಡಲ್ಪಡುತ್ತದೆ. ಅವರೇ ಕೃಪೆಯ ಮೇಲೆ ಕೃಪೆಯನ್ನು ಹೊಂದುವವರು. (ಯೋಹಾ. ೧. ೧೬.) ಅವರೇ ಮಹಿಮೆಯ ಮೇಲೆ ಮಹಿಮೆಯನ್ನು ಹೊಂದಿ ರೂಪಾಂತರವಾಗುವವರು. (೨ ಕೊರಿ. ೩. ೧೮.) ವಿಶ್ವಾಸವೆಂಬುವದು ಸುವಾರ್ತೆಯ ಸತ್ಯಗಳೆಲ್ಲಾ ನಿಶ್ಚಯವೆಂದು ಅಂಗೀಕರಿಸುವ ಸುಗುಣ ಮಾತ್ರವಲ್ಲ, ಅದು ತೋರಿಸುವ ರಕ್ಷಕನ ಆಶ್ರಯದಲ್ಲಿ ಶೇರ ಬೇಕೆಂಬುವ ದೃಢವಾದ ನಂಬಿಕೆಯೇ ವಿಶ್ವಾಸವು.

3. ಈ ಶ್ರೇಷ್ಠ ಸತ್ಯವು ಪೂರ್ವದಲ್ಲಿ ಹಳೇ ಒಡಂಬಡಿಕೆಯ ಕಾಲದಲ್ಲಿಯೇ ಪ್ರಕಟ ಮಾಡಲ್ಪಟ್ಟಿತ್ತೆಂಬುವದಕ್ಕೆ ಪೌಲನು ಹಬಕೂಕನ ಪ್ರವಾದನೆಯಲ್ಲಿರುವ ಒಂದು ವಾಕ್ಯವನ್ನೂ, ಅಬ್ರಹಾಮನು ದಾವೀದನು ಎಂಬವರ ದೃಷ್ಟಾಂತಗಳನ್ನೂ ಎತ್ತಿ ಹೇಳುತ್ತಾನೆ. (ಹಬ. ೨. ೪. ರೋಮಾ. ೪. ಸಂಧಿ.)

4. ಮುಂದಿನ ವಚನದಲ್ಲಿ ಕೃಪಾಭರಿತವಾದ ಪ್ರಕಟಣೆ ಹೇಳಲ್ಪಟ್ಟದೆ. ಈ ವಚನದಲ್ಲಿ ದೇವರ ಕೋಪಭರಿತವಾದ ಪ್ರಕಟಣೆ ಹೇಳಲ್ಪಟ್ಟದೆ. ಪರಿಶುದ್ಧತ್ವವೂ ನೀತಿಯೂ ಉಳ್ಳ ದೇವರು ಪಾಪವನ್ನು ಅಸಂಹಿಸುವದೂ ಅದನ್ನು ದಂಡಿಸುವದೂ ಅವಶ್ಯವಾಗಿದೆ. ಪರಂಜ್ಯೋತಿಯಾದ ಆತನಲ್ಲಿ ಅಂಧಕಾರ ಎಷ್ಟು ಮಾತ್ರ ಶೇರ ಕೂಡದು. ಆದದರಿಂದ ಭಕ್ತಿಹೀನತ್ವಕ್ಕೂ ಅನೀತಿಗೂ ವಿರೋಧವಾಗಿ ಆಕಾಶದಿಂದ ಮಿಂಚು ಕಾಣಿಸುವ ಪ್ರಕಾರ, ಆತನ ಉಗ್ರಕೋಪವಾದ ಅಗ್ನಿಯು, ಆತನು ವಾಸ ಮಾಡುವ ಪರಲೋಕದಿಂದ ದೊಡ್ಡ ಜ್ವಾಲೆಯಾಗಿ ಉರಿಯುತ್ತದೆ. ಅದನ್ನು ಎಲ್ಲರೂ ಕಂಡು ನಡುಗ ತಕ್ಕದ್ದು.

5. ವಿಶ್ವಾಸ ಸಮ್ಮಂಧವಾದ ರಕ್ಷಣೆಯ ಮಾರ್ಗವನ್ನು ವಿವರಿಸಿದ ತರುವಾಯ ಪೌಲನು ಅದರ ಅವಶ್ಯವನ್ನು ನಿರೂಪಿಸುತ್ತಾನೆ. ಪರಿಶುದ್ಧ ದೇವರು ಪಾಪವನ್ನು ಹಗೆ ಮಾಡುವವನಾದದರಿಂದ ಭಕ್ತಿಹೀನತ್ವದಲ್ಲಿಯೂ, (೧೮—೨೩.) ದುರ್ಮಾರ್ಗದಲ್ಲಿಯೂ, (೨೪—೩೨.) ಶೇರಿದವರಾದ ಜನಾಂಗಗಳವರೂ, ಅನೇಕ ಕೃಪಾದಾನಗಳನ್ನು ಹೊಂದಿದಾಗ್ಯೂ, ಅವುಗಳಿಗೆ ತಕ್ಕ ಹಾಗೆ ನಡೆಯದೆ ಬಹಳ ದುರ್ಮಾರ್ಗರಾಗಿದ್ದ ಯೆಹೂದ್ಯರೂ, (೨. ೧—೩, ೧೯.) ಆತನ ದೃಷ್ಟಿಯಲ್ಲಿ ಅಪರಾಧಿಗಳಾಗಿಯೇ ಇದ್ದಾರೆ. ಆದದರಿಂದ ಯಾವ ಮನುಷ್ಯನೂ ನ್ಯಾಯಪ್ರಮಾಣದ ಕ್ರಿಯೆಗಳಿಂದ ದೇವರ ಸನ್ನಿಧಿಯಲ್ಲಿ ನೀತಿವಂತನಾಗುವದಕ್ಕೆ ಹೇತುವೆ ಇಲ್ಲ. (೩. ೨೦.)

6. ಅವರು ಅನೀತಿಯಿಂದ ಹಿಡಿದು ಕೊಂಡ ಸತ್ಯವು ಯಾವದೆಂದು ೧೯ನೇ ೨೦ನೇ ವಚನಗಳಲ್ಲಿ ಹೇಳಿ ಇದೆ. ವೇದದಲ್ಲಿ ಸತ್ಯವೆಂಬುವ ಪದವು, ಸತ್ಯ ಮಾರ್ಗವನ್ನೂ ಅದು ಆಜ್ಞಾಪಿಸುವ ಕೆಲಸಗಳನ್ನೂ ಕುರಿತು ಹೇಳಲ್ಪಟ್ಟದೆ. (ಯೋಹಾ. ೮. ೩೨. ರೋಮಾ. ೨. ೨೦. ೨ಕೊರಿ. ೪. ೨. ಯೋಹಾ. ೩. ೨೧. ೧ ಯೋಹಾ. ೧. ೬.) ಇಂಥಾ ಸತ್ಯವನ್ನೂ ಅದರ ಸ್ವಭಾವವನ್ನೂ ಅದರ ಮಹಿಮೆಯನ್ನೂ ಅನ್ಯಾಯ ಭಕ್ತಿಹೀನತ್ವ ಪಾಪ ಎಂಬ ಗೂಡಿನಲ್ಲಿ ಮುಚ್ಚಿ ಬಿಡುತ್ತಾರೆ. (೨೧—೨೮.) ಹೀಗೆ ಸತ್ಯವನ್ನು ಮುಚ್ಚುವವರು ಪೂರ್ಣ ಅಂಧಕಾರದಲ್ಲಿ ತಿಕ್ಕಿ ಕೊಳ್ಳುತ್ತಾರೆ. (ಯೋಹಾ. ೭. ೧೭.)

7. ಭಕ್ತಿಹೀನತ್ವವು ಎಂಬುವದು ಕೆಟ್ಟು ಹೋದ ಮನಸ್ಸನ್ನೂ, ಅನೀತಿ ಎಂಬುವದು ಕೆಟ್ಟ ನಡತೆಯನ್ನೂ ಕುರಿತದ್ದು. ಕೆಟ್ಟ ನಡತೆಗೆ ಕೆಟ್ಟ ಮನಸ್ಸೇ ಕಾರಣವು. ಭಕ್ತಿಹೀನತ್ವವೆಂಬುವದು ಮೊದಲನೇ ನಾಲ್ಕು ಕಟ್ಟಳೆಗಳನ್ನು ಮೀರುವದರಿಂದ ಉಂಟಾಗುವ ಪಾಪವು. ಅನೀತಿ ಎಂಬುವದು ಹಿಂದಿನ ಆರು ಕಟ್ಟಳೆಗಳನ್ನು ಮೀರುವದರಿಂದ ಉಂಟಾಗುವ ದೋಷವು.

8. ಇದು ದೈವಪ್ರಕಟಣೆ ಇಲ್ಲದೆ, ಸ್ವಾಭಾವಿಕವಾದ ತಿಳುವಿಕೆಯಿಂದಲೂ, ಮನಸ್ಸಿನ ಗ್ರಹಿಕೆಯಿಂದಲೂ, ದೇವರನ್ನು ಕುರಿತು ತಿಳಿಯ ತಕ್ಕ ವಿಷಯವನ್ನು ಕುರಿತದ್ದು. ಈ ತಿಳುವಳಿಕೆಯು ಅವರಿಗೆ ಸೃಷ್ಟಿಸಲ್ಪಟ್ಟ ಹೊರಗಿನ ವಸ್ತುಗಳನ್ನು ನೋಡುವದರಿಂದಲೂ, (೨೦. ವ.) ಮನೋತತ್ವಗಳಾದ ಒಳಗಿನ ಪ್ರಮಾಣದಿಂದಲೂ ಉಂಟಾಗ ತಕ್ಕದ್ದು. (೨. ೧೫.)

೨೦ ತೋರಿಸಿದ್ದಾನೆ. ಹ್ಯಾಗಂದರೆ ಲೋಕಸೃಷ್ಟಿಯಿಂದ ಅವನ [1]ಅದೃಶ್ಯವಾದವುಗಳು, ಅವನ ನಿತ್ಯ ಬಲವೂ
ದೈವತ್ವವೂ ನಿರ್ಮಾಣಗಳಿಂದ ಗ್ರಹಿಸಲ್ಪಟ್ಟು, ಪ್ರತ್ಯಕ್ಷವಾಗಿವೆ; ಆದದರಿಂದ ನೆವವಿಲ್ಲದವರಾಗಿದ್ದಾರೆ.
೨೧ ಯಾಕಂದರೆ ದೇವರನ್ನು ತಿಳಿದು, ಅವನನ್ನು [2]ದೇವರೆಂದು ಮಹಿಮೆ ಪಡಿಸದೆ, ಸ್ತುತಿಸದೆ, ತಮ್ಮ [3]ಯೋಚನೆಗಳಲ್ಲಿ
೨೨ ನಿಷ್ಪ್ರಯೋಜಕರಾಗಿ, ಅವರ ಬುದ್ಧಿ ಇಲ್ಲದ ಹೃದಯವು ಅಂಧಕಾರವಾಯಿತು. ತಾವು [4]ಜ್ಞಾನಿಗಳೆಂದು ಅಂದು
೨೩ ಕೊಂಡು, ಹುಚ್ಚರಾದರು. ಮತ್ತು ಲಯವಿಲ್ಲದ ದೇವರ ಮಹಿಮೆಯನ್ನು, ಲಯವಾಗುವ ನರ ಪಕ್ಷಿ
ಚತುಷ್ಪಾದ ಕ್ರಿಮಿಗಳಿಗೆ [5]ಸಮಾನ ರೂಪವಾಗಿ ಮಾರ್ಪಡಿಸಿದರು.
೨೪ ಆದ ಕಾರಣ ತಮ್ಮ ಶರೀರಗಳನ್ನು ತಮ್ಮಲ್ಲಿ ಅವಮಾನ ಪಡಿಸುವ ಹಾಗೆ, ದೇವರು, ಅವರ ಹೃದಯಗಳ
೨೫ ಆಶೆಗಳ ಪ್ರಕಾರ, ಅವರನ್ನು [6]ಅಶುದ್ಧತ್ವಕ್ಕೆ ಒಪ್ಪಿಸಿ ಬಿಟ್ಟನು. [7]ಇವರು ದೇವರ ಸತ್ಯವನ್ನು ಸುಳ್ಳಿಗಾಗಿ
ಮಾರ್ಪಡಿಸಿ, ಸೃಷ್ಟಿಕರ್ತನಿಗಿಂತ ಸೃಷ್ಟಿಯನ್ನು ಪೂಜಿಸಿ, ಸೇವಿಸಿದರು. ಅವನೇ ಎಂದೆಂದಿಗೂ ಸ್ತುತಿಸ
ತಕ್ಕವನು. ಆಮೆನ್.

1. ಸೂರ್ಯನು ಅದರ ಪ್ರತಿಬಿಂಬದಲ್ಲಿ ಪ್ರಕಾಶವಾಗಿ ತೋರುವ ಪ್ರಕಾರ, ದೈವತ್ವಕ್ಕೂ ದೈವಲಕ್ಷಣಕ್ಕೂ ತಕ್ಕ ಆತನ ನಿತ್ಯ ಬಲವು ದೈವತ್ವವು ಎಂಬವುಗಳು ಕಾಣ ಕೂಡದವುಗಳಾಗಿದ್ದಾಗ್ಯೂ, ಸೃಷ್ಟಿಯ ಕ್ರಿಯೆಗಳಿಂದ ಪ್ರಕಟವಾಗಿ ತೋರುತ್ತವೆ. (ಅಪೊ. ಕ್ರಿ. ೧೪. ೧೬.) ಆದದರಿಂದ ದೇವರನ್ನು ಕಂಡವನ್ಯಾರು ಎಂದು ಒಬ್ಬನಾದರೂ ಬೊಂಕುವದಕ್ಕೆ ಸ್ಥಳವಿಲ್ಲ.

2. ದೇವರು ಇದ್ದಾನೆಂಬ ಸತ್ಯವನ್ನು ಅವರು ಚನ್ನಾಗಿ ತಿಳಿದಿದ್ದಾಗ್ಯೂ, ಅದನ್ನು ಅನೀತಿಯಿಂದ ಮುಚ್ಚಿ ಬಿಟ್ಟದ್ದರಿಂದ ಕೆಟ್ಟ ವಿಗ್ರಹಾರಾಧಕರಾದರು. (೨೧—೨೩.) ನೋಹನೂ ಆತನ ಕುಟುಂಬದವರೂ ಹಡಗದಿಂದ ಹೊರಗೆ ಬಂದಾಗ ನಿಜವಾದ ದೇವರನ್ನು ಆರಾಧಿಸಿದರು. ೪೦೦ ವರ್ಷಗಳ ತರುವಾಯ ಅವರ ಸಂತತಿಯವರಾದ ಅಬ್ರಹಾಮನ ಪಿತೃಗಳು ವಿಗ್ರಹಾರಾಧನೆ ಎಂಬ ಅಂಧಕಾರದಲ್ಲಿ ಮುಣುಗಿದರು. (ಯೆಹೋಶು. ೨೪. ೨.) ವಿಗ್ರಹಭಕ್ತಿಗೆ ದೇವರನ್ನು ಕುರಿತು ತಿಳಿಯದೆ ಇರುವದು ಕಾರಣವಾಗಿರದೆ, ಕೃತಘ್ನತೆಯುಳ್ಳ ಮನುಷ್ಯನ ಭಕ್ತಿಹೀನತ್ವವೇ ಕಾರಣವು. ದೇವರನ್ನು ಕುರಿತು ತಿಳಿದವರು ಆತನನ್ನು ಆರಾಧಿಸಿ ಮಹಿಮೆ ಪಡಿಸಲಿಲ್ಲ. (ಯೋಬ. ೨೧. ೧೪.) ದಯಾಪರನಾದ ದೇವರ ಉಪಕಾರಗಳನ್ನು ಗ್ರಹಿಸಿ, ಕೃತಜ್ಞತೆಯಾದ ಮನಸ್ಸಿನಿಂದ ಆತನನ್ನು ಸ್ತುತಿಸಲಿಲ್ಲ.

3. ಬೆಳಕಿಲ್ಲದ ಸ್ಥಳದಲ್ಲಿ ಅಂಧಕಾರವು ತುಂಬಿರುವ ಪ್ರಕಾರ, ಅಜ್ಞಾನರ ಮನಸ್ಸಿನಲ್ಲಿ ದೇವರ ವಿಷಯ ವ್ಯರ್ಥ ಯೋಚನೆಗಳು ಹುಟ್ಟುವವು. (೧ ಕೊರಿ. ೩. ೨೦.) ದೇವರ ಹೋಲ್ಪಿಕೆಯಲ್ಲಿ ಸೃಷ್ಟಿಸಲ್ಪಟ್ಟ ಮನುಷ್ಯರು, ಪಕ್ಷಿ, ಮೃಗ, ಕ್ರಿಮಿ ಮುಂತಾದ ಕಾಣಲ್ಪಡುವ ಸಮಸ್ತ ವಸ್ತುಗಳೂ ಗತಿ ಕೊಡುವ ದೇವರೆಂದು ಆರಾಧಿಸುವದು ಎಷ್ಟು ದುಃಖಕರವಾದದ್ದು! ಮನುಷ್ಯರೂಪವಾದ ವಿಗ್ರಹಗಳನ್ನು ಗ್ರೇಕರೂ, ಮೃಗರೂಪವಾದ ವಿಗ್ರಹಗಳನ್ನು ಐಗುಪ್ತ್ಯರೂ, ಈ ಎರಡು ತರವಾದ ವಿಗ್ರಹಗಳನ್ನು ರೋಮಾಯರೂ ಆರಾಧಿಸುತ್ತಾ ಬಂದರು. ಇಷ್ಟು ಅಂಧಕಾರವು ಅವರ ಮನಸ್ಸುಗಳಲ್ಲಿ ವ್ಯಾಪಿಸಿ, ಅವರ ಬುದ್ಧಿ ಕುರುಡಾಯಿತು.

4. ಗ್ರೇಕರಲ್ಲಿ ಜ್ಞಾನಿಗಳಿದ್ದರು. ಆದರೆ ಆ ಜ್ಞಾನಿಗಳೂ ಶಾಸ್ತ್ರಿಗಳೂ ತಮ್ಮ ವಿದ್ಯೆಗಳನ್ನೂ ಜ್ಞಾನವನ್ನೂ ಕುರಿತು ಬಹಳ ಹೆಚ್ಚಳ ಪಟ್ಟಾಗ್ಯೂ, ದೇವರನ್ನು ಕುರಿತು ಅವರು ಹೇಳಿದವುಗಳೆಲ್ಲಾ ಒಂದಕ್ಕೊಂದು ಸರಿ ಬೀಳದವುಗಳಾಗಿದ್ದವು.

5. ಸತ್ಯವನ್ನು ಸುಳ್ಳಿಗೆ ಮಾರ್ಪಡಿಸಿದ ಪ್ರಕಾರ, ದೇವರ ಮಹಿಮೆಯನ್ನು ಸೃಷ್ಟಿಗಳ ರೂಪವಾಗಿ ಮಾರ್ಪಡಿಸಿದರು. (೨೫. ವ. ಯೆರೆ. ೧೬. ೧೯.) ನಿತ್ಯನಾದ ದೇವರನ್ನು ಆರಾಧಿಸುವದು ಬಿಟ್ಟು, ನಾಶವಾಗುವ ಮನುಷ್ಯರನ್ನೂ, ನೀಚವಾದ ಪಕ್ಷಿ, ಮೃಗ, ಹರಿದಾಡುವ ಜಂತುಗಳನ್ನೂ ಆರಾಧಿಸಿದರು. ವಿಶೇಷ ವರಗಳನ್ನು ಹೊಂದಿದ ಮನುಷ್ಯರ ಬುದ್ಧಿ ಮಾರ್ಪಟ್ಟು ಇಷ್ಟು ಹೀನವಾದದ್ದು ಎಷ್ಟೋ ಆಶ್ಚರ್ಯ! ಪೌಲನು ಇಲ್ಲಿ ಹೇಳಿರುವ ಪ್ರಕಾರ ಸಮಸ್ತ ಮನುಷ್ಯರ ಬುದ್ಧಿಯೂ ಮಾರ್ಪಟ್ಟು ಹೀನವಾಗಿ ಹೋಯಿತು.

6. ಅಜ್ಞಾನರು ತಮ್ಮ ಹೃದಯದಲ್ಲಿ ಆಶಿಸಿದ ಅಪವಿತ್ರವಾದ ಇಚ್ಛೆಗಳಿಗೆ ಅವರನ್ನು ಬಿಟ್ಟು ಬಿಟ್ಟನು. ಇಲ್ಲಿ ಅವರ ಭಕ್ತಿಹೀನತ್ವವನ್ನು ಕುರಿತು ಹೇಳಿದ ತರುವಾಯ, ಈ ವಚನದಲ್ಲಿಯೂ ಮುಂದಿನ ವಚನಗಳಲ್ಲಿಯೂ ಅವರ ಅನ್ಯಾಯವನ್ನೂ ಅನೀತಿಯನ್ನೂ ಕುರಿತು ಹೇಳಿ ಇದೆ. ದೇವರನ್ನು ಅವರು ಬಿಟ್ಟು ಬಿಟ್ಟದ್ದರಿಂದ, ಅವರಿಗೆ ದಂಡನೆಯಾಗಿ ಆತನು ಅವರನ್ನು ಕೈಬಿಟ್ಟುಬಿಟ್ಟನು. ದೇವರಿಂದ ಕೈಬಿಡಲ್ಪಟ್ಟವರು ಸಕಲ ದುಷ್ಕ್ರಿಯೆಗಳನ್ನು ನಡಿಸುವದು ಆಶ್ಚರ್ಯವಲ್ಲ. ನೀತಿ ತೋರುವ ಹಾಗೆ ದೇವರು ಭಕ್ತಿಹೀನರನ್ನು ಕೈಬಿಟ್ಟನೆಂದು ಈ ವಚನದಲ್ಲಿ ಹೇಳಿದಾಗ್ಯೂ, ಅವರು ಅಶುದ್ಧವನ್ನು ನಡಿಸುವ ಹಾಗೆ ತಮ್ಮನ್ನು ತಾವೇ ಅಶುದ್ಧತ್ವಕ್ಕೆ ಒಪ್ಪಿಸಿ ಕೊಟ್ಟರೆಂದು ಪೌಲನು ಎಫೇಸ್ಯರ ಪತ್ರಿಕೆಯಲ್ಲಿ ಹೇಳುತ್ತಾನೆ. (ಎಫೇ. ೪. ೧೮, ೧೯. ಮತ್ತಾ. ೧೩. ೧೪. ವಚನಗಳ ವ್ಯಾಖ್ಯಾನ ಸಹ ನೋಡ ಬೇಕು.)

7. ಹಿಂದಿನ ವಚನದಲ್ಲಿ ಹೇಳಿದ ವಿಷಯಕ್ಕೆ ಕಾರಣವು ಈ ವಚನದಲ್ಲಿ ಉಂಟು. ಅವರು ಅಶುದ್ಧತ್ವವನ್ನು ನಡಿಸುವ ಹಾಗೆ ಕೈಬಿಡಲ್ಪಟ್ಟದ್ದಕ್ಕೆ, ದೇವರ ಸತ್ಯವನ್ನು ಅವರು ಸುಳ್ಳಿಗೆ ಮಾರ್ಪಡಿಸಿದ್ದೂ, ಸೃಷ್ಟಿಕರ್ತನಿಗಿಂತ ಸೃಷ್ಟಿಯನ್ನು ಆರಾಧಿಸಿದ್ದೂ ಕಾರಣವಾಗಿದೆ. ದೇವರ ಸತ್ಯವೆಂಬುವದು ಸತ್ಯ ದೇವರೆಂದೂ, ಸುಳ್ಳು ಎಂಬುವದು ಸುಳ್ಳು ದೇವರುಗಳೆಂದೂ ಅರ್ಥವಾಗುತ್ತದೆ. ಆಗಾಗ್ಯೆ ವಿಗ್ರಹಗಳಿಗೆ ಸುಳ್ಳು, ಮಾಯ, ಎಂದು ಹೆಸರುಂಟಾಗಿದೆ. (ಯೆರೆ. ೧೩. ೨೫. ಕೀರ್ತ. ೩೧. ೬.) ಸುಳ್ಳು ಬೋಧನೆಗಳಿಗೂ ಇದೇ ಹೆಸರು ಹೇಳಲ್ಪಟ್ಟದೆ. (೨ ಥೆಸ್ಸ. ೨. ೧೧, ೧೨.) ಸೃಷ್ಟಿಕರ್ತನನ್ನು ಬಿಟ್ಟು ಸೃಷ್ಟಿಗಳನ್ನು ಆರಾಧಿಸಿದ್ದು ಮಹಾ ಪಾತಕವೆಂದು ತಿಳಿಯುವ ಉದ್ದಿಶ್ಯವಾಗಿ ಪೌಲನು ದೇವರ ಹೆಸರನ್ನು ಉಚ್ಚರಿಸಿದ ಮಾತ್ರದಲ್ಲಿ, ಆತನೇ ಎಂದೆಂದಿಗೂ ಸ್ತುತಿಸಲ್ಪಡ ತಕ್ಕವನು, ಆಮೆನ್ ಎಂದು ಆತನನ್ನು ಅತ್ಯಂತ ಭಕ್ತಿಯಿಂದ ಸ್ತುತಿಸುತ್ತಾನೆ.



೨೬ ಆದದರಿಂದ ದೇವರು ಅವರನ್ನು ಅವಮಾನವಾದ ಕಾಮಗಳಿಗೆ ಒಪ್ಪಿಸಿ ಬಿಟ್ಟನು. ಹ್ಯಾಗಂದರೆ ಅವರ
೨೭ ಹೆಂಗಸರು ಸ್ವಭಾವವಾದ ಅನುಭೋಗವನ್ನು ಸ್ವಭಾವವಿರೋಧವಾದದ್ದಕ್ಕೆ ಮಾರ್ಪಡಿಸಿದರು. ಹಾಗೆಯೇ
ಗಂಡಸರು ಸಹ, ಸ್ವಭಾವವಾದ ಸ್ತ್ರೀಯನುಭೋಗವನ್ನು ಬಿಟ್ಟು, ಒಬ್ಬರ ಮೇಲೊಬ್ಬರು ತಮ್ಮ ಕಾಮಾತು
ರದಿಂದ ತಾಪ ಪಡುತ್ತಾ, ಗಂಡಸರ ಸಂಗಡ ಗಂಡಸರು ಅಯೋಗ್ಯವಾದದ್ದನ್ನು ಮಾಡಿ, ತಮ್ಮ [1]ತಪ್ಪಿಗೆ
ತಕ್ಕ ಪ್ರತಿಫಲವನ್ನು ತಮ್ಮಲ್ಲಿ ಹೊಂದಿದರು.
೨೮ ಮತ್ತು ಅವರು ದೇವರನ್ನು ತಿಳುವಿಕೆಯಲ್ಲಿ ಇಟ್ಟು ಕೊಳ್ಳುವದು ಯುಕ್ತವೆಂದೆಣಿಸದ್ದರಿಂದ, ಅಕೃತ್ಯಗ
೨೯ ಳನ್ನು ಮಾಡುವ ಹಾಗೆ, ದೇವರು ಅವರನ್ನು [2]ಅಯುಕ್ತ ಬುದ್ಧಿಗೆ ಒಪ್ಪಿಸಿ ಬಿಟ್ಟನು. ಸಕಲ ಅನ್ಯಾಯ,
ಜಾರತ್ವ, ದುರ್ಮಾರ್ಗತನ, ಲೋಭ, ದುಷ್ಟತ್ವಗಳಿಂದ ಭರಿತರೂ; ಹೊಟ್ಟೆಕಿಚ್ಚು, ಕೊಲೆ, ಜಗಳ, ಮೋಸ,
೩೦ ತುಂಟಾಟಗಳಿಂದ ತುಂಬಿದವರೂ; [3]ಚಾಡಿಕಾರರೂ, ದೂರುಗಾರರೂ, ದೇವದ್ವೇಷಿಗಳೂ, ಗರ್ವಿಷ್ಠರೂ,
೩೧ ಅಹಂಕಾರಿಗಳೂ, ಡಾಂಭಿಕರೂ, ದುರಾಲೋಚಕರೂ, ಹೆತ್ತವರಿಗೆ ಅವಿಧೇಯರೂ, ಬುದ್ಧಿಹೀನರೂ, ಅಪ್ರ
ಮಾಣಿಕರೂ, [4]ವಾತ್ಸಲ್ಯವಿಲ್ಲದವರೂ, ಅನ್ಯೋನ್ಯವಾಗದವರೂ, ಕರುಣೆ ಇಲ್ಲದವರೂ, ಆಗಿ ಇದ್ದಾರೆ.
೩೨ ಅಂಥವುಗಳನ್ನು ಮಾಡುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವರ [5]ನಿರ್ಣಯವನ್ನು ಇವರು ತಿಳಿದು,
ಅವುಗಳನ್ನು ಮಾಡುತ್ತಾರೆ; ಅದಲ್ಲದೆ, ಮಾಡುವವರಿಗೆ ಸಮ್ಮತಿಸುತ್ತಾರೆ.

ಯೆಹೂದ್ಯರ ಪರಿತಾಪವಾದ ಸ್ಥಿತಿಯ ಕಾರಣದಿಂದ ಸುವಾರ್ತೆ ಅವಶ್ಯವಾಗಿದೆ ಎಂಬುವದನ್ನು ನಿರೂಪಿಸಿದ್ದು;
ಅನೇಕ ಮೇಲಾದ ವರಗಳನ್ನು ಹೊಂದಿದ್ದ ಅವರು ಅವಿಧೇಯರಾಗಿ ನಡೆದದ್ದನ್ನು ತೋರಿಸಿದ್ದು.

2. [6]ಆದದರಿಂದ, [7]ನ್ಯಾಯ ತೀರಿಸುವ ಓ ಮನುಷ್ಯನೇ, ನೀನು ಯಾರಾದರೂ ಸರಿ; ನೆವವಿಲ್ಲದವನಾಗಿದ್ದೀ.

1. ಪರಿಶುದ್ಧ ದೇವರನ್ನು ಬಿಟ್ಟು ಬಿಟ್ಟದ್ದೇ ಅವರ ಮುಖ್ಯಾಪರಾಧವು. ಶರೀರವೂ ಮನಸ್ಸೂ ಆತ್ಮವೂ ಸಂಪೂರ್ಣವಾಗಿ ಕೆಟ್ಟು ಹೋದದ್ದು ಅವರ ಅಪರಾಧಕ್ಕೆ ಪ್ರಾಪ್ತಿಸಿದ ತಕ್ಕ ಫಲವು. (೨೪, ೨೬, ೨೮. ವ.) ಚುಕಾಣಿ ಇಲ್ಲದ ಹಡಗವು ದಿಕ್ಕು ತಪ್ಪಿ ಅಪಾಯದಲ್ಲಿ ಸಿಕ್ಕಿ ನಾಶವಾಗುವ ಪ್ರಕಾರ, ದೇವರ ಭಯವಿಲ್ಲದ ಮನುಷ್ಯರು ಮೃಗಗಳಿಗಿಂತ ಹೀನರಾಗಿ ಅಕ್ರಮಗಳಲ್ಲಿ ಮುಣುಗಿ ನಾಶವಾಗುತ್ತಾರೆ. ಈ ವಿಧವಾದ ಅಕ್ರಮಗಳೆಲ್ಲಾ ಅಜ್ಞಾನರಲ್ಲಿ ವಿಸ್ತಾರವಾಗಿ ನಡಿಯುತ್ತಾ ಇದ್ದವೆಂದು ಇತಿಹಾಸಕರು ಬರೆದಿದ್ದಾರೆ. ಈ ಸಂಧಿಯಲ್ಲಿ ಹೇಳಲ್ಪಟ್ಟದ್ದು ಪೂರ್ವಕಾಲದವರ ಸ್ಥಿತಿಯನ್ನು ಮಾತ್ರವಲ್ಲ, ಈ ಕಾಲದ ಹಿಂದೂ ಜನರ ಸ್ಥಿತಿಯನ್ನು ಸಹ ತೋರಿಸಿ ಇದೆ.

2. ಅವರು ದೇವರನ್ನು ಅಯುಕ್ತವಾಗಿ ಎಣಿಸಿದ್ದರಿಂದ, (೨೩—೨೫.) ದೇವರು ಅವರನ್ನು ಅವರ ಅಯುಕ್ತ ಬುದ್ಧಿಗೆ ಒಪ್ಪಿಸಿದನು. ಕೆಟ್ಟದ್ದನ್ನು ಬಿತ್ತುವವನು ಕೇಡನ್ನು ಕೊಯ್ಯುವನು. ಹಾಗೆಯೇ ದೇವರ ವಿಷಯ ಕೆಟ್ಟದ್ದನ್ನು ನೆನಸಿದವರಿಗೆ ಕೆಟ್ಟ ಮನಸ್ಸು ಉಂಟಾಗುವದು ಸಹಜವಾದ ದೇವರ ಪ್ರಮಾಣವಾಗಿದೆ. ಇಂಥಾ ಕೆಟ್ಟ ಮನಸ್ಸು ಅವರಿಗೆ ಉಂಟಾಗಿದ್ದದರಿಂದ ಮುಂಚಿನ ವಚನಗಳಲ್ಲಿ ಹೇಳಲ್ಪಟ್ಟ ಮನುಷ್ಯಸ್ವಭಾವಕ್ಕಾದರೂ ವಿರೋಧವಾದ ಅವಲಕ್ಷಣ ಕಾರ್ಯಗಳನ್ನು ನಡಿಸಿದರು. ಪಾಪ ಮಾಡುವ ಮನುಷ್ಯನಿಗೆ ಅವನ ಮನಸ್ಸು ಬಂದ ಹಾಗೆ ಅವನನ್ನು ಬಿಟ್ಟು ಬಿಡುವದೇ ದೊಡ್ಡ ಶಿಕ್ಷೆ ಎಂದು ತಿಳಿಯ ತಕ್ಕದ್ದು.

3. ಚಾಡಿಕಾರರು ಎಂಬುವದು ಅಂತರಂಗವಾಗಿ ಕೇಡು ಮಾತಾಡುವವರನ್ನೂ, ದೂರುಗಾರರು ಎಂಬುವದು ಬಹಿರಂಗವಾಗಿ ಕೇಡು ಮಾತಾಡುವವರನ್ನೂ ಕುರಿತದ್ದು.

4. ರಕ್ತಸಮ್ಮಂಧಿಕರಾದ ಬಂಧುಗಳಲ್ಲಿ ಒಬ್ಬರಿಗೊಬ್ಬರಿಗೆ ಇರಬೇಕಾದ ಸ್ವಾಭಾವಿಕ ಪ್ರೀತಿಯೂ ಅನ್ಯೋನ್ಯವೂ ಇಲ್ಲದವರು.

5. ಅವರ ಎಲ್ಲಾ ಅಕ್ರಮಗಳಲ್ಲಿ ಇದೇ ದೊಡ್ಡ ಅಕ್ರಮವು. ಇಂಥಾ ಪಾಪಗಳಿಗೆ ದೇವರಿಂದ ಕಠಿಣ ದಂಡನೆ ಬರುವದೆಂದು ಅವರು ತಿಳಿದಿದ್ದಾಗ್ಯೂ, ಅವುಗಳನ್ನು ತಾವೇ ಮಾಡುತ್ತಾರೆ. ಮತ್ತು ಅವುಗಳನ್ನು ಮಾಡುವ ಬೇರೊಬ್ಬರನ್ನು ಉತ್ಸಾಹಗೊಳಿಸುತ್ತಾರೆ.

6. ಜನಾಂಗಗಳವರು ಅಪರಾಧಿಗಳೆಂದು ಮುಂಚಿನ ಸಂಧಿಯಲ್ಲಿ ನಿರೂಪಿಸಿದ ತರುವಾಯ, ಈ ಸಂಧಿಯಲ್ಲಿ ಯೆಹೂದ್ಯರು ಸಹ ಅವರಂತೆಯೇ ಅಪರಾಧಿಗಳೆಂದು ಪೌಲನು ನಿರೂಪಿಸುತ್ತಾನೆ. ಮೊದಲೇ ಯೆಹೂದ್ಯರು ಅಪರಾಧಿಗಳು ಅಂದರೆ ಅವರಿಗೆ ಸಿಟ್ಟಾಗುವದೆಂದು ನೆನಸಿ, ದೇವರ ನೀತಿಯನ್ನೂ ದೀರ್ಘಶಾಂತಿಯನ್ನೂ ಕುರಿತು ಕೆಲವು ವಿಧಿಗಳನ್ನು ಹೇಳಿ, (೧—೧೬.) ತರುವಾಯ ಅವರ ಹೆಸರನ್ನು ಹೇಳುತ್ತಾನೆ. ಬಹಳ ಭಕ್ತಿವಂತರೆಂದು ತಮ್ಮನ್ನು ತೋರಿಸಿದ ಅವರು, ಮಹಾ ಪಾಪಗಳನ್ನು ಮಾಡುತ್ತಾ ಬಂದದರಿಂದ ಅವರಿಗೆ ಅಧಿಕ ದಂಡನೆ ಆಗುವದೆಂದೂ, ಅವರಿಂದ ಹೀನೈಸಲ್ಪಟ್ಟ ಜನಾಂಗಗಳು ದೇವರ ಕಡೆಗೆ ತಿರುಗಿ ಕೊಂಡರೆ, ಶ್ರೇಷ್ಠ ಭಾಗ್ಯ ಹೊಂದುವರೆಂದೂ ತೋರಿಸುತ್ತಾನೆ. (೧೭—೨೯.) ತಾನು ಹೇಳುವ ನ್ಯಾಯಕ್ಕೆ ಪ್ರತಿವಾದಿ ಹೇಳ ತಕ್ಕ ಆಕ್ಷೇಪಣೆಗಳನ್ನು ಹೇಳಿ, ಅವುಗಳಿಗೆ ಸಮಾಧಾನ ಹೇಳುತ್ತಾನೆ. (೩. ೧—೯.) ತರುವಾಯ ಮನುಷ್ಯಜಾತಿಯವರೆಲ್ಲರೂ ಕೆಟ್ಟು ಹೋಗಿದ್ದಾರೆಂಬುವದನ್ನು ವೇದ ಉದಾಹರಣೆಯಿಂದ ನಿರೂಪಿಸುತ್ತಾನೆ. (೧೦—೧೮.) ಕಾರ್ಯ ಹೀಗಿರುವದರಿಂದ ಒಬ್ಬನಾದರೂ ನ್ಯಾಯಪ್ರಮಾಣದ ಕ್ರಿಯೆಗಳಿಂದ ದೇವರ ಮುಂದೆ ನೀತಿವಂತನಾಗಲಾರನೆಂಬ ತೀರ್ಪಿನಿಂದ ತನ್ನ ನ್ಯಾಯವನ್ನು ಮುಗಿಸುತ್ತಾನೆ. (೧೯, ೨೦. ವ.)

7. ಆದದರಿಂದ ಎಂಬುವದರಲ್ಲಿ ಮುಂಚಿನ ಸಂಧಿಗೂ ಈ ಸಂಧಿಗೂ ಇರುವ ಸಮ್ಮಂಧ ತೋರುತ್ತದೆ. ಪಾಪ ಮಾಡುವವನೂ ಅದರಲ್ಲಿ ಸಂತೋಷ ಪಡುವವನೂ ದೇವರ ನೀತಿಯಾದ

ಹ್ಯಾಗಂದರೆ ನ್ಯಾಯ ತೀರಿಸುವವನಾದ ನೀನು, ಅದೇ ಕಾರ್ಯಗಳನ್ನು ಮಾಡುತ್ತಿರುವದರಿಂದ, ಮತ್ತೊಬ್ಬ
೨ ನಿಗೆ ನ್ಯಾಯ ತೀರಿಸುವದರಲ್ಲಿಯೇ, ನಿನಗೆ ನೀನೇ ಆಜ್ಞೆನಿರ್ಣಯಿಸಿ ಕೊಳ್ಳುತ್ತೀ. ಆದರೆ ಅಂಥವುಗಳನ್ನು
೩ ಮಾಡುವವರ ಮೇಲೆ, ದೇವರ ನ್ಯಾಯತೀರ್ವಿಕೆ [1]ಸತ್ಯದ ಪ್ರಕಾರವಾಗಿದೆ ಎಂದು ಬಲ್ಲೆವು. ಆದರೆ ಅಂಥ
ವುಗಳನ್ನು ಮಾಡುವವರಿಗೆ ನ್ಯಾಯ ತೀರಿಸಿ, ಅವುಗಳನ್ನು ಮಾಡುವ ಓ ಮನುಷ್ಯನೇ, ದೇವರ ನ್ಯಾಯ
೪ ತೀರ್ವಿಕೆಗೆ ತಪ್ಪಿಸಿ ಕೊಳ್ಳುವಿ ಎಂದು [2]ನೆನಸುತ್ತೀಯಾ? ಏನು! ದೇವರ ದಯವು ಮಾನಸಾಂತರಕ್ಕೆ
ನಿನ್ನನ್ನು ಪ್ರೇರಣೆ ಮಾಡುತ್ತದೆ ಎಂದು ತಿಳಿಯದೆ, ಆವನ ದಯ, ತಾಳ್ಮೆ, ದೀರ್ಘಶಾಂತಿಗಳ [3]ಐಶ್ವರ್ಯ
೫ ವನ್ನು ಅಸಡ್ಡೆ ಮಾಡುತ್ತೀಯಾ? ಆದರೆ ನಿನ್ನ ಕಾಠಿಣ್ಯದ ಪ್ರಕಾರವಾಗಿಯೂ, ನಿನ್ನ ಮಾನಸಾಂತರವಿ
ಲ್ಲದ ಹೃದಯದ ಪ್ರಕಾರವಾಗಿಯೂ, ದೇವರ ನೀತಿಯಾದ ತೀರ್ವಿಕೆ ಪ್ರಕಟವಾಗುವಂಥ [4]ಕೋಪದ ದಿವ
೬ ಸಕ್ಕೆ ಕೋಪವನ್ನು ನಿನಗೆ ನೀನೇ ಕೂಡಿಟ್ಟು ಕೊಳ್ಳುತ್ತೀ. ಅವನು ಒಬ್ಬೊಬ್ಬನಿಗೆ ಅವನವನ ಕ್ರಿಯೆಗಳ
೭ ಪ್ರಕಾರ ಬದಲು ಕೊಡುವನು. ಸತ್ಕರ್ಮದಲ್ಲಿ ತಾಳಿ ಕೊಂಡು, ಮಹಿಮೆಯನ್ನೂ ಮಾನವನ್ನೂ [5]ನಿರ್ಲ
೮ ಯವನ್ನೂ ಹುಡುಕುವವರಿಗೆ ನಿತ್ಯಜೀವವೂ. [6]ಜಗಳಗಂಟಿಗರಾಗಿ, ಸತ್ಯಕ್ಕೆ ಅವಿಧೇಯರಾಗಿದ್ದು, ಅನ್ಯಾ
೯ ಯಕ್ಕೆ ವಿಧೇಯರಾಗಿರುವವರಿಗೆ, ಕೋಪವೂ, ಉಗ್ರವೂ, ಕೆಟ್ಟದ್ದನ್ನು ಮಾಡುವ ಒಬ್ಬೊಬ್ಬ ಮನುಷ್ಯನ
[7]ಪ್ರಾಣದ ಮೇಲೆ—[8]ಮೊದಲು ಯೆಹೂದ್ಯನ ಮೇಲೆ, ಗ್ರೇಕನ ಮೇಲೆ ಸಹ—ಉಪದ್ರವೂ, ಸಂಕಟವೂ.
೧೦ ಆದರೆ ಒಳ್ಳೇದನ್ನು ಮಾಡುವ ಒಬ್ಬೊಬ್ಬನಿಗೆ — ಮೊದಲು ಯೆಹೂದ್ಯನಿಗೆ, ಗ್ರೇಕನಿಗೆ ಸಹ — ಮಹಿ

ದಂಡನೆ ಹೊಂದುವದು ನಿಜವಾದರೆ, (೧. ೩೨.) ಮತ್ತೊಬ್ಬರನ್ನು ಅಪರಾಧಿಗಳೆಂದು ತೀರಿಸಿ, ತಾನೇ ಅಪರಾಧ ಮಾಡುವವನು ದಂಡನೆ ಹೊಂದುವದು ಬಹಳ ನಿಶ್ಚಯವಾಗಿದೆ. ಆದದರಿಂದ ಇಂಥವನು ನೆವ ಹೇಳುವದಕ್ಕೆ ಸ್ಥಳವಿಲ್ಲವೆಂಬುವದೇ ಇದರ ತಾತ್ಪರ್ಯ.

1. ಮನುಷ್ಯನು ಮಾಡುವ ತೀರ್ಪು ಅಸತ್ಯವಾಗಿರ ಬಹುದು. ದೇವರು ಮಾಡುವ ತೀರ್ಪಾದರೆ, ಸತ್ಯದ ಪ್ರಕಾರವಾಗಿರುವದು ಎಂದು, ನ್ಯಾಯದಿಂದಲೂ ವೇದದಿಂದಲೂ ತಿಳಿಯ ಬಹುದು. (ಉತ್ಪ. ೧೮. ೨೫.)

2. ನಿತ್ಯ ದೇವರ ಸತ್ಯವಾದ ತೀರ್ಪಿಗೆ ತಪ್ಪಿಸಿ ಕೊಳ್ಳ ಬಹುದೆಂದು ನೆನಸುತ್ತೀಯೋ? ಇಲ್ಲವೆ ನಿನ್ನ ಮೇಲಿಗೆ ಹೇತುವೆಯಾಗಿರುವ ಆತನ ದೀರ್ಘಶಾಂತಿಯನ್ನು ಅಲಕ್ಷ್ಯ ಮಾಡುತ್ತೀಯೋ? ಎಂಬುವದು ಪ್ರಶ್ನೆ. ಮತ್ತೊಬ್ಬರು ಅಪರಾಧಿಗಳೆಂದೂ, ಅವರಿಗೆ ದಂಡನೆ ಬರುವದೆಂದೂ ಸುಲಭವಾಗಿ ಒಪ್ಪಿ ಕೊಳ್ಳುವವರು, ತಾವೇ ಅಪರಾಧಿಗಳೆಂದೂ, ತಮಗೆ ದಂಡನೆ ಬರುವದೆಂದೂ ಒಪ್ಪಿ ಕೊಳ್ಳಲಾರರು. ಆದದರಿಂದ ತಮ್ಮ ಗುಣ ಪಡುವಿಕೆಗೆ ಹೇತುವೆಯಾಗಿರುವ ದೇವರ ಕರುಣೆಯನ್ನು ಅಸಡ್ಡೆ ಮಾಡುತ್ತಾರೆ. ಇಂಥವರಿಗೆ ಅಧಿಕ ದಂಡನೆ ಬರುವದು.

3. ಐಶ್ವರ್ಯ ಎಂಬುವದು ಸಂಪೂರ್ಣತ್ವವನ್ನೂ ಹೇರಳವನ್ನೂ ಸೂಚಿಸುತ್ತದೆ. (೯. ೨೩. ೨ ಕೊರಿ. ೮. ೨. ಎಫೇ. ೧. ೭; ೨. ೬.) ದಯ ಎಂಬುವದು ದಯಾಳವನ್ನೂ, ತಾಳ್ಮೆ ಶಾಂತವನ್ನೂ ಅಥವಾ ಸೈರಣೆಯನ್ನೂ, ದೀರ್ಘಶಾಂತಿ ಎಂಬುವದು ಸಂಗಡಲೇ ದಂಡಿಸದೆ ನಿಧಾನವಾಗಿರುವದನ್ನೂ ತೋರಿಸುತ್ತದೆ. ಕರುಣೆಯುಳ್ಳ ದೇವರು ಪಾಪಿಷ್ಠರನ್ನು ದಂಡಿಸುವದಕ್ಕೆ ತಾಮಸ ಮಾಡುವದರಿಂದ ಅವರು ತೃಣೀಕರವಾಗಿ ಪಾಪ ಮಾಡುತ್ತಾರೆ. (ಪ್ರಸಂಗಿ. ೮. ೧೧.)

4. ದೇವರ ಕೃಪೆಯನ್ನು ಅಸಡ್ಡೆ ಮಾಡಿ, ಹೃದಯವನ್ನು ಕಠಿಣ ಪಡಿಸಿ ಕೊಂಡ ಪಾಪಿಷ್ಠರ ಮೇಲೆ ನ್ಯಾಯತೀರ್ವಿಕೆಯ ದಿವಸವು, ಆತನ ಉಗ್ರ ಕೋಪವಾದ ಅಗ್ನಿಯು ಹತ್ತಿ ಉರಿಯುವ ದಿವಸವಾಗಿದೆ. ಆ ಕೋಪವು ಈಗಲೇ ಪ್ರಕಟ ಮಾಡಲ್ಪಟ್ಟದ್ದರೂ, (೧. ೧೮.) ಇನ್ನು ಮೇಲೆಯೇ ಅದು ಪೂರ್ಣವಾಗಿ ಪ್ರಕಟವಾಗುವದು. ಗುಣ ಪಡದ ಪಾಪಾತ್ಮರೆಲ್ಲರೂ ಆ ಭಯಂಕರವಾದ ದಿವಸಕ್ಕಾಗಿ ಆಜ್ಞೆಯನ್ನು ಕೂಡಿಟ್ಟು ಕೊಳ್ಳುತ್ತಾರೆ. (ಜೆಫನೀ. ೧. ೧೫.)

5. ಆದಿಯಲ್ಲಿ ಮನುಷ್ಯನು ಮಹಿಮೆ ಘನಗಳ ಕಿರೀಟ ಧರಿಸಲ್ಪಟ್ಟವನಾಗಿದ್ದನು. (ಕೀರ್ತ. ೮. ೫.) ಆದರೆ ಆ ಮಹಿಮೆಯು ಪಾಪದಿಂದ ನಾಶವಾಯಿತು. ಈಗ ಮನುಷ್ಯನು ಕ್ರಿಸ್ತನ ಮಹಾ ಪುಣ್ಯವನ್ನು ನಂಬಿ, ದಣಿಯದೆ ಸತ್ಕರ್ಮಗಳನ್ನು ಮಾಡಿದರೆ, ಅವನಿಗುಂಟಾಗುವ ಮಹಿಮೆಯೂ ಘನವೂ ಎಂದೆಂದಿಗೂ ನಾಶವಾಗದೆ ಇರುವವು; ನಿತ್ಯ ಜೀವವನ್ನು ಹೊಂದಿ ಮೋಕ್ಷಮನೆಯಲ್ಲಿ ಸದಾಕಾಲ ಬಾಳುವರು.

6. ಜಗಳಗಂಟಿಗರು ಎಂಬುವದು ದೇವರು ಪ್ರಕಟ ಮಾಡಿದ ಆತನ ದಿವ್ಯ ಚಿತ್ತವನ್ನು ವಿವಾದಗುಣದಿಂದ ವಿರೋಧಿಸುವವರನ್ನು ಕುರಿತದ್ದು. ಇಂಥಾ ಪಾಪವನ್ನು ಯೆಹೂದ್ಯರು ಆಗಾಗ್ಯೆ ಮಾಡುತ್ತಾ ಬಂದರು. (ಯೆಶಾ. ೧. ೨—೪. ಯೆರೆ. ೫. ೨೩. ಅಪೊ. ಕ್ರಿ. ೭. ೫೧. ರೋಮಾ. ೧೧. ೩.) ಇಂಥವರು ದೇವರ ಉಗ್ರ ಕೋಪದಿಂದ ಉಂಟಾಗುವ ಉಪದ್ರವನ್ನು ಒಳಗೂ ಹೊರಗೂ ಅನುಭವಿಸುವರು. (ಕೀರ್ತ. ೭೮. ೪೯.)

7. ಯೆಹೂದ್ಯನು ಗ್ರೇಕನು ಎಂಬ ಭೇದವಿಲ್ಲದೆ ಪಾಪ ಮಾಡುವ ಯಾವ ಪ್ರಾಣಕ್ಕಾದರೂ ಇಂಥಾ ನ್ಯಾಯತೀರ್ವಿಕೆಯುಂಟಾಗುವದು. ಇದನ್ನು ನಾವು ಒಬ್ಬೊಬ್ಬರೂ ಯೋಚಿಸ ಬೇಕು. (ಲೇವಿ. ೫. ೧—೪.)

8. ಮೊದಲು ಶ್ಲಾಘ್ಯ ಹೊಂದಿದ ಯೆಹೂದ್ಯನು ಮೊದಲು ಉಪದ್ರವನ್ನು ಹೊಂದುವದು ನೀತಿಪ್ರಮಾಣಕ್ಕೆ ತಕ್ಕದ್ದಾಗಿದೆ. (೧. ೧೬. ಲೂಕ. ೧೨. ೪೭, ೪೮.)



೧೧ ಮೆಯೂ ಮಾನವೂ ಸಮಾಧಾನವೂ. ಯಾಕಂದರೆ ದೇವರ ಬಳಿಯಲ್ಲಿ [1]ಮುಖದಾಕ್ಷಿಣ್ಯವಿಲ್ಲ.
೧೨ ಹ್ಯಾಗಂದರೆ [2]ನ್ಯಾಯಪ್ರಮಾಣವಿಲ್ಲದೆ ಪಾಪ ಮಾಡಿದವರಷ್ಟೂ ನ್ಯಾಯಪ್ರಮಾಣವಿಲ್ಲದೆ ನಾಶವಾಗು
ವರು. ಆದರೆ ನ್ಯಾಯಪ್ರಮಾಣದೊಳಗೆ ಪಾಪ ಮಾಡಿದವರಷ್ಟೂ ನ್ಯಾಯಪ್ರಮಾಣದಿಂದ ತೀರ್ವಿಕೆ
೧೩ ಯನ್ನು ಹೊಂದುವರು. ಯಾಕಂದರೆ ನ್ಯಾಯಪ್ರಮಾಣ [3]ಕೇಳಿದವರು ದೇವರ ಮುಂದೆ ನೀತಿವಂತರಲ್ಲ,
೧೪ ನ್ಯಾಯಪ್ರಮಾಣ ಮಾಡುವವರೇ ನೀತಿನಿರ್ಣಯ ಪಡುವರು. ಹ್ಯಾಗಂದರೆ ನ್ಯಾಯಪ್ರಮಾಣವಿಲ್ಲದ
ಜನಾಂಗಗಳು [4]ಸ್ವಭಾವದಿಂದ ನ್ಯಾಯಪ್ರಮಾಣದವುಗಳನ್ನು ಮಾಡುವಾಗ, ಅವರು ನ್ಯಾಯಪ್ರಮಾಣವಿ
೧೫ ಲ್ಲದವರಾಗಿದ್ದು, ತಮಗೆ ತಾವೇ ನ್ಯಾಯಪ್ರಮಾಣವಾಗಿದ್ದಾರೆ. ಅವರ ಮನಸ್ಸಾಕ್ಷಿ ಕೂಡ ಸಾಕ್ಷಿ
ಕೊಟ್ಟು, ಅವರ [5]ಯೋಚನೆಗಳು ಒಂದಕ್ಕೊಂದು ತಪ್ಪು ಹೊರಿಸುತ್ತಾ, ಇಲ್ಲವೆ ಪ್ರತ್ಯುತ್ತರ ಕೊಡುತ್ತಾ
ಇರುವದರಿಂದ, ಅವರು ತಮ್ಮ ಹೃದಯಗಳಲ್ಲಿ ಬರೆದಿರುವ ನ್ಯಾಯಪ್ರಮಾಣದ ಕ್ರಿಯೆಯನ್ನು ತೋರಿಸು
೧೬ ತ್ತಾರೆ. ದೇವರು ಮನುಷ್ಯರ [6]ರಹಸ್ಯವಾದವುಗಳನ್ನು ಕುರಿತು, ನನ್ನ ಸುವಾರ್ತೆಯ ಪ್ರಕಾರ, ಯೇಸು
ಕ್ರಿಸ್ತನ ಮುಖಾಂತರ [7]ನ್ಯಾಯ ತೀರಿಸುವ ದಿವಸದಲ್ಲಿಯೇ.
೧೭ ಇಗೋ, [8]ನೀನು ಯೆಹೂದ್ಯನೆಂದು ಕರೆಯಲ್ಪಟ್ಟು, ನ್ಯಾಯಪ್ರಮಾಣ ಊರಿ ಕೊಂಡು, ದೇವರಲ್ಲಿ ಹೆಚ್ಚಳ
೧೮ ಪಡುತ್ತೀ. ಮತ್ತು ಅವನ ಚಿತ್ತವನ್ನು ತಿಳಿದು, ನ್ಯಾಯಪ್ರಮಾಣದಿಂದ ಶಿಕ್ಷಿತನಾಗಿದ್ದು, ಹೆಚ್ಚುಕಡಿಮೆ
೧೯ ಯಾದವುಗಳನ್ನು [9]ಪರೀಕ್ಷಿಸುತ್ತೀ. [10]ಕುರುಡರ ನಡಿಸುವವನಾಗಿಯೂ, ಕತ್ತಲಲ್ಲಿರುವವರ ಬೆಳಕಾಗಿಯೂ,
೨೦ ಮೂಢರ ಉಪಾಧ್ಯನಾಗಿಯೂ, ಬಾಲಕರ ಬೋಧಕನಾಗಿಯೂ, ನ್ಯಾಯಪ್ರಮಾಣದಲ್ಲಿರುವ ತಿಳುವಿಕೆ
೨೧ ಸತ್ಯಗಳ ಸ್ವರೂಪ ಉಂಟಾದವನಾಗಿಯೂ, ಇದ್ದೇನೆಂದು ನಂಬಿ ಕೊಳ್ಳುತ್ತೀ. [11]ಬೇರೊಬ್ಬನಿಗೆ ಬೋಧಿಸುವ
ನೀನು ನಿನಗೆ ಬೋಧಿಸಿ ಕೊಳ್ಳುವದಿಲ್ಲವೋ? ಕದಿಯ ಬೇಡವೆಂದು ಸಾರುವ ನೀನು ಕದಿಯುತ್ತೀಯೋ?

1. ಮನುಷ್ಯರಲ್ಲಿ ಪಕ್ಷಪಾತ ಉಂಟೇ ಹೊರ್ತು, ದೇವರ ಬಳಿಯಲ್ಲಿ ಸ್ವಲ್ಪವಾದರೂ ಪಕ್ಷಪಾತವಿಲ್ಲ. ತಪ್ಪಿ ಹೋಗದ ನೀತಿಯುಳ್ಳ ದೇವರು ಮುಖದಾಕ್ಷಿಣ್ಯ ನೋಡದೆ ತೀರ್ಪು ಹೇಳುವನು. (೨ ದಿನಚ. ೧೯. ೭. ಅಪೊ. ಕ್ರಿ. ೧೦. ೩೪.) ಕಡೇ ದಿವಸದಲ್ಲಿ ಆಗುವ ತೀರ್ಪು ಸೂರ್ಯನ ಪ್ರಕಾಶದ ಹಾಗೆ ಪ್ರಕಾಶವಾಗಿರುವದು. ದೇವಭಕ್ತರು ನಿತ್ಯ ಜೀವವನ್ನು ಹೊಂದುವರು; ದುರ್ಮಾರ್ಗರು ಕೋಪಾಜ್ಞೆಯನ್ನು ಹೊಂದುವರು. ಆ ಮಹಾ ದಿವಸದಲ್ಲಿ ಈ ಎರಡೇ ಭೇದಗಳ ಹೊರ್ತು, ಬೇರೆ ಯಾವ ವ್ಯತ್ಯಾಸವೂ ಇರುವದಿಲ್ಲ.

2. ಯೆಹೂದ್ಯರಿಗೆ ಬರವಣಿಗೆಯ ನ್ಯಾಯಪ್ರಮಾಣವಿದ್ದ ಪ್ರಕಾರವಾಗಿ ಜನಾಂಗಗಳವರಿಗೆ ಇಲ್ಲದ್ದರಿಂದ ಅವರು ಆ ಪ್ರಮಾಣದ ಪ್ರಕಾರ ತೀರ್ಪು ಹೊಂದಲಾರರು. ಆದಾಗ್ಯೂ ಅವರಿಗೆ ಸ್ವಾಭಾವಿಕವಾದ ಮನಸ್ಸಾಕ್ಷಿಯ ಅಂತರಂಗ ಪ್ರಮಾಣವಿದ್ದದರಿಂದ ಅದರ ಪ್ರಕಾರ ತೀರ್ಪು ಹೊಂದುವರು. (೧೪. ೧೫. ವ.) ದೈವಪ್ರಕಟಣೆಯ ವೇದವಿಲ್ಲದೆ ಅಜ್ಞಾನದೇಶಗಳವರಲ್ಲಿ ಯಾರಾದರೂ ನಿತ್ಯ ಜೀವ ಹೊಂದುವರೋ ಎಂಬುವದು ಇಲ್ಲಿ ವಾದಿಸ ತಕ್ಕ ವಿಷಯವಲ್ಲ.

3. ಯೆಹೂದ್ಯರು ಸಭೆಮನೆಗಳಲ್ಲಿ ಓದಲ್ಪಡುವ ನ್ಯಾಯಪ್ರಮಾಣವನ್ನು ಕೇಳುತ್ತಾ ಇದ್ದರು. ಆದಾಗ್ಯೂ ಅದನ್ನು ಕೇಳುವವರಲ್ಲ, ಅದನ್ನು ಕೈಕೊಳ್ಳುವವರೇ ದೇವರಿಂದ ಮೇಲು ಹೊಂದುವರು.

4. ನ್ಯಾಯಪ್ರಮಾಣವನ್ನು ಹೊಂದದ ಅಜ್ಞಾನಿಗಳು ಸ್ವಾಭಾವಿಕ ಪ್ರಮಾಣದ ಪ್ರಕಾರವಾಗಿಯೂ ಮನಸ್ಸಾಕ್ಷಿಯ ಪ್ರಕಾರವೂ ನಡೆದರೆ, ಅವರು ನ್ಯಾಯಪ್ರಮಾಣ ಹೊಂದಿದವರ ಹಾಗೆ ಮಾತ್ರವಲ್ಲ, ಅದರ ಪ್ರಯೋಜನವನ್ನು ಹೊಂದಿದವರ ಹಾಗೆ ಇರುವರು.

5. ಅವರ ಯೋಚನೆಗಳು ಅಥವಾ ಮನಸ್ಸಾಕ್ಷಿಯು ಅವರು ಮಾಡುವ ಕಾರ್ಯಗಳು ಸರಿ ಎಂದು, ಅಥವಾ ಸರಿ ಇಲ್ಲವೆಂದು ತೀರಿಸುವದು.

6. ಲೋಕವು ಮೆಚ್ಚುವಂತೆ ಬಹಿರಂಗವಾಗಿಯೂ ಡಂಭಾಚಾರವಾಗಿಯೂ ಮಾಡುವ ಕ್ರಿಯೆಗಳನ್ನು ಮಾತ್ರವಲ್ಲ, ಹೃದಯದ ಕೊಠಡಿಯಲ್ಲಿ ಒಬ್ಬರಿಗೂ ತಿಳಿಯದಂತೆ ಅಂತರಂಗವಾಗಿ ಮಾಡುವ ಕ್ರಿಯೆಗಳನ್ನು ದೇವರು ಕಡೇ ದಿವಸದಲ್ಲಿ ವಿಚಾರಿಸಿ ತೀರ್ಪು ಕೊಡುವನು. (ಪ್ರಸಂಗಿ. ೧೨. ೧೪.)

7. ಸರ್ವ ಲೋಕಕ್ಕೂ ಉಂಟಾಗುವ ತೀರ್ಪು ಒಂದು ಮಹಾ ದಿವಸದಲ್ಲಿ ನಡಿಯುವದು. ಎಲ್ಲಾ ದಿವಸಗಳಿಗಿಂತ ಮಹಾ ಮುಖ್ಯ ದಿವಸವಾದ ಕಡೇ ದಿವಸವನ್ನು ಕುರಿತು ಕ್ರಿಸ್ತನೂ ಆತನ ಅಪೊಸ್ತಲರೂ ಆಗಾಗ್ಯೆ ಹೇಳಿದ್ದಾರೆ. (ಮತ್ತಾ. ೭. ೨೨.)

8. ನೀನು ಎಂಬದು ದೃಢ ವಾಕ್ಯ. ಮೇಲೆ ಹೇಳಿದ ನ್ಯಾಯವೆಲ್ಲಾ ಯೆಹೂದ್ಯನಾದ ನಿನಗೇ ಸರಿ ಎಂದು ಹೇಳಿದ ಹಾಗಿದೆ.

9. ಜ್ಞಾನಕ್ಕೂ ಸತ್ಯಕ್ಕೂ ಪ್ರಮಾಣವಾಗಿರುವ ನ್ಯಾಯಪ್ರಮಾಣದ ಬೋಧನೆ ಹೊಂದಿದ ಯೆಹೂದ್ಯನು ಧರ್ಮಾಧರ್ಮಗಳನ್ನು ಸರಿ ನೋಡಿ, ಯೋಗ್ಯವಾದವುಗಳನ್ನು ಒಪ್ಪಿ ಕೊಳ್ಳುವನೆಂದು ಹೆಚ್ಚಳ ಪಡುವದರಿಂದ ಹೀಗೆ ಹೇಳಿರುತ್ತದೆ.

10. ಇದರಲ್ಲಿ ಹೇಳಿರುವ ಹೆಸರುಗಳೆಲ್ಲಾ ಯೆಹೂದ್ಯ ಬೋಧಕರು ತಮಗೆ ಇಟ್ಟು ಕೊಂಡ ಹೆಸರುಗಳಾಗಿರ ಬಹುದು. (ಮತ್ತಾ. ೧೫. ೧೪; ೨೩. ೧೬.)

11. ನೀನು ಹೇಳುವದೆಲ್ಲಾ ಸರಿ ಅಂದರೆ, ಇಷ್ಟು ಶ್ರೇಷ್ಠ ವರಗಳನ್ನು ಹೊಂದಿದ ನೀನು ಅಪರಾಧಿಯಾಗಿರುವದರಿಂದ ನಿನಗೆ ಬರುವ ದಂಡನೆ ಬಹು ಕಠಿಣವಾಗಿರುವದು ಎಂಬುವದೇ ಇದರ ತಾತ್ಪರ್ಯವು.

೨೨ ವ್ಯಭಿಚಾರ ಮಾಡ ಬೇಡೆಂಬುವ ನೀನು ವ್ಯಭಿಚಾರ ಮಾಡುತ್ತೀಯೋ? ವಿಗ್ರಹಗಳನ್ನು ಅಸಂಹಿಸುವ ನೀನು
೨೩ [1]ಪರಿಶುದ್ಧವಾದದ್ದನ್ನು ಕೊಳ್ಳೆ ಇಡುತ್ತೀಯೋ? ನ್ಯಾಯಪ್ರಮಾಣದಲ್ಲಿ ಹೆಚ್ಚಳ ಪಡುವ ನೀನು ನ್ಯಾಯ
೨೪ ಪ್ರಮಾಣದ ಮಿರುವಿಕೆಯಿಂದ ದೇವರನ್ನು ಅವಮಾನ ಪಡಿಸುತ್ತೀಯೋ? ಯಾಕಂದರೆ, [2]ಬರೆದಿರುವ
ಪ್ರಕಾರ, ನಿಮ್ಮ ಮುಖಾಂತರ ದೇವರ ಹೆಸರು ಜನಾಂಗಗಳಲ್ಲಿ ದೂಷಿಸಲ್ಪಡುತ್ತದೆ. (ಯೆಶಾ. ೫೨. ೫.
ಎಜೇಕಿ. ೩೬. ೨೦.)
೨೫ ಯಾಕಂದರೆ ನೀನು ನ್ಯಾಯಪ್ರಮಾಣದ ಪ್ರಕಾರ ನಡೆದರೆ, [3]ಪರಿಛೇದನೆ ಪ್ರಯೋಜನವಾಗಿದೆ. ಆದರೆ
೨೬ ನ್ಯಾಯಪ್ರಮಾಣವನ್ನು ಮಿರುವವನಾದರೆ, ನಿನ್ನ ಪರಿಛೇದನೆ ಅಪರಿಛೇದನೆ ಆಯಿತು. ಹೀಗಿರುವಾಗ್ಯೆ,
ಅಪರಿಛೇದನೆಯು ನ್ಯಾಯಪ್ರಮಾಣದ ನಿರ್ಣಯಗಳನ್ನು ಕೈಕೊಂಡರೆ, ಅವನ ಅಪರಿಛೇದನೆಯು ಪರಿಛೇದನೆ
೨೭ ಎಂದು ಎಣಿಸಲ್ಪಡುವದಿಲ್ಲವೋ? ಮತ್ತು ನ್ಯಾಯಪ್ರಮಾಣವನ್ನು ಪೂರೈಸುವ ಸ್ವಭಾವದ ಅಪರಿಛೇದ
ನೆಯು, ಅಕ್ಷರವೂ ಪರಿಛೇದನೆಯೂ ಉಂಟಾದವನಾಗಿ, [4]ನ್ಯಾಯಪ್ರಮಾಣ ಮಿರುವ ನಿನಗೆ ಆಜ್ಞೆ
ನಿರ್ಣಯಿಸುವದಿಲ್ಲವೋ?
೨೮ ಯಾಕಂದರೆ ಬಹಿರಂಗವಾಗಿರುವವನು ಯೆಹೂದ್ಯನಲ್ಲ; ಬಹಿರಂಗವಾಗಿ ಮಾಂಸದಲ್ಲಿರುವಂಥಾದ್ದು ಪರಿ
೨೯ ಛೇದನೆ ಅಲ್ಲ. ಆದರೆ ಅಂತರಂಗವಾಗಿರುವವನೇ ಯೆಹೂದ್ಯನು; ಮತ್ತು ಪರಿಛೇದನೆಯು [5]ಹೃದಯದ್ದು;
ಅಕ್ಷರದಲ್ಲಿ ಅಲ್ಲ, ಆತ್ಮದಲ್ಲಿಯೇ; ಅವನ ಸ್ತೋತ್ರವು ಮನುಷ್ಯರಿಂದಲ್ಲ, ದೇವರಿಂದಲೇ.

ಯೆಹೂದ್ಯರ ಆಕ್ಷೇಪಣೆಗಳಿಗೆ ಸಮಾಧಾನ ಹೇಳಿದ್ದು; ಸಮಸ್ತರೂ ಕೆಟ್ಟು ಹೋದವರಾಗಿರುವದರಿಂದ ತಮ್ಮ ಸ್ವಂತ ಕ್ರಿಯೆಗಳಿಂದ ನೀತಿವಂತರಾಗಲಾರರೆಂದು ನಿರೂಪಿಸಿದ್ದು.

**3.** [6]ಹಾಗಾದರೆ, ಯೆಹೂದ್ಯನಿಗೆ ಹೆಚ್ಚು ಏನು? ಇಲ್ಲವೆ ಪರಿಛೇದನೆಯ ಪ್ರಯೋಜನವೇನು?
೨ ಎಲ್ಲಾ ವಿಷಯಗಳಲ್ಲಿ ಬಹಳ. ಏನಂದರೆ, [7]ಮೊದಲು [8]ದೇವರ ವಚನಗಳು ಅವರಿಗೆ ಒಪ್ಪಿಸಲ್ಪಟ್ಟವು.

1. ಇದು ವಿಗ್ರಹಗಳನ್ನು ಅಸಂಹಿಸುವ ನೀನು ಆ ವಿಗ್ರಹಗಳ ಗುಡಿಗಳಲ್ಲಿರುವ ದ್ರವ್ಯಗಳನ್ನು ಅಪಹರಿಸ ಬಹುದೋ? ಎಂದು ಅರ್ಥವಾಗುತ್ತದೆ; ಇಲ್ಲವೆ ದೇವರಿಗೆ ಅರ್ಪಿಸ ಬೇಕಾದವುಗಳನ್ನು ಅರ್ಪಿಸದೆ ಇದ್ದ ಪಾಪವನ್ನು ಕುರಿತದ್ದಾಗಿರ ಬಹುದು. (ಮಲಕಿ. ೩. ೮, ೯.)

2. ಪ್ರವಾದಿಯಾದ ಎಜೇಕಿಯೇಲನು ಆ ಕಾಲದ ಯೆಹೂದ್ಯರನ್ನು ಕುರಿತು ಮೊರೆ ಇಟ್ಟ ಪ್ರಕಾರ ಅಪೊಸ್ತಲನ ಕಾಲದಲ್ಲಿದ್ದ ಯೆಹೂದ್ಯರನ್ನು ಕುರಿತು ಸಹ ಹೇಳ ತಕ್ಕದ್ದಾಗಿತ್ತು. (ಎಜೇಕಿ. ೩೬. ೨೦—೨೩.) ಸತ್ಯವೇದವನ್ನು ಅನುಸರಿಸಿ ಇರುವವರು ಅದರ ಪ್ರಕಾರ ನಡಿಯದೆ ಇದ್ದರೆ, ಅವರೇ ದೇವರ ಹೆಸರನ್ನು ಅಪಕೀರ್ತಿ ಪಡಿಸುವವರಾಗಿದ್ದಾರೆ.

3. ದೇವರು ಯೆಹೂದ್ಯ ಜನರಲ್ಲಿ ಮಾಡಿದ ಒಡಂಬಡಿಕೆಗೆ ಗುರುತಾಗಿದ್ದ ಪರಿಛೇದನೆಯನ್ನು ಹೊಂದಿದರೆ, ಮೋಕ್ಷರಾಜ್ಯದಲ್ಲಿ ಶೇರ ಬಹುದೆಂದು ಯೆಹೂದ್ಯರಲ್ಲಿ ಅನೇಕರು ತಪ್ಪಾಗಿ ನೆನಸುತ್ತಿದ್ದರು. ಅವರ ತಪ್ಪಾಲೋಚನೆಯನ್ನು ನಿವರ್ತಿಸುವದಕ್ಕೆ ಪೌಲನು ಇದನ್ನು ಹೇಳುತ್ತಾನೆ. ನ್ಯಾಯಪ್ರಮಾಣದ ನೀತಿಗಳಿಗೂ ಬಹಿರಾಚಾರಗಳಿಗೂ ಇರುವ ವ್ಯತ್ಯಾಸವನ್ನು ತೋರಿಸಿ, ನ್ಯಾಯಪ್ರಮಾಣದ ನೀತಿಯನ್ನು ಅಥವಾ ನ್ಯಾಯಪ್ರಮಾಣದಲ್ಲಿ ಹೇಳಿದ ಸನ್ಮಾರ್ಗಪ್ರಮಾಣಗಳನ್ನು ಕೈಕೊಳ್ಳದೆ, ಅದರ ಹೊರಗಿನ ಆಚಾರಗಳನ್ನು ನಡಿಸುವದರಿಂದ ಪ್ರಯೋಜನವಿಲ್ಲವೆಂದೂ, ಬಹಿರಾಚಾರವಿಲ್ಲದೆ ಸನ್ಮಾರ್ಗವಿಧಿಗಳಲ್ಲಿ ನಡಿಯುವವರಿಗೆ ಪ್ರಯೋಜನ ಉಂಟೆಂದೂ ತೋರಿಸಲ್ಪಟ್ಟದೆ.

4. ಪರಿಛೇದನೆ ಹೊಂದದೆ ಇದ್ದರೂ, ದೇವರ ಕಟ್ಟಳೆಗಳನ್ನು ಕೈಕೊಳ್ಳುವವರು (೧೪, ೧೫.ವ.) ಆ ಕಟ್ಟಳೆಗಳನ್ನು ಹೊಂದಿದ್ದಾಗ್ಯೂ ಅವುಗಳ ಪ್ರಕಾರ ನಡಿಯದೆ ಇರುವವರನ್ನು ಅಪರಾಧಿಗಳೆಂದು ನಿರ್ಣಯಿಸುವದು ನ್ಯಾಯವಲ್ಲವೋ? (ಮತ್ತಾ. ೧೨. ೪೧, ೪೨.)

5. ೨೬ನೇ ವಚನದಲ್ಲಿ ಹೇಳಿರುವದಕ್ಕೆ ೨೮, ೨೯ನೇ ವಚನಗಳಲ್ಲಿ ನ್ಯಾಯ ಹೇಳಿ ಇದೆ. ಸರ್ವಸಾಕ್ಷಿಯಾದ ದೇವರು ಹೊರಗಿನವುಗಳನ್ನು ನೋಡದೆ, ಅಂತರ್ಯವನ್ನು ನೋಡುತ್ತಾನೆ. ಹೃದಯದ ಪರಿಛೇದನೆಯು ನ್ಯಾಯಪ್ರಮಾಣದಲ್ಲಿರುವ ಹೊರಗಿನ ಆಚಾರವನ್ನು ನಡಿಸುವದರಿಂದ ಉಂಟಾಗದೆ, ಅದರ ದಿವ್ಯ ಸತ್ಯವನ್ನು ಮನಸ್ಸಿನಲ್ಲಿ ಗ್ರಹಿಸಿ, ಅದರ ಪ್ರಕಾರ ನಡಿಯುವದರಿಂದಲೇ ಉಂಟಾಗುತ್ತದೆ. (ದ್ವಿತೀ. ನ್ಯಾಯ. ೧೦. ೧೬; ೩೦. ೬. ೧ ಪೇತ್ರ. ೩. ೪. ಕೊಲೊ. ೨. ೧೧.) ಹೀಗೆ ಯಥಾರ್ಥವಾಗಿ ನಡಿಯುವ ಉತ್ತಮರಿಗೆ ಮನುಷ್ಯರಿಂದಲ್ಲ, ಅಂತರ್ಯವನ್ನು ನೋಡುವ ದೇವರಿಂದ ಮೆಚ್ಚಿಕೆಯಾಗುವದು.

6. ಮುಂಚಿನ ಸಂಧಿಯಲ್ಲಿರುವ ನ್ಯಾಯವನ್ನು ಆಧಾರ ಮಾಡಿಕೊಂಡು ಒಬ್ಬ ಯೆಹೂದ್ಯನು ಕೆಲವು ಆಕ್ಷೇಪಗಳನ್ನು ಹೇಳುವ ಹಾಗೆಯೂ, ಅದಕ್ಕೆ ಪೌಲನು ಸಮಾಧಾನ ಹೇಳುವ ಹಾಗೆಯೂ ಈ ವಚನಗಳಲ್ಲಿ ತೋರಿಸಲ್ಪಟ್ಟದೆ. ಜನಾಂಗಗಳವರ ಹಾಗೆ ಯೆಹೂದ್ಯರು ಸಹ ಅಪರಾಧಿಗಳು ಅಂದರೆ, ಇಲ್ಲವೆ ಹೊರಗೆ ಮಾಂಸದಲ್ಲಿ ಆಗುವ ಪರಿಛೇದನೆ ಸರಿಯಾದ ಪರಿಛೇದನೆ ಅಲ್ಲ ಅಂದರೆ, ಯೆಹೂದ್ಯನಾಗಿರುವದರಿಂದ ವಿಶೇಷವೇನು? ಎಂಬುವದೇ ಆಕ್ಷೇಪಣೆ. ಯೆಹೂದ್ಯನಿಗೆ ಹೆಚ್ಚು ಏನು? ಪರಿಛೇದನೆಯ ಪ್ರಯೋಜನವೇನು? ಎಂಬ ಎರಡು ಪ್ರಶ್ನೆಗಳಿಗೂ ಈ ಸಂಧಿಯಲ್ಲಿಯೂ ಮುಂದೆ ಬರುವ ಸಂಧಿಯಲ್ಲಿಯೂ ಉತ್ತರ ಹೇಳಿ ಇದೆ.

7. ಮೊದಲು ದೇವರ ವಾಕ್ಯ ಅವರಿಗೆ ಕೊಡಲ್ಪಟ್ಟದ್ದು ಅವರಿಗೆ ಮೊದಲನೇ ಮಹಿಮೆ. ಯೆಹೂದ್ಯರಿಗೆ ಉಂಟಾದ ಮುಖ್ಯ ಶ್ಲಾಘ್ಯಗಳನ್ನು ಕುರಿತು ೯. ೪, ೫ಲ್ಲಿ ಹೇಳಲ್ಪಟ್ಟದೆ. ಅವುಗಳಲ್ಲಿ ದೇವರ ಬಾಯಿಂದ ಹೊರಟಂಥಾ ಬರೆಯಲ್ಪಟ್ಟ ವೇದವು ಅವರಿಗೆ ಮೊದಲು ಕೊಡಲ್ಪಟ್ಟದ್ದರಿಂದ ಪೌಲನು ಈ ವಚನದಲ್ಲಿ ಅದನ್ನು ಹೇಳುತ್ತಾನೆ.

8. (ಅಪೊ. ಕ್ರಿ. ೭. ೩೮. ವಚನದ ವ್ಯಾಖ್ಯಾನ ನೋಡ ಬೇಕು. ೧ ಪೇತ್ರ. ೪. ೧೧.) ಯೆಹೂದ್ಯರಿಗೆ ಕೊಡಲ್ಪಟ್ಟ ಹಳೇ ಒಡಂ



೩ ಯಾಕಂದರೆ, ಕೆಲವರು ನಂಬದೆ ಹೋಗಿದ್ದರೆ, ಏನು? ಅವರ ಅಪನಂಬಿಕೆಯು [1]ದೇವರ ನಂಬಿಕೆಯನ್ನು
೪ ವ್ಯರ್ಥ ಮಾಡುವದೋ? ಆಗದು. ದೇವರು ಸತ್ಯವಂತನಾಗಿರಲಿ; ಆದರೆ ಎಲ್ಲಾ ಮನುಷ್ಯರು ಸುಳ್ಳುಗಾ
ರರು—ನೀನು ನಿನ್ನ ವಾಕ್ಯಗಳಲ್ಲಿ ನೀತಿನಿರ್ಣಯ ಪಡುವ ಹಾಗೆಯೂ, ನಿನಗೆ ನ್ಯಾಯತೀರ್ವಿಕೆ ಆಗುವಾಗ್ಯೆ
ಜಯಿಸುವ ಹಾಗೆಯೂ ಎಂದು [2]ಬರೆದಿರುವ ಪ್ರಕಾರವೇ. (ಕೀರ್ತ. ೫೧. ೪.)
೫ ಆದರೆ ನಮ್ಮ ಅನೀತಿಯು ದೇವರ ನೀತಿಯನ್ನು [3]ಪ್ರತಿಷ್ಠೆ ಮಾಡಿದರೆ, ಏನು ಹೇಳುವೆವು? ಕೋಪವನ್ನು
೬ ಇಳಿಯ ಮಾಡುವ ದೇವರು ಅನೀತಿವಂತನೋ? [4]ಮನುಷ್ಯನ ಪ್ರಕಾರ ಹೇಳುತ್ತೇನೆ; ಆಗದು. ಹಾಗಾದರೆ,
೭ ದೇವರು ಲೋಕಕ್ಕೆ ಹ್ಯಾಗೆ ನ್ಯಾಯ ತೀರಿಸುವನು? ಯಾಕಂದರೆ ದೇವರ ಸತ್ಯವು ನನ್ನ ಸುಳ್ಳಿನಿಂದ ಅವನ
೮ ಮಹಿಮೆಗಾಗಿ ಹೆಚ್ಚಿದ್ದರೆ, ಇನ್ನು [5]ಯಾಕೆ ನನಗೆ ಪಾಪಿಗೆಂದು ಆಜ್ಞೆನಿರ್ಣಯವಾಗುತ್ತದೆ? ಮತ್ತು ನಾವು
ದೂಷಿಸಲ್ಪಡುವ ಪ್ರಕಾರವಾಗಿಯೂ, ನಾವು ಹೇಳುತ್ತೇವೆಂದು ಕೆಲವರು ಅನ್ನುವ ಪ್ರಕಾರವಾಗಿಯೂ,
ಒಳ್ಳೆಯವುಗಳು ಬರುವ ಹಾಗೆ ಕೆಟ್ಟವುಗಳನ್ನು ಮಾಡೋಣೋ? ಅಂಥವರ ಆಜ್ಞೆನಿರ್ಣಯವು ಯುಕ್ತವಾಗಿದೆ.
೯ ಹಾಗಾದರೆ ಏನು? ಶ್ರೇಷ್ಠರಾಗಿದ್ದೇವೋ? [6]ಇಲ್ಲವೇ ಇಲ್ಲ. ಯಾಕಂದರೆ ಯೆಹೂದ್ಯರು, ಗ್ರೇಕರು ಸಹ,
೧೦ ಎಲ್ಲರು ಪಾಪಕ್ಕೊಳಗಾಗಿದ್ದಾರೆಂದು, ಮುಂಚೆ ಸ್ಥಾಪಿಸಿದ್ದೇವೆ. ಇದಕ್ಕೆ ಬರೆದದ್ದೇನಂದರೆ—ನೀತಿವಂತನು
೧೧, ೧೨ ಇಲ್ಲ, ಒಬ್ಬನೂ ಇಲ್ಲ. ತಿಳಿದವನು ಇಲ್ಲ, ದೇವರನ್ನು ಹುಡುಕುವವನು ಇಲ್ಲ. ಎಲ್ಲರು ತಪ್ಪಿ
ಹೋದರು, ಏಕವಾಗಿ ನಿಷ್ಪ್ರಯೋಜಕರಾದರು; ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ.
೧೩ (ಕೀರ್ತ. ೧೪. ೧—೩.) ಅವರ ಗಂಟ್ಲು ತೆರದ ಸಮಾಧಿಯಾಗಿದೆ; ತಮ್ಮ ನಾಲಿಗೆಗಳಿಂದ ವಂಚಿಸುತ್ತಾರೆ;
೧೪ (ಕೀರ್ತ. ೫. ೯.) ಹಾವುಗಳ ವಿಷವು ಅವರ ತುಟಿಗಳ ಕೆಳಗೆ ಅದೆ. (ಕೀರ್ತ. ೧೪೦. ೩.) ಅವರ ಬಾಯಿ
೧೫ ಶಾಪದಿಂದಲೂ ಕಹಿಯಿಂದಲೂ ತುಂಬಿ ಅದೆ; (ಕೀರ್ತ. ೧೦. ೭.) ಅವರ ಕಾಲುಗಳು ರಕ್ತವನ್ನು ಚೆಲ್ಲು
೧೬, ೧೭ ವದಕ್ಕೆ ತ್ವರೆ ಪಡುತ್ತವೆ; ಕ್ಷಯವೂ ಸಂಕಟವೂ ಅವರ ಮಾರ್ಗಗಳಲ್ಲಿ ಇರುತ್ತವೆ; ಮತ್ತು ಸಮಾ

ಬಡಿಕೆಯಾದ ವೇದವು ದೇವರ ವಾಕ್ಯವೆಂದು ಇದರಿಂದ ನಿಶ್ಚಯಿಸ ತಕ್ಕದ್ದು.

1. ಈ ವಚನದಲ್ಲಿ ಯೆಹೂದ್ಯನು ಹೇಳುವ ಇನ್ನೊಂದು ಆಕ್ಷೇಪಣೆ ಅಡಗಿ ಇದೆ. ಯೆಹೂದ್ಯರ ಅಪನಂಬಿಕೆಯು ದೇವರ ಸತ್ಯವನ್ನು ವ್ಯರ್ಥ ಮಾಡ ತಕ್ಕದ್ದೋ? ಎಂಬುವದೇ ಆಕ್ಷೇಪಣೆ.

2. ಮೇಲೆ ಹೇಳಿದ ಪ್ರಶ್ನೆಗೆ ಇದು ಉತ್ತರವಾಗಿದೆ. ಮನುಷ್ಯರ ಮಾತುಗಳೆಲ್ಲಾ ಅಬದ್ಧವಾದರೂ, ದೇವರ ಮಾತು ಎಷ್ಟು ಮಾತ್ರವೂ ತಪ್ಪಿ ಹೋಗಲಾರದು. ದಾವೀದನು ದೇವರ ಕಟ್ಟಳೆಯನ್ನು ಮಿರಿ ಪಾಪ ಮಾಡಿದಾಗ ಅವನ ವಿಷಯದಲ್ಲಿ ಪ್ರಕಟವಾದ ದೇವರ ನೀತಿಯನ್ನು ಕುರಿತು ಹೇಳಿರುವ ಕೀರ್ತನೆಯಲ್ಲಿ ಒಂದು ವಚನವನ್ನು ಎತ್ತಿ ಹೇಳಿರುವದೇ ಯೆಹೂದ್ಯನ ಆಕ್ಷೇಪಣೆಗೆ ತಕ್ಕ ಉತ್ತರವಾಗಿದೆ.

3. ಇದರಲ್ಲಿ ಯೆಹೂದ್ಯನು ಹೇಳುವ ಇನ್ನೊಂದು ಆಕ್ಷೇಪಣೆ ಅಡಗಿರುತ್ತದೆ. ನಮ್ಮ ಅನೀತಿಯಿಂದ ದೇವರ ನೀತಿಯೂ, ನಮ್ಮ ಅಕ್ರಮದಿಂದ ಆತನ ಮಹಿಮೆಯೂ ಅಧಿಕವಾಗಿ ಪ್ರಕಟವಾಗ ತಕ್ಕದ್ದಾಗಿದ್ದರೆ, ಆತನು ನಮ್ಮನ್ನು ದಂಡಿಸುವದು ನ್ಯಾಯವೋ? ಎಂಬುವದು ಪ್ರಶ್ನೆ. ಇದಕ್ಕೆ ಉತ್ತರವಾಗಿ ಪೌಲನು, ಈ ನ್ಯಾಯವು ಸರಿ, ಅಂದರೆ ದೇವರು ಒಬ್ಬನನ್ನೂ ದಂಡಿಸ ಕೂಡದು, ಲೋಕಕ್ಕೆ ನ್ಯಾಯ ತೀರಿಸಲೂ ಕೂಡದಲ್ಲ? ಎಂದು ಹೇಳುತ್ತಾನೆ.

4. ಇದು ಪೌಲನು ಹೇಳುವ ನ್ಯಾಯವಲ್ಲ, ಆಕ್ಷೇಪಿಸುವವನ ನ್ಯಾಯವಾಗಿರುವದರಿಂದ ಹೀಗೆ ಹೇಳಿರುತ್ತದೆ.

5. ಇದು ಸಹ ಯೆಹೂದ್ಯನು ಹೇಳುವ ಒಂದು ಆಕ್ಷೇಪಣೆಯಾಗಿದೆ. ೫ನೇ ವಚನದಲ್ಲಿರುವ ಆಕ್ಷೇಪಣೆಯನ್ನು ಇದರಲ್ಲಿ ಬೇರೆ ವಿಧವಾಗಿ ತೋರಿಸಿ ಇದೆ. ಅದರಲ್ಲಿ ನೀತಿ ಎಂದೂ ಅನೀತಿ ಎಂದೂ ಹೇಳಿರುವದಕ್ಕೆ, ಇದರಲ್ಲಿ ಸತ್ಯವೆಂದೂ ಸುಳ್ಳೆಂದೂ ಹೇಳಿ ಇದೆ. ನನ್ನ ಸುಳ್ಳಿನಿಂದ ದೇವರ ಸತ್ಯವು ಅಧಿಕವಾಗಿ ಪ್ರಕಟವಾದರೆ, ನಾನು ಕೆಟ್ಟ ಪಾಪಿಯ ಹಾಗೆ ದಂಡಿಸಲ್ಪಡುವದು ನೀತಿಯೋ? ಎಂಬುವದು ಆಕ್ಷೇಪಿಸುವವನ ಪ್ರಶ್ನೆಯಾಗಿದೆ. ಈ ನ್ಯಾಯವು ಸರಿ ಅಂದರೆ, ಮೇಲು ಬರುವ ಹಾಗೆ ಕೇಡು ಮಾಡುವ ಎಂದು ಹೇಳುವದು ಸರಿಯಾಗಿರುವದಲ್ಲವೇ? ಹೀಗೆ ಕ್ರೈಸ್ತರು ಬೋಧಿಸುತ್ತಾರೆಂದು ಕೆಲವರು ಅವರನ್ನು ಕುರಿತು ನಿಂದೆಯಾಗಿ ಹೇಳುತ್ತಾರೆ. ಆದರೆ ಹೀಗೆ ಹೇಳುವವರು ಕ್ರೈಸ್ತರಾದರೂ ಸರಿ, ಮತ್ತ್ಯಾರಾದರೂ ಸರಿ, ಅವರು ನಾಶವಾಗಿ ಹೋಗುವರೆಂದು ಮೇಲಿನ ಆಕ್ಷೇಪಣೆಗೆ ಪೌಲನು ಸಮಾಧಾನ ಹೇಳುತ್ತಾನೆ. ಸನ್ಮಾರ್ಗಕ್ಕೆ ಅನುಸರಣೆ ಇಲ್ಲದ ಉಪದೇಶವು ಸೈತಾನನಿಂದ ಉಂಟಾದ ಸುಳ್ಳು ಉಪದೇಶವೆಂದು ಯಾರಾದರೂ ಸುಲಭವಾಗಿ ತೀರ್ಮಾನಿಸ ತಕ್ಕದ್ದು.

6. ಹೊರಗಿನ ಶ್ಲಾಘ್ಯಗಳ ವಿಷಯ ಜನಾಂಗಗಳವರಿಗಿಂತ ಯೆಹೂದ್ಯರು ವಿಶೇಷವಾದವರಾಗಿದ್ದಾಗ್ಯೂ (೨. ವ.) ದೇವರ ಬಳಿಯ ಅಂಗೀಕಾರ ಹೊಂದುವ ವಿಷಯದಲ್ಲಿ ಉಭಯತ್ರರೂ ಒಂದೇ ಪ್ರಕಾರವಾಗಿದ್ದಾರೆ. ಅವರೆಲ್ಲರೂ ಪಾಪ ಮಾಡಿದವರಾಗಿರುವದರಿಂದ ಎಲ್ಲರೂ ದೇವರ ಮುಂದೆ ಅಪರಾಧಿಗಳಾಗಿದ್ದಾರೆ. (ಸಂ. ೨; ೩. ೧—೮.) ಯೆಹೂದ್ಯರು ಅಪರಾಧಿಗಳೆಂಬುವದನ್ನು ನ್ಯಾಯದಿಂದ ರೂಪಿಸಿದ್ದಲ್ಲದೆ, ಅವರ ವೇದದಿಂದಲೂ ನಿರೂಪಿಸಿ ಇದೆ. (೧೦—೧೮. ಕೀರ್ತ. ೧೪. ೨, ೩; ೫. ೯; ೧೪೦. ೩. ಯೆಶಾ. ೫೯. ೭, ೮. ಕೀರ್ತ. ೩೬. ೧.)

೧೮ ಧಾನದ ಮಾರ್ಗವನ್ನು ಅರಿಯರು; (ಯೆಶಾ. ೫೯. ೭, ೮.) [1]ದೇವರ ಭಯವು ಅವರ ಕಣ್ಣುಗಳಿಗೆದು
ರಾಗಿಲ್ಲ. (ಕೀರ್ತ. ೩೬. ೧.)
೧೯ ಮತ್ತು ಬಾಯಿಗಳೆಲ್ಲಾ ಮುಚ್ಚಲ್ಪಡುವ ಹಾಗೆಯೂ, ಸರ್ವ ಲೋಕವು ದೇವರ ಮುಂದೆ ಆಜ್ಞೆಗೊಳಗಾ
ಗುವ ಹಾಗೆಯೂ, [2]ನ್ಯಾಯಪ್ರಮಾಣವು ಹೇಳುವವುಗಳನ್ನಷ್ಟು ನ್ಯಾಯಪ್ರಮಾಣದಲ್ಲಿರುವವರಿಗೆ ಹೇಳು
೨೦ ತ್ತದೆಂದು, [3]ಬಲ್ಲೆವು. ಆದದರಿಂದ ನ್ಯಾಯಪ್ರಮಾಣದ ಕ್ರಿಯೆಗಳಿಂದ ಯಾವ ಮಾಂಸವಾದರೂ ಅವನ
ಮುಂದೆ ನೀತಿನಿರ್ಣಯ ಪಡುವದಿಲ್ಲ. ಯಾಕಂದರೆ ನ್ಯಾಯಪ್ರಮಾಣದಿಂದ ಪಾಪದ ತಿಳುವಿಕೆಯು
ಆಗುತ್ತದೆ.

ಕ್ರಿಸ್ತನ ವಿಶ್ವಾಸದಿಂದ ನೀತಿನಿರ್ಣಯ ಪಡುವದು.

೨೧ [4]ಆದರೆ ನ್ಯಾಯಪ್ರಮಾಣದಿಂದಲೂ ಪ್ರವಾದಿಗಳಿಂದಲೂ ಸಾಕ್ಷಿಗೊಂಡ [5]ದೇವರ ನೀತಿಯು ಈಗ ನ್ಯಾಯ
೨೨ ಪ್ರಮಾಣವಿಲ್ಲದೆ ಪ್ರಕಟವಾಯಿತು. [6]ವಿಶ್ವಾಸಿಸುವ ಎಲ್ಲರಿಗೂ, ಎಲ್ಲರ ಮೇಲೆಯೂ, ಯೇಸು ಕ್ರಿಸ್ತನ

1. ಮೇಲೆ ಹೇಳಿದ ಪಾಪಗಳಿಗೆಲ್ಲಾ ಇದರಲ್ಲಿ ಕಾರಣವನ್ನು ತೋರಿಸಿ ಇದೆ. (ಕೀರ್ತ. ೧೧೧. ೧೦.) ದೇವರ ಭಯವಿಲ್ಲದವರು ಸಕಲ ಅಕ್ರಮಗಳನ್ನೂ ತೃಣೀಕರವಾಗಿ ಮಾಡುವದು ಆಶ್ಚರ್ಯವಲ್ಲ. ಮನುಷ್ಯರ ಗಂಟ್ಲು, ನಾಲಿಗೆ, ತುಟಿ, ಬಾಯಿ, ಕೈ, ಕಾಲು ಮುಂತಾದ ಸಕಲ ಅಂಗಗಳೂ ಕೆಟ್ಟು ಹೋಗಿವೆ. ಪಾಪದಿಂದ ಮನಸ್ಸು ಕೆಟ್ಟು ಹೋಗಿರುವದರಿಂದ ವಾಕ್ಕಾಯವು ಎಲ್ಲಾ ಕೆಟ್ಟು ಹೋಗಿವೆ. ಆದದರಿಂದ ಲೋಕದಲ್ಲಿ ಹುಟ್ಟಿದ ಮನುಷ್ಯರಲ್ಲಿ ಒಬ್ಬನಾದರೂ ಒಳ್ಳೆಯವನಿಲ್ಲ.

2. ನ್ಯಾಯಪ್ರಮಾಣವೆಂಬುವದು ವೇದಪ್ರಮಾಣವನ್ನೂ (ಯೋಹಾ. ೧೦. ೩೪. ರೋಮಾ. ೩. ೧೦—೧೮.) ಮನಸ್ಸಾಕ್ಷಿಯೆಂಬುವ ಪ್ರಮಾಣವನ್ನೂ (೨. ೧೪, ೧೫.) ಕುರಿತದ್ದು. ಸಮಸ್ತ ಮನುಷ್ಯರೂ ಈ ಎರಡರಲ್ಲಿ ಒಂದು ಬಗೆ ಪ್ರಮಾಣಕ್ಕೆ ಒಳಪಟ್ಟಿರುತ್ತಾರೆ. ಈ ಪ್ರಮಾಣಗಳು ಒಬ್ಬೊಬ್ಬನ ಅಪರಾಧವನ್ನೂ ತೋರಿಸುವದರಿಂದ ಒಬ್ಬನಾದರೂ ನ್ಯಾಯಪ್ರಮಾಣದ ಕ್ರಿಯೆಗಳಿಂದ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ಕಾಣಲ್ಪಡುವದಕ್ಕೆ ಹೇತುವೆ ಇಲ್ಲ. (ಕೀರ್ತ. ೧೪೩. ೨.) ನ್ಯಾಯಪ್ರಮಾಣವು ಮರೆಯಾಗಿರುವ ಅಪರಾಧವನ್ನು ಪ್ರಕಟ ಮಾಡುವದೇ ಹೊರ್ತು, ಆ ಅಪರಾಧವನ್ನು ನಿವರ್ತಿ ಮಾಡಿ ಗುಣ ಕೊಡುವದಿಲ್ಲ.

3. ಮನುಷ್ಯರೆಲ್ಲರೂ ದೇವರ ಕೋಪಕ್ಕೆ ಪಾತ್ರರಾಗಿದ್ದಾರೆಂಬುವದನ್ನು ನ್ಯಾಯದಿಂದಲೂ, ಮನಸ್ಸಿನ ಪ್ರಮಾಣದಿಂದಲೂ, ವೇದಪ್ರಮಾಣದಿಂದಲೂ ದೃಷ್ಟಾಂತ ಪಡಿಸುವದೇ ಪೌಲನ ಕೋರಿಕೆ ಎಂದು, ೧೯ನೇ ೨೦ನೇ ವಚನಗಳಿಂದ ತಿಳಿಯ ಬಹುದು.

4. ಸಮಸ್ತ ಜನರಿಗೂ ಸುವಾರ್ತೆಯ ಮಾರ್ಗವು ಅವಶ್ಯವಾಗಿದೆ ಎಂದು ಪೌಲನು ದೃಷ್ಟಾಂತ ಪಡಿಸಿದ ತರುವಾಯ ಅದರ ಸ್ವಭಾವವನ್ನೂ ಅದರಿಂದುಂಟಾಗುವ ಮೇಲನ್ನೂ ತೋರಿಸುತ್ತಾನೆ. ಯೇಸು ಕ್ರಿಸ್ತನನ್ನು ಹೊಂದಿದ ವಿಶ್ವಾಸದಿಂದಲೇ ಹೊರ್ತು, ಬೇರೆ ಯಾವ ವಿಧದಿಂದಲೂ ಮನುಷ್ಯರಿಗೆ ರಕ್ಷಣೆ ಇಲ್ಲ. ಆತನ ಮೂಲಕವಾಗಿ ದೇವರು ತನ್ನ ನೀತಿಯನ್ನೂ ಕರುಣೆಯನ್ನೂ ಪ್ರಕಟ ಮಾಡಿರುವದರಿಂದ ಮನುಷ್ಯಜಾತಿಯಲ್ಲಿ ಒಬ್ಬನಾದರೂ ಹೆಚ್ಚಳ ಪಡ ಹೇತುವೆ ಇಲ್ಲ. ನ್ಯಾಯಪ್ರಮಾಣವು ಸಹ ಪೂರ್ಣವಾಗಿ ಸ್ಥಾಪಿಸಲ್ಪಡುತ್ತದೆ. (೩. ೨೧—೩೧.) ಪೂರ್ವದಲ್ಲಿದ್ದ ಉತ್ತಮ ಭಕ್ತರು ಕ್ರಿಯೆಗಳಿಂದ ಅಲ್ಲ ವಿಶ್ವಾಸದಿಂದಲೇ ನೀತಿವಂತರಾದರು. (೪. ೧—೮.) ವಿಶ್ವಾಸದಿಂದುಂಟಾದ ನೀತಿಗೆ ಪರಿಛೇದನೆ ಗುರುತಾಗಿಯೂ, ಹೇರಳ ಸಂತತಿ ಫಲವಾಗಿಯೂ ಇತ್ತು. (೯—೨೫.) ಅವರ ಹಾಗೆ ನಾವು ಸಹ ವಿಶ್ವಾಸಭಕ್ತಿಯುಳ್ಳವರಾಗಿದ್ದರೆ, ನಮಗೂ ಸಮಾಧಾನ ಸಂತೋಷ ನಂಬಿಕೆ ಮುಂತಾದ ಅದರ ಆಶೀರ್ವಾದಗಳು ಉಂಟಾಗುವವು. (೫. ೧—೧೧.) ಒಬ್ಬ ಮನುಷ್ಯನು ಪಾಪ ಮಾಡಿದ್ದರಿಂದ ಸಕಲ ಮನುಷ್ಯರಿಗೂ ಪಾಪವೂ ಮರಣವೂ ಸಂಭವಿಸ ಮಾಡಿದ ದೇವರ ನೀತಿಪ್ರಮಾಣವು, ಒಬ್ಬ ಪುಣ್ಯಪುರುಷನಿಂದ ಅನೇಕರಾದವರು ಪುಣ್ಯವಂತರಾಗಿ ಪರಮ ಗತಿ ಹೊಂದುವಂತೆ ಮಾಡುತ್ತದೆ. (೧೨—೨೧.)

5. ೧. ೧೭ಲ್ಲಿ ಹೇಳಿರುವ ದೇವರ ನೀತಿಯನ್ನು ಯೆಹೂದ್ಯರೂ ಜನಾಂಗಗಳವರೂ ಆದ ಸಮಸ್ತ ಮನುಷ್ಯರಲ್ಲಿ ಒಬ್ಬನಾದರೂ ಸಂಪಾದಿಸುವದು ಅಸಾಧ್ಯವೆಂದು ದೃಷ್ಟಾಂತ ಪಡಿಸಿದ ತರುವಾಯ, ಕ್ರಿಸ್ತನು ಅದನ್ನು ತನ್ನ ಮಹಾ ಪುಣ್ಯದಿಂದ ಸಂಪಾದಿಸಿದನೆಂದು ತೋರಿಸಿ ಇದೆ. ನೀತಿವಂತನಾದ ಆತನು ಲೋಕದಲ್ಲಿ ಅವತರಿಸಿ, ನ್ಯಾಯಪ್ರಮಾಣವನ್ನು ಈಡೇರಿಸಿ, ಅದರಲ್ಲಿ ಹೇಳಲ್ಪಟ್ಟ ಶಾಪವನ್ನು ಹೊಂದಿ ಮರಣವನ್ನು ಹೊಂದಿದ್ದರಿಂದ ನ್ಯಾಯಪ್ರಮಾಣವಿಲ್ಲದೆ ದೇವರ ನೀತಿಯು ಪ್ರಕಟವಾಯಿತು. ಈ ನೀತಿಯನ್ನು ಕುರಿತು ನ್ಯಾಯಪ್ರಮಾಣದಲ್ಲಿ ತೋರಿಸಲ್ಪಟ್ಟ ಮುಂಗುರುತುಗಳಿಂದಲೂ, ಬಲಿಗಳಿಂದಲೂ, ಪ್ರವಾದನೆಗಳಲ್ಲಿರುವ ವಾಗ್ದತ್ತಗಳಿಂದಲೂ, ಪ್ರವಾದನೆಗಳಿಂದಲೂ ಸಾಕ್ಷಿ ಹೇಳಲ್ಪಟ್ಟದೆ. ಈ ನೀತಿಯನ್ನು ವಿಶ್ವಾಸದ ಮೂಲವಾಗಿ ಹೊಂದಿದ್ದಕ್ಕೆ ಅಬ್ರಹಾಮನನ್ನೂ ದಾವೀದನನ್ನೂ ದೃಷ್ಟಾಂತವಾಗಿ ತೋರಿಸಿ ಇದೆ. (೪. ಸ.) ಇದರಿಂದ ರಕ್ಷಣೆಯ ವಿಷಯದಲ್ಲಿ ಹಳೇ ಒಡಂಬಡಿಕೆಗೂ ಹೊಸ ಒಡಂಬಡಿಕೆಗೂ ಭೇದವಿಲ್ಲವೆಂದು ತಿಳಿಯ ಬೇಕು.

6. ವಿಶ್ವಾಸಿಸುವ ಎಲ್ಲರಲ್ಲಿಯೂ ಎಲ್ಲರ ಮೇಲೆಯೂ ಅಂದರೆ, ವಿಶ್ವಾಸಿಸುವ ಎಲ್ಲಾ ಜಾತಿಗಳವರಿಗೂ ಎಲ್ಲಾ ಜನಗಳಿಗೂ ದೇವರ ನೀತಿ ಉಂಟಾಗುವದೆಂಬ ಅರ್ಥವು. ಯಾವ ಜಾತಿಯೂ, ಬಣ್ಣವೂ, ಭಾಷೆಯೂ, ಸ್ಥಿತಿಯೂ ಉಳ್ಳವನಾಗಿದ್ದರೂ, ಕ್ರಿಸ್ತನನ್ನು ವಿಶ್ವಾಸಿಸುವವನಾದರೆ, ಅವನಿಗೆ ದೇವರ ನೀತಿ ಉಂಟಾಗುವದು.



೨೩ ವಿಶ್ವಾಸದಿಂದಾಗುವ ದೇವರ ನೀತಿಯೇ. ಯಾಕಂದರೆ ವ್ಯತ್ಯಾಸವಿಲ್ಲ. ಎಲ್ಲರು ಪಾಪ ಮಾಡಿ, [1]ದೇವರ
೨೪ ಮಹಿಮೆಗೆ ತಪ್ಪಿ, ಈಗಿನ ಕಾಲದಲ್ಲಿ ತನ್ನ ನೀತಿಯನ್ನು ತೋರಿಸ ಬೇಕೆಂದು, ಯೇಸುವಿನಲ್ಲಿರುವ ವಿಶ್ವಾಸ
೨೫ ವುಳ್ಳವನನ್ನು ನೀತಿನಿರ್ಣಯ ಪಡಿಸುವದರಲ್ಲಿ ತಾನು ನೀತಿವಂತನಾಗಿರುವ ಹಾಗೆ, ದೇವರ [2]ತಾಳ್ಮೆಯಲ್ಲಿ
ಮುಂಚೆ ಆದ ಪಾಪಗಳ ಪರಿಹಾರವನ್ನು ಕುರಿತು ತನ್ನ ನೀತಿಯನ್ನು ತೋರಿಸುವದಕ್ಕೆ ಅವನ ರಕ್ತದಲ್ಲಿರುವ
೨೬ ವಿಶ್ವಾಸದಿಂದ [3]ಶಾಂತೀಕರಣವಾಗಿ, ದೇವರು ಮುಂದಿಟ್ಟ, ಯೇಸು ಕ್ರಿಸ್ತನಿಂದಾದ [4]ವಿಮೋಚನೆಯ ಮು
ಖಾಂತರ, ಅವನ ಕೃಪೆಯಿಂದ [5]ಉಚಿತವಾಗಿ ನೀತಿನಿರ್ಣಯ ಪಡುತ್ತಾರೆ.
೨೭ ಹಾಗಾದರೆ, [6]ಹೆಚ್ಚಳ ಎಲ್ಲಿ? ತಳ್ಳಲ್ಪಟ್ಟಿತು. ಯಾವ [7]ನ್ಯಾಯಪ್ರಮಾಣದಿಂದ? ಕ್ರಿಯೆಗಳದರಿಂದಲೋ?
೨೮ ಅಲ್ಲ; ವಿಶ್ವಾಸದ ನ್ಯಾಯಪ್ರಮಾಣದಿಂದಲೇ. ಆದದರಿಂದ ಮನುಷ್ಯನು ನ್ಯಾಯಪ್ರಮಾಣದ ಕ್ರಿಯೆಗಳಿ
ಲ್ಲದೆ ವಿಶ್ವಾಸದಿಂದ ನೀತಿನಿರ್ಣಯ ಪಡುತ್ತಾನೆಂದು, [8]ತೀರಿಸುತ್ತೇವೆ.
೨೯ ಅವನು ಯೆಹೂದ್ಯರಿಗೆ ಮಾತ್ರ ದೇವರೋ? ಜನಾಂಗಗಳಿಗೂ ಸಹ ಅಲ್ಲವೋ? ಹೌದು, ಜನಾಂಗಗಳಿಗೂ
೩೦ ಸಹ. ಯಾಕಂದರೆ ಪರಿಛೇದನೆಗೆ ವಿಶ್ವಾಸದಿಂದಲೂ, ಅಪರಿಛೇದನೆಗೆ ವಿಶ್ವಾಸದ ಮುಖಾಂತರವಾಗಿಯೂ,
ನೀತಿನಿರ್ಣಯಿಸುವವನು [9]ಒಬ್ಬನೇ ದೇವರು.

1. ವ್ಯತ್ಯಾಸವಿಲ್ಲದೆ ಎಲ್ಲರೂ ವಿಶ್ವಾಸದಿಂದ ನೀತಿವಂತರಾಗುವದಕ್ಕೆ ಇದರಲ್ಲಿ ಕಾರಣ ತೋರಿಸಿ ಇದೆ. ಎಲ್ಲರೂ ಪಾಪ ಮಾಡಿ ದೇವರ ಮಹಿಮೆಗೆ ತಪ್ಪಿ ಹೋದದ್ದೇ ಕಾರಣ. ರೋಗವು ಒಂದೇ ಆಗಿರುವದರಿಂದ ಅದು ಪರಿಹಾರವಾಗುವ ಮಾರ್ಗವೂ ಒಂದಾಗಿಯೇ ಇರುತ್ತದೆ. ದೇವರ ಮಹಿಮೆಗೆ ತಪ್ಪಿದವರು ಎಂಬುವದು, ಆತನಿಂದ ಉಂಟಾಗುವ ಮಾನವನ್ನೂ ಘನವನ್ನೂ ಕಳಕೊಂಡವರೆಂಬ ಅರ್ಥವಾಗುತ್ತದೆ. (ಯೋಹಾ. ೫. ೪೪; ೧೨. ೪೩.)

2. ಲೋಕರಕ್ಷಕನು ಅವತರಿಸುವದಕ್ಕಿಂತ ಮುಂಚೆ ಲೋಕದಲ್ಲಿ ನಡೆದ ಪಾಪಗಳನ್ನು ದೇವರು ನೋಡದವನ ಹಾಗೆ ತಾಳಿಕೊಂಡನು. (ಅಪೊ. ಕ್ರಿ. ೧೭. ೩೦.) ಅವುಗಳನ್ನು ಆತನು ತಾಳಿಕೊಂಡನೇ ಹೊರ್ತು ಮನ್ನಿಸಿ ಬಿಡಲಿಲ್ಲ. ಈ ವ್ಯತ್ಯಾಸವು ಮೂಲಭಾಷೆಯಲ್ಲಿ ಚನ್ನಾಗಿ ತೋರುತ್ತದೆ. ಗತಿಸಿದ ಯುಗಗಳಲ್ಲಿ ನಡೆದ ಪಾಪಗಳನ್ನು ದೇವರು ತಾಳಿ ಕೊಂಡದ್ದರಿಂದ ಆತನ ನೀತಿಯು ಮಾಸಿ ಹೋದ ಹಾಗಿತ್ತು; ಕ್ರಿಸ್ತನ ಪಾಪನಿವಾರಣಬಲಿಯಲ್ಲಿ ಪ್ರಕಾಶವಾಗಿ ತೋರ ಬಂತು. ಪೌಲನು ದೇವರ ನೀತಿಯನ್ನು ಕುರಿತು ಮಾತಾಡುವದರಿಂದ ಭಕ್ತರು ಲೋಕದಲ್ಲಿ ಹುಟ್ಟಲಿಕ್ಕಿದ್ದ ರಕ್ಷಕನನ್ನು ನಂಬಿ ಪರಮ ಗತಿ ಹೊಂದಿದ್ದನ್ನು ಕುರಿತು ಒಂದೂ ಹೇಳಲಿಲ್ಲ.

3. ಈ ವಚನದಲ್ಲಿ ಪಾಪವನ್ನು ಕಳೆದು ದೇವರ ಕೋಪವನ್ನು ನಿವಾರಣೆ ಮಾಡಿದ ಕ್ರಿಸ್ತನ ಮರಣಬಲಿಯನ್ನು ಕುರಿತದ್ದೆಂದು ನೆನಸ ಬೇಕು. (೧ ಯೋಹಾ. ೨. ೨.) ಇಸ್ರಯೇಲ್ಯರು ಹಿತ್ತಾಳಿಯ ಸರ್ಪವನ್ನು ದೃಷ್ಟಿಸಿ ನೋಡಿದ ಪ್ರಕಾರ, ಶಾಂತೀಕರಣ ಬಲಿಯಾದ ಕ್ರಿಸ್ತನನ್ನು ವಿಶ್ವಾಸದಿಂದ ದೃಷ್ಟಿಸ ಬೇಕು. ಈ ಬಲಿಯಿಂದ ದೇವರು ನೀತಿಯುಳ್ಳವನಾಗಿಯೂ, ವಿಶ್ವಾಸಿಗಳನ್ನು ನೀತಿವಂತರಾಗ ಮಾಡುವವನಾಗಿಯೂ ತೋರಲ್ಪಟ್ಟನು. ಆತನ ನೀತಿಯೂ ಪ್ರೀತಿಯೂ ಸೂರ್ಯನ ಹಾಗೆ ಪ್ರಕಾಶಿಸಿದವು. (ಯೆಶಾ. ೪೫. ೨೧. ಜೆಕ. ೯. ೯.)

4. ವಿಮೋಚನೆ ಅಂದರೆ, ಕ್ರಯ ಕೊಟ್ಟು ಬಿಡಿಸುವದು. ಪಾಪದ ಅಪರಾಧದಲ್ಲಿಯೂ ಅದರ ಕಠಿಣವಾದ ಆಳಿಕೆಯಲ್ಲಿಯೂ ದಂಡನೆಯಲ್ಲಿಯೂ ಶಿಕ್ಕಿ ಕೊಂಡಿದ್ದವರನ್ನು ಕ್ರಿಸ್ತನು ತನ್ನ ದಿವ್ಯ ರಕ್ತವನ್ನು ಕ್ರಯವಾಗಿ ಕೊಟ್ಟು ಬಿಡುಗಡೆ ಮಾಡಿದ ಪುಣ್ಯಕ್ರಿಯೆಯೇ ವಿಮೋಚನೆ.

5. ದೇವರ ನೀತಿಯಾದ ರಕ್ಷಣೆಯು ಸ್ವಂತ ಪುಣ್ಯದಿಂದ ಉಂಟಾಗದೆ, ಬದಲು ಏನೂ ಇಲ್ಲದೆ ಉಚಿತವಾಗಿ ಉಂಟಾಗುತ್ತದೆ. (ಯೆಶಾ. ೫೫. ೧—೩.) ಕ್ರಿಸ್ತನ ದಿವ್ಯ ರಕ್ತವೆಂಬ ದೊಡ್ಡ ಕ್ರಯದಿಂದ ಕೊಳ್ಳಲ್ಪಟ್ಟ ವಿಮೋಚನೆಯು ಇದರಲ್ಲಿ ಚನ್ನಾಗಿ ತೋರುತ್ತದೆ. ಸಮಾನವಿಲ್ಲದ ಈ ಪಾಪನಿವಾರಣಬಲಿಯು ಉತ್ತಮ ವಿಶ್ವಾಸಿಗಳು ದೃಷ್ಟಿಸಿ ನೋಡುವ ಹಾಗೆ ಇರಿಸಲ್ಪಟ್ಟದೆ.

6. ಇದು ಯೆಹೂದ್ಯರ ಹೆಚ್ಚಳವು. (೨೯. ವ.; ೨. ೧೭—೨೦.) ವಿಶೇಷ ವರಗಳನ್ನು ಹೊಂದಿದ ಯೆಹೂದ್ಯರು ಹೆಚ್ಚಳ ಪಡ ಕೂಡದಾದರೆ, ಬೇರೆ ಯಾರು ಹೆಚ್ಚಳ ಪಡ ಬಹುದು? ಮನುಷ್ಯರು ಹೆಚ್ಚಳ ಪಡುವದಕ್ಕೆ ಸ್ಥಳ ಕೊಡುವ ಮಾರ್ಗವು ದೇವರಿಂದ ಉಂಟಾದದ್ದಾಗಿರಲಾರದು. ಸತ್ಯ ಮಾರ್ಗವು ಇದನ್ನು ಮಾಡಿ ಬದುಕು ಎಂದು ಹೇಳದೆ, ವಿಶ್ವಾಸದಿಂದ ಬದುಕು ಎಂದು ಹೇಳುವದರಿಂದ ಹೆಚ್ಚಳ ಪಡುವದಕ್ಕೆ ಸ್ಥಳವಿಲ್ಲ.

7. ನ್ಯಾಯಪ್ರಮಾಣವೆಂಬುವದು, ದೇವರ ಆಳಿಕೆಯನ್ನು ಕುರಿತ ಪ್ರಮಾಣವು. ವಿಶ್ವಾಸವೆಂಬುವದು, ಉಚಿತವಾಗಿ ನೀತಿನಿರ್ಣಯ ಪಡಿಸುವ ರಕ್ಷಣೆಯ ಮಾರ್ಗವನ್ನು ನಂಬಿ ಅಂಗೀಕರಿಸುವದು. (೨೪, ೨೫. ವ.) ಕ್ರಿಯಾಪ್ರಮಾಣವೆಂಬುವದು, ಸ್ವಂತ ಪುಣ್ಯದಿಂದ ದೇವರ ಕೃಪೆ ಹೊಂದುವದಕ್ಕಾಗಿ ಮಾಡುವ ಸಾಧನೆ.

8. ನ್ಯಾಯಪ್ರಮಾಣದ ಕ್ರಿಯೆಗಳಿಂದ ನೀತಿನಿರ್ಣಯ ಪಡಕೂಡದೆಂದು ತೀರಿಸಿದ ಪ್ರಕಾರ, ನ್ಯಾಯಪ್ರಮಾಣದ ಕ್ರಿಯೆಗಳಿಲ್ಲದೆ ವಿಶ್ವಾಸದಿಂದಲೇ ನೀತಿನಿರ್ಣಯ ಪಡುತ್ತೇವೆಂದು ತೀರಿಸುವದಕ್ಕೆ ಮಾರ್ಗವಾಯಿತು.

9. ಒಬ್ಬನೇ ದೇವರು ಇರುವದರಿಂದ ಆತನು ಏರ್ಪಡಿಸಿದ ರಕ್ಷಣೆಯ ಮಾರ್ಗವು ಸಹ ಒಂದಾಗಿರ ಬೇಕು. ಪೂರ್ವದಲ್ಲಿ ದೇವರ ಕೃಪೆ ಹೊಂದಿದ ಯೆಹೂದ್ಯರು ಸಹ ವಿಶ್ವಾಸದಿಂದಲೇ ಅದನ್ನು ಹೊಂದಿದರು. ಅವರು ಹೊಂದಿದ ಪರಿಛೇದನೆಯು ಅವರ ವಿಶ್ವಾಸಕ್ಕೆ ಗುರುತಾಗಿತ್ತು. ಅದೇ ಪ್ರಕಾರ ಅನ್ಯ ಜನಾಂಗಗಳವರು ಸಹ ವಿಶ್ವಾಸದಿಂದಲೇ ದೇವರ ಆಶೀರ್ವಾದ ಹೊಂದುತ್ತಾರೆ. ಆದದರಿಂದ ಯೆಹೂದ್ಯರಿಗೂ ಜನಾಂಗಗಳವರಿಗೂ ಒಬ್ಬನೇ ದೇವರಾಗಿರುವವನು ಏರ್ಪಡಿಸಿದ ರಕ್ಷಣೆಯ ವಿಷಯದಲ್ಲಿ ಯೆಹೂದ್ಯರೂ ಜನಾಂಗಗಳವರೂ ಯಾವದೊಂದು ಭೇದವಿಲ್ಲದೆ ಸಮಾನರಾಗಿದ್ದಾರೆ.

೩೧ ಹಾಗಾದರೆ [1]ವಿಶ್ವಾಸದಿಂದ ನ್ಯಾಯಪ್ರಮಾಣವನ್ನು ವ್ಯರ್ಥ ಮಾಡುತ್ತೇವೋ? ಆಗದು. ನ್ಯಾಯಪ್ರಮಾ
ಣವನ್ನು ಸ್ಥಾಪಿಸುತ್ತೇವೆ.

ಅಬ್ರಹಾಮನು ಕ್ರಿಯೆಗಳಿಂದಲ್ಲ, ವಿಶ್ವಾಸದಿಂದ ನೀತಿನಿರ್ಣಯ ಪಟ್ಟದ್ದು.

4. ಹಾಗಾದರೆ ನಮ್ಮ ತಂದೆಯಾದ ಅಬ್ರಹಾಮನು [2]ಮಾಂಸದ ಪ್ರಕಾರ ಏನು ಕಂಡು ಕೊಂಡನೆಂದು
೨ ಹೇಳುವೆವು? ಯಾಕಂದರೆ ಅಬ್ರಹಾಮನು ಕ್ರಿಯೆಗಳಿಂದ ನೀತಿನಿರ್ಣಯ ಪಟ್ಟಿದ್ದರೆ, ಅವನಿಗೆ ಹೆಚ್ಚಳ
೩ ಉಂಟು; ಆದರೆ ದೇವರ ಮುಂದೆ ಅಲ್ಲ. ಅದಕ್ಕೆ ಬರಹವು ಏನು ಹೇಳುತ್ತದೆ? ಅಬ್ರಹಾಮನು ದೇವರನ್ನು
೪ ವಿಶ್ವಾಸಿಸಿದನು; ಅದು ಅವನಿಗೆ ನೀತಿ ಎಂದು [3]ಎಣಿಸಲ್ಪಟ್ಟಿತು. (ಉತ್ಪ. ೧೫. ೬.) ಆದರೆ [4]ಕ್ರಿಯೆ ಮಾಡು
೫ ವವನಿಗೆ ಸಂಬಳವು ಕೃಪೆಯ ಪ್ರಕಾರವಲ್ಲ, ಸಾಲದ ಪ್ರಕಾರ ಎಣಿಸಲ್ಪಡುವದು. ಆದರೆ ಕ್ರಿಯೆ ಮಾಡದೆ,
ಭಕ್ತಿಹೀನನಿಗೆ ನೀತಿನಿರ್ಣಯಿಸುವವನಲ್ಲಿ ವಿಶ್ವಾಸವಿಡುವವನಿಗೆ, ಅವನ ವಿಶ್ವಾಸವು ನೀತಿ ಎಂದು ಎಣಿಸಲ್ಪ
೬ ಡುವದು. ಹಾಗೆಯೇ ದೇವರು ಕ್ರಿಯೆಗಳಿಲ್ಲದೆ ಯಾವನಿಗೆ ನೀತಿಯನ್ನು ಎಣಿಸುತ್ತಾನೋ, ಆ ಮನು
೭ ಷ್ಯನ ಭಾಗ್ಯವನ್ನು [5]ದಾವೀದನು ಹೇಳುತ್ತಾನೆ; ಹ್ಯಾಗಂದರೆ, ಯಾರ ಅನ್ಯಾಯಗಳು ಪರಿಹರಿಸಲ್ಪಟ್ಟ
೮ ವೆಯೋ, ಯಾರ ಪಾಪಗಳು ಮುಚ್ಚಲ್ಪಟ್ಟವೆಯೋ, ಅವರೇ ಭಾಗ್ಯವಂತರು. ಯಾವನಿಗೆ ಕರ್ತನು ಪಾಪ
ವನ್ನು ಎಣಿಸುವದಿಲ್ಲವೋ, ಆ ಮನುಷ್ಯನು ಭಾಗ್ಯವಂತನು. (ಕೀರ್ತ. ೩೨. ೧, ೨.)
೯ ಹಾಗಾದರೆ ಈ ಭಾಗ್ಯವು [6]ಪರಿಛೇದನೆಗೆ ಮಾತ್ರವೋ? ಇಲ್ಲವೆ ಅಪರಿಛೇದನೆಗೂ ಆಗುತ್ತದೋ? ಯಾಕಂ
೧೦ ದರೆ ಅಬ್ರಹಾಮನಿಗೆ ವಿಶ್ವಾಸವು ನೀತಿ ಎಂದು ಎಣಿಸಲ್ಪಟ್ಟಿತೆಂಬದಾಗಿ ಹೇಳುತ್ತೇವೆ. ಹಾಗಾದರೆ, ಅವ

1. ನ್ಯಾಯಪ್ರಮಾಣವನ್ನು ಅರಿತಿದ್ದ ಅಬ್ರಹಾಮನೂ ದಾವೀದನೂ ವಿಶ್ವಾಸದಿಂದಲೇ ನೀತಿನಿರ್ಣಯ ಪಟ್ಟದ್ದರಿಂದ ವಿಶ್ವಾಸವು ನ್ಯಾಯಪ್ರಮಾಣವನ್ನು ತೆಗೆದು ಹಾಕದೆ ಅದನ್ನು ಸ್ಥಾಪಿಸುವದಾಗಿರುತ್ತದೆ. ಮತ್ತು ಕ್ರಿಸ್ತನನ್ನು ಹೊಂದಿದ ವಿಶ್ವಾಸದಿಂದ ಪ್ರೀತಿ ಎಂಬುವ ಶ್ರೇಷ್ಠವಾದ ನ್ಯಾಯಪ್ರಮಾಣವು ಸ್ಥಾಪಿಸಲ್ಪಡುತ್ತದೆ.

2. ಕ್ರಿಸ್ತನಲ್ಲಿಡುವ ವಿಶ್ವಾಸದಿಂದ ದೇವರ ಸನ್ನಿಧಿಯಲ್ಲಿ ನೀತಿವಂತನಾಗುತ್ತಾನೆಂಬ ಕ್ರಿಸ್ತಮಾರ್ಗದ ಶ್ರೇಷ್ಠ ಉಪದೇಶವನ್ನು ವಿವರಿಸಿದ ತರುವಾಯ, ವಿಶ್ವಾಸಿಗಳ ತಂದೆ ಎಂದು ಹೆಸರು ಹೊಂದಿದ ಅಬ್ರಹಾಮನ ದೃಷ್ಟಾಂತವನ್ನು ಪೌಲನು ಹೇಳುತ್ತಾನೆ. ವಿಶ್ವಾಸದಿಂದ ನೀತಿವಂತನಾಗುವದು ಯಥಾರ್ಥವಾದರೆ, ಮಾಂಸದ ಪ್ರಕಾರ ಅಬ್ರಹಾಮನಿಗೆ ಉಂಟಾದ ಪ್ರಯೋಜನವೇನು? ಎಂಬಂತೆ ಒಂದು ಪ್ರಶ್ನೆ ಹುಟ್ಟುತ್ತದೆ. ಮಾಂಸವಂದರೆ ಪರಿಛೇದನೆಯಿಂದಾದ ಶ್ಲಾಘ್ಯಗಳು. (ಫಿಲಿ. ೩. ೪—೬.) ಪರಿಛೇದನೆಯಿಂದ ಬೇರೆ ಯಾವ ಮೇಲು ಉಂಟಾದರೂ, ದೇವರ ಮುಂದೆ ನೀತಿವಂತನಾಗುವ ಮೇಲು ಉಂಟಾಗಲಿಲ್ಲ. ಅಬ್ರಹಾಮನು ಕ್ರಿಯೆಗಳಿಂದ ನೀತಿವಂತನೆಂದೆಣಿಸಲ್ಪಟ್ಟರೆ, ಹೆಚ್ಚಳ ಪಡ ಸ್ಥಳವಿರುವದು. ಹಾಗೆ ಸ್ಥಳವಿಲ್ಲದ್ದರಿಂದ ಅವನು ಕ್ರಿಯೆಗಳಿಂದ ನೀತಿವಂತನಾಗಲಿಲ್ಲವೆಂಬುವದು ನಿಶ್ಚಯವಾಗಿದೆ. ಅದನ್ನು ಕುರಿತು ವೇದವು ಹೇಳುವದು ೨ನೇ ೩ನೇ ವಚನಗಳಲ್ಲಿ ತೋರಿಸಲ್ಪಟ್ಟದೆ.

3. ಅಬ್ರಹಾಮನು ನೀತಿವಂತನಾಗಿ ಎಣಿಸಲ್ಪಟ್ಟದ್ದಕ್ಕೆ ವಿಶ್ವಾಸವೇ ಒಂದು ವಿಶೇಷವಾದ ಯತ್ನವಾಗಿತ್ತು. (ಉತ್ಪ. ೧೫. ೬.) ಪಾಪಾತ್ಮನನ್ನು ನೀತಿವಂತನಾಗ ಮಾಡುವವನನ್ನು ಅಬ್ರಹಾಮನು ವಿಶ್ವಾಸಿಸಿದನು. (೫. ವ.) ವಿಶ್ವಾಸಕ್ಕೂ ಕ್ರಿಯೆಗಳಿಗೂ, ವಾಗ್ದತ್ತಕ್ಕೂ ನ್ಯಾಯಪ್ರಮಾಣಕ್ಕೂ ಇರುವ ಭೇದಾಭೇದಗಳನ್ನು ತೋರಿಸಿ, ಅಬ್ರಹಾಮನು ವಾಗ್ದತ್ತವನ್ನು ನಂಬಿದ್ದರಿಂದಲೇ ನೀತಿವಂತನಾದನೆಂದು ರುಜು ಪಡಿಸಿದ್ದಾನೆ. ಆ ವಿಶ್ವಾಸವು ವಾಗ್ದತ್ತ ಮಾಡಲ್ಪಟ್ಟ ಲೋಕರಕ್ಷಕನಾದ ಮೆಸ್ಸೀಯನನ್ನೂ, ಆತನು ದಯಪಾಲಿಸುವ ಆಶೀರ್ವಾದಗಳನ್ನೂ ಹೊಂದಿದ್ದಾಗಿತ್ತು. (ಗಲಾ. ೩. ೮. ಯೋಹಾ. ೮. ೫೬. ಇಬ್ರೀ. ೧೧. ೧೩.)

4. ಕೆಲಸ ಮಾಡುವವನಿಗೆ ಬರುವ ಸಂಬಳವು ಅವನಿಗೆ ನ್ಯಾಯವಾಗಿ ಬರ ತಕ್ಕ ಕೂಲಿಯೇ ಹೊರ್ತು, ಉಚಿತವಾದ ದಾನವಲ್ಲ. ಆದರೆ ಅಬ್ರಹಾಮನ ಹಾಗೆ ತನ್ನ ಸ್ವಂತ ಪುಣ್ಯವನ್ನೆಲ್ಲಾ ಅಲಕ್ಷ್ಯ ಮಾಡಿ ಪಾಪಿಯನ್ನು ನೀತಿವಂತನಾಗ ಮಾಡುವ ಕರುಣೆಯುಳ್ಳ ದೇವರನ್ನು ನಂಬುವವನಿಗೆ ಬರುವ ಆಶೀರ್ವಾದವು ಉಚಿತವಾದ ಸಹಾಯದ ಪ್ರಕಾರ, ಪೂರ್ಣವಾಗಿ ಕ್ರಯವಿಲ್ಲದ ಕಟಾಕ್ಷವಾಗಿರುತ್ತದೆ.

5. ಅಬ್ರಹಾಮನ ದೃಷ್ಟಾಂತದ ಪ್ರಕಾರ, ದಾವೀದನ ಸಾಕ್ಷಿಯು ಸಹ ವಿಶ್ವಾಸ ಮಾತ್ರದಿಂದಲೇ ನೀತಿವಂತನಾಗುತ್ತಾನೆಂಬುವ ಉಪದೇಶವನ್ನು ದೃಢ ಪಡಿಸುತ್ತದೆ. (೬—೮.) ಕ್ರಿಸ್ತನನ್ನು ಹೊಂದಿದ ವಿಶ್ವಾಸದಿಂದ ಪಾಪಕ್ಷಮೆಯನ್ನು ಹೊಂದಿ, ದೇವರ ಮುಂದೆ ನೀತಿವಂತನಾಗಿ ಎಣಿಸಲ್ಪಟ್ಟವನೇ ಭಾಗ್ಯವಂತನು.

6. ಈ ಭಾಗ್ಯವು ಪರಿಛೇದನೆ ಹೊಂದಿರುವ ಯೆಹೂದ್ಯರಿಗೆ ಮಾತ್ರವಲ್ಲ, ಪರಿಛೇದನೆ ಇಲ್ಲದ ಅನ್ಯಜನಾಂಗಗಳವರಿಗೂ ಬರುತ್ತದೆ ಎಂಬುವದನ್ನು ಅಬ್ರಹಾಮನ ದೃಷ್ಟಾಂತದಿಂದ ಪ್ರತ್ಯಕ್ಷವಾಗಿ ತಿಳಿದು ಕೊಳ್ಳ ಬಹುದು. ಆತನು ಪರಿಛೇದನೆ ಹೊಂದುವದಕ್ಕೆ ಅನೇಕ ವರುಷಗಳ ಮುಂಚೆ ನೀತಿವಂತನಾಗಿ ಎಣಿಸಲ್ಪಟ್ಟನು. (ಉತ್ಪ. ೧೫. ೬, ೧೬; ೧೬; ೧೭. ೨೪.) ಅದರಿಂದ ಆತನು ಯೆಹೂದ್ಯರಲ್ಲಿಯೂ ಜನಾಂಗಗಳವರಲ್ಲಿಯೂ ವಿಶ್ವಾಸಿಗಳಾಗಿದ್ದ ಭಕ್ತರಿಗೆ ತಂದೆಯಾದನು. (೧೧. ವ.) ಆದದರಿಂದ ಆತನ ಸಂತತಿಯಲ್ಲಿ ಹುಟ್ಟಿದವರಲ್ಲ, ಆತನ ವಿಶ್ವಾಸದ ಪ್ರಕಾರ ವಿಶ್ವಾಸವುಳ್ಳ ಉತ್ತಮರೇ ಯಥಾರ್ಥವಾಗಿ ಆತನ ಮಕ್ಕಳು. ಆತನು ಪರಿಛೇದನೆ ಇಲ್ಲದ ಕಾಲದಲ್ಲಿ ವಿಶ್ವಾಸದಿಂದಲೇ ನೀತಿವಂತನಾದ ಪ್ರಕಾರ ಪರಿಛೇದನೆ ಇಲ್ಲದವರು ಆತನ ಹಾಗೆ ವಿಶ್ವಾಸವುಳ್ಳವರಾಗಿದ್ದರೆ, ದೇವರ ಸಮುಖದಲ್ಲಿ ನೀತಿವಂತರಾಗಿ ತೋರುವರು.



ನಿಗೆ ಹ್ಯಾಗೆ ಎಣಿಸಲ್ಪಟ್ಟಿತು? ಪರಿಛೇದನೆಯಲ್ಲಿಯೋ? ಅಪರಿಛೇದನೆಯಲ್ಲಿಯೋ? ಪರಿಛೇದನೆಯಲ್ಲಿ ಅಲ್ಲ,
೧೧ ಅಪರಿಛೇದನೆಯಲ್ಲಿಯೇ. ಮತ್ತು ಅವನು ಅಪರಿಛೇದನೆಯಾಗಿ ವಿಶ್ವಾಸಿಸುವವರೆಲ್ಲರಿಗೆ, ಅವರಿಗೆ ಸಹ, ನೀತಿ
೧೨ ಎಣಿಸಲ್ಪಡುವ ಹಾಗೆ, ತಂದೆಯೂ; ಪರಿಛೇದನೆಯುವರಾಗಿರುವದಲ್ಲದೆ, ನಮ್ಮ ತಂದೆಯಾದ ಅಬ್ರಹಾಮ
ನಿಗೆ, ಅಪರಿಛೇದನೆಯಲ್ಲಿರುವಾಗ, ಉಂಟಾದ ವಿಶ್ವಾಸದ ಹೆಜ್ಜೆಗಳಲ್ಲಿ ನಡೆಯುವವರಿಗೂ ಪರಿಛೇದನೆಯ
ತಂದೆಯೂ ಆಗುವ ಹಾಗೆ, ಅಪರಿಛೇದನೆಯಲ್ಲಿರುವಾಗ ಉಂಟಾದ ವಿಶ್ವಾಸದ ನೀತಿಯ [1]ಮುದ್ರೆಯಾದ
ಪರಿಛೇದನೆಯನ್ನು ಗುರುತಾಗಿ ಹೊಂದಿದನು.
೧೩ [2]ಯಾಕಂದರೆ ಅಬ್ರಹಾಮನಿಗಾದರೂ, ಅವನ ಬೀಜಕ್ಕಾದರೂ, ಅವನು [3]ಲೋಕಬಾಧ್ಯನಾಗಿರುವನೆಂ
೧೪ ಬುವ ವಾಗ್ದತ್ತವು ನ್ಯಾಯಪ್ರಮಾಣದಿಂದಲ್ಲ, ವಿಶ್ವಾಸದ ನೀತಿಯಿಂದಲೇ ಆಯಿತು. ಯಾಕಂದರೆ ನ್ಯಾ
ಯಪ್ರಮಾಣದವರು ಬಾಧ್ಯರಾದರೆ, ವಿಶ್ವಾಸವು ಬರೀದಾಯಿತು, ವಾಗ್ದತ್ತವೂ [4]ವ್ಯರ್ಥವಾಯಿತು.
೧೫ ಯಾಕಂದರೆ ನ್ಯಾಯಪ್ರಮಾಣವು ಕೋಪವನ್ನು ಉಂಟು ಮಾಡುತ್ತದೆ; ಹ್ಯಾಗಂದರೆ ನ್ಯಾಯಪ್ರಮಾಣವು
೧೬ ಇಲ್ಲದ ಪಕ್ಷದಲ್ಲಿ ಮೀರುವಿಕೆಯು ಇಲ್ಲ. ಆದ ಕಾರಣ ವಾಗ್ದತ್ತವು ಬೀಜಕ್ಕೆಲ್ಲಾ—ನ್ಯಾಯಪ್ರಮಾಣವು
ಳ್ಳದ್ದಕ್ಕೆ ಮಾತ್ರವಲ್ಲ, ಅಬ್ರಹಾಮನ ವಿಶ್ವಾಸವುಳ್ಳದ್ದಕ್ಕೂ ಸ್ಥಿರವಾಗಿರುವ ಹಾಗೆ, ಕೃಪೆಯ ಪ್ರಕಾರವಾಗುವ
೧೭ ದಕ್ಕೆ, ವಿಶ್ವಾಸದಿಂದಲೇ ಆಯಿತು. ನಿನ್ನನ್ನು ಅನೇಕ [5]ಜನಾಂಗಗಳಿಗೆ ತಂದೆಯಾಗಿ ನೇಮಿಸಿದ್ದೇನೆಂದು
(ಉತ್ಪ. ೧೭. ೪.) [6]ಬರೆದಿರುವ ಪ್ರಕಾರ, ಅವನು ಸತ್ತವರನ್ನು ಬದುಕಿಸುವಂಥ, ಇಲ್ಲದವುಗಳನ್ನು [7]ಇರುವ
ವುಗಳ ಹಾಗೆ ಕರೆಯುವಂಥ, ತಾನು ವಿಶ್ವಾಸಿಸಿದ ದೇವರ ಮುಂದೆ ನಮ್ಮೆಲ್ಲರಿಗೆ ತಂದೆಯಾಗಿದ್ದಾನೆ.

1. ಪರಿಛೇದನೆಯು ದೇವರ ನೀತಿ ಎಂಬ ಆಶೀರ್ವಾದಕ್ಕೆ ಯಾವದೊಂದು ಬಾಧ್ಯತೆಯನ್ನೂ ಉಂಟು ಮಾಡಲಾರದು. ಪರಿಛೇದನೆ ಹೊಂದಿದ ಅಬ್ರಹಾಮನಿಗೆ ಅದು ಆತನಲ್ಲಿ ಬಹಳ ಕಾಲದಿಂದ ಇದ್ದ ವಿಶ್ವಾಸಕ್ಕೆ ಗುರುತಾಗಿಯೂ, ಆ ವಿಶ್ವಾಸದಿಂದ ಆತನು ಹೊಂದಿದ್ದ ದೇವರ ಆಶೀರ್ವಾದಕ್ಕೆ ಮುದ್ರೆಯಾಗಿಯೂ ಇತ್ತು. ಆದದರಿಂದ ವಿಶ್ವಾಸವಿಲ್ಲದ ಪಕ್ಷದಲ್ಲಿ ಹೊರಗಿನ ಆಚರಣೆಯನ್ನು ಅನುಸರಿಸಿ ಕೊಂಡಿದ್ದಾಗ್ಯೂ, ದೇವರ ಕಟಾಕ್ಷವಿರಲಾರದೆಂದು ಪ್ರತ್ಯಕ್ಷವಾಯಿತು.

2. ಈ ವಚನವು ಪೂರ್ವ ವಚನಕ್ಕೆ ಸಮ್ಮಂಧ ಪಟ್ಟದ್ದಲ್ಲ, ಈ ವಚನಗಳಲ್ಲಿ ಹೇಳಲ್ಪಡುವ ನ್ಯಾಯಕ್ಕೆ ಸಮ್ಮಂಧ ಪಟ್ಟದ್ದಾಗಿರುತ್ತದೆ. ವಾಗ್ದತ್ತ ಮಾಡಲ್ಪಟ್ಟ ಆಶೀರ್ವಾದವನ್ನು ಹೊಂದುವದಕ್ಕೆ ಪರಿಛೇದನೆಯಲ್ಲ, ವಿಶ್ವಾಸವೇ ವಿಶೇಷ ಯತ್ನವೆಂಬುವದನ್ನು ತೋರಿಸುವ ಮೂರನೇ ನ್ಯಾಯವು ಇದರಲ್ಲಿ ಅಡಗಿ ಇರುತ್ತದೆ.

3. ಲೋಕವೆಂಬುವ ಪದವನ್ನು ಕುರಿತು ಕೀರ್ತ. ೨೫. ೧೩; ೩೭. ೯, ೧೧. ಮತ್ತಾ. ೫. ೫. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು. ಅಬ್ರಹಾಮನಿಗೂ (ಉತ್ಪ. ೧೭. ೮.) ಆತನ ಸಂತತಿಗೂ (ಉತ್ಪ. ೧೫. ೧೮.) ಕೊಡಲ್ಪಟ್ಟ ವಾಗ್ದತ್ತಗಳು ನೀತಿನಿರ್ಣಯ ಪಡುವಿಕೆಯ ಉಪದೇಶದ ಪ್ರಕಾರ (೪. ವ.) ಕೃಪೆಯ ದಾನವಾಗಿರುತ್ತವೆ. (೧೬. ವ.) ಆದದರಿಂದ ಅವುಗಳನ್ನು ಹೊಂದುವವರು ಕ್ರಿಯೆಗಳಿಂದ ಅಲ್ಲ, ವಿಶ್ವಾಸದಿಂದಲೇ ಹೊಂದ ಬೇಕು. ಅವುಗಳಲ್ಲಿ ಬಾಧ್ಯಸ್ಥನನ್ನು ಕುರಿತ ಮುಂದಿನ ವಾಗ್ದತ್ತವು ಈಡೇರುವದಕ್ಕೆ ವಿಶ್ವಾಸವೇ ಮುಖ್ಯ ಯತ್ನವಾಗಿತ್ತು. (೧೭—೨೨. ವ.)

4. ಬಾಧ್ಯತೆಯು ನ್ಯಾಯಪ್ರಮಾಣವನ್ನು ಅನುಸರಿಸಿ ನಡಿಯುವದರಿಂದ ಬರುವದಾದರೆ, ಕೃಪೆಯಾಗಿ ಕೊಡಲ್ಪಟ ವಾಗ್ದತ್ತವು ವ್ಯರ್ಥವಾಗುವದು. ಸ್ವಂತ ಪುಣ್ಯವನ್ನು ಅಲಕ್ಷ್ಯ ಮಾಡಿ, ಬದಲು ಏನೂ ಇಲ್ಲದೆ ಉಚಿತವಾದ ಕಟಾಕ್ಷವನ್ನನುಸರಿಸುವ ವಿಶ್ವಾಸವು ಮಹಿಮೆ ಇಲ್ಲದ್ದಾಗಿ ಹೋಗುವದು. (೧೪. ವ.) ಮತ್ತು ನ್ಯಾಯಪ್ರಮಾಣದಿಂದುಂಟಾಗುವ ನೀತಿಯನ್ನು ತಳ್ಳುವದರಿಂದ ಮಾತ್ರ ಪಾಪಕ್ಕೆ ಬರ ತಕ್ಕ ದಂಡನೆಗೆ ತಪ್ಪ ಬೇಕಾಗಿರುವದರಿಂದ, ಈ ಕ್ರಮವನ್ನು ಅನುಸರಿಸದೆ ಇದ್ದರೆ, ಮನುಷ್ಯನು ತಿರಿಗಿ ದೇವರ ಕೋಪಾಜ್ಞೆಯನ್ನುಂಟು ಮಾಡುವ ಪ್ರಮಾಣಕ್ಕೊಳಗಾಗ ಬೇಕು. (೧೫. ವ.) ಆದದರಿಂದ ವಿಶ್ವಾಸ ಮಾತ್ರದಿಂದಲೇ ದೇವರ ಕೃಪೆಯೂ, ವಾಗ್ದತ್ತವನ್ನು ಕುರಿತ ನಿಶ್ಚಯವೂ ಉಂಟಾಗ ಬೇಕು. ಹೀಗೆ ವಿಶ್ವಾಸಿಗಳೆಲ್ಲರಿಗೂ ಆ ಮೇಲು ನಿಶ್ಚಯವಾಗಿ ಉಂಟಾಗುವದು. (೧೬. ವ.)

5. ಜನಾಂಗಗಳು ಎಂಬುವದು ಅನ್ಯಜನರನ್ನು ಕುರಿತದ್ದು. ಈ ಅಭಿಪ್ರಾಯವು ಪೌಲನ ಕಾರ್ಯಕ್ಕೆ ತಕ್ಕದ್ದಾಗಿದೆ.

6. ಅಬ್ರಹಾಮನಿಗೆ ಕೊಡಲ್ಪಟ್ಟ ವಾಗ್ದತ್ತಗಳೆಲ್ಲಾ ನೆರಳಾಗಿದ್ದ ಲೋಕದ ಮೇಲುಗಳನ್ನು ಮಾತ್ರವಲ್ಲ, ನಿಜಾರ್ಥವಾಗಿರುವ ಆತ್ಮದ ಮೇಲುಗಳನ್ನು ಹೊಂದಿದವುಗಳಾಗಿದ್ದವು. ಹಾಗೆಯೇ ಈ ವಾಗ್ದತ್ತವು ಒಂದೊಂದು ಜಾತಿಯಲ್ಲಿಯೂ ಇರುವ ಉತ್ತಮ ವಿಶ್ವಾಸಿಗಳಾದ ಆತ್ಮಭಾವದ ಸಂತತಿಯವರನ್ನು ಕುರಿತದ್ದಾಗಿದೆ. (ಉತ್ಪ. ೧೭. ೪.)

7. ಅಬ್ರಹಾಮನಿಗೆ ಲೋಕದ ಪ್ರಕಾರವಾಗಿ ಆಗಲಿ ಆತ್ಮದ ಪ್ರಕಾರವಾಗಿ ಆಗಲಿ ಸಂತತಿ ಉಂಟಾಗುವದಕ್ಕೆ ಬಹಳ ಕಾಲಕ್ಕೆ ಮುಂಚೆಯೇ ಆತನು ಯೆಹೂದ್ಯರು ಜನಾಂಗಗಳವರು ಆದ ಸಮಸ್ತ ಜನರಿಗೂ ತಾನು ವಿಶ್ವಾಸಿಸಿದ ದೇವರಿಂದ ತಂದೆಯಾಗಿ ಎಣಿಸಲ್ಪಟ್ಟನು. ಆತನು ಸತ್ತದ್ದನ್ನು ಜೀವಿಸ ಮಾಡುವವನೂ (೧೯. ವ.) ಇಲ್ಲದ್ದನ್ನು ಇರುವ ಹಾಗೆ ಮಾಡುವವನೂ ಆದ ಸರ್ವಶಕ್ತನಾದ ದೇವರೇ.

೧೮ ನಿನ್ನ ಬೀಜವು [1]ಹೀಗಾಗುವದೆಂದು (ಉತ್ಪ. ೧೫. ೫.) ಹೇಳಿದ ಪ್ರಕಾರ, ಅನೇಕ ಜನಾಂಗಗಳಿಗೆ ತಂದೆಯಾ
೧೯ ಗುವ ಹಾಗೆ, ಅವನು [2]ನಿರೀಕ್ಷೆಗೆ ಆಸ್ಪದವಿಲ್ಲದೆ ನಿರೀಕ್ಷಿಸಿ, ವಿಶ್ವಾಸಿಸಿದನು. ಮತ್ತು ವಿಶ್ವಾಸದಲ್ಲಿ [3]ಬಲ
ಹೀನನಾಗಿರದೆ, ತಾನು ಹೆಚ್ಚುಕಡಿಮೆ ನೂರು ವರುಷದವನಾಗಿದ್ದು, ತನ್ನ ಶರೀರವು ಆಗಲೇ ಮರಣ
೨೦ ವಾದದ್ದನ್ನೂ, ಸಾರಳ ಗರ್ಭದ ಮರಣವನ್ನೂ ಲಕ್ಷ್ಯ ಮಾಡಲಿಲ್ಲ. ಆದರೆ ದೇವರ ವಾಗ್ದತ್ತವನ್ನು
ಕುರಿತು ಅವಿಶ್ವಾಸದಿಂದ ಅನುಮಾನ ಪಡದೆ, ವಿಶ್ವಾಸದಲ್ಲಿ ಬಲಿಷ್ಠನಾಗಿ, [4]ದೇವರಿಗೆ ಮಹಿಮೆ ಕೊಟ್ಟು,
೨೧ ವಾಗ್ದತ್ತ ಮಾಡಿದ್ದನ್ನು ನಡಿಸುವದಕ್ಕೆ ಬಲವುಳ್ಳವನಾಗಿದ್ದಾನೆಂದು, ತುಂಬ ಭರವಸವುಳ್ಳವನಾಗಿದ್ದನು.
೨೨ ಆದದರಿಂದ ಅದು ಅವನಿಗೆ ನೀತಿ ಎಂದು ಎಣಿಸಲ್ಪಟ್ಟಿತು.
೨೩ ಆದರೆ, [5]ಅವನಿಗೆ ಎಣಿಸಲ್ಪಟ್ಟಿತೆಂಬುವದು, ಅವನ ಸಲವಾಗಿ ಮಾತ್ರವಲ್ಲ, ನಮ್ಮ ಸಲವಾಗಿ ಸಹ ಬರೆಯ
೨೪ ಲ್ಪಟ್ಟಿತು. ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದವನ ಮೇಲೆ ವಿಶ್ವಾಸಿಸುವ ನಮಗೂ
೨೫ ಎಣಿಸಲ್ಪಡುವದಕ್ಕಿರುವದು. ಅವನು ನಮ್ಮ ಅಕ್ರಮಗಳಿಗೋಸ್ಕರ [6]ಒಪ್ಪಿಸಲ್ಪಟ್ಟು, ನಮ್ಮ ನೀತಿನಿರ್ಣಯ
ಕ್ಕೋಸ್ಕರ ಎಬ್ಬಿಸಲ್ಪಟ್ಟನು.

ಭಕ್ತಿವಿಶ್ವಾಸದಿಂದ ಕ್ರಿಸ್ತನನ್ನು ಹೊಂದಿ ಕೊಳ್ಳುವವರಿಗೆ ಆದಮನು ಕಳಕೊಂಡ ಪುಣ್ಯವೂ ಜೀವವೂ ಎಂಬ
ಪರಮ ಭಾಗ್ಯಗಳು ಅನುಗ್ರಹಿಸಲ್ಪಡುವವು.

**5.** ಆದ ಕಾರಣ [7]ವಿಶ್ವಾಸದಿಂದ ನೀತಿನಿರ್ಣಯ ಪಟ್ಟ ನಮಗೆ ದೇವರ ಸಂಗಡ ನಮ್ಮ ಕರ್ತನಾದ ಯೇಸು
೨ ಕ್ರಿಸ್ತನ ಮುಖಾಂತರ ಸಮಾಧಾನ ಉಂಟು. ಇವನ ಮುಖಾಂತರ ನಾವು ನಿಂತು ಕೊಂಡಿರುವ ಈ ಕೃಪೆ

1. ನಕ್ಷತ್ರಗಳ ಹಾಗೆ ಪ್ರಬಲವಾಗಿರುವದು. (ಉತ್ಪ. ೧೫. ೫. ಇಬ್ರಿ. ೧೧. ೧೨.)

2. ಕಾರ್ಯಗಳೆಲ್ಲಾ ನಂಬಿಕೆಗೆ ಆಸ್ಪದವಿಲ್ಲದವುಗಳಾಗಿ ಕಾಣಿಸಿದಾಗ್ಯೂ, (೧೯. ವ.) ವಾಗ್ದತ್ತ ಮಾಡಿದವನು ಅದನ್ನು ಈಡೇರಿಸ ಶಕ್ತನೆಂದು ಅಬ್ರಹಾಮನು ನಂಬಿದನು. ಇಸಾಕನ ಹುಟ್ಟುವಿಕೆಯ ಹಾಗೆಯೇ ಜನಾಂಗಗಳವರ ಆತ್ಮಭಾವದ ಹುಟ್ಟುವಿಕೆಯೂ ನಂಬ ಕೂಡದ್ದಾಗಿದ್ದಾಗ್ಯೂ, ಕರುಣಾನಿಧಿಯಾದ ದೇವರ ಕೃಪೆಯಿಂದ ಅದು ಈಡೇರಿದ್ದನ್ನು ನೋಡ ಬಹುದು.

3. ಅಬ್ರಹಾಮನು ವಿಶ್ವಾಸದಲ್ಲಿ ಬಲಹೀನನಾಗಿರದೆ ಮಹಾ ದೃಢವುಳ್ಳವನಾಗಿದ್ದನು. (೨೦. ವ.)

4. ದೇವರ ಸತ್ಯವನ್ನೂ ಬಲವನ್ನೂ ಆತನು ಪೂರ್ಣವಾಗಿ ನಂಬಿದ್ದರಿಂದ ದೇವರನ್ನು ಮಹಿಮೆ ಪಡಿಸಿದನು. ಹೀಗೆ ಆತನು ವಿಶ್ವಾಸದಲ್ಲಿ ಬಲಿಷ್ಠನಾಗಿದ್ದದರಿಂದ ದಯಾನಿಧಿಯಾದ ದೇವರಿಂದ ಅದು ಆತನಿಗೆ ನೀತಿಯಾಗಿ ಎಣಿಸಲ್ಪಟ್ಟಿತು.

5. ನೀತಿವಂತನಾಗುವದಕ್ಕೆ ಸರಿಯಾದ ಮಾರ್ಗವು ಯಾವದೆಂದು ಅಬ್ರಹಾಮನ ದೃಷ್ಟಾಂತದಿಂದ ೨೩, ೨೪ನೇ ವಚನಗಳಲ್ಲಿ ತೋರಿಸಿ ಇದೆ. ಮತ್ತು ೨೫ನೇ ವಚನದಲ್ಲಿ ಹೀಗೆ ಸಮಸ್ತ ಜನರನ್ನೂ ನೀತಿವಂತರಾಗ ಮಾಡುವ ಕಾರಣವು ಇಂಥಾದ್ದೆಂದು ತೋರಿಸಲ್ಪಟ್ಟದೆ. ಕ್ರಿಸ್ತನ ಪಾಪನಿವಾರಣಬಲಿಯೂ ಆತನ ಮಧ್ಯಸ್ತಿಕೆಯೂ ಕಾರಣವೇ ಹೊರ್ತು, ಬೇರೆ ಕಾರಣವೇನೂ ಇಲ್ಲ. (೩. ೨೫, ೨೬.)

6. ನೀತಿನಿರ್ಣಯಿಸುವ, ಕೃಪೆ ಇಲ್ಲದಿದ್ದರೆ, ಪಾಪಕ್ಷಮೆ ಇಲ್ಲ. ಕ್ರಿಸ್ತನು ಸತ್ತು ತಿರಿಗಿ ಏಳದೆ ಇದ್ದರೆ, ಆ ಕೃಪೆಯು ಇರುವದಿಲ್ಲ. ಆತನು ಸತ್ತದ್ದರಿಂದ ಪಾಪಕ್ಷಮೆಯೂ, ಆತನು ಪುನರುತ್ಥಾನವಾದದರಿಂದ ಬೇರೆ ಶ್ರೇಷ್ಠ ಮೇಲುಗಳೂ ಆತನ ಭಕ್ತರಿಗೆ ಉಂಟಾಗುತ್ತವೆ. ಆ ಮೇಲುಗಳು ಅವರಿಗೆ ಎಲ್ಲಾ ಕಾಲದಲ್ಲಿಯೂ ಸ್ಥಿರವಾಗಿರುವದಕ್ಕೆ ಪುನರುತ್ಥಾನವಾದ ಆತನು ಎಡೆ ಬಿಡದೆ ವಹಿಸಿ ಮಾತಾಡುವದು ಅವಶ್ಯವಾಗಿದೆ. ಮುಂದೆ ಬರುವ ಸಂಧಿಗಳಲ್ಲಿ ಪೌಲನು ಈ ಎರಡು ವಿಧವಾಗಿ ತನ್ನ ನ್ಯಾಯವನ್ನು ಹೇಳುತ್ತಾನೆ. ಪಾಪವನ್ನು ಅಳಿಸುವದು ಒಂದು ವಿಧ; ಜೀವ ಹೊಂದಿ ಪರಿಶುದ್ಧ ಮಾರ್ಗದಲ್ಲಿ ನಡಿಯುವದು ಮತ್ತೊಂದು ವಿಧ. (೫—೭. ಸಂಧಿಗಳು.) ಮನುಷ್ಯರ ಪ್ರಕಾರ ನೋಡಿದರೆ, ಯೂದನಿಂದಲೂ, (ಯೋಹಾ. ೧೯. ೧೧.) ಯೆಹೂದ್ಯರಿಂದಲೂ, (ಅಪೊ. ಕ್ರಿ. ೩. ೧೩.) ಕ್ರಿಸ್ತನು ಮರಣಕ್ಕೆ ಒಪ್ಪಿಸಲ್ಪಟ್ಟನು. ದೈವ ಮಹತ್ವದ ಪ್ರಕಾರ ಆತನು ತಂದೆಯಿಂದಲೂ, (೮. ೩೨.) ತನ್ನ ಸ್ವಂತ ಮನಸ್ಸಿನಿಂದಲೂ, (ಗಲಾ. ೨. ೨೦.) ಪರಿಶುದ್ಧಾತ್ಮನಿಂದಲೂ (ಇಬ್ರಿ. ೯. ೧೪.) ಮರಣಕ್ಕೊಳಗಾದನು. ಆತನು ಮರಣ ಹೊಂದಿದ್ದರಿಂದ ನಮ್ಮ ಪಾಪವು ನಿವರ್ತಿಯಾಯಿತು. ಆತನು ಪುನರುತ್ಥಾನವಾದದರಿಂದ ದೇವರ ಸನ್ನಿಧಿಯಲ್ಲಿ ನಾವು ನೀತಿವಂತರಾಗಿ ಕಾಣಿಸಲ್ಪಡ ಹೇತುವೆ ಆಯಿತು. ಇದನ್ನು ನಂಬುವದೇ ಭಾಗ್ಯವು.

7. ಹಿಂದಿನ ಸಂಧಿಯ ಕಡೇ ವಚನದಲ್ಲಿ ಮರಣವಾಗಿ ಜೀವದಿಂದ ಎದ್ದ ರಕ್ಷಕನ ಮಹಾ ಪುಣ್ಯದಿಂದಲೇ ನಾವು ನೀತಿವಂತರಾಗುತ್ತೇವೆಂದು ತೋರಿಸಿದ ತರುವಾಯ, ಈ ಸಂಧಿಯಲ್ಲಿ ಹಾಗೆ ನೀತಿವಂತರಾದ ಭಕ್ತರ ಭಾಗ್ಯವಾದ ಸ್ಥಿತಿಯನ್ನು ತೋರಿಸಿ ಇದೆ. ನೀತಿಪರನಾದ ಕ್ರಿಸ್ತನ ನೀತಿಯು ಆತನ ದಾಸರ ನೀತಿಯಾಗಿ ಎಣಿಸಲ್ಪಡುತ್ತದೆ. ಈ ವಿಧವಾಗಿ ನೀತಿವಂತರಾಗುವವರು ದೇವರ ಸಂಗಡ ಸಮಾಧಾನ ಹೊಂದುತ್ತಾರೆ. ದೇವರ ಉಗ್ರ ಕೋಪವು ನಿವರ್ತಿಯಾಯಿತೆಂದೂ, ಅದರಿಂದುಂಟಾದ ಭಯವು ನಿವರ್ತಿಯಾಯಿತೆಂದೂ, ಪಾಪನಾಶಕನಾದ ಕ್ರಿಸ್ತನ ಮೂಲಕವಾಗಿ ಪಾಪಪರಿಹಾರವಾಯಿತೆಂದೂ, ಮನಸ್ಸಿನಲ್ಲಿ ಹುಟ್ಟುವ ನಿಶ್ಚಯದಿಂದ ಈ ಸಮಾಧಾನವು ಉಂಟಾಗುತ್ತದೆ.



ಯಲ್ಲಿ [1]ಪ್ರವೇಶವನ್ನು ಸಹ ವಿಶ್ವಾಸದಿಂದ ಹೊಂದಿ, ದೇವರ ಮಹಿಮೆಯ ನಿರೀಕ್ಷೆಯಲ್ಲಿ ಹೆಚ್ಚಳ ಪಡುತ್ತೇವೆ.
೩, ೪ [2]ಅದು ಮಾತ್ರವಲ್ಲ, ಉಪದ್ರಗಳಲ್ಲಿಯೂ ಹೆಚ್ಚಳ ಪಡುತ್ತೇವೆ. ಉಪದ್ರವು ತಾಳ್ಮೆಯನ್ನು, ತಾಳ್ಮೆಯು
ಪರೀಕ್ಷೆಯನ್ನು, ಪರೀಕ್ಷೆಯು ನಿರೀಕ್ಷೆಯನ್ನು, ಉಂಟು ಮಾಡುತ್ತದೆ ಎಂದು, ತಿಳಿದಿರುವದರಿಂದಲೇ.
೫ ನಿರೀಕ್ಷೆಯಾದರೆ, ನಾಚಿಕೆ ಪಡಿಸುವದಿಲ್ಲ. ಯಾಕಂದರೆ ದೇವರ ಪ್ರೀತಿಯು ನಮಗೆ ಕೊಡಲ್ಪಟ್ಟ ಪರಿಶು
ದ್ಧಾತ್ಮದಿಂದ ನಮ್ಮ ಹೃದಯಗಳಲ್ಲಿ ಹೊಯ್ಯಲ್ಪಟ್ಟದೆ.
೬ ಯಾಕಂದರೆ ನಾವು ಇನ್ನು [3]ಬಲಹೀನರಾಗಿರುವಾಗ್ಯೆ, [4]ತಕ್ಕ ಸಮಯದಲ್ಲಿ ಕ್ರಿಸ್ತನು ಭಕ್ತಿಹೀನರಿಗೋ
೭ ಸ್ಕರ ಸತ್ತನು. ಏನಂದರೆ, ನೀತಿವಂತನಿಗೋಸ್ಕರ ಯಾವನಾದರೂ ಸಾಯುವದು ದುರ್ಲಭವಾಗಿದೆ.
೮ ಒಂದು ವೇಳೆ, [5]ಉಪಕಾರಿಗೋಸ್ಕರ ಯಾವನಾದರೂ ಸಾಯುವದಕ್ಕೆ ಅಷ್ಟು ಧೈರ್ಯ ಪಟ್ಟಾನು. ಆದರೆ
ನಾವು ಇನ್ನು ಪಾಪಿಗಳಾಗಿರುವಾಗ, ಕ್ರಿಸ್ತನು ನಮಗೋಸ್ಕರ ಸತ್ತದರಿಂದ, ದೇವರು ನಮ್ಮ ಮೇಲಿರುವ
೯ ತನ್ನ ಪ್ರೀತಿಯನ್ನು [6]ಪ್ರತಿಷ್ಠೆ ಮಾಡುತ್ತಾನೆ. ಹಾಗಾದರೆ, ಬಹು ಹೆಚ್ಚಾಗಿ ಈಗ ಅವನ ರಕ್ತದಿಂದ ನೀತಿ
೧೦ ನಿರ್ಣಯ ಪಟ್ಟು, ಅವನ ಮುಖಾಂತರ ಕೋಪದೊಳಗಿಂದ [7]ರಕ್ಷಿಸಲ್ಪಡುವೆವು. ಯಾಕಂದರೆ ಶತ್ರುಗಳಾ
ಗಿದ್ದು, ಅವನ ಮಗನ ಮರಣದ ಮುಖಾಂತರ ದೇವರಿಗೆ ಅನ್ಯೋನ್ಯ ಮಾಡಲ್ಪಟ್ಟದ್ದರೆ, ಬಹು ಹೆಚ್ಚಾಗಿ
೧೧ ಅನ್ಯೋನ್ಯ ಮಾಡಲ್ಪಟ್ಟು, ಅವನ ಜೀವದಿಂದ ರಕ್ಷಿಸಲ್ಪಡುವೆವು. [8]ಅದು ಮಾತ್ರವಲ್ಲ, ಈಗ ಯಾವನ
ಮುಖಾಂತರ ಅನ್ಯೋನ್ಯವನ್ನು ಹೊಂದಿದ್ಧೇವೋ, ಆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ದೇ
ವರಲ್ಲಿ ಹೆಚ್ಚಳ ಪಡುತ್ತೇವೆ.

1. ತನ್ನ ಅಪರಾಧದ ನಿಮಿತ್ತ ದೇಶದಿಂದ ಹೊರಡಿಸಲ್ಪಟ್ಟ ಒಬ್ಬ ಪ್ರಜೆಯಾದವನು ಅರಸನ ಕರುಣೆಯಿಂದ ಕ್ಷಮೆ ಹೊಂದಿ ತಿರಿಗಿ ರಾಜನ ಸಮುಖದಲ್ಲಿ ಬಂದು ನಿಲ್ಲ ತಕ್ಕ ಸಲಿಗೆಯನ್ನು ಹೊಂದುವ ಪ್ರಕಾರ (ಉತ್ಪ. ೪೦. ೨೧.) ರಕ್ಷಕನಾದ ಕ್ರಿಸ್ತನ ಮೂಲಕವಾಗಿ ದೇವರ ಬಳಿಯಲ್ಲಿ ಪಾಪಕ್ಷಮೆಯನ್ನು ಹೊಂದಿದವನು ಆತನ ಪರಿಶುದ್ಧ ಸನ್ನಿಧಿಯಲ್ಲಿ ಶೇರುವ ಸಲಿಗೆಯನ್ನು ಹೊಂದಿ, ಆತನಿಂದ ಬರುವ ಮಹಿಮೆ ಹೊಂದ ಬಹುದೆಂದು ಆನಂದ ಪಡುತ್ತಾನೆ.

2. ಭಕ್ತನು ತರುವಾಯ ಬರುವ ಮಹಿಮೆಯನ್ನು ನೆನಸಿ ಆನಂದ ಪಡುವದಲ್ಲದೆ ಈಗಲಿರುವ ಉಪದ್ರದಲ್ಲಿಯೂ ಸಂತೋಷ ಪಡುತ್ತಾನೆ. ಉಪದ್ರ ಪಡುವದರಿಂದ ಅದನ್ನು ಸಹಿಸುವ ಶಕ್ತಿಯು ಅಥವಾ ತಾಳ್ಮೆಯು ಹೆಚ್ಚುವದು. ಅದರಿಂದ ಅವನ ಗುಣಗಳ ಪರೀಕ್ಷೆ ಆಗುವದು. ಅವನ ನಂಬಿಕೆಯು ಸ್ಥಿರ ಪಡುವದು. ಆ ನಂಬಿಕೆ ವ್ಯರ್ಥವಾಗಿ ಹೋಗಲಾರದು. ಕರುಣಾನಿಧಿಯಾದ ದೇವರ ಸಮಾನವಿಲ್ಲದ ಪ್ರೀತಿ ಎಂಬ ಅಮೃತವನ್ನು ರುಚಿ ನೋಡುವ ಹಾಗೆ ಮಾಡಿದ ಪರಿಶುದ್ಧಾತ್ಮನ ಶ್ರೇಷ್ಠ ವರವನ್ನು ಹೊಂದಿದ್ದೇ ನಾವು ನಂಬಿ ಹುಡುಕುವ ಭಾಗ್ಯವು ಕೈಕೂಡಿ ಬರುವದು ಎಂಬುವದಕ್ಕೆ ಸಾಕ್ಷಿಯಾಗಿದೆ. (೬—೮.)

3. ದೇವರ ಸಮಾನವಿಲ್ಲದ ಪ್ರೀತಿಯನ್ನು ಹಿಂದಿನ ವಚನದಲ್ಲಿ ತೋರಿಸಿದ ತರುವಾಯ ಅದು ಪ್ರತಿಷ್ಠೆಯಾದ ವಿಧವನ್ನು ಕುರಿತು ಇದರಲ್ಲಿ ಹೇಳಲ್ಪಟ್ಟದೆ. ಪಾಪಕ್ಕೂ ಅದರಿಂದುಂಟಾಗುವ ಕಠಿಣ ನಷ್ಟಕ್ಕೂ ತಪ್ಪಿಸಿ ಕೊಳ್ಳುವದಕ್ಕೆ ಪೂರ್ಣ ಅಶಕ್ತರಾಗಿರುವಾಗ ದೇವರ ಮಹಾ ಪ್ರೀತಿಯು ಪ್ರಕಟವಾಯಿತು.

4. ಗಲಾ. ೪. ೨, ೪, ೫. ವಚನಗಳ ವ್ಯಾಖ್ಯಾನ ನೋಡಬೇಕು. ದೇವರ ಕಾರ್ಯಗಳಲ್ಲಿ ಆತುರವೂ ಅವಸರವೂ ಇಲ್ಲ.

5. ನೀತಿವಂತನಿಗೋಸ್ಕರ ಮತ್ತೊಬ್ಬನು ಸಾಯುವದು ದುರ್ಲಭವು. ನೀತಿಯೂ ಪರೋಪಕಾರಚಿಂತೆಯೂ ಉಳ್ಳ ಒಬ್ಬನಿಗೋಸ್ಕರ ಇನ್ನೊಬ್ಬನು ಸಾಯುವದಕ್ಕೆ ಒಂದು ವೇಳೆ ಧೈರ್ಯ ಪಟ್ಟಾನು. ಆದರೆ ನೀತಿಯೂ ಉಪಕಾರಚಿಂತೆಯೂ ಲೇಶವಾದರೂ ಇಲ್ಲದ ನಿಷ್ಪ್ರಯೋಜಕರಾದ ಭಕ್ತಿಹೀನ ಪಾಪಾತ್ಮರಿಗಾಗಿ, ನೀತಿ ಪರಿಶುದ್ಧತ್ವ ಪ್ರೀತಿಗಳಿಂದ ಭರಿತನಾದ ದೇವರ ಕುಮಾರನು ಸತ್ತದ್ದು ಎಷ್ಟು ಆಶ್ಚರ್ಯವಾದ ಪ್ರೀತಿಯು! ಇಂಥಾ ಪ್ರೀತಿಯು ಲೋಕದಲ್ಲಿ ಎಲ್ಲಿಯೂ ಇಲ್ಲ.

6. ದೇವರು ಪಾಪಾತ್ಮರಿಗಾಗಿ ಮಾಡಿದ ಒಂದೊಂದು ಕಾರ್ಯವೂ ಪ್ರೀತಿಯೇ. ಆದರೆ ಅವರಿಗಾಗಿ ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡುವದಕ್ಕೆ ತನ್ನ ಪ್ರಿಯ ಕುಮಾರನನ್ನು ಒಪ್ಪಿಸಿ ಕೊಟ್ಟದ್ದರಲ್ಲಿ ತನ್ನ ಪ್ರೀತಿಗೆ ಮಹಿಮೆಯುಳ್ಳ ಸಾಕ್ಷಿಯಾಯಿತು.

7. ೯, ೧೦ನೇ ವಚನಗಳಲ್ಲಿ ರಕ್ಷಣ್ಯ ಕ್ರಿಯೆಯ ನಿಶ್ಚಯವೂ ಸಂಪೂರ್ಣತ್ವವೂ ತೋರುತ್ತದೆ. ನಾವು ಶತ್ರುಗಳಾಗಿದ್ದ ಕಾಲದಲ್ಲಿ ಕ್ರಿಸ್ತನು ಸತ್ತು ನೀತಿನಿರ್ಣಯ ಪಡುವಿಕೆ ಎಂಬ ದೊಡ್ಡ ಆಶೀರ್ವಾದವನ್ನು ಸಂಪಾದಿಸಿದ್ದರೆ, ನಾವು ದೇವರ ಸಂಗಡ ಅನ್ಯೋನ್ಯವಾಗಿರುವಾಗ ಪಾಪದಿಂದಲೂ ಕೋಪದಿಂದಲೂ ನಮ್ಮನ್ನು ತಪ್ಪಿಸಿ ಪೂರ್ಣವಾಗಿ ರಕ್ಷಿಸ ಆತನು ಎಂದೆಂದಿಗೂ ಜೀವಿತನಾಗಿರುವದು ಬಹು ನಿಶ್ಚಯವಾಗಿದೆ ಎಂದು ಇದರಲ್ಲಿ ಸ್ಪಷ್ಟವಾಗಿ ತೋರಿಸಿ ಇದೆ. (ಇಬ್ರಿ. ೭. ೨೫.) ಆತನ ಮರಣದಿಂದ ರಕ್ಷಣೆ ಉಂಟಾದರೆ, ಆತನ ಜೀವದಿಂದ ಅದು ಪೂರ್ಣವಾಗುವದು ಆಶ್ಚರ್ಯವಾದದ್ದಲ್ಲ.

8. ರಕ್ಷಿಸಲ್ಪಡುವದು ಮಾತ್ರವಲ್ಲ, ಇನ್ನೂ ಹೆಚ್ಚಾದ ಮೇಲು ಉಂಟಾಗುವದು. ಈ ರಕ್ಷಣೆ ನಿಶ್ಚಯವಾಗಿರುವದಲ್ಲದೆ ಜಯವುಳ್ಳದ್ದಾಗಿಯೂ ಇದೆ. ಇದು ಬರುವ ಕಾಲವನ್ನು ಕುರಿತು ಮಾತ್ರವಲ್ಲ, ದೇವರ ವಿಷಯ ಈಗಲೇ ಹೆಚ್ಚಳ ಪಡುವದರಿಂದಲೂ, ಕ್ರಿಸ್ತನ ಮುಖಾಂತರ ಈಗಲೇ ಅನ್ಯೋನ್ಯ ಹೊಂದಿರುವದರಿಂದಲೂ ಇದು ವರ್ತಮಾನಕಾಲವನ್ನು ಅನುಸರಿಸುತ್ತದೆ.

೧೨ ಆದದರಿಂದ [1]ಒಬ್ಬ ಮನುಷ್ಯನಿಂದ ಪಾಪವೂ, ಪಾಪದಿಂದ ಮರಣವೂ, ಲೋಕದಲ್ಲಿ ಪ್ರವೇಶಿಸಿ, ಈ ಪ್ರಕಾರ
೧೩ [2]ಎಲ್ಲರು ಪಾಪ ಮಾಡಿದ್ದಲ್ಲಿ, ಮರಣವು ಎಲ್ಲರ ಮೇಲೆ ವ್ಯಾಪಿಸಿದ ಹಾಗಿರುವದು. ಹ್ಯಾಗಂದರೆ [3]ನ್ಯಾ
ಯಪ್ರಮಾಣದ ಮಟ್ಟಿಗೂ ಪಾಪವು ಲೋಕದಲ್ಲಿ ಇತ್ತು; ಆದರೆ ನ್ಯಾಯಪ್ರಮಾಣವು ಇಲ್ಲದಿರುವಾಗ,
೧೪ ಪಾಪವು ಎಣಿಸಲ್ಪಡುವದಿಲ್ಲ. ಆದರೆ ಆದಮನಿಂದ ಮೋಶೆಯ ವರಿಗೂ, ಬರುವವನಿಗೆ [4]ಮುಂಗುರುತಾಗಿ
ರುವ ಆದಮನ [5]ಮೀರುವಿಕೆಯ ಹೋಲಿಕೆಯಾಗಿ ಪಾಪ ಮಾಡದವರ ಮೇಲೆಯೂ ಮರಣವು ಧೊರೆತನ
ಮಾಡಿತು.
೧೫ ಆದರೆ ಅಕ್ರಮವು ಹ್ಯಾಗೋ, ಕೃಪೆಯ ವರವು ಹಾಗಲ್ಲ; ಹ್ಯಾಗಂದರೆ ಒಬ್ಬನ ಅಕ್ರಮದಿಂದ ಅನೇಕರಾ
ದವರು ಸತ್ತಿದ್ದರೆ, ಬಹು ಅಧಿಕವಾಗಿ ದೇವರ ಕೃಪೆಯೂ, ಯೇಸು ಕ್ರಿಸ್ತನಾದ ಒಬ್ಬ ಮನುಷ್ಯನ ಕೃಪೆ
೧೬ ಯಿಂದಾಗುವ ವರವೂ, ಅನೇಕರಾದವರಿಗೆ ಹೆಚ್ಚಿದವು. ಮತ್ತು ಪಾಪ ಮಾಡಿದ ಒಬ್ಬನಿಂದ ಹ್ಯಾಗೋ,
ವರವು ಹಾಗಲ್ಲ; ಹ್ಯಾಗಂದರೆ [6]ನ್ಯಾಯತೀರ್ವಿಕೆಯು ಒಬ್ಬನಿಂದ ಆಜ್ಞೆನಿರ್ಣಯಕ್ಕಾಯಿತು; ಆದರೆ ಕೃಪೆಯ
೧೭ ವರವು ಅನೇಕ ಅಕ್ರಮಗಳೊಳಗಿಂದ ನೀತಿನಿರ್ಣಯಕ್ಕಾಯಿತು. ಯಾಕಂದರೆ ಆ ಒಬ್ಬನ ಅಕ್ರಮದಿಂದ
ಮರಣವು ಒಬ್ಬನ ಮುಖಾಂತರ ಧೊರೆತನ ಮಾಡಿದ್ದರೆ, ಬಹು ಹೆಚ್ಚಾಗಿ ಕೃಪೆಯ ಪೂರ್ತಿಯನ್ನೂ, ನೀತಿಯ
ವರದ ಪೂರ್ತಿಯನ್ನೂ, ಹೊಂದುವವರು ಯೇಸು ಕ್ರಿಸ್ತನಾದ ಒಬ್ಬನ ಮುಖಾಂತರ [7]ಜೀವದಲ್ಲಿ ಧೊರೆತನ
ಮಾಡುವರು.

---

1. ಒಬ್ಬನ ಪುಣ್ಯದಿಂದ ಅನೇಕರು ಪುಣ್ಯವಂತರಾಗುವ ವಿಷಯ ಆದಿ ಮನುಷ್ಯನಿಗೆ ಕೊಡಲ್ಪಟ್ಟ ಧರ್ಮಪ್ರಮಾಣವನ್ನು ಈಡೇರಿಸುತ್ತದೆ ಎಂಬುವದನ್ನು ಪೌಲನು ನಿರೂಪಿಸುತ್ತಾನೆ. ಈ ಎರಡು ವಿಷಯಗಳಲ್ಲಿಯೂ ಒಬ್ಬನಿಂದ ಅನೇಕರಿಗೆ ಸುಖ ದುಃಖಗಳು ಪ್ರಾಪ್ತವಾದವು. ಒಬ್ಬನಿಂದ ಲೋಕದಲ್ಲಿ ಪಾಪವೂ ಮರಣವೂ ಬಂದವು. ಒಬ್ಬನಿಂದ ನೀತಿಯೂ ಜೀವವೂ ಉಂಟಾದವು.

2. ಪಾಪವೆಂಬ ವಿಷವು ಆದಮನಿಂದ ಎಲ್ಲಾ ಮನುಷ್ಯರಲ್ಲಿ ವ್ಯಾಪಿಸಿದ ಪ್ರಕಾರ, ಅದರ ಫಲವಾದ ಮರಣವು ಸಹ ಅವನಿಂದಲೇ ಎಲ್ಲರಿಗೂ ಬಂತು. ಆದಮನು ಪಿಶಾಚನ ತಂತ್ರದಿಂದ ದೇವರ ಕಟ್ಟಳೆಯನ್ನು ಮೀರಿ ಹಣ್ಣು ತಿಂದ ದಿವಸದಲ್ಲಿ ಪಾಪವು ಲೋಕದಲ್ಲಿ ಪ್ರವೇಶಿಸಿತು. ಅದರಿಂದ ಮರಣವು ಸಹ ಉಂಟಾಯಿತು. ಹೀಗೆ ಅವನು ಪಾಪ ಮಾಡದೆ ಇದ್ದರೆ, ಒಂದು ವೇಳೆ ಹನೋಕನ ಹಾಗೆ ಮರಣವಿಲ್ಲದೆ ಪರಲೋಕಕ್ಕೆ ಹೋಗಿರುವನು. ಮೃಗ ಜಂತುಗಳಲ್ಲಿ ಆದಮನು ಪಾಪ ಮಾಡುವದಕ್ಕೆ ಮುಂಚೆಯೂ ಮರಣ ಉಂಟಾಗಿತ್ತೆಂಬುವದಕ್ಕೆ ಸಾಕ್ಷಿ ಉಂಟೆಂದು ವಿದ್ವಾಂಸರು ಹೇಳುತ್ತಾರೆ. ಆದರೂ ಮನುಷ್ಯನು ದೈವಸಂಕಲ್ಪದಿಂದ ಅಂಥಾ ಮರಣಕ್ಕೆ ತೊಲಗಿ ಇದ್ದನು. ಅವನು ಪಾಪ ಮಾಡಿದಾಗ ಶರೀರಮರಣವೂ ಆತ್ಮಮರಣವೂ ಅವನಿಗೂ, ಅವನ ಸಂತತಿಯವರಾದ ಸಮಸ್ತ ಮನುಷ್ಯರಿಗೂ ಉಂಟಾಯಿತು.

3. ಆದಮನ ಸಂಗಡ ಸಮ್ಮಂಧ ಪಟ್ಟದ್ದ ಕಾರಣದಿಂದ ಸಮಸ್ತ ಜನರಿಗೂ ಪಾಪವೂ ಮರಣವೂ ಉಂಟಾಯಿತೆಂದು ೧೨ನೇ ವಚನದಲ್ಲಿ ಹೇಳಲ್ಪಟ್ಟ ಸತ್ಯವನ್ನು ೧೩, ೧೪ನೇ ವಚನಗಳಲ್ಲಿ ದೃಢ ಪಡಿಸಿ ಇದೆ. ನ್ಯಾಯಪ್ರಮಾಣ ಕೊಡಲ್ಪಡುವದಕ್ಕಿಂತ ಮುಂಚೆ ಲೋಕದಲ್ಲಿ ಪಾಪವಿತ್ತು. ಪ್ರಮಾಣವಿಲ್ಲದ್ದರಿಂದ ಪಾಪವು ಚನ್ನಾಗಿ ತೋರದೆ ಇದ್ದಾಗ್ಯೂ, ಮನುಷ್ಯರೆಲ್ಲರು ಸತ್ತು ಹೋದದರಿಂದ ಅವರು ಪಾಪವುಳ್ಳವರಾಗಿದ್ದರೆಂದು ಸ್ಪಷ್ಟವಾಗಿದೆ.

4. ಆದಮನು ತನ್ನ ಸಂಗಡ ಸಮ್ಮಂಧ ಪಟ್ಟ ಎಲ್ಲರಿಗೂ ಪಾಪವನ್ನೂ ಮರಣವನ್ನೂ ಬರ ಮಾಡಿದ ಪ್ರಕಾರ, ಕ್ರಿಸ್ತನು ವಿಶ್ವಾಸದ ಮೂಲಕವಾಗಿ ತನಗೆ ಸಮ್ಮಂಧ ಪಟ್ಟವರಿಗೆ ನೀತಿಯನ್ನೂ ಜೀವವನ್ನೂ ಉಂಟು ಮಾಡುತ್ತಾನೆ. (೧ ಕೊರಿ. ೧೫. ೨೧, ೨೨.) ಈ ಪ್ರಕಾರ ಇಬ್ಬರಿಗೂ ಸಮ್ಮಂಧವಿದ್ದಾಗ್ಯೂ, ಕ್ರಿಸ್ತನ ಪುಣ್ಯ ಕ್ರಿಯೆಯ ಶ್ರೇಷ್ಠತ್ವ ತೋರುವ ಕೆಲವು ವಿಷಯಗಳಲ್ಲಿ ಭೇದವುಂಟು. ೧ನೇದು, ಕೃಪೆಯ ಒಡಂಬಡಿಕೆಯಿಂದ ಉಂಟಾಗುವ ಮೇಲುಗಳು ಅಧಿಕ ಶ್ರೇಷ್ಠವೂ ಸಂಪೂರ್ಣವೂ ಆಗಿವೆ. (೧೫. ವ.) ೨ನೇದು, ಆದಮನ ಒಂದೇ ಮೀರುವಿಕೆಯಿಂದ ವಿಸ್ತಾರವಾದ ಕೇಡು ಸಂಭವಿಸಿದಾಗ್ಯೂ, ಕ್ರಿಸ್ತನ ಪುಣ್ಯಕ್ರಿಯೆಯಿಂದ ಆ ಅಪರಾಧ ಮಾತ್ರವಲ್ಲ, ಇನ್ನು ಅನೇಕ ಅಪರಾಧಗಳು ಅನೇಕರಿಗೆ ತೊಲಗಿ ಹೋಗುತ್ತವೆ. (೧೬. ವ.) ೩ನೇದು, ಆದಮನ ಪಾಪದಿಂದ ಎಲ್ಲರಿಗೂ ಮರಣ ಪ್ರಾಪ್ತಿಯಾದಾಗ್ಯೂ, ಕ್ರಿಸ್ತನ ಮಹಾ ಪುಣ್ಯದಿಂದ ಎಲ್ಲರಿಗೂ ಸುಖವೂ ಜೀವವೂ ಉಂಟಾಗುತ್ತವೆ. (೧೭. ವ.)

5. ಆದಮನಿಗೆ ಕೊಡಲ್ಪಟ್ಟ ದೇವರ ಕಟ್ಟಳೆ ಬೇರೆ ಮನುಷ್ಯರಿಗೆ ಕೊಡಲ್ಪಡಲಿಲ್ಲವಾದದರಿಂದ, ಆ ಕಟ್ಟಳೆಯನ್ನು ಮೀರಿದ ಪಾಪವನ್ನು ಅವನು ಮಾಡಿದ ಪ್ರಕಾರ ಮಿಕ್ಕಾದವರು ಮಾಡಲಿಲ್ಲ. ಆದಾಗ್ಯೂ ಅವರೆಲ್ಲರೂ ಪಾಪವುಳ್ಳವರಾಗಿ ಹುಟ್ಟಿರುವದನ್ನು ನೋಡುವಾಗ, ಆ ದುಃಸ್ವಭಾವವು ಆದಮನಿಂದಲೇ ಅವರಿಗೆ ಉಂಟಾಯಿತು ಎಂಬುವದು ನಿಶ್ಚಯವಾಗಿದೆ.

6. ಒಂದೇ ಅಪರಾಧದ ನಿಮಿತ್ತ ಆಜ್ಞೆನಿರ್ಣಯದ ತೀರ್ಪು ಹುಟ್ಟಿತು. ಅನೇಕ ಅಪರಾಧಗಳು ಮಾಡಿದ ತರುವಾಯ ಕೃಪೆಯಿಂದ ಬರುವ ವರವು ಉಂಟಾಗುವಂತೆ ಆ ಅಪರಾಧಗಳಿಗೆ ಪರಿಹಾರದ ತೀರ್ಪು ಹುಟ್ಟಿತು.

7. ಒಬ್ಬ ಮನುಷ್ಯನ ಅಪರಾಧದಿಂದ ಮರಣವು ಧೊರೆತನ ಮಾಡುವದಾದರೆ, ಪರಮ ಪುರುಷನಾದ ಕ್ರಿಸ್ತನ ಪುಣ್ಯದಿಂದ ಕೃಪೆಯ ಸಂಪೂರ್ಣತೆಯನ್ನೂ, ನೀತಿಯಾದ ವರದ ಪೂರ್ಣತೆಯನ್ನೂ ಹೊಂದಿದವರು, ಆತ್ಮದ ಜೀವವನ್ನೂ ನಿತ್ಯಜೀವವನ್ನೂ ಹೊಂದಿ, ಅರಸರಾಗಿ ಎಂದೆಂದಿಗೂ ಆಳುವರೆಂಬುವದಕ್ಕೆ ಸಂದೇಹವಿಲ್ಲ.



೧೮ [1]ಆದದರಿಂದ ಒಬ್ಬನ ಅಕ್ರಮದಿಂದ ಎಲ್ಲಾ ಮನುಷ್ಯರಿಗೆ ಹ್ಯಾಗೆ ಆಜ್ಞೆನಿರ್ಣಯಕ್ಕಾಯಿತೋ, ಹಾಗೆಯೇ
೧೯ ಒಬ್ಬನ ನೀತಿಯಿಂದ ಎಲ್ಲಾ ಮನುಷ್ಯರಿಗೆ ಜೀವದ ನೀತಿನಿರ್ಣಯಕ್ಕಾಯಿತು. ಹ್ಯಾಗಂದರೆ ಯಾವ
ಪ್ರಕಾರ ಒಬ್ಬನೇ ಮನುಷ್ಯನ ಅವಿಧೇಯತ್ವದಿಂದ ಅನೇಕರಾದವರು ಪಾಪಿಗಳಾಗಲ್ಪಟ್ಟರೋ, ಅದೇ ಪ್ರಕಾರ
ಒಬ್ಬನಾದವನ ವಿಧೇಯತ್ವದಿಂದ ಅನೇಕರಾದವರು ನೀತಿವಂತರಾಗಲ್ಪಡುವರು.
೨೦ ಆದರೆ ಅಕ್ರಮ ಹೆಚ್ಚುವ ಹಾಗೆ, [2]ನ್ಯಾಯಪ್ರಮಾಣವು ನಡುವೆ ಬಂತು. ಆದರೆ ಪಾಪವು ಹೆಚ್ಚಿದಲ್ಲಿ
೨೧ ಕೃಪೆಯು ಮತ್ತೂ ಹೆಚ್ಚಿತು. ಯಾವ ಪ್ರಕಾರ ಪಾಪವು [3]ಮರಣದಲ್ಲಿ ಧೊರೆತನ ಮಾಡಿತೋ, ಅದೇ
ಪ್ರಕಾರ ಕೃಪೆಯು ಸಹ ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದ ನೀತಿಯ ಮುಖಾಂತರ, ನಿತ್ಯಜೀವಕ್ಕಾಗಿ
ಧೊರೆತನ ಮಾಡುವ ಹಾಗೆಯೇ.

ಕ್ರಿಸ್ತನ ಸಂಗಡ ಐಕ್ಯವುಳ್ಳ ಭಕ್ತರು ಪಾಪಕ್ಕೆ ತೊಲಗಿ ಪರಿಶುದ್ಧರಾಗಿ ನಡಿಯ ತಕ್ಕದ್ದು.

## 6. [4]ಹಾಗಾದರೆ, ಏನು ಹೇಳುವ?

---

1. ಈ ವಚನದಲ್ಲಿ ಮೇಲಿನ ವಚನಗಳಲ್ಲಿರುವ ನ್ಯಾಯವನ್ನು ಸ್ಪಷ್ಟವಾಗಿ ತೋರಿಸಿ ಇದೆ. ಒಂದೇ ಅಪರಾಧದಿಂದ ಎಲ್ಲಾ ಮನುಷ್ಯರಿಗೂ ಆಜ್ಞೆ ಬರುವದಾದರೆ, ಒಂದು ಪುಣ್ಯಕ್ರಿಯೆಯಿಂದ ಸಮಸ್ತ ಮನುಷ್ಯರಿಗೂ ಜೀವವುಂಟಾಗುತ್ತದೆ. ಆ ಜೀವವು ಇಹದಲ್ಲಿ ಪ್ರಾರಂಭಿಸಿ, ಪರದಲ್ಲಿ ಸಂಪೂರ್ಣವಾಗುತ್ತದೆ. ಇದನ್ನು ಹೇಳಿದ ತರುವಾಯ ಇದರ ಕೆಳಗೆ ಬರುವ ವಚನದಲ್ಲಿ ೧೨ನೇ ವಚನದಲ್ಲಿರುವ ಸತ್ಯವನ್ನು ತಿರಿಗಿ ಸ್ಪಷ್ಟವಾಗಿ ಹೇಳಿದ್ಧಾನೆ. ಒಬ್ಬನ ಅವಿಧೇಯತ್ವದಿಂದ ಅನೇಕರು ಪಾಪಿಗಳಾದ ಪ್ರಕಾರ, ಪರಮ ಪುರುಷನಾದ ಒಬ್ಬನ ವಿಧೇಯತ್ವದಿಂದ ಅನೇಕರು ನೀತಿವಂತರಾಗುತ್ತಾರೆ. ಸದ್ಗುರುವಾದ ಕ್ರಿಸ್ತನ ಮಹಾ ಪುಣ್ಯವನ್ನು ಆತುಕೊಂಡಿರುವ ಸಮಸ್ತರೂ ಆತನ ನೀತಿಯನ್ನು ಹೊಂದಿ, ಎಂದೆಂದಿಗೂ ಮಹಿಮೆಯಾಗಿ ಜೀವಿಸುವರು.

2. ನ್ಯಾಯಪ್ರಮಾಣವು ಬಂದದರಿಂದ ಪಾಪವು ಹೆಚ್ಚಾಗಲಿಲ್ಲ. ಆದಾಗ್ಯೂ ಅದರಿಂದ ಪಾಪದ ಹೆಚ್ಚುವಿಕೆ ತೋರಲಾಯಿತು. ನೀರಿನ ಹೆಚ್ಚುವಿಕೆಯನ್ನು ನೆಡಲ್ಪಟ್ಟ ಸ್ತಂಭದಲ್ಲಿರುವ ಗೆರೆಗಳು ತೋರಿಸುವ ಪ್ರಕಾರ, ಪಾಪದ ಹೆಚ್ಚುವಿಕೆಯನ್ನು ದೈವಕಟ್ಟಳೆಗಳುಳ್ಳ ನ್ಯಾಯಪ್ರಮಾಣವು ತೋರಿಸಿತು. (೭. ೧೩.) ಹೀಗೆ ಪಾಪವು ಹೆಚ್ಚಿದ್ದ ಸ್ಥಳದಲ್ಲಿ ಕೃಪೆ ಅಧಿಕವಾಗಿ ಹೆಚ್ಚಿತು. ಆದಮನಿಂದ ಜನ್ಮಪಾಪವು ಬಂತು ಅಂದರೆ, ಕ್ರಿಸ್ತನಿಂದ ಜನ್ಮಪಾಪ ಮಾತ್ರವಲ್ಲ, ಕರ್ಮಪಾಪಗಳು ಸಹ ತೊಲಗುತ್ತವೆ. ಆದದರಿಂದ ಪಾಪವು ಹೆಚ್ಚಿದಲ್ಲಿ ಕೃಪೆ ಅಧಿಕವಾಗಿ ಹೆಚ್ಚಿತೆಂದು ಹೇಳುವದು ಯಥಾರ್ಥವಾಯಿತು. ಹೀಗೆ ನ್ಯಾಯಪ್ರಮಾಣವು ಪಾಪದ ಹೆಚ್ಚುವಿಕೆಯನ್ನು ತೋರಿಸಿದ್ದರಿಂದಲೂ, ಸುವಾರ್ತೆಯ ಅವಶ್ಯವನ್ನು ತಿಳಿಯ ಪಡಿಸಿದ್ದರಿಂದಲೂ ಅದು ಬಹು ಮುಖ್ಯವಾದದ್ದೆಂದು ತಿಳಿಯಬಹುದು. (೭. ೭—೧೧. ಗಲಾ. ೩. ೧೯. ಮತ್ತಾ. ೧೦. ೩೪, ೩೫. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.)

3. ಮರಣವು ಧೊರೆತನ ಮಾಡಿತೆಂದು ೧೭ನೇ ವಚನದಲ್ಲಿ ಹೇಳಿ ಇತ್ತು. ಈ ವಚನದಲ್ಲಿ ಪಾಪವು ಧೊರೆತನ ಮಾಡಿತು ಎಂದು ಹೇಳಿ ಇದೆ. ಮನುಷ್ಯರು ನಾಶವಾಗುವದಕ್ಕೆ ಪಾಪವೇ ಕಾರಣವು. ದೇವರ ಪರಿಶುದ್ಧ ಪ್ರಮಾಣಕ್ಕೆ ಇದೇ ದೊಡ್ಡ ಶತ್ರುವು. ಪಾಪದ ಆಳಿಕೆ ಮರಣದಲ್ಲಿ ತೋರುವ ಪ್ರಕಾರ, ಯೇಸು ಕ್ರಿಸ್ತನ ನೀತಿಯಿಂದ ಉಂಟಾದ ಕೃಪೆಯ ಆಳಿಕೆಯು ನಿತ್ಯಜೀವದಲ್ಲಿ ತೋರ ಬರುವದು. ಆದದರಿಂದ ನಮ್ಮ ಶರೀರವನ್ನೂ ಆತ್ಮವನ್ನೂ ನಶಿಸ ಮಾಡುವ ಪಾಪಕ್ಕೆ ತೊಲಗಿ, ಸದ್ಗುರುವನ್ನು ಶರಣು ಹೊಕ್ಕು ಆತನ ಕೃಪೆಯಿಂದ ನಿತ್ಯಜೀವವನ್ನು ಹೊಂದಲಿಕ್ಕೆ ಪ್ರಯಾಸ ಪಡುವ.

4. ಕ್ರಿಸ್ತನ ಮಹಾ ಪುಣ್ಯದಿಂದ ನೀತಿವಂತರಾದವರು ಪರಿಶುದ್ಧವಂತರಾಗಿ ನಡೆದು ಪರಮಗತಿ ಹೊಂದುವರೆಂದು ಅಪೊಸ್ತಲನು ಈ ಸಂಧಿಯಲ್ಲಿ ತೋರಿಸುತ್ತಾನೆ. ಆತನ ಸ್ನಾನದಲ್ಲಿಯೂ ಮರಣದಲ್ಲಿಯೂ ಜೀವದಲ್ಲಿಯೂ ಕ್ರಿಸ್ತನ ಸಂಗಡ ಐಕ್ಯವಾದವರೂ, (೬. ೧—೧೧.) ಪರಮ ಅರಸನಾದ ಆತನ ಆಳಿಕೆಗೆ ಒಳಗಾದವರೂ ಆದ ಭಕ್ತರು (೧೨—೧೪.) ಕೃಪೆ ಹೆಚ್ಚಾಗುವ ಹಾಗೆ ಪಾಪದಲ್ಲಿ ನಿಲ್ಲಲಾರರು. ನ್ಯಾಯಪ್ರಮಾಣದ ಕ್ರಿಯೆಗಳಿಂದ ನೀತಿವಂತರಾಗಲಾರರು ಎಂಬುವದು ನಿಶ್ಚಯವಾದಾಗ್ಯೂ, ಅದರಿಂದ ಪಾಪ ಮಾಡ ಬಹುದೆಂದು ಎಣಿಸ ಬಾರದು. ನಾವು ನ್ಯಾಯಪ್ರಮಾಣಕ್ಕೊಳಗಾದವರಾಗಿರದೆ ಇದ್ದಾಗ್ಯೂ, ಸುವಾರ್ತೆಯ ಪ್ರಮಾಣಕ್ಕೊಳಗಾದವರಾಗಿದ್ಧೇವೆ. (೧೫—೨೩.) ನ್ಯಾಯಪ್ರಮಾಣಕ್ಕೆ ಸತ್ತವರ ಹಾಗಿದ್ದರೂ, ಕ್ರಿಸ್ತನ ದಿವ್ಯ ಊಳಿಗವನ್ನು ಮಾಡುವ ಹಂಗುಳ್ಳವರಾಗಿದ್ಧೇವೆ. (೭. ೧—೬.) ನ್ಯಾಯಪ್ರಮಾಣವು ಪಾಪಸ್ವಭಾವವುಳ್ಳದ್ದೆಂದೂ, ಅಥವಾ ಅದು ಒಳ್ಳೇದಾಗಿದ್ದರೂ ಮರಣವನ್ನು ಉಂಟು ಮಾಡುವಂಥಾದ್ದೆಂದೂ ನೆನಸ ಬಾರದು. ಅದು ಪಾಪವನ್ನು ತಿಳಿಯ ಪಡಿಸಿ, ಅದರ ಅಘೋರವನ್ನು ಮನಸ್ಸಾಕ್ಷಿಗೆ ಗ್ರಹಿಸ ಮಾಡುವದರಿಂದ ಅದು ಪಾಪವುಳ್ಳದ್ದಲ್ಲ. (೭—೧೨.) ನಾವು ಅದನ್ನು ಅನುಸರಿಸದ ಪಕ್ಷದಲ್ಲಿಯೂ ನ್ಯಾಯಪ್ರಮಾಣವು ಆತ್ಮದ ಸ್ವಭಾವವುಳ್ಳದ್ದಾಗಿರುವದರಿಂದ ಮರಣವು ಅದರಿಂದ ಉಂಟಾಗದೆ ಪಾಪದಿಂದಲೇ ಉಂಟಾಗುತ್ತದೆ. (೧೩—೧೭.) ಆದಾಗ್ಯೂ ನಮ್ಮ ಪಾಪಗುಣದಿಂದ ನ್ಯಾಯಪ್ರಮಾಣವು ನಮ್ಮನ್ನು ನೀತಿವಂತರಾಗ ಮಾಡಲಾರದೆ ಇರುವ ಪ್ರಕಾರ, ಪರಿಶುದ್ಧರಾಗ ಮಾಡಲೂ ಸಾಮರ್ಥ್ಯವಿಲ್ಲದ್ದರಿಂದ ನಮ್ಮನ್ನು ನಿರ್ಬಂಧವಾದ ಸ್ಥಿತಿಗೆ ಒಳ ಪಡಿಸುತ್ತದೆ. (೧೮—೨೪.) ಇಂಥಾ ನಿರ್ಬಂಧ ಸ್ಥಿತಿಯಲ್ಲಿರುವ ನಮಗೆ ದಯಾನಿಧಿಯಾದ ಕ್ರಿಸ್ತನು ಸುವಾರ್ತೆಯ ಶ್ರೇಷ್ಠ ಆಶೀರ್ವಾದಗಳನ್ನು ಕೊಟ್ಟು ಸಹಾಯ ಮಾಡುತ್ತಾನೆ. ಆತ್ಮಭಾವದ ಹೊಸ ಸ್ವಭಾವಕ್ಕೂ ಮಾಂಸಭಾವದ ಹಳೇ ಸ್ವಭಾವಕ್ಕೂ ಎಡೆ ಬಿಡದ ಹೋರಾಟವಿದ್ದಾಗ್ಯೂ, (೨೫. ವ.) ದೈವಸನ್ನಿಧಿಯಲ್ಲಿ ನೀತಿವಂತರಾದೇವು ಎಂಬುವದನ್ನು ಕುರಿತು ಕ್ರಿಸ್ತನು ಮನಸ್ಸಿನಲ್ಲಿ ನಿಶ್ಚಯ ಉಂಟು ಮಾಡುತ್ತಾನೆ; ಮತ್ತು ಪರಿಶುದ್ಧಾ

೨ [1]ಕೃಪೆಯು ಹೆಚ್ಚುವ ಹಾಗೆ ಪಾಪದಲ್ಲಿ ನಿಲ್ಲೋಣೋ? ಆಗದು. ಪಾಪಕ್ಕೆ [2]ಸತ್ತವರಾದ ನಾವು ಇನ್ನು
ಹ್ಯಾಗೆ ಆದರಲ್ಲಿ ಬದುಕುವೆವು?
೩ ಏನು! [3]ಕ್ರಿಸ್ತ ಯೇಸುವಿಗಾಗಿ ಸ್ನಾನ ಹೊಂದಿದವರಷ್ಟು ಅವನ ಮರಣಕ್ಕಾಗಿ ಸ್ನಾನ ಹೊಂದಿದೆವೆಂದು
೪ ಅರಿಯರಾ? ಹಾಗಾದರೆ, ಯಾವ ಪ್ರಕಾರ ಕ್ರಿಸ್ತನು [4]ತಂದೆಯ ಮಹಿಮೆಯಿಂದ ಸತ್ತವರೊಳಗಿಂದ ಎಬ್ಬಿಸ
ಲ್ಪಟ್ಟನೋ, ಅದೇ ಪ್ರಕಾರ ನಾವು ಸಹ ಹೊಸ ಜೀವದಲ್ಲಿ ನಡೆದು ಕೊಳ್ಳುವ ಹಾಗೆ, ಅವನ ಸಂಗಡ ಸ್ನಾನ
ದಿಂದ ಮರಣಕ್ಕಾಗಿ ಹೂಣಲ್ಪಟ್ಟೆವು.
೫ ಯಾಕಂದರೆ ಅವನ ಮರಣದ ಹೋಲಿಕೆಯಾಗಿ [5]ಕೂಡ ನೆಡಲ್ಪಟ್ಟವರಾಗಿದ್ದರೆ, ಅವನ ಪುನರುತ್ಥಾನದ
೬ ಹೋಲಿಕೆಯಾಗಿಯೂ ಇರುವೆವು. ಪಾಪಶರೀರವು ನಾಶವಾಗಿ, ನಾವು ಪಾಪಕ್ಕೆ ಇನ್ನು ಸೇವೆ ಮಾಡದ
೭ ಹಾಗೆ, ನಮ್ಮ [6]ಹಳೇ ಮನುಷ್ಯನು ಕೂಡ ಶಿಲುಬೆಗೆ ಹಾಕಲ್ಪಟ್ಟನೆಂಬುವದನ್ನು ತಿಳಿದಿದ್ದೇವೆ. ಯಾಕಂದರೆ
ಸತ್ತವನು ಪಾಪದೊಳಗಿಂದ [7]ನೀತಿನಿರ್ಣಯ ಪಟ್ಟಿದ್ದಾನೆ.
೮,೯ ನಾವು ಕ್ರಿಸ್ತನ ಸಂಗಡ ಸತ್ತವರಾದರೆ, ಅವನ ಸಂಗಡ ಬದುಕುವೆವೆಂದು ನಂಬುತ್ತೇವೆ. ಕ್ರಿಸ್ತನು
ಸತ್ತವರೊಳಗಿಂದ ಎಬ್ಬಿಸಲ್ಪಟ್ಟು, ಇನ್ನು ಸಾಯನೆಂದು ಬಲ್ಲೆವು. ಮರಣವು ಇನ್ನು ಅವನನ್ನು ಆಳುವದಿಲ್ಲ.

ತ್ಮನ ಸಹಾಯದಿಂದ ನ್ಯಾಯಪ್ರಮಾಣವನ್ನು ಕೈಕೊಳ್ಳುವ ಶಕ್ತಿಯನ್ನು ಕೊಡುತ್ತಾನೆ. (೮. ೧—೯.) ಹೀಗೆ ಪರಿಶುದ್ಧಾತ್ಮನಿಂದ ನಡಿಸಲ್ಪಡುವವರು ಪುನರುತ್ಥಾನದ ಮಹಾ ದಿವಸದಲ್ಲಿ ನಿತ್ಯವಾದ ಮನೆಯಲ್ಲಿ ಎಂದೆಂದಿಗೂ ಮಹಿಮೆ ಹೊಂದಿ ವಿರಾಜಿಸುವರು. (೧೦—೧೩.) ಮತ್ತು ಅವರು ಪುತ್ರಸ್ವೀಕಾರವನ್ನೂ, ಕ್ರಿಸ್ತನ ಸಂಗಡ ನಿತ್ಯ ಬಾಧ್ಯತೆಯನ್ನೂ ಹೊಂದುವರು. (೧೪—೧೭.) ಸರ್ವಸೃಷ್ಟಿಯ ಹಾಗೆ ಕ್ರಿಸ್ತನನ್ನು ಹೊಂದಿದ ಭಕ್ತರು ಈ ಲೋಕದಲ್ಲಿ ಉಪದ್ರ ಪಟ್ಟಾಗ್ಯೂ, ಆ ಉಪದ್ರಗಳಲ್ಲಿ ಸಹಾಯ ಮಾಡತಕ್ಕ ಪರಿಶುದ್ಧಾತ್ಮನೆಂಬ ವರವನ್ನು ಅವರು ಹೊಂದಿರುವದರಿಂದ ದೇವರ ನಿರ್ಣಯದ ಪ್ರಕಾರ ಕಡೆಯಲ್ಲಿ ಅವರ ಉಪದ್ರವೆಲ್ಲಾ ನಿತ್ಯ ಸುಖಕ್ಕೆ ಮಾರ್ಪಡುವದೆಂದೂ, ಅವರು ಸುಖ ಹೊಂದಿ ಬಾಳುವರೆಂದೂ ನಿಶ್ಚಯವಾಗಿ ತಿಳಿಯ ತಕ್ಕದ್ದು. (೧೮—೩೦.) ಇಂಥಾ ಮೇಲುಗಳು ಅವರಿಗೆ ದೊರಕುವದು ನಿಶ್ಚಯವೆಂಬುವದನ್ನು ಮೊದಲನೇದು, ದೇವರ ಪ್ರೀತಿಯ ಶ್ರೇಷ್ಠ ವರವಾದ ಕ್ರಿಸ್ತನು ಅವರಿಗೆ ಸ್ವಂತವಾಗಿರುವದರಿಂದಲೂ, ಎರಡನೇದು, ದೇವರೇ ಅವರನ್ನು ನೀತಿವಂತರಾಗ ಮಾಡುವದರಿಂದಲೂ, ಒಬ್ಬನಾದರೂ ಅವರ ಮೇಲೆ ತಪ್ಪು ಹೊರಿಸ ಹೇತುವೆ ಇಲ್ಲದ್ದರಿಂದಲೂ, ಮೂರನೇದು, ದೇವರ ಪ್ರೀತಿ ಮಾರ್ಪಡದೆ ಇರುವದರಿಂದಲೂ ತಿಳಿಯಬಹುದು. (೩೧—೩೯.)

1. ೫ ಸಂಧಿ ೨೦ನೇ ವಚನದಿಂದ ಕೃಪೆ ಹೆಚ್ಚಾಗುವಂತೆ ಪಾಪದಲ್ಲಿ ನಿಲ್ಲ ಬಹುದೋ? ಎಂದು ಒಂದು ಆಕ್ಷೇಪಣೆ ಹೇಳ ತಕ್ಕದ್ದಾಗಿತ್ತು. (೩. ೫—೮.) ಆ ತಪ್ಪಾದ ಯೋಚನೆಯನ್ನು ಈ ಸಂಧಿಯಲ್ಲಿ ಚನ್ನಾಗಿ ಖಂಡಿಸಿ ಇದೆ.

2. ಸತ್ತವನು ಬದುಕಲಾರದ ಪ್ರಕಾರ ಪಾಪಕ್ಕೆ ಸತ್ತವರು ಅದನ್ನು ತಿರಿಗಿ ಮಾಡುವದು ಅಸಾಧ್ಯವು. ಪಾಪಕ್ಕೆ ಸತ್ತವರು ಅಂದರೆ, ಅದಕ್ಕೆ ಪೂರ್ಣವಾಗಿ ತೊಲಗಿದವರು, ಅಥವಾ ಪಾಪವನ್ನು ಅಸಹಿಸುವವರೆಂಬ ಅರ್ಥವು.

3. ಕ್ರಿಸ್ತ ಯೇಸುವಿನಲ್ಲಿ ಸ್ನಾನ ಹೊಂದುವದು, ಪಾಪಕ್ಕೆ ಸತ್ತವರಿಗೆ ಗುರುತಾಗಿದೆ. ಎರಡನೇ ಆದಮನಾದ ಕ್ರಿಸ್ತನು ವಿಶ್ವಾಸಿಗಳೆಂಬ ಹೊಸ ಸಂತತಿಗೆ ತಲೆಯಾಗಿರುವದರಿಂದ, (೬. ವ. ೫. ೧೮, ೧೯. ೧ ಕೊರಿ. ೧೫. ೪೫—೪೯.) ಇದು ಆತನ ಸಂಗಡ ಐಕ್ಯವಾಗುವದನ್ನು ಕುರಿತದ್ದು. ಹೀಗೆ ಸ್ನಾನದ ಮೂಲಕವಾಗಿ ಆತನ ಸಂಗಡ ಐಕ್ಯವಾಗುವವರು ಆತನ ಹಾಗೆ ನಡಿಯತಕ್ಕದ್ದು. ಆತನಂತೆ ಪರಿಶುದ್ಧವಾಗಿ ನಡಿಯುವವರು ಪಾಪವನ್ನು ಮಾಡುವದು ಹ್ಯಾಗೆ?

4. ತಂದೆಯ ಮಹಿಮೆ ಎಂಬುವದು ತಂದೆಯ ಮಹಿಮೆಯನ್ನು ಪ್ರಕಟ ಮಾಡುವ ಬಲವನ್ನು ಕುರಿತದ್ದು. ಕ್ರಿಸ್ತನು ಸತ್ತದ್ದರಿಂದ ಆತನು ಪಾಪಾತ್ಮರಿಗೆ ರಕ್ಷಕನಾದನು. (ಯೋಹಾ. ೧೨. ೨೪.) ಆತನು ಸತ್ತ ಮೇಲೆ ಹೂಣಲ್ಪಟ್ಟನು. ಹೂಣಿಡುವದು ಮರಣ ಹೊಂದಿದ್ದಕ್ಕೆ ದೃಷ್ಟಾಂತವಾಗಿದೆ. ಹೀಗೆ ಸತ್ತು ಹೂಣಲ್ಪಟ್ಟ ಕ್ರಿಸ್ತನು ತಂದೆಯ ಬಲದಿಂದ ತಿರಿಗಿ ಜೀವಿಸಿ ಎದ್ದ ಪ್ರಕಾರ, ಸ್ನಾನದ ಮೂಲಕವಾಗಿ ಕ್ರಿಸ್ತನ ಸಂಗಡ ಸತ್ತು ಹೂಣಲ್ಪಟ್ಟವರು ಆತನ ಸಂಗಡ ಜೀವಿಸಿ ಎದ್ದು ಹೊಸ ಜೀವವುಳ್ಳವರಾಗಿ ನಡಿಯುವರು.

5. ಒಂದು ಮರವು ಇನ್ನೊಂದು ಮರದೊಂದಿಗೆ ಅಂಟಿ ಕೊಂಡು ಬೆಳೆಯುವ ಪ್ರಕಾರ, ವಿಶ್ವಾಸದಿಂದ ಸ್ನಾನ ಹೊಂದಿದವರು ಕ್ರಿಸ್ತನೆಂಬ ದ್ರಾಕ್ಷೇ ಗಿಡದಲ್ಲಿ ಅಂಟಿ ಕೊಂಡಿರುವ ಕುಡಿಗಳಾಗಿ ಚನ್ನಾಗಿ ಬೆಳೆಯುವರು. ಮರಣದಲ್ಲಿ ಆತನ ಸಂಗಡ ಜೋಡಿಸಲ್ಪಟ್ಟಿರುವವರು ಪುನರುತ್ಥಾನದಲ್ಲಿಯೂ ಆತನ ಸಂಗಡ ಅಗಲದೆ ಕೂಡಿಸಲ್ಪಟ್ಟಿರುವರು.

6. ಹಳೇ ಮನುಷ್ಯನು ಅಂದರೆ, ಹಳೇ ದುಸ್ವಭಾವವು. ಇದಕ್ಕೆ ಪಾಪಶರೀರವೆಂದೂ ಈ ವಚನದಲ್ಲಿ ಹೆಸರು ಕೊಡಲ್ಪಟ್ಟಿದೆ. ಪಾಪದ ಇಚ್ಛೆಗಳು ವಾಸ ಮಾಡುವ ಈ ಶರೀರವು ಕ್ರಿಸ್ತನ ಶಿಲುಬೆಯಲ್ಲಿ ಜಡಿಯಲ್ಪಟ್ಟಿದೆ. ಶಿಲುಬೆಯಲ್ಲಿ ಜಡಿಯಲ್ಪಟ್ಟ ಮನುಷ್ಯನ ಪ್ರಾಣವು ದಿನ ದಿನಕ್ಕೆ ಕುಗ್ಗಿ ಕಡೆಯಲ್ಲಿ ಇಲ್ಲದೆ ಹೋಗುವ ಪ್ರಕಾರ ಭಕ್ತರಲ್ಲಿ ವಾಸ ಮಾಡಿ ಕೊಂಡಿರುವ ಪಾಪವು ದಿನ ದಿನಕ್ಕೆ ಕಡಿಮೆಯಾಗಿ ಕಡೆಯಲ್ಲಿ ಪೂರ್ಣವಾಗಿ ನಾಶ ಹೊಂದುವದು.

7. ಒಬ್ಬ ದಾಸನು ಮರಣದಿಂದ ತನ್ನ ಕಠಿಣವಾದ ದಾಸತ್ವಕ್ಕೆ ಬಿಡುಗಡೆಯಾಗುವ ಪ್ರಕಾರ (೬. ವ.) ಕ್ರಿಸ್ತನ ಸಂಗಡ ಸಾಯುವ ಭಕ್ತನು ಪಾಪವೆಂಬ ಕಠಿಣವಾದ ದಾಸತ್ವಕ್ಕೆ ತಪ್ಪಿಸಿ ಕೊಂಡು ಜೀವ ಹೊಂದಿ ಬದುಕುವನು. (೮, ೯. ವ.)



೧೦ ಯಾಕಂದರೆ ಅವನು ಸತ್ತದ್ದು, ಒಂದೇ ಸಾರಿ [1]ಪಾಪಕ್ಕೆ ಸತ್ತನು; ಆದರೆ, ಅವನು ಬದುಕುವದು, ದೇವರಿಗೆ
೧೧ ಬದುಕುತ್ತಾನೆ. ಹಾಗೆಯೇ ನೀವೂ ನಿಮ್ಮನ್ನು ಪಾಪಕ್ಕೆ ಸತ್ತವರೆಂದೂ, ನಮ್ಮ ಕರ್ತನಾದ ಕ್ರಿಸ್ತ ಯೇಸು
ವಿನಲ್ಲಿ ದೇವರಿಗೆ ಬದುಕುವವರೆಂದೂ, ಎಣಿಸಿ ಕೊಳ್ಳಿರಿ.
೧೨ ಹಾಗಾದರೆ, ಪಾಪವು [2]ನಿಮ್ಮ ಮರ್ತ್ಯ ಶರೀರದಲ್ಲಿ—ನೀವು ಅದರ ಆಶೆಗಳಿಗೆ ವಿಧೇಯರಾಗುವ ಹಾಗೆ—
೧೩ ಆಳದೆ ಇರಲಿ. ಮತ್ತು ನಿಮ್ಮ ಅಂಗಗಳನ್ನು ಅನೀತಿಯ ಆಯುಧಗಳಾಗಿ ಪಾಪಕ್ಕೆ ಒಪ್ಪಿಸದೆ, ನಿಮ್ಮನ್ನು
ದೇವರಿಗೆ ಸತ್ತವರೊಳಗಿಂದ ಬದುಕುವವರಾಗಿಯೂ, ನಿಮ್ಮ ಅಂಗಗಳನ್ನು ದೇವರಿಗೆ ನೀತಿಯ ಆಯುಧಗ
೧೪ ಳಾಗಿಯೂ ಒಪ್ಪಿಸಿರಿ. ಯಾಕಂದರೆ ಪಾಪವು ನಿಮ್ಮನ್ನು ಆಳುವದಿಲ್ಲ; ಯಾಕಂದರೆ [3]ನ್ಯಾಯಪ್ರಮಾಣ
ಕ್ಕೊಳಗಾಗಿರದೆ, ಕೃಪೆಗೊಳಗಾಗಿದ್ದೀರಿ.
೧೫ ಹಾಗಾದರೇನು? ನ್ಯಾಯಪ್ರಮಾಣಕ್ಕೊಳಗಾಗಿರದೆ, ಕೃಪೆಗೊಳಗಾಗಿರುವದರಿಂದ ಪಾಪ ಮಾಡೋಣೋ?
೧೬ ಆಗದು. ನಿಮ್ಮನ್ನು ಯಾವದಕ್ಕೆ [4]ದಾಸರಾಗಿ ವಿಧೇಯತ್ವಕ್ಕಾಗಿ ಒಪ್ಪಿಸುತ್ತೀರೋ—ಮರಣಕ್ಕಾಗಿ ಪಾಪ
ಕ್ಕಾದರೂ, ನೀತಿಗಾಗಿ ವಿಧೇಯತ್ವಕ್ಕಾದರೂ—ಯಾವದಕ್ಕೆ ವಿಧೇಯರಾಗಿದ್ದೀರೋ, ಅದಕ್ಕೆ ದಾಸರಾಗಿ
೧೭ ದ್ದೀರೆಂದು ಅರಿಯರಾ? ಆದರೆ ನೀವು ಪಾಪದ ದಾಸರಾಗಿದ್ದವರಾದರೂ, ನಿಮಗೆ ಒಪ್ಪಿಸಲ್ಪಟ್ಟ [5]ಬೋಧ
೧೮ ನೆಯ ಪ್ರಮಾಣಕ್ಕೆ ಹೃದಯದಿಂದ ವಿಧೇಯರಾದದರಿಂದ, [6]ದೇವರಿಗೆ ಸ್ತೋತ್ರವು. ಮತ್ತು ಪಾಪದಿಂದ
೧೯ ಬಿಡಿಸಲ್ಪಟ್ಟು, ನೀತಿಗೆ ದಾಸರಾದಿರಿ. ನಿಮ್ಮ ಮಾಂಸದ ಅಶಕ್ತಿಯ ನಿಮಿತ್ತ, ಮನುಷ್ಯರೀತಿಯಾಗಿ ಹೇಳು
ತ್ತೇನೆ. ಹ್ಯಾಗಂದರೆ, ಯಾವ ಪ್ರಕಾರ ನಿಮ್ಮ ಅಂಗಗಳನ್ನು ಅನ್ಯಾಯಕ್ಕಾಗಿ ಅಶುದ್ಧತ್ವಕ್ಕೂ ಅನ್ಯಾಯಕ್ಕೂ
ದಾಸರಾಗಿ ಒಪ್ಪಿಸಿದಿರೋ, ಅದೇ ಪ್ರಕಾರ, ಈಗ ನಿಮ್ಮ ಅಂಗಗಳನ್ನು ಪರಿಶುದ್ಧವಾಗುವದಕ್ಕಾಗಿ, [7]ನೀತಿಗೆ
ದಾಸರಾಗಿ ಒಪ್ಪಿಸಿರಿ.

1. ನಮಗೆ ಹೊಣೆಗಾರನಾಗಿದ್ದ ಕ್ರಿಸ್ತನು ಮರಣದ ಮುಟ್ಟಿಗೂ ಪಾಪದ ಆಜ್ಞೆಗೊಳಗಾಗಿದ್ದನು. (೯. ವ.) ಆತನ ಪುಣ್ಯಮರಣವು ಪಾಪವನ್ನು ಪೂರ್ಣವಾಗಿ ನಾಶ ಮಾಡಿತು. ಈಗ ಆತನು ಅದರ ಫಲವನ್ನು ಅನುಭವಿಸುವವನಾಗಿ ದೇವರಿಗಾಗಿ ಬದುಕುತ್ತಾನೆ. (೧೦. ವ.) ಆತನ ಸಂಗಡ ಐಕ್ಯ ಪಟ್ಟ ಕ್ರೈಸ್ತರು ಸಹ ಅದೇ ಪ್ರಕಾರ ದೇವರಿಗೆಂದು ಎಂದೆಂದಿಗೂ ಬದುಕುತ್ತಿರುವರು. (೧೧. ವ.)

2. ನಿಮ್ಮ ಮರ್ತ್ಯಶರೀರ ಅಂದರೆ, ಸಾವು ಈಗಲೇ ತನ್ನ ಕ್ರಿಯೆ ನಡಿಸುವ ಶರೀರವೆಂಬ ಅರ್ಥವು. ಮರಣದ ಗುರುತುಗಳು ಶರೀರದಲ್ಲಿ ಪ್ರತ್ಯಕ್ಷವಾಗಿ ಕಾಣುವದರಿಂದಲೂ, ಒಬ್ಬ ಮನುಷ್ಯನ ಗುಣಕ್ಕೆ ತಕ್ಕದ್ದಾಗಿ ಶರೀರದ ಅಂಗಗಳು ಒಳ್ಳೇ ಕ್ರಿಯೆಯನ್ನಾದರೂ ಕೆಟ್ಟ ಕ್ರಿಯೆಯನ್ನಾದರೂ ನಡಿಸ ತಕ್ಕ ಆಯುಧಗಳಾಗಿರುವದರಿಂದಲೂ, ಈ ವಚನದಲ್ಲಿ ಮುಖ್ಯವಾಗಿ ಶರೀರವನ್ನು ಕುರಿತು ಹೇಳಿ ಇದೆ. ಪಾಪವೆಂಬ ಕ್ರೂರ ಅರಸನಿಗೆ ದಾಸರಾಗಿರದೆ, ಕೂಲಿಗೆ ಕೆಲಸ ಮಾಡುವವರ ಹಾಗೆ ಶರೀರದ ಅಂಗಗಳನ್ನು ಆ ಅರಸನ ಸೇವೆಗೆ ಒಪ್ಪಿಸದೆ, ಸ್ವಾಧೀನರ ಹಾಗೆ, ರಕ್ಷಣೆಯ ನಾಯಕನಾದ ಕ್ರಿಸ್ತನಿಗೆ ಊಳಿಗ ಮಾಡುವವರಾಗಿರ ಬೇಕೆಂಬುವದೇ ಇದರ ತಾತ್ಪರ್ಯವು.

3. ಮನುಷ್ಯನು ಪಾಪದ ದಂಡನೆಗೂ ಅದರ ಕೇಡಿಗೂ ತಪ್ಪುವದು ನ್ಯಾಯಪ್ರಮಾಣದಿಂದಲಾಗದೆ, ಸುವಾರ್ತೆಯ ಪ್ರಮಾಣದಿಂದ ಆಗುತ್ತದೆ. ಇದು ಕರುಣಾನಿಧಿಯಾದ ದೇವರ ಉಚಿತವಾದ ಕಟಾಕ್ಷದಿಂದ ನೀತಿವಂತರಾಗ ಬಹುದೆಂಬುವ ಸತ್ಯವನ್ನು ಹೇಳಿ, ಪ್ರೀತಿ ನಂಬಿಕೆ ಮುಂತಾದ ಸದ್ಗುಣಗಳನ್ನು ಪಾಪಿಯ ಅಂತರ್ಯದಲ್ಲಿ ಹುಟ್ಟಿಸಿ, ಕೃತಜ್ಞತೆಯಾದ ಮನಸ್ಸಿನಿಂದ ದೇವರಿಗೆ ಸೇವೆ ಮಾಡ ಪ್ರೇರೇಪಿಸುತ್ತದೆ. ಈ ಬೋಧನೆಯನ್ನು ಕುರಿತೂ, ಇದರ ವಿಷಯ ಹೇಳಲ್ಪಡುವ ಆಕ್ಷೇಪಣೆಗಳನ್ನು ಕುರಿತೂ ಮುಂದೆ ಬರುವ ಸಂಧಿಯಲ್ಲಿ ವಿವರವಾಗಿ ತೋರಿಸಿ ಇದೆ. ನ್ಯಾಯಪ್ರಮಾಣದ ಕೆಳಗಿರದೆ ಕೃಪೆಯ ಕೆಳಗಿರುವ ಕ್ರಿಸ್ತನ ದಾಸರು ಪಾಪದ ಸೇವೆಯನ್ನು ಅಸಹಿಸಿ, ದೇವರ ಸೇವೆಯನ್ನು ಮನೋತ್ಸಾಹವಾಗಿ ಮಾಡುವರು.

4. ಕೆಲಸದವನು ಯಜಮಾನನಿಗೆ ವಿಧೇಯನಾಗಿರ ಬೇಕಾದ ಪ್ರಕಾರ, ಮನುಷ್ಯನು ಒಬ್ಬ ಯಜಮಾನನಿಗೆ ವಿಧೇಯನಾಗಿರಬೇಕು. ಪಾಪವು ಒಂದು ಯಜಮಾನನಾಗಿಯೂ, ಪರಿಶುದ್ಧತ್ವವು ಒಂದು ಯಜಮಾನನಾಗಿಯೂ ಇರುತ್ತವೆ. ಪಾಪಕ್ಕೆ ಸೇವೆ ಮಾಡುವದರಿಂದ ಮರಣವೂ, ಪರಿಶುದ್ಧತ್ವಕ್ಕೆ ಸೇವೆ ಮಾಡುವದರಿಂದ ನೀತಿಯೂ ನಿತ್ಯಜೀವವೂ ಉಂಟಾಗುತ್ತವೆ. (೨೨. ವ. ೧೮. ವ.)

5. ಬೋಧನೆಯ ಪ್ರಮಾಣವಂದರೆ ಮೂಲ ಭಾಷೆಯ ತಾತ್ಪರ್ಯದ ಪ್ರಕಾರ, ಬೋಧನೆಯ ಅಚ್ಚು ಎಂಬ ಅರ್ಥವು. ಶೀಸವನ್ನು ಕರಗಿಸಿ ಅಚ್ಚಿನಲ್ಲಿ ಹೊಯಿದರೆ ರೂಪ ಉಂಟಾಗುವ ಪ್ರಕಾರ, ದೇವರ ಸತ್ಯವೆಂಬ ಅಚ್ಚಿನಲ್ಲಿ ಸದ್ಗುಣವು ರೂಪವಾಗುತ್ತದೆ.

6. ಪಾಪಕ್ಕೆ ಸೇವೆ ಮಾಡಿದವರು ಪರಿಶುದ್ಧತ್ವಕ್ಕೆ ಸೇವೆ ಮಾಡುವದಕ್ಕೆ ಸಮ್ಮತಿಸಿದ್ದರಿಂದ ದೇವರನ್ನು ಸ್ತುತಿಸುತ್ತಾನೆ.

7. ನೀತಿಗೆ ದಾಸರು ಎಂಬುವದರಿಂದ ಕ್ರಿಸ್ತನ ಶಿಷ್ಯರು ಯಥಾರ್ಥವಾಗಿ ದಾಸರೆಂದು ನೆನಸ ಬಾರದು. (ಯೋಹಾ. ೮. ೩೬.) ಮಾಂಸವು ಬಲಹೀನವಾಗಿರುವದರಿಂದ ಪರಿಶುದ್ಧತ್ವದಲ್ಲಿ ಪೂರ್ಣಪಕ್ವವಾಗದೆ ಇರುವ ಭಕ್ತರಿಗೆ ಕ್ರಿಸ್ತನ ಸೇವೆ ಒಂದಾವರ್ತಿ ಭಾರವಾಗಿರುವದು. ಆದಾಗ್ಯೂ ಅಶುದ್ಧತ್ವವನ್ನೂ ಪಾಪವನ್ನೂ ನಡಿಸ, ಶರೀರ ಆತ್ಮಗಳನ್ನು ಒಂದಾಗಿ ಒಪ್ಪಿಸಿ ಕೊಟ್ಟ ಪ್ರಕಾರ, ಪರಿಶುದ್ಧತ್ವವನ್ನೂ ನೀತಿಯನ್ನೂ ನಡಿಸುವದಕ್ಕೆ ಅದೇ ಮೇರೆಗೆ ಒಬ್ಬನು ತನ್ನನ್ನು ಪೂರ್ಣವಾಗಿ ಒಪ್ಪಿಸ ಬೇಕಾದದ್ದು ಅವಶ್ಯವೆಂಬುವದೇ ಈ ವಚನದ ತಾತ್ಪರ್ಯವು.

೨೦, ೨೧ ಯಾಕಂದರೆ, ನೀವು ಪಾಪಕ್ಕೆ ದಾಸರಾಗಿರುವಾಗ್ಯೆ, [1]ನೀತಿಗೆ ಬಿಡುಗಡೆಯಾಗಿದ್ದಿರಿ. ಹಾಗಾದರೆ,
ಯಾವವುಗಳಿಗೆ ಈಗ ನಾಚಿಕೆ ಪಡುತ್ತೀರೋ, ಅವುಗಳಿಂದ ಆಗ ಏನು ಫಲವನ್ನು ಹೊಂದಿದಿರಿ? ಯಾಕಂ
೨೨ ದರೆ ಅವುಗಳ ಅಂತ್ಯವು ಮರಣವೇ. ಆದರೆ ಈಗ ಪಾಪಕ್ಕೆ ಬಿಡುಗಡೆಯಾಗಿ, ದೇವರಿಗೆ ದಾಸರಾಗಿ,
೨೩ ನಿಮ್ಮ ಫಲವನ್ನು ಪರಿಶುದ್ಧತ್ವಕ್ಕಾಗಿ ಹೊಂದುತ್ತೀರಿ; ಅಂತ್ಯವೋ, ನಿತ್ಯಜೀವವೇ. ಯಾಕಂದರೆ [2]ಪಾಪದ
ಸಂಬಳವು ಮರಣವು; ಆದರೆ ದೇವರ ಕೃಪೆಯ ವರವು ನಮ್ಮ ಕರ್ತನಾದ ಯೇಸುವಿನಲ್ಲಿರುವ ನಿತ್ಯಜೀವವು.

ಭಕ್ತರು ನ್ಯಾಯಪ್ರಮಾಣದ ಕೆಳಗೆ ಅಲ್ಲ, ಕೃಪೆಯ ಕೆಳಗೆ ಇದ್ಧಾರೆಂಬುವದೂ;
ನ್ಯಾಯಪ್ರಮಾಣವು ಶ್ರೇಷ್ಠವಾದದ್ದಾದರೂ ರಕ್ಷಣೆಯ ವಿಷಯದಲ್ಲಿ ಶಕ್ತಿ ಇಲ್ಲದ್ದಾಗಿದೆ ಎಂಬುವದೂ.

7. ನ್ಯಾಯಪ್ರಮಾಣವನ್ನು ತಿಳಿದವರ ಸಂಗಡ ಮಾತಾಡುತ್ತೇನೆ. ಏನು, ಸಹೋದರರೇ, ನ್ಯಾಯಪ್ರಮಾ
ಣವು [3]ಮನುಷ್ಯನನ್ನು, ಅವನು ಬದುಕುವ ಮಟ್ಟಿಗೂ, ಆಳುತ್ತದೆ ಎಂದು [4]ಅರಿಯರಾ?
೨ ಹ್ಯಾಗಂದರೆ, ಗಂಡನಿಗೆ ಅಧೀನಳಾದ ಹೆಂಡತಿಯು ಬದುಕುವ ಗಂಡನಿಗೆ ನ್ಯಾಯದಿಂದ ಕಟ್ಟಲ್ಪಟ್ಟಿದ್ಧಾಳೆ.
೩ ಆದರೆ ಗಂಡನು ಸತ್ತರೆ, [5]ಗಂಡನ ನ್ಯಾಯದಿಂದ ಬಿಡಿಸಲ್ಪಟ್ಟಿದ್ಧಾಳೆ. ಹಾಗಾದರೆ, ಗಂಡನು ಬದುಕುತ್ತಿರು
ವಾಗ, ಬೇರೆ ಗಂಡನಿಗೆ ಶೇರಿ ಕೊಂಡರೆ, ವ್ಯಭಿಚಾರಿ ಎಂದು ಕರೆಯಲ್ಪಡುವಳು. ಆದರೆ ಗಂಡನು ಸತ್ತರೆ,
ಆ ನ್ಯಾಯಕ್ಕೆ ಬಿಡಿಸಲ್ಪಟ್ಟಿದ್ಧಾಳೆ; ಆದ ಕಾರಣ ಬೇರೆ ಗಂಡನಿಗೆ ಶೇರಿ ಕೊಂಡರೂ, ವ್ಯಭಿಚಾರಿಯಾಗಿರುವದಿಲ್ಲ.
೪ [6]ಹಾಗೆಯೇ, ನನ್ನ ಸಹೋದರರೇ, ನಾವು ದೇವರಿಗೆ ಫಲ ಫಲಿಸುವದಕ್ಕೋಸ್ಕರ, ಸತ್ತವರೊಳಗಿಂದ ಎದ್ದಿ
ರುವ ಬೇರೊಬ್ಬನಿಗೆ ಶೇರಿ ಕೊಳ್ಳುವ ಹಾಗೆ, ನೀವು ಸಹ ಕ್ರಿಸ್ತನ ಶರೀರದ ಮೂಲವಾಗಿ ನ್ಯಾಯಪ್ರಮಾ
ಣಕ್ಕೆ ಸತ್ತವರಾದಿರಿ.
೫ ಯಾಕಂದರೆ ನಾವು ಮಾಂಸದಲ್ಲಿರಲಾಗಿ, ನ್ಯಾಯಪ್ರಮಾಣದಿಂದ ಆದ [7]ಪಾಪಗಳ ಇಚ್ಛೆಗಳು ಮರಣಕ್ಕೆ
೬ ಫಲ ಫಲಿಸುವ ಹಾಗೆ, ನಮ್ಮ ಅಂಗಗಳಲ್ಲಿ ಚುರುಕಾಗಿದ್ದವು. ಆದರೆ ಈಗ ಯಾತರಲ್ಲಿ ಹಿಡಿಯಲ್ಪಟ್ಟಿವೋ,

1. ನೀವು ಪಾಪಕ್ಕೆ ಸೇವೆ ಮಾಡುವಾಗ, ನೀತಿಯ ಅಧಿಕಾರಕ್ಕೆ ತೊಲಗಿದವರಾಗಿದ್ದಿರಿ. ಇಂಥಾ ಸ್ವಾಧೀನದಿಂದ ನಿಮಗೆ ಬಂದ ಫಲವು ನಾಚಿಕೆಯೂ ಮರಣವೂ ಹೊರ್ತು ಬೇರೊಂದಲ್ಲ. ಈಗ ನೀವು ನೀತಿಗೆ ದಾಸರಾಗಿರುವದರಿಂದ ಪಾಪಕ್ಕೆ ತೊಲಗಿದವರಾಗಿದ್ಧೀರಿ. ಮತ್ತು ಇಹದಲ್ಲಿ ಪರಿಶುದ್ಧತ್ವವನ್ನೂ ಪರದಲ್ಲಿ ನಿತ್ಯಜೀವವನ್ನೂ ಹೊಂದುವವರಾಗಿದ್ಧೀರಿ ಎಂಬುವದು ಪೌಲನ ಅಭಿಪ್ರಾಯವು. (೨೩. ವ.)

2. ಸಂಬಳವೆಂಬುವದು ರಾಣುವೆಯವರಿಗೆ ದೊರಕುವ ಕೂಲಿಯನ್ನು ಕುರಿತದ್ದು. (ಲೂಕ. ೩. ೧೪. ೧ ಕೊರಿ. ೯. ೭.) ಪಾಪವೆಂಬ ಧೊರೆಯು ತನ್ನನ್ನು ಸೇವಿಸುವ ದಾಸರಿಗೆ ಕೊಡುವ ಕೂಲಿಯು ಮರಣವೇ. ದೇವರು ತನ್ನ ದಾಸರಿಗೆ ಉಚಿತವಾಗಿ ಕೊಡುವ ವರವು ನಿತ್ಯಜೀವವು. ಇದು ಕರ್ತನಾದ ಯೇಸು ಕ್ರಿಸ್ತನಿಂದಲೇ ಉಂಟಾಗುತ್ತದೆ. (೧ ಯೋಹಾ. ೫. ೧೧.)

3. (೧ ಕೊರಿ. ೭. ೩೯.) ನಾವು ನ್ಯಾಯಪ್ರಮಾಣದ ಕೆಳಗೆ ಇರುವದಿಲ್ಲವೆಂದು, ೬. ೧೪ಲ್ಲಿ ಹೇಳಿರುವದರಿಂದ ಯಾವದೊಂದು ನ್ಯಾಯಪ್ರಮಾಣವೂ ಇಲ್ಲದೆ ತನ್ನ ಇಷ್ಟ ಬಂದ ಪ್ರಕಾರ ನಡೆದು ಸಕಲ ಅಕ್ರಮಗಳನ್ನೂ ಮಾಡ ಬಹುದು ಎಂಬುವ ವಿಪರೀತ ಅರ್ಥ ಮಾಡ ಬಾರದು ಎಂದು ಪೌಲನು ೬. ೧೫—೨೨. ವರೆಗೂ ತೋರಿಸಿದ ತರುವಾಯ ಈ ಸಂಧಿಯಲ್ಲಿಯೂ ಅದನ್ನೇ ದೃಷ್ಟಾಂತ ಪಡಿಸುತ್ತಾನೆ.

4. ಈ ವಚನಗಳಲ್ಲಿ ಹೇಳಿರುವ ದೃಷ್ಟಾಂತವು ಯೆಹೂದ್ಯರಿಗೂ ಜನಾಂಗಗಳವರಿಗೂ ಹುದುವಾದದ್ದೆಂದು ತಿಳಿಯ ತಕ್ಕದ್ದು. ಮರಣದಿಂದ ಸಕಲ ಕಟ್ಟುಗಳೂ ಸಂಬಂಧಗಳೂ ಬಿಟ್ಟು ಹೋಗುವವೆಂದು ಎಲ್ಲರಿಗೂ ತಿಳಿದ ಧರ್ಮಶಾಸ್ತ್ರ ಸಮ್ಮಂಧವಾದ ಒಂದು ವಿಷಯವು ಇದರಲ್ಲಿ ತೋರಿಸಲ್ಪಟ್ಟದೆ.

5. ಗಂಡನು ಸತ್ತ ಕೂಡಲೇ ಹೆಂಡತಿಯು ಬಿಡಿಸಲ್ಪಟ್ಟಿದ್ಧಾಳೆ. ನ್ಯಾಯಪ್ರಮಾಣವು ಹಳೇ ಗಂಡನು. ಕ್ರಿಸ್ತನು ಹೊಸಬನು. ನ್ಯಾಯಪ್ರಮಾಣವಾದ ಹಳೇ ಗಂಡನು ಸತ್ತದ್ದರಿಂದ ನಾವು ಆ ಪ್ರಮಾಣಕ್ಕೆ ಬಿಡುಗಡೆಯನ್ನು ಹೊಂದಿ ಕ್ರಿಸ್ತನ ಸಂಗಡ ಐಕ್ಯರಾದೆವು.

6. ಕ್ರಿಸ್ತನ ಮರಣದಿಂದ ಆತನ ದಾಸರು ನ್ಯಾಯಪ್ರಮಾಣಕ್ಕೆ ಸತ್ತವರ ಹಾಗಿದ್ಧಾರೆ. ಮತ್ತು ಆತ್ಮಸಮ್ಮಂಧದಿಂದ ಆತನ ಸಂಗಡ ಐಕ್ಯವಾಗಿ, ಆತನ ಮೇಲಿರುವ ಪ್ರೀತಿಯಿಂದ ಆತನ ಪ್ರಮಾಣಗಳಿಗೆ ವಿಧೇಯರಾಗಿ ನಡೆಯುತ್ತಾರೆ. (ಎಫೇ. ೫. ೩೨.)

7. ಪಾಪಗಳ ಇಚ್ಛೆಗಳು ಅಂದರೆ, ಪಾಪದಲ್ಲಿ ಹುಟ್ಟಿ, ಪಾಪದಲ್ಲಿ ನಡಿಸುವಂಥ ದುರಿಚ್ಛೆಗಳು. ನಾವು ಮಾಂಸಭಾವದಲ್ಲಿರುವಾಗ ದೇವರ ಚಿತ್ತಕ್ಕೆ ವಿಧೇಯರಾಗದೆ ಸ್ವಂತ ಚಿತ್ತದ ಪ್ರಕಾರ ದುರ್ಮಾರ್ಗರಾಗಿ ನಡೆದ ಕಾಲದಲ್ಲಿ (ಯೋಹಾ. ೩. ೬.) ನ್ಯಾಯಪ್ರಮಾಣದ ಪರಿಶುದ್ಧ ಕಟ್ಟಳೆಗಳು ಈ ದುರಿಚ್ಛೆಗಳನ್ನು ಪ್ರಕಟ ಮಾಡಲೂ, ಅವುಗಳಿಂದುಂಟಾಗುವ ನಷ್ಟವನ್ನೂ ಮರಣವನ್ನೂ ತಿಳಿಯ ಮಾಡಲೂ ಹೇತುವೆಯಾಗಿದ್ದವು. (೭, ೮. ವ.)



ಆ ನ್ಯಾಯಪ್ರಮಾಣಕ್ಕೆ [1]ಸತ್ತವರಾಗಿದ್ದು, ಅದರಿಂದ ಬಿಡಿಸಲ್ಪಟ್ಟಿದ್ಧೇವೆ. ನಾವು ಹಳೇ ಅಕ್ಷರದಲ್ಲಿ ಅಲ್ಲ,
ಹೊಸ ಆತ್ಮದಲ್ಲಿ ಸೇವಿಸುವದಕ್ಕೋಸ್ಕರವೇ.
೭ ಹಾಗಾದರೆ, ಏನು ಹೇಳುವ? [2]ನ್ಯಾಯಪ್ರಮಾಣವು ಪಾಪವೋ? ಆಗದು. ಆದರೆ ನ್ಯಾಯಪ್ರಮಾಣ
ದಿಂದಲೇ ಹೊರ್ತು, ಪಾಪವನ್ನು ಅರಿಯದೆ ಇದ್ದೆನು. ಹ್ಯಾಗಂದರೆ ನ್ಯಾಯಪ್ರಮಾಣವು, ನೀನು ಆಶಿಸ
೮ ಬೇಡವೆಂದು (ಹೊರ. ೨೦. ೧೭.) ಹೇಳದೆ ಇದ್ದರೆ, [3]ಆಶೆಯನ್ನು ಅರಿಯದೆ ಇದ್ದೆನು. ಆದರೆ ಪಾಪವು
ಕಟ್ಟಳೆಯಿಂದ ಸಮಯ ತಕ್ಕೊಂಡು, ನನ್ನಲ್ಲಿ ಸಕಲ ವಿಧವಾದ ಆಶೆಗಳನ್ನು ಉಂಟು ಮಾಡಿತು.
೯ ಯಾಕಂದರೆ ನ್ಯಾಯಪ್ರಮಾಣವಿಲ್ಲದೆ ಪಾಪವು [4]ಸತ್ತದೆ. ನಾನೇ ಒಂದು ಕಾಲದಲ್ಲಿ ನ್ಯಾಯಪ್ರಮಾಣ
೧೦ ವಿಲ್ಲದೆ [5]ಬದುಕುತ್ತಿದ್ದೆನು; ಆದರೆ ಕಟ್ಟಳೆ ಬಂದಾಗ, ಪಾಪವು ತಿರಿಗಿ ಬದುಕಿತು; ನಾನು ಸತ್ತೆನು. ಹೀಗೆ
೧೧ ಜೀವಕ್ಕಾದ ಕಟ್ಟಳೆಯೇ ಮರಣಕ್ಕಾಯಿತೆಂದು, ನಾನು ಕಂಡು ಕೊಂಡೆನು. ಹ್ಯಾಗಂದರೆ, ಪಾಪವು
ಕಟ್ಟಳೆಯಿಂದ ಸಮಯ ತಕ್ಕೊಂಡು, [6]ನನ್ನನ್ನು ವಂಚಿಸಿ, ಅದರಿಂದ ನನ್ನನ್ನು ಕೊಂದು ಹಾಕಿತು.
೧೨ ಆದದರಿಂದ [7]ನ್ಯಾಯಪ್ರಮಾಣವು ಪರಿಶುದ್ಧವಾದದ್ದು, ಕಟ್ಟಳೆಯು ಪರಿಶುದ್ಧವಾಗಿಯೂ, ನೀತಿಯಾ
ಗಿಯೂ, ಒಳ್ಳೇದಾಗಿಯೂ ಅದೆ.

1. ನಾವು ಕ್ರಿಸ್ತನ ಸಂಗಡ ಸತ್ತವರಾದದರಿಂದ, ನಮ್ಮನ್ನು ಬಿಗಿಯಾಗಿ ಕಟ್ಟಿದ್ದ ನ್ಯಾಯಪ್ರಮಾಣಕ್ಕೆ ಬಿಡುಗಡೆಯಾಗಿ, ಮನೋತ್ಸಾಹದಿಂದ ದೇವರಿಗೆ ಸೇವೆ ಮಾಡುತ್ತೇವೆ. ಈ ಸೇವೆಯು ನ್ಯಾಯಪ್ರಮಾಣದ ಅಕ್ಷರಸಮ್ಮಂಧವಾದ ದಾಸತ್ವದ ಸೇವೆಯಾಗಿರದೆ, ಪರಿಶುದ್ಧಾತ್ಮನ ಕೃಪೆಯಿಂದ ಉಂಟಾಗುವ ಹೊಸ ಆತ್ಮಕ್ಕೆ ತಕ್ಕ ಸೇವೆಯು. (೨ ಕೊರಿ. ೩. ೬.)

2. ನ್ಯಾಯಪ್ರಮಾಣವು ಪಾಪದ ಇಚ್ಛೆಗಳನ್ನು ಎಬ್ಬಿಸಿ ಬಿಡುವಂತೆ ೫ನೇ ವಚನದಲ್ಲಿ ಹೇಳಿರುವದರಿಂದ, ಅದು ಪಾಪವೋ? ಎಂದು ಆಕ್ಷೇಪಣೆ ಹುಟ್ಟುತ್ತದೆ. ಅದಕ್ಕೆ ಈ ವಚನದಲ್ಲಿಯೂ ತರುವಾಯ ಬರುವ ವಚನಗಳಲ್ಲಿಯೂ ಸಮಾಧಾನ ಹೇಳಿ ಇದೆ. ನ್ಯಾಯಪ್ರಮಾಣಕ್ಕೆ ಬಿಡುಗಡೆಯಾಗುವದು ಪಾಪಕ್ಕೆ ಬಿಡುಗಡೆಯಾದದ್ದೆಂದೂ, (೧—೪.) ನ್ಯಾಯಪ್ರಮಾಣಕ್ಕೆ ಒಳಪಟ್ಟಿರುವದರಿಂದ ಉಂಟಾಗುವ ಫಲವು ಮರಣವೆಂದೂ (೫. ವ.) ಹೇಳಿದ್ದದರಿಂದ ನ್ಯಾಯಪ್ರಮಾಣವೂ ಪಾಪವೂ ಒಂದೇ ಎಂದು ನೆನಸುವಿರೋ? ಹಾಗೆ ಎಂದಿಗೂ ಇಲ್ಲ. ನ್ಯಾಯಪ್ರಮಾಣದಿಂದ ಪಾಪವನ್ನು ತಿಳಿಯುವ ತಿಳುವಳಿಕೆಯೂ, (೩. ೨೦.) ಪಾಪದ ಗ್ರಹಿಕೆಯೂ (೭. ವ.) ಮನಸ್ಸಿನಲ್ಲಿ ವಾಸ ಮಾಡುವ ದುರಿಚ್ಛೆಗಳ ಕೇಡೂ (೮. ವ.) ತೋರ ಬರುವದು ಯಥಾರ್ಥವಾದಾಗ್ಯೂ, ನ್ಯಾಯಪ್ರಮಾಣವು ಪಾಪವಲ್ಲ, ಅದು ಪಾಪವನ್ನು ಹುಟ್ಟಿಸುವದೂ ಇಲ್ಲ, ಅದು ತನ್ನಲ್ಲಿ ಪಾಪಸ್ವಭಾವವುಳ್ಳದ್ದಲ್ಲ. ನೀರಿನ ಕೊಡದಲ್ಲಿ ಕೆಳಗಡೆ ನಿಂತಿರುವ ಒಂಡನ್ನು ಕದರುವ ಒಂದು ಕೋಲಿನಂತೆ ನ್ಯಾಯಪ್ರಮಾಣವು ಮನುಷ್ಯನ ಹೃದಯದಲ್ಲಿ ಸ್ವಾಭಾವಿಕವಾಗಿ ತಂಗಿರುವ ಪಾಪವನ್ನು ತೋರಿಸುವದೇ ಹೊರ್ತು ಬೇರೊಂದಲ್ಲ.

3. ಆಶೆ ಎಂಬುವದು ಸಕಲ ದುರಾಶೆಗಳನ್ನು ಕುರಿತದ್ದು. ಆದಾಗ್ಯೂ ಅದು ತನಗೆ ತಕ್ಕದ್ದಲ್ಲದ ವಸ್ತುಗಳನ್ನು ಆಶಿಸುವ ದುರ್ಗುಣಕ್ಕೆ ಹೆಸರಾಗಿದೆ. ಇದು ಮುಖ್ಯವಾಗಿ ಹತ್ತನೇ ಕಟ್ಟಳೆಗೆ ವಿರೋಧವಾಗಿರುವ ಪಾಪವು.

4. ೫ನೇ ವಚನದಲ್ಲಿ ಹೇಳಿದ ಸತ್ಯವನ್ನು ಪೌಲನು ತನ್ನ ಸ್ವಂತ ಅನುಭವದಿಂದ ದೃಷ್ಟಾಂತ ಪಡಿಸುತ್ತಾನೆ. ನ್ಯಾಯಪ್ರಮಾಣದ ಖಂಡಿತವಾದ ಏರ್ಪಾಟುಗಳು ಇಲ್ಲದಿದ್ದರೆ, ಹೃದಯದಲ್ಲಿ ಮರೆಯಾಗಿರುವ ಪಾಪವು ಬಹಿರಂಗವಾಗಿ ತೋರಲಾರದು. ಮಾಡ ಬಾರದೆಂದು ಹೇಳಿದವುಗಳನ್ನು ಮಾಡುವದೂ, ಆಶಿಸ ಬಾರದೆಂದು ಹೇಳಿದವುಗಳನ್ನು ಆಶಿಸುವದೂ ಮನುಷ್ಯರ ಸ್ವಭಾವವಾಗಿದೆ. (ಸಾಮ. ೯. ೧೭.) ನ್ಯಾಯಪ್ರಮಾಣವಿಲ್ಲದಿದ್ದರೆ, ಪಾಪವು ಸತ್ತ ಹಾಗಿರುವದು. ಆದಾಗ್ಯೂ ನಿದ್ರೆ ಮಾಡುವ ಸರ್ಪಕ್ಕೆ ವಿಷವಿಲ್ಲವೆಂದು ಯಾರು ಹೇಳುವರು?

5. ಈ ವಚನದಲ್ಲಿ ನಾನೇ ಎಂಬುವದು ದೃಢ ವಾಕ್ಯ. ಇಲ್ಲಿ ಹೇಳಲ್ಪಡುವದೆಲ್ಲಾ ಬೇರೊಬ್ಬರಿಂದ ಕೇಳಿದ್ದೂ ಅಲ್ಲ, ಮನೋಭಾವನೆಯದೂ ಅಲ್ಲ; ನಾನೇ ನನ್ನ ಸ್ವಂತ ಅನುಭವದಲ್ಲಿ ಕಂಡ ಕಾರ್ಯವಾಗಿದೆ. ಒಂದು ಕಾಲದಲ್ಲಿ ನಾನು ನ್ಯಾಯಪ್ರಮಾಣದ ಅಂತರಾರ್ಥವನ್ನು ಗ್ರಹಿಸದೆ, ಮನೋಸಮಾಧಾನವುಳ್ಳವನಾಗಿ ಜೀವಿಸಿದೆನು. ಆದರೆ ದೇವರ ಕಟ್ಟಳೆಯು ಜ್ಞಾನಬಲದಿಂದ ನನ್ನ ಮನಸ್ಸಾಕ್ಷಿಗೆ ತಗಲಿದಾಗ, ನಾನು ನನ್ನ ಬಲವನ್ನೂ ಸಂತೋಷವನ್ನೂ ಕಳಕೊಂಡು ಸತ್ತವನಾದೆನು. ನನ್ನ ಸುಖಕ್ಕೂ ಸಮಾಧಾನಕ್ಕೂ ಹೇತುವೆಯಾಗಿದ್ದ ಕಟ್ಟಳೆಯು ಪಾಪಜನ್ಮಿಯಾದ ನನ್ನ ವಿಷಯದಲ್ಲಿ ಮರಣಕ್ಕೆ ಹೇತುವೆಯಾಗಿತ್ತೆಂದು ಪೌಲನು ತನ್ನ ಸ್ವಂತ ಅನುಭವವನ್ನು ಹೇಳುತ್ತಾನೆ.

6. ಪಿಶಾಚನು ಸರ್ಪರೂಪವಾಗಿ ಬಂದು ಹವ್ವಳನ್ನು ವಂಚಿಸಿದ ಪ್ರಕಾರ, ಅವಲಕ್ಷಣರೂಪವುಳ್ಳ ಪಾಪವು ನ್ಯಾಯಪ್ರಮಾಣವನ್ನು ಆಯುಧವಾಗಿ ಹಿಡಿದು, ನನ್ನನ್ನು ವಂಚಿಸಿತು. (ಉತ್ಪ. ೩. ೫. ೨ ಕೊರಿ. ೧೧. ೩.)

7. ನ್ಯಾಯಪ್ರಮಾಣದಿಂದ ಉಂಟಾಗುವ ಫಲವು ಎಂಥಾದ್ದಾಗಿದ್ದರೂ, ಅದು ತನ್ನಷ್ಟಕ್ಕೆ ತಾನೇ ಪರಿಶುದ್ಧವಾದದ್ದಾಗಿದೆ. ಬೆಳಕು ಅಶುದ್ಧತ್ವವನ್ನು ಬಹಿರಂಗವಾಗಿ ತೋರಿಸಿದಾಗ್ಯೂ, ಅದು ಅಶುಚಿಯಾಗದೆ ಇರುವ ಪ್ರಕಾರ, ನ್ಯಾಯಪ್ರಮಾಣವು ಪಾಪವನ್ನು ಬಹಿರಂಗವಾಗಿ ತೋರಿಸಿದಾಗ್ಯೂ, ಪಾಪವು ಅದಕ್ಕೆ ಅಂಟಲಾರದು. ನ್ಯಾಯಪ್ರಮಾಣವೂ ಅದರಲ್ಲಿರುವ ಒಂದೊಂದು ಕಟ್ಟಳೆಯೂ ಸ್ವಭಾವದಲ್ಲಿ ಪರಿಶುದ್ಧವೂ, ನ್ಯಾಜ್ಯದಲ್ಲಿ ನೀತಿಯೂ, ಗುರಿಯಲ್ಲಿ ಒಳ್ಳೇದಾಗಿಯೂ ಇರುತ್ತದೆ. ಪರಿಶುದ್ಧನೂ ಸಕಲ ಮೇಲುಗಳ ಸ್ವರೂಪಿಯೂ ಆಗಿರುವ ದೇವರು ಕೊಟ್ಟ ನ್ಯಾಯಪ್ರಮಾಣವು ಬೇರೆ ವಿಧವಾಗಿ ಇರಲಾರದು.

೧೩ ಹಾಗಾದರೆ, ಒಳ್ಳೇದು ನನಗೆ ಮರಣವಾಯಿತೋ? ಆಗದು. ಪಾಪವೇ, [1]ಒಳ್ಳೇದರಿಂದ ನನಗೆ ಮರಣ
ವನ್ನು ಉಂಟು ಮಾಡಿ, ಪಾಪವೆಂದು ತೋರುವ ಹಾಗೆಯೂ, ಪಾಪವು ಕಟ್ಟಳೆಯಿಂದ ಬಹು ಹೆಚ್ಚಾಗಿ
ಪಾಪವುಳ್ಳದ್ದಾಗುವ ಹಾಗೆಯೂ, ತಾನೇ.
೧೪ ಯಾಕಂದರೆ ನ್ಯಾಯಪ್ರಮಾಣವು [2]ಆತ್ಮಭಾವವಾಗಿದೆ ಎಂದು ಬಲ್ಲೆವು. ಆದರೆ ನಾನು ಪಾಪಕ್ಕೊಳ
೧೫ ಗಾಗಿ [3]ಮಾರಲ್ಪಟ್ಟು, ಮಾಂಸಭಾವವಾಗಿದ್ದೇನೆ. ಯಾಕಂದರೆ ನಾನು ಮಾಡುವದನ್ನು [4]ಅರಿಯೆನು;
೧೬ ಹ್ಯಾಗಂದರೆ, ಇಚ್ಛೈಸುವದನ್ನು ಮಾಡದೆ, ಹಗೆ ಮಾಡುವದನ್ನೇ ಮಾಡುತ್ತೇನೆ. ಆದರೆ ನಾನು ಇಚ್ಛೈಸ
೧೭ ದ್ದನ್ನು ಮಾಡಿದರೆ, ನ್ಯಾಯಪ್ರಮಾಣವು ಒಳ್ಳೇದೆಂದು ಒಪ್ಪಿಕೊಳ್ಳುತ್ತೇನೆ. ಆದದರಿಂದ ಈಗ ಅದನ್ನು
೧೮ ಮಾಡುವವನು ಇನ್ನು ನಾನಲ್ಲ, ನನ್ನಲ್ಲಿ ವಾಸವಾಗಿರುವ ಪಾಪವೇ. ಯಾಕಂದರೆ, ನನ್ನಲ್ಲಿ—ಅಂದರೆ,
ನನ್ನ ಮಾಂಸದಲ್ಲಿ—ಒಳ್ಳೇದು ವಾಸವಾಗಿರುವದಿಲ್ಲವೆಂದು ಬಲ್ಲೆನು; ಹ್ಯಾಗಂದರೆ ಇಚ್ಛೈಸುವದು ನನಗೆ
೧೯ ಸಿದ್ಧವಾಗಿದೆ; ಆದರೆ ಒಳ್ಳೇದನ್ನು ಮಾಡ ಕಾಣೆನು. [5]ಯಾಕಂದರೆ, ಇಚ್ಛೈಸುವ ಒಳ್ಳೇದನ್ನು ಮಾಡದೆ,
೨೦ ಇಚ್ಛೈಸದ ಕೆಟ್ಟದ್ದನ್ನು ಮಾಡುತ್ತೇನೆ. ಆದರೆ ನಾನು ಇಚ್ಛೈಸದ್ದನ್ನು ಮಾಡಿದರೆ, ಅದನ್ನು ಮಾಡು
೨೧ ವವನು ಇನ್ನು ನಾನಲ್ಲ, ನನ್ನಲ್ಲಿ ವಾಸವಾಗಿರುವ ಪಾಪವೇ. ಆದದರಿಂದ ಒಳ್ಳೇದನ್ನು ಮಾಡ ಬೇಕೆಂದು
೨೨ ಇಚ್ಛೈಸುವ ನನಗೆ ಕೆಟ್ಟದ್ದು ಸಿದ್ಧವಾಗಿದೆ, ಎಂಬುವ ಪ್ರಮಾಣವನ್ನು ಕಾಣುತ್ತೇನೆ. ಹ್ಯಾಗಂದರೆ, ಒಳ
೨೩ ಮನುಷ್ಯನ ಪ್ರಕಾರ ದೇವರ ನ್ಯಾಯಪ್ರಮಾಣದಲ್ಲಿ [6]ಆನಂದ ಪಡುತ್ತೇನೆ. ಆದರೆ ನನ್ನ ಮನಸ್ಸಿನ ಪ್ರಮಾ
ಣದ ಸಂಗಡ ಯುದ್ಧ ಮಾಡಿ, ನನ್ನ ಅಂಗಗಳಲ್ಲಿರುವ ಪಾಪದ ಪ್ರಮಾಣಕ್ಕೆ ನನ್ನನ್ನು ಶೆರೆ ಬೀಳ ಮಾಡುವ
೨೪ ಬೇರೆ ಪ್ರಮಾಣವನ್ನು ನನ್ನ ಅಂಗಗಳಲ್ಲಿ ನೋಡುತ್ತೇನೆ. ಅಯ್ಯೋ! ನಾನು ಸಂಕಟವುಳ್ಳ ಮನುಷ್ಯ! ಈ
೨೫ [7]ಮರಣದ ಶರೀರದಿಂದ ನನ್ನನ್ನು ತಪ್ಪಿಸುವವನ್ಯಾರು? ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ

1. ತನ್ನಲ್ಲಿ ಮೇಲು ಉಳ್ಳದ್ದಾಗಿಯೂ, ಮೇಲನ್ನು ಉಂಟು ಮಾಡ ತಕ್ಕದ್ದಾಗಿಯೂ ಇದ್ದ ಕಟ್ಟಳೆಯಿಂದ ಪಾಪದ ಸ್ವಭಾವವು ಚನ್ನಾಗಿ ತೋರ ಬಂತು. ಅದರ ಅವಲಕ್ಷಣವೂ ಅದರಿಂದಾದ ನಿತ್ಯ ಕೇಡೂ ಸ್ಪಷ್ಟವಾಗಿ ತೋರಿತು.

2. ಆತ್ಮನಾಗಿರುವ ದೇವರು ಕೊಟ್ಟ ಪ್ರಮಾಣವು ಆತನ ದಿವ್ಯ ಲಕ್ಷಣಗಳಿಗೆ ಸರಿಯಾಗಿ ಆತ್ಮಭಾವವುಳ್ಳದ್ದಾಗಿರ ಬೇಕು. ಮನುಷ್ಯನಾದರೆ ಮಾಂಸಕ್ಕೆ ಅಥವಾ ಪಾಪಕ್ಕೆ ದಾಸನಾಗಿದ್ದಾನೆ.

3. ಉತ್ತಮ ಕ್ರೈಸ್ತನು ಪಾಪವನ್ನು ಮಾಡುವ ಹಾಗೆ ಪಾಪಕ್ಕೆ ಮಾರಲ್ಪಟ್ಟವನಲ್ಲ. (೬. ೧೨.) ಆದಾಗ್ಯೂ ಅವನೊಳಗೆ ಇನ್ನೂ ಪಾಪದ ಗುಣಗಳು ವಾಸವಾಗಿರುವದರಿಂದ ಅವು ಕೆಲ ಸಮಯಗಳಲ್ಲಿ ಅವನನ್ನು ಮೇಲ್ಗೊಳ್ಳುವದುಂಟು. ಮಾಂಸದ ಪ್ರಮಾಣವಾದ ಪಾಪದ ಇಚ್ಛೆಗಳಿಗೂ, ದೇವರ ಪ್ರಮಾಣವನ್ನು ಪ್ರೀತಿ ಮಾಡುವ ಭಕ್ತನ ಉತ್ತಮ ಅಪೇಕ್ಷೆಗಳಿಗೂ ಉಂಟಾಗಿರುವ ಹೋರಾಟವನ್ನು ಕುರಿತು ೧೫—೨೫. ವರಿಗೂ ಹೇಳಲ್ಪಟ್ಟದೆ.

4. ಒಬ್ಬ ದಾಸನಾದವನು ತನ್ನ ಇಷ್ಟದ ಪ್ರಕಾರ ನಡಿಯದೆ, ತನ್ನ ಯಜಮಾನನ ಇಷ್ಟದ ಪ್ರಕಾರ ಕಡ್ಡಾಯವಾಗಿ ನಡಿಯುವ ಪ್ರಕಾರವಾಗಿ ಕ್ರೈಸ್ತನು ಇಷ್ಟವಿಲ್ಲದೆ ಪಾಪವನ್ನು ಮಾಡುವವನಾಗಿದ್ದಾನೆ. ಹೀಗೆ ಇಷ್ಟವಿಲ್ಲದೆ ಪಾಪವನ್ನು ಮಾಡಿ, ನ್ಯಾಯಪ್ರಮಾಣವನ್ನು ಮೀರುವದರಿಂದ ನ್ಯಾಯಪ್ರಮಾಣವು ಒಳ್ಳೇದೆಂದೂ, (೧೬. ವ.) ನನ್ನಲ್ಲಿ ದೇವರ ಕೃಪೆಯಿಂದ ಮಾರ್ಪಟ್ಟಿರುವ ಸ್ವಭಾವ ಉಂಟೆಂದೂ ನಾನೇ ಸಾಕ್ಷಿ ಕೊಡುತ್ತೇನೆ. ನನ್ನಲ್ಲಿರುವ ಈ ಶ್ರೇಷ್ಠ ಸ್ವಭಾವವು, ನನ್ನ ಒಳ್ಳೇತನವನ್ನೆಲ್ಲಾ ಕೆಡಿಸುವ ಹಳೇ ಪಾಪಸ್ವಭಾವಕ್ಕೆ ಪೂರ್ಣ ಭೇದವಾಗಿದೆ (೧೮—೨೦.) ಎಂದು ಪೌಲನು ಹೇಳುವದರಿಂದ, ತಾನು ಮಾಡಿದ ಪಾಪಕ್ಕಾಗಲಿ, ಬೇರೆ ಕ್ರೈಸ್ತರು ಮಾಡುವ ಪಾಪಕ್ಕಾಗಲಿ, ಇದನ್ನು ಒಂದು ನೆವವಾಗಿ ಹೇಳದೆ, ನ್ಯಾಯಪ್ರಮಾಣದ ಶ್ರೇಷ್ಠತ್ವವನ್ನೂ, ಉತ್ತಮ ಭಕ್ತನಲ್ಲಿ ಕ್ರಿಯೆ ನಡಿಸುವ ಪಾಪದ ಬಲವನ್ನು ತೆಗೆದು ಹಾಕುವದಕ್ಕೆ ಅದು ಶಕ್ತಿ ಇಲ್ಲದ್ದಾಗಿದೆ ಎಂಬುವದನ್ನೂ ತೋರಿಸುವದಕ್ಕಾಗಿಯೇ ಹೀಗೆ ಹೇಳುತ್ತಾನೆ. ಈ ಪಾಪವು ಒಬ್ಬ ಕ್ರೂರ ಅರಸನ ಹಾಗೆ ಕಠಿಣವಾದ ಪ್ರಮಾಣಗಳಿಂದ ಆಳುತ್ತದೆ. (೨೧—೨೩.) ಅದನ್ನು ಗ್ರಹಿಸಿದ ಕ್ರೈಸ್ತನು ತಾನು ಸಂಕಟವುಳ್ಳವನೆಂದು ಪ್ರಲಾಪಿಸುತ್ತಾನೆ. (೨೪. ವ.) ಈ ಸಂಕಟವನ್ನು ನಿವರ್ತಿ ಮಾಡಿ ಆದರಣೆ ಕೊಡುವ ದೇವರ ಕೃಪೆಯನ್ನು ನೆನಸಿ ಸಂತೋಷಿಸುತ್ತಾನೆ. (೨೫. ವ.) ಅವನು ಸಂತೋಷ ಪಡುವ ಈ ಕಾರ್ಯವನ್ನು ಕುರಿತು ೮ನೇ ಸಂಧಿಯಲ್ಲಿ ವಿವರವಾಗಿ ಹೇಳುತ್ತಾನೆ.

5. ೧೯, ೨೦ನೇ ವಚನಗಳು ಹೆಚ್ಚುಕಡಿಮೆ ೧೫, ೧೬ನೇ ವಚನಗಳಿಗೆ ಸರಿಯಾಗಿವೆ.

6. ಇದು ಮನೋವಾಂಛೆಯನ್ನು ಕುರಿತದ್ದು. ದೇವರ ದಾಸರಿಗೆ ಆತನ ಪರಿಶುದ್ಧ ಕಟ್ಟಳೆಗಳು ಬಹಳ ಪ್ರಿಯವಾದವುಗಳಾಗಿ ಕಾಣುವದರಿಂದ ಅವುಗಳಲ್ಲಿ ಬಹಳ ಸಂತೋಷ ಪಟ್ಟು ನಡಿಯುತ್ತಾರೆ.

7. ಇದು ಮಾಂಸ ಅಥವಾ ಅವಯವಗಳಲ್ಲಿದ್ದು ಮರಣವನ್ನುಂಟು ಮಾಡುವ ಪಾಪದ ಇಚ್ಛೆಗಳನ್ನು ಕುರಿತದ್ದು. (೫. ವ.) ಆದದರಿಂದ ಮರಣದ ಶರೀರವು ಎಂಬುವದೂ, ಪಾಪದ ಶರೀರವೆಂಬುವದೂ ಒಂದೇ ತಾತ್ಪರ್ಯವುಳ್ಳದ್ದು. (೬. ೬. ವಚನದ ವ್ಯಾಖ್ಯಾನ ನೋಡ ಬೇಕು.) ರೋಮಾಯರಲ್ಲಿ ಅಪರಾಧಿಯಾದವನು ಆಜ್ಞೆ ಹೊಂದುವದಕ್ಕಿಂತ ಮುಂಚೆ ಒಂದು ಹೆಣವನ್ನು ಹೊತ್ತು ಕೊಂಡು ತಿರುಗುವಂತೆ ತೀರ್ಪು ಹೊಂದುವನಂತೆ. ಈ ವಾಡಿಕೆಯನ್ನು ಹಿಡಿದು ತಾನು ಪಾಪವಾದ ಹೆಣವನ್ನು ಹೊತ್ತುಕೊಂಡಿರುವವನ ಹಾಗೆ ಪೌಲನು ಮೊರೆ ಇಡುತ್ತಾನೆ.



[1]ದೇವರನ್ನು ಸ್ತುತಿಸುತ್ತೇನೆ. ಹಾಗಾದರೆ, ಈಗ ನಾನೇ ಮನಸ್ಸಿನಿಂದ ದೇವರ ನ್ಯಾಯಪ್ರಮಾಣಕ್ಕೆ, ಆದರೆ
ಮಾಂಸದಿಂದ ಪಾಪದ ಪ್ರಮಾಣಕ್ಕೆ, ಸೇವೆ ಮಾಡುತ್ತೇನೆ.

ಪರಿಶುದ್ಧಾತ್ಮನಿಂದ ಭಕ್ತರಿಗುಂಟಾಗುವ ಆತ್ಮದ ಜೀವ, ಪರಿಶುದ್ಧತ್ವದ ಬೆಳೆಯುವಿಕೆ,
ಪುತ್ರಸ್ವೀಕಾರ ಮುಂತಾದ ಫಲಗಳು.

8. [2]ಆದದರಿಂದ ಈಗ ಕ್ರಿಸ್ತ ಯೇಸುವಿನಲ್ಲಿದ್ದು, ಮಾಂಸದ ಪ್ರಕಾರವಲ್ಲ, ಆತ್ಮದ ಪ್ರಕಾರ ನಡಿಯುವವರಿಗೆ
೨ ಆಜ್ಞೆನಿರ್ಣಯ ಏನೂ ಇಲ್ಲ. ಯಾಕಂದರೆ ಕ್ರಿಸ್ತ ಯೇಸುವಿನಲ್ಲಿರುವ [3]ಜೀವದ ಆತ್ಮದ ನ್ಯಾಯಪ್ರಮಾ
೩ ಣವು ಪಾಪ ಮರಣಗಳ ಪ್ರಮಾಣದಿಂದ ನನ್ನನ್ನು ಬಿಡುಗಡೆ ಮಾಡಿ ಅದೆ. [4]ಯಾಕಂದರೆ ಮಾಂಸದಿಂದ
ಬಲಹೀನವಾಗಿದ್ದ ನ್ಯಾಯಪ್ರಮಾಣಕ್ಕೆ ಅಸಾಧ್ಯವಾದದ್ದನ್ನು ಮಾಡುವದಕ್ಕೆ, ದೇವರು ತನ್ನ ಮಗನನ್ನು
ಪಾಪಮಾಂಸದ ಹೋಲಿಕೆಯಾಗಿಯೂ, ಪಾಪದ ನಿಮಿತ್ತವಾಗಿಯೂ, ಕಳುಹಿಸಿ, ಮಾಂಸದಲ್ಲಿ ಪಾಪಕ್ಕೆ
೪ ಆಜ್ಞೆನಿರ್ಣಯಿಸಿದನು. ಮಾಂಸದ ಪ್ರಕಾರವಲ್ಲ, [5]ಆತ್ಮದ ಪ್ರಕಾರ ನಡೆಯುವ ನಮ್ಮಲ್ಲಿ ನ್ಯಾಯಪ್ರಮಾ
ಣದ ನೀತಿಯು ಪೂರ್ತಿಯಾಗುವದಕ್ಕೆ ಹೀಗಾಯಿತು.
೫ [6]ಯಾಕಂದರೆ ಮಾಂಸದ ಪ್ರಕಾರವಿರುವವರು ಮಾಂಸದವುಗಳ ಮೇಲೆ ಮನಸ್ಸಿಡುತ್ತಾರೆ; ಆತ್ಮದ ಪ್ರಕಾ

1. ಕರ್ತನಾದ ಯೇಸು ಕ್ರಿಸ್ತನಿಂದ ಈ ನಿರ್ಬಂಧವಾದ ಸಂಕಟಕ್ಕೆ ತನ್ನನ್ನು ಬಿಡಿಸಿದ ದಯಾಪರನಾದ ದೇವರನ್ನು ಸ್ತುತಿಸುತ್ತಾನೆ. ಈ ಬಿಡುಗಡೆಯೂ ನಂಬಿಕೆಯೂ ನ್ಯಾಯಪ್ರಮಾಣದಿಂದ ಅಲ್ಲ, ರಕ್ಷಕನಾದ ಕ್ರಿಸ್ತನ ಕೃಪೆಯಿಂದ ಉಂಟಾದದ್ದು. ಆದಾಗ್ಯೂ ದೇವರ ಪ್ರಮಾಣಕ್ಕೂ ಪಾಪದ ಪ್ರಮಾಣಕ್ಕೂ, ಮನಸ್ಸಿಗೂ ಮಾಂಸಕ್ಕೂ ಉಂಟಾಗಿರುವ ಹೋರಾಟವು ದೇವರ ಸನ್ನಿಧಿಯಲ್ಲಿ ನೀತಿನಿರ್ಣಯ ಪಡುವದಕ್ಕೆ ತಡೆಯಲ್ಪಡುವದಿಲ್ಲ. (೮. ೧.) ಮತ್ತು ಪರಿಶುದ್ಧಾತ್ಮನ ಕೃಪೆಯಿಂದ ಇನ್ನು ಪಾಪಕ್ಕೆ ಪೂರ್ಣವಾಗಿ ತೊಲಗಲೂ, ಪರಿಶುದ್ಧತ್ವದಲ್ಲಿ ಸಂಪೂರ್ಣನಾಗಲೂ ಹೇತುವೆಯಾಗಿರುವದು. (೨—೪. ವ.)

ಪೌಲನು ಈ ಸಂಧಿಯಲ್ಲಿ ತಾನು ಗುಣ ಪಡುವದಕ್ಕಿಂತ ಮುಂಚೆ ತನಗಿದ್ದ ಹೋರಾಟವನ್ನು ಕುರಿತು ಹೇಳಿದ್ದಾನೆಂದು ಕೆಲವರು ನೆನಸುತ್ತಾರೆ. ಆದರೆ ಅವನು ಹೇಳಿರುವ ವಿಶೇಷಗಳು ಗುಣಪಟ್ಟ ಉತ್ತಮ ಕ್ರೈಸ್ತರ ಅನುಭವಕ್ಕೆ ಸರಿಯಾಗಿರುವದರಿಂದ, ಅವನು ಗುಣ ಪಟ್ಟ ತರುವಾಯ ಅವನಿಗುಂಟಾಗಿದ್ದ ಹೋರಾಟವನ್ನು ಕುರಿತೇ ಹೇಳುತ್ತಾನೆಂದು ನಿಶ್ಚಯಿಸ ತಕ್ಕದ್ದು. (ಗಲಾ. ೫. ೧೭.)

2. ದೇವಭಕ್ತರಲ್ಲಿ ನಡಿಯುತ್ತಾ ಇರುವ ಹೋರಾಟವು ಇನ್ನೂ ಮುಗಿಯದೆ ಇದ್ದಾಗ್ಯೂ, (೭. ೨೫.) ಅವರಿಗೆ ಈಗಲೇ ಬಿಡುಗಡೆಯುಂಟಾಗಿದೆ. ಆದದರಿಂದ ಅವರಿಗೆ ಈಗಲೇ ಆಜ್ಞೆನಿರ್ಣಯವಿಲ್ಲ. ಈ ಪ್ರಕಾರ ಅವರು ಈಗಲೇ ನೀತಿನಿರ್ಣಯ ಪಡುವ ಕಾರಣದ ದೆಶೆಯಿಂದಲೇ ಅವರು ಪ್ರಲಾಪಿಸಿ ಕೊಂಡಿರುವ ಕಾರ್ಯವು ಅವರಿಗೆ ಜಯಪ್ರದವಾಗಿ ಮುಗಿಯುವದು. (೨೪, ೨೫. ವ.)

3. ಇದು ಜೀವದ ಆತ್ಮನಿಂದ ಕೊಡಲ್ಪಟ್ಟ ಸುವಾರ್ತೆಯ ಪ್ರಮಾಣವನ್ನು ಸೂಚಿಸುತ್ತದೆ. ಅಲ್ಲದಿದ್ದರೆ ಪರಿಶುದ್ಧಾತ್ಮನು ಭಕ್ತರ ಹೃದಯದಲ್ಲಿ ಬರೆಯುವ ಪರಿಶುದ್ಧ ಪ್ರಮಾಣವಾಗಿರುತ್ತದೆ. ಇದಕ್ಕೆ ಮನಸ್ಸಿನ ಪ್ರಮಾಣವೆಂದೂ ಹೆಸರುಂಟು. ಇದು ಅಂಗಗಳಲ್ಲಿ ಕ್ರಿಯೆ ಮಾಡುವ ಪ್ರಮಾಣವು, ಅಥವಾ ಪಾಪ ಮರಣಗಳ ಪ್ರಮಾಣಕ್ಕೆ ಕ್ರಿಸ್ತನ ದಾಸರನ್ನು ತೊಲಗಿಸಿ ರಕ್ಷಿಸುವಂಥಾದ್ದು.

4. ೨ನೇ ವಚನದಲ್ಲಿ ಹೇಳಿರುವ ವಿಷಯಕ್ಕೆ ಮುಖಾಂತರವು ಇದರಲ್ಲಿ ಅಡಗಿ ಇದೆ. ಮನುಷ್ಯನ ಕೆಟ್ಟು ಹೋದ ಸ್ಥಿತಿಯಿಂದ ನ್ಯಾಯಪ್ರಮಾಣವು ಪಾಪಕ್ಷಮೆಯನ್ನಾದರೂ ಪರಿಶುದ್ಧತ್ವವನ್ನಾದರೂ ಉಂಟು ಮಾಡ ಶಕ್ತಿ ಇಲ್ಲದ್ದಾಗಿದ್ದಾಗ್ಯೂ, (ಗಲಾ. ೩. ೨೧.) ನ್ಯಾಯಪ್ರಮಾಣದ ನೀತಿ ನಮ್ಮಲ್ಲಿ ಈಡೇರುವ ಉದ್ದಿಶ್ಯ (೪. ವ.) ಕೃಪೆಯುಳ್ಳ ದೇವರು ಸ್ವಲ್ಪವಾದರೂ ಪಾಪವಿಲ್ಲದ ತನ್ನ ಪರಿಶುದ್ಧ ಕುಮಾರನನ್ನು ನಮ್ಮ ಪಾಪಮಾಂಸದ ಹೋಲಿಕೆಯನ್ನು ಧರಿಸಿಕೊಳ್ಳಲೂ, ಪಾಪನಿವಾರಣಬಲಿಯಾಗಲೂ ಈ ಭೂಲೋಕಕ್ಕೆ ಕಳುಹಿಸಿದನು. (ಇಬ್ರಿ. ೧೦. ೬, ೧೮.) ಹೀಗೆ ಜೀವ ಕೊಡ ತಕ್ಕ ಶಕ್ತಿಯನ್ನು ನ್ಯಾಯಪ್ರಮಾಣಕ್ಕೆ ತಪ್ಪಿಸಿದ ಪಾಪವನ್ನು ಕ್ರಿಸ್ತನು ತೆಗೆದು ಕೊಂಡ ಪಾಪಿಷ್ಠರ ಸ್ವಭಾವದಲ್ಲಿ ದಂಡಿಸಿ ನಿವರ್ತಿ ಮಾಡಿದನು. ಹೀಗೆ ಪಾಪವು ಕ್ರಿಸ್ತನಲ್ಲಿ ದಂಡನೆಯನ್ನು ಹೊಂದಿದ್ದರಿಂದ, ಆತನನ್ನು ಹೊಂದಿ ಕೊಳ್ಳುವ ಪಾಪಾತ್ಮನಿಗೆ ದಂಡನೆ ಇಲ್ಲ. (೧. ವ.)

5. ಕ್ರಿಸ್ತನ ದಾಸರು ತಮ್ಮ ಕೆಟ್ಟ ಮಾಂಸದ ಇಚ್ಛೆಗಳ ಪ್ರಕಾರ ನಡಿಯದೆ, ಪರಿಶುದ್ಧಾತ್ಮನ ಪ್ರೇರೇಪಣೆಯ ಪ್ರಕಾರ ದೇವರ ಕಟ್ಟಳೆಗಳಿಗೆ ವಿಧೇಯರಾಗಿ ಪರಿಶುದ್ಧವಾಗಿ ನಡಿಯುವರು.

6. ಮೇಲೆ ಹೇಳಲ್ಪಟ್ಟ ಆಶೀರ್ವಾದಗಳನ್ನು ಹೊಂದುವವರು ಯಾರೆಂದೂ, ಹೊಂದದವರು ಯಾರೆಂದೂ ೫—೮ನೇ ವಚನದ ಮಟ್ಟಿಗೂ ತೋರಿಸಿ ಇದೆ. ಈ ಪ್ರಪಂಚದ ಅನಿತ್ಯ ವಸ್ತುಗಳನ್ನು ಹುಡುಕಿ ನಡೆಯುವದರಿಂದ ಮಾಂಸಭಾವದವರು ಯಾರೆಂದು ತಿಳಿಯ ಬಹುದು. (೭. ೫. ವಚನದ ವ್ಯಾಖ್ಯಾನ ನೋಡ ಬೇಕು.) ಇಂಥಾ ಮಾಂಸದ ಚಿಂತೆಯು ದೇವರಿಗೆ ವಿರೋಧವಾದ ಹಗೆಯಾಗಿರುವದರಿಂದ ಅದು ಜೀವವನ್ನೂ ಸಮಾಧಾನವನ್ನೂ ತಪ್ಪಿಸಿ ಮರಣವನ್ನು ಉಂಟು ಮಾಡುತ್ತದೆ. (೬. ವ.) ಮತ್ತು ದೇವರಿಗೆ ವಿಧೇಯವಾಗಿರಲೂ ಆತನ ಆಶೀರ್ವಾದವನ್ನು ಹೊಂದಲೂ ಶಕ್ತಿ ಇಲ್ಲದ್ದಾಗಿರುತ್ತದೆ. (೭, ೮. ವ.) ಇದೇ ಪ್ರಕಾರ ಆತ್ಮಭಾವದವರು ಮೇಲಾದ ಭಾಗ್ಯವನ್ನು ಕುರಿತು ಪರಿಶುದ್ಧಾತ್ಮನು ತಮ್ಮಲ್ಲಿ ಹುಟ್ಟಿಸಿದ ಆಶೆಯ ಪ್ರಕಾರ ನಡಿಯುವವರಾಗಿಯೂ, ಅದರ ಫಲವಾದ ಜೀವವನ್ನೂ ಸಮಾಧಾನವನ್ನೂ ಹೊಂದಿ ಅನುಭವಿಸುವವರಾಗಿಯೂ ಇರುತ್ತಾರೆ.

೬ ರದವರು ಆತ್ಮದವುಗಳ ಮೇಲೆಯೇ. ಮತ್ತು ಮಾಂಸದ ಮನಸ್ಸು ಮರಣವು; ಆತ್ಮದ ಮನಸ್ಸು ಜೀವವೂ
೭ ಸಮಾಧಾನವೂ. ಯಾಕಂದರೆ ಮಾಂಸದ ಮನಸ್ಸು ದೇವರಿಗೆ ಶತ್ರುತ್ವ. ಯಾಕಂದರೆ ಅದು ದೇವರ
೮ ನ್ಯಾಯಪ್ರಮಾಣಕ್ಕೆ ವಿಧೇಯವಾಗಿರದು, ಮತ್ತು ಇರಲಾರದು. ಹಾಗಾದರೆ, ಮಾಂಸದಲ್ಲಿರುವವರು
ದೇವರನ್ನು ಮೆಚ್ಚಿಸಲಾರರು.
೯ ನೀವೋ, ಮಾಂಸದಲ್ಲಿ ಅಲ್ಲ, ದೇವರ ಆತ್ಮವು ನಿಮ್ಮಲ್ಲಿ ವಾಸವಾಗಿದ್ದರೆ, ಆತ್ಮದಲ್ಲಿ ಇದ್ಧೀರಿ. ಆದರೆ ಯಾವ
೧೦ ನಿಗಾದರೂ [1]ಕ್ರಿಸ್ತನ ಆತ್ಮವು ಇಲ್ಲದಿದ್ದರೆ, ಅವನು ಕ್ರಿಸ್ತನವನಲ್ಲ. ಆದರೆ ಕ್ರಿಸ್ತನು ನಿಮ್ಮಲ್ಲಿ ಇದ್ದರೆ, ಶರೀ
೧೧ ರವು ಪಾಪದ ನಿಮಿತ್ತ ಸತ್ತದ್ದು; ಆತ್ಮವೋ, ನೀತಿಯ ನಿಮಿತ್ತ [2]ಜೀವವು. ಇದಲ್ಲದೆ, ಯೇಸುವನ್ನು ಸತ್ತವ
ರೊಳಗಿಂದ ಎಬ್ಬಿಸಿದವನ ಆತ್ಮವು ನಿಮ್ಮಲ್ಲಿ ವಾಸವಾಗಿದ್ದರೆ, ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದವನು
ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮದಿಂದ ನಿಮ್ಮ ಮರ್ತ್ಯ ಶರೀರಗಳನ್ನು ಸಹ ಬದುಕಿಸುವನು.
೧೨ ಆದದರಿಂದ, ಸಹೋದರರೇ, ಹಂಗಿನವರಾಗಿದ್ಧೇವೆ, ಮಾಂಸದ ಪ್ರಕಾರ ಬದುಕುವ ಹಾಗೆ [3]ಮಾಂಸಕ್ಕೆ ಅಲ್ಲ.
೧೩ ಯಾಕಂದರೆ ಮಾಂಸದ ಪ್ರಕಾರ ಬದುಕಿದರೆ, ಸಾಯಲಾಗಿದ್ಧೀರಿ. ಆದರೆ ಆತ್ಮದಿಂದ ಶರೀರದ ಕರ್ಮಗ
ಳನ್ನು [4]ಕೊಂದರೆ, ಬದುಕುವಿರಿ.
೧೪, ೧೫ ಯಾಕಂದರೆ ದೇವರ ಆತ್ಮದಿಂದ [5]ನಡಿಸಲ್ಪಡುವವರಷ್ಟು ದೇವರ ಮಕ್ಕಳಾಗಿದ್ಧಾರೆ. ಯಾಕಂದರೆ
ತಿರಿಗಿ ಭಯಕ್ಕಾಗಿ ದಾಸತ್ವದ ಆತ್ಮವನ್ನು ಹೊಂದದೆ, [6]ಪುತ್ರಸ್ವೀಕಾರದ ಆತ್ಮವನ್ನು ಹೊಂದಿದ್ಧೀರಿ;
೧೬ ಅದರಿಂದ, ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ. ದೇವರ ಮಕ್ಕಳಾಗಿದ್ಧೇವೆಂದು, ಆತ್ಮವು ತಾನೇ
೧೭ ನಮ್ಮ [7]ಆತ್ಮದ ಸಂಗಡ ಸಾಕ್ಷಿ ಕೊಡುತ್ತದೆ. ಮತ್ತು ಮಕ್ಕಳಾದರೆ, ಬಾಧ್ಯರೂ; ದೇವರಿಗೆ ಬಾಧ್ಯರೂ;

1. ಮೇಲಿನ ವಚನಗಳಲ್ಲಿ ಗುಣ ಪಟ್ಟವರಿಗೂ ಗುಣ ಪಡದವರಿಗೂ ಇರುವ ದೊಡ್ಡ ವ್ಯತ್ಯಾಸವನ್ನು ತೋರಿಸಿ, ಈ ವಚನಗಳಲ್ಲಿ ಗುಣ ಪಟ್ಟವರ ಸ್ವಭಾವವನ್ನೂ ಶ್ರೇಷ್ಠತ್ವವನ್ನೂ ತೋರಿಸಿ ಇದೆ. ಮನುಷ್ಯನಲ್ಲಿ ಸ್ವಾಭಾವಿಕವಾಗಿರುವ ಮಾಂಸದ ಆಶೆಯನ್ನು ನಾಶ ಮಾಡಿ, ಆತ್ಮದ ಚಿಂತೆಯನ್ನು ಉಂಟು ಮಾಡಿದವನು ಕ್ರಿಸ್ತನ ಆತ್ಮನೆಂದು ತೋರಿಸಿ ಇದೆ. ಈ ವಚನದಲ್ಲಿಯೇ ಪರಿಶುದ್ಧಾತ್ಮನು ದೇವರ ಆತ್ಮನೆಂದೂ ಕ್ರಿಸ್ತನ ಆತ್ಮನೆಂದೂ ಹೇಳಿರುವದರಿಂದ ಕ್ರಿಸ್ತನು ದೇವರೆಂದು ತಿಳಿಯ ಬೇಕು. ಕ್ರಿಸ್ತನ ಪುಣ್ಯ ಕ್ರಿಯೆಯು ಪಾಪಿಷ್ಠರಲ್ಲಿ ಫಲಿಸುವಂತೆ ಮಾಡುವದರಿಂದ ಪರಿಶುದ್ಧಾತ್ಮನು ಕ್ರಿಸ್ತನ ಆತ್ಮನೆಂದು ಹೇಳಿ ಇದೆ. (ಯೋಹಾ. ೧೪. ೧೬—೨೬; ೧೬. ೭. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.) ಪರಿಶುದ್ಧಾತ್ಮನು ತಂದೆಯಿಂದ ಹೊರಡುವ ಪ್ರಕಾರ ಕುಮಾರನಿಂದಲೂ ಹೊರಡುವದರಿಂದ ಹೀಗೆ ಹೇಳಿ ಇದೆ. ಒಬ್ಬನು ಬೇರೆ ಯಾವ ವರಗಳನ್ನು ಹೊಂದಿದಾಗ್ಯೂ, ಪರಿಶುದ್ಧಾತ್ಮನ ವರವನ್ನು ಹೊಂದದಿದ್ದರೆ, ಅವನು ಕ್ರಿಸ್ತನಿಗೆ ಅಂಗೀಕಾರವಾಗಲಾರನು.

2. ಪರಿಶುದ್ಧಾತ್ಮನು ಯಾವನಲ್ಲಿ ವಾಸವಾಗಿದ್ಧಾನೋ ಅವನು ಸಂಪೂರ್ಣ ಜೀವವನ್ನು ಹೊಂದುವನೆಂಬುವದಕ್ಕೆ ಅದೇ ಒಂದು ದೃಷ್ಟಾಂತ. ಪಾಪದಿಂದ ಶರೀರವು ನಾಶವಾದರೂ, ಪುನರ್ಜನ್ಮವನ್ನೂ ನೀತಿಯನ್ನೂ ಹೊಂದಿದ ಆತ್ಮವು ಜೀವ ಹೊಂದುವದಕ್ಕೆ ಸಂದೇಹವಿಲ್ಲ. ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಆತ್ಮನು ದೇವಭಕ್ತರಲ್ಲಿ ವಾಸ ಮಾಡುವದರಿಂದ, ನಾಶಕ್ಕೆ ತಕ್ಕ ಅವನ ಶರೀರವು ಕಡೇ ದಿವಸದಲ್ಲಿ ಜೀವದಿಂದ ಎದ್ದು ನಿತ್ಯಜೀವವನ್ನು ಹೊಂದಿ, ಮೋಕ್ಷಮನೆಯಲ್ಲಿ ಎಂದೆಂದಿಗೂ ಬಾಳುವದು.

3. ಕ್ರಿಸ್ತನ ಮುಖಾಂತರ ರಕ್ಷಿಸಲ್ಪಟ್ಟ ದೇವಭಕ್ತನು ಮಾಂಸಕ್ಕೆ ಹಂಗಿಗನಾಗಿರದೆ, ಕ್ರಿಸ್ತನು ಕೊಡುವ ಆತ್ಮನ ಪ್ರೇರಣೆಯ ಪ್ರಕಾರ ನಡಿಯುವದಕ್ಕೆ ಆತ್ಮನಿಗೆ ಹಂಗಿಗನಾಗಿದ್ಧಾನೆ.

4. ಒಬ್ಬನನ್ನು ಶಿಲುಬೆಗೆ ಜಡಿದು ಅವನ ಪ್ರಾಣವನ್ನು ಬಾಧೆಪಡಿಸಿ ಕೊಲ್ಲುವ ಪ್ರಕಾರ, ಪಾಪಜನಿತವಾದ ದುರ್ಗುಣಗಳನ್ನು ದಿನ ದಿನಕ್ಕೆ ಬಾಧಿಸಿ ಕೊಲ್ಲದಿದ್ದರೆ, ಕ್ರೈಸ್ತನಲ್ಲಿ ಜೀವವು ಬೆಳೆದು ಪೂರ್ಣವಾಗಲಾರದು. ಮಾಂಸದ ಪ್ರಕಾರ ಬದುಕಿದರೆ, ಸಾಯಲಾಗಿದ್ಧೀರಿ, ಅಂದರೆ ಪಾಪದಿಚ್ಛೆಗಳಿಗೆ ಸ್ಥಳ ಕೊಟ್ಟರೆ, ಮರಣದ ಹಾದಿಯಲ್ಲಿ ನಡಿದ ಹಾಗಿರುವದು. ಕ್ರಿಸ್ತನ ಶಿಷ್ಯರು ಆ ಮಾರ್ಗವನ್ನು ಬಿಟ್ಟು ಜೀವದ ಮಾರ್ಗದಲ್ಲಿ ನಡೆಯ ತಕ್ಕದ್ದು.

5. ಪರಿಶುದ್ಧಾತ್ಮನ ಬಲವಾದ ನಡಿಸುವಿಕೆಗೆ ಉತ್ತಮ ಕ್ರೈಸ್ತರು ವಿಧೇಯರಾಗಿ ನಡಿಯುವರು. ಅದರಿಂದ ಅವರು ದೇವರ ಮಕ್ಕಳೆಂದು ತೋರ ಬರುವರು. (೧೫. ವ.)

6. ಗುಣ ಪಡುವದಕ್ಕೆ ಮುಂಚೆ ಇದ್ದ ಆತ್ಮವು ಭಯವನ್ನುಂಟು ಮಾಡುವ ದಾಸತ್ವದ ಆತ್ಮವು. ಗುಣ ಪಟ್ಟ ತರುವಾಯ ಪರಿಶುದ್ಧಾತ್ಮನಿಂದುಂಟಾಗುವ ಆತ್ಮವಾದರೆ, ಪುತ್ರಸ್ವೀಕಾರದ ಆತ್ಮವು. ಈ ಆತ್ಮವನ್ನು ಹೊಂದಿದವರು ದೇವರನ್ನು ತಮ್ಮ ತಂದೆ ಎಂದು ಎಣಿಸಿ, ಪ್ರೀತಿಯಿಂದಲೂ ಭಕ್ತಿವಿಶ್ವಾಸದಿಂದಲೂ ಆತನನ್ನು ತಮ್ಮ ತಂದೆ ಎಂದು ಕರೆಯುವರು. ಈ ಆತ್ಮವನ್ನು ಹೊಂದಿದವರು ತಿರಿಗಿ ಭಯವನ್ನುಂಟು ಮಾಡುವ ದಾಸತ್ವದ ಆತ್ಮವುಳ್ಳವರಾಗಿ ನಡಿಯಲಾರರು. (ಗಲಾ. ೪. ೬.)

7. ಮಕ್ಕಳಿಗೆ ತಕ್ಕ ಸಲಿಗೆಯನ್ನು ದೇವರ ಬಳಿಯಲ್ಲಿ ಹೊಂದಿದ್ಧೇವೆಂದು ನಮ್ಮ ಮನಸ್ಸು ಅನ್ನುವದನ್ನು ಪರಿಶುದ್ಧಾತ್ಮನು ನಿಶ್ಚಯ ಪಡಿಸುತ್ತಾನೆ. ಆತನು ತಾನು ಕೊಡುವ ಆದರಣೆ ಸಮಾಧಾನಗಳಿಂದಲೂ, ಪ್ರಾರ್ಥನಾಸಕ್ತಿಯಿಂದಲೂ, ಪಾಪದ ಮೇಲಣ ಅಸಹ್ಯದಿಂದಲೂ, ಪ್ರೀತಿಯ ಕ್ರಿಯೆಗಳನ್ನು ನಡಿಸುವದಕ್ಕೆ ಉಂಟು ಮಾಡುವ ಆಶೆಯಿಂದಲೂ ನಾವು ದೇವರ ಮಕ್ಕಳೆಂದು ನಮ್ಮ ಆತ್ಮದ ಸಂಗಡ ಸಾಕ್ಷಿ ಕೊಡುತ್ತಾನೆ. (ಗಲಾ. ೫. ೨೨, ೨೩.)



ಕೂಡ [1]ಮಹಿಮೆಯನ್ನು ಹೊಂದುವ ಹಾಗೆ, ಕೂಡ ಶ್ರಮೆ ಪಟ್ಟರೆ, ಕ್ರಿಸ್ತನ ಕೂಡ ಬಾಧ್ಯರೂ ಆಗಿ
ದ್ಧೇವೆ.

ಕ್ರಿಸ್ತನ ಸಂಗಡ ಹಿಂಸೆ ಪಡುವ ಭಕ್ತರು ದೇವರ ಸಹಾಯದಿಂದ ಪೂರ್ಣ ಮಹಿಮೆಗೆ ಪರಿಪಕ್ವವಾಗುವರು.

೧೮ ಯಾಕಂದರೆ, ಈಗಿನ ಕಾಲದ ಶ್ರಮೆಗಳು [2]ನಮ್ಮಲ್ಲಿ ಪ್ರತ್ಯಕ್ಷವಾಗಲಿರುವ ಮಹಿಮೆಗೆ ಸರಿಯಾದವುಗಳಲ್ಲ
೧೯ ವೆಂದು, ಎಣಿಸುತ್ತೇನೆ. ಯಾಕಂದರೆ ಸೃಷ್ಟಿಯ ಅಭಿಲಾಷೆಯು ದೇವರ ಮಕ್ಕಳು ಪ್ರತ್ಯಕ್ಷವಾಗುವದನ್ನು
೨೦ ಎದುರು ನೋಡುತ್ತದೆ. ಯಾಕಂದರೆ ಸೃಷ್ಟಿಯು [3]ಮಾಯೆಗೆ ಅಧೀನವಾಯಿತು; ಸ್ವಯಿಚ್ಛೆಯಿಂದಲ್ಲ,
೨೧ ಅಧೀನ ಮಾಡಿದವನ ಮುಖಾಂತರ, ನಿರೀಕ್ಷೆಯಲ್ಲಿಯೇ. ಏನಂದರೆ [4]ಸೃಷ್ಟಿಯು ತಾನೇ ಕ್ಷಯದ ದಾಸತ್ವ
ದೊಳಗಿಂದ ದೇವರ ಮಕ್ಕಳ [5]ಮಹಿಮೆಯಾದ ಬಿಡುಗಡೆಗೋಸ್ಕರ ಬಿಡುಗಡೆ ಮಾಡಲ್ಪಡುವದು.
೨೨ ಯಾಕಂದರೆ ಸರ್ವ ಸೃಷ್ಟಿಯು ಈಗಿನ ಮಟ್ಟಿಗೂ ಕೂಡ ನರಳಿ, ಪ್ರಸವವೇದನೆ ಪಡುತ್ತದೆಂದು, ಬಲ್ಲೆವು.
೨೩ ಅದಲ್ಲದೆ, ಆತ್ಮದ [6]ಪ್ರಥಮ ಫಲವನ್ನು ಹೊಂದಿರುವ [7]ನಾವು ಸಹ, ನಮ್ಮ ಶರೀರದ ವಿಮೋಚನೆಯಾದ

1. ಉತ್ತಮ ಭಕ್ತರ ಮಿರಾಶಿಗಳ ನಿಶ್ಚಯವೂ ಶ್ರೇಷ್ಠತ್ವವೂ ಮಹಿಮೆಯೂ ಈ ವಚನದಲ್ಲಿ ಚನ್ನಾಗಿ ತೋರುತ್ತದೆ. ಕ್ರಿಸ್ತನನ್ನು ಅಂಗೀಕರಿಸಿದವರಷ್ಟು (ಯೋಹಾ. ೧. ೧೨.) ಸ್ವತಂತ್ರವೆಂಬ ಮಿರಾಶಿಯನ್ನು ಹೊಂದುತ್ತಾರೆ. ಇಹದಲ್ಲಿ ಆತನ ಸಂಗಡ ಶ್ರಮೆ ಪಡುವವರು ಪರದಲ್ಲಿ ಆತನ ಸಂಗಡ ಮಹಿಮೆಯನ್ನು ಹೊಂದಿ ಬಾಳುವರು. (೧೮.) ಬಾಧ್ಯತೆ ಇಲ್ಲದ ಮಕ್ಕಳು ದೇವರಿಗೆ ಇಲ್ಲ; ಕ್ರಿಸ್ತನನ್ನು ಶರಣು ಹೊಕ್ಕವರು ದೇವರಿಗೆ ಬಾಧ್ಯರಾಗಿದ್ಧಾರೆ. (ಲೂಕ. ೧೫. ೧೨.) ಮತ್ತು ಅವರು ಎಲ್ಲಕ್ಕೂ ಬಾಧ್ಯನಾಗಿರುವ ಕ್ರಿಸ್ತನ ಸಂಗಡ ಸಹಬಾಧ್ಯರಾಗಿದ್ಧಾರೆ. (ಇಬ್ರೀ. ೧. ೨.) ಆತನು ತನ್ನ ಬಾಧ್ಯತೆಯನ್ನು ತನ್ನ ಸಹೋದರರಿಗೂ ಕೊಡುತ್ತಾನೆ. (ಯೋಹಾ. ೧೭. ೨೨, ೨೩.) ಮೇಲಾದ ಬಾಧ್ಯತೆಯುಳ್ಳ ಆತನು ಶ್ರಮೆ ಪಟ್ಟು ಮಹಿಮೆ ಹೊಂದಿದ ಪ್ರಕಾರ, ಈಗ ಆತನ ಸಂಗಡ ಶ್ರಮೆ ಪಡುವವರು ಇನ್ನು ಮೇಲೆ ಆತನ ಸಂಗಡ ಕೂಡ ಮಹಿಮೆ ಹೊಂದುವರು.

2. ಭಕ್ತರು ಇನ್ನು ಮೇಲೆ ಹೊಂದಲಿಕ್ಕಿರುವ ಮಹಿಮೆಗೆ, ಈಗ ಅವರು ಪಡುವ ಶ್ರಮೆಯನ್ನು ಹೋಲಿಸಿದರೆ, ಅಜಗಜಾಂತರ ಹೆಚ್ಚುಕಡಿಮೆಯಾಗಿದೆ. ಈಗಿನ ಉಪದ್ರ ಬಹು ಅಲ್ಪವಾಗಿಯೂ, ಬರುವ ಭಾಗ್ಯವು ಅಪರಿಮಿತವಾಗಿಯೂ ಇರುವದು. ಸೃಷ್ಟಿಯು ಬಿಡುಗಡೆಯಾಗುವದನ್ನೂ, ಭಕ್ತರು ತಾಳ್ಮೆಯಿಂದ ಎದುರು ನೋಡುತ್ತಿರುವ ವಿಮೋಚನೆಯನ್ನು ಅವರು ಹೊಂದಿ ಅನುಭವಿಸುವದನ್ನೂ ನೋಡುವಾಗ ಎಷ್ಟು ಆನಂದವಾಗಿರುವದು! (೧೯—೨೬. ವ.) ಇನ್ನು ಪ್ರತ್ಯಕ್ಷವಾಗಲಿರುವ ಮಹಿಮೆಯ ನಿಶ್ಚಯವನ್ನೂ ಶ್ರೇಷ್ಠತ್ವವನ್ನೂ ವಿವರಿಸುವದಕ್ಕೆ ತಕ್ಕ ಒಂದು ಹೊಸ ದೃಷ್ಟಾಂತವು ಇದರಲ್ಲಿ ಉಂಟು. ಸೃಷ್ಟಿ ಎಲ್ಲಾ ನರಳುವಂತೆ ಮಾಡುವ ಮನುಷ್ಯನ ಪಾಪವು ಎಷ್ಟಧಿಕವಾದದ್ದು. ಇನ್ನು ಸುಖವಾಗುವದೆಂಬ ಸರ್ವ ಸೃಷ್ಟಿಯ ಅಭಿಲಾಷೆಯು ಎಷ್ಟು ದೊಡ್ಡದು. ಹೀಗೆ ಸರ್ವ ಸೃಷ್ಟಿಯು ಎದುರು ನೋಡುತ್ತಿರುವ ದೇವರ ಮಕ್ಕಳ ಮಹಿಮೆಯು ಬಹಳ ನಿಶ್ಚಯವಾದದ್ದು ಎಂಬುವದಕ್ಕೆ ಸಂದೇಹವಿಲ್ಲ.

3. ನಶಿಸಿ ಹೋಗುವದು ಅಥವಾ ಸರ್ವ ಶೂನ್ಯವಾಗಿ ಹೋಗುವದು ಸೃಷ್ಟಿಯಲ್ಲಿ ಯಾವ ವಸ್ತುವಿಗೂ ಇಷ್ಟವಿಲ್ಲದ್ದರಿಂದ, ಅವು ಮನಸ್ಸಿನಿಂದ ಅಲ್ಲ, ದೇವರ ಮಹತ್ವವಾದ ಬಲದಿಂದಲೇ ಮಾಯೆಗೆ ಅಧೀನವಾಗಿದೆ. ಅವುಗಳನ್ನು ಅಧೀನ ಮಾಡಿದವನು ಆ ದಾಸತ್ವ ನಿವರ್ತಿಯಾಗಿ ಸ್ವಾಧೀನವಾಗುವದೆಂಬ ಯೋಚನೆಯಿಂದಲೇ ಹಾಗೆ ಮಾಡಿದ್ಧಾನೆ.

4. ಸೃಷ್ಟಿ ಅಂದರೆ ಸಮಸ್ತ ಚರಾಚರಗಳು. ಅವೆಲ್ಲಾ ದೇವರ ಮಕ್ಕಳು ಇನ್ನು ಮೇಲೆ ಮಹಿಮೆಯಲ್ಲಿ ಪ್ರಕಾಶಮಾನವಾಗಿ ಕಾಣಲ್ಪಡುವದನ್ನು, ಝಾವದ ಕಾವಲುಗಾರನು ಮೂಡಲು ಬೆಳಗುವದನ್ನು ಆಶೆಯಾಗಿ ನಿರೀಕ್ಷಿಸುವ ಪ್ರಕಾರ, ಮಹಾ ಅಭಿಲಾಷೆಯಿಂದ ಎದುರು ನೋಡುತ್ತವೆಂದು ಉಪಮಾನವಾಗಿ ಹೇಳಲ್ಪಟ್ಟದೆ. ಸೃಷ್ಟಿ ಎಲ್ಲಾ ಮನುಷ್ಯನ ಪಾಪದಿಂದ (ಉತ್ಪ. ೩. ೧೭. ರೋಮಾ. ೮. ೨೦, ೨೧.) ಮಾಯೆಗೆ ಅಥವಾ ಶಾಪಕ್ಕೆ ಒಳಪಟ್ಟದೆ. (ಕೀರ್ತ. ೩೯. ೫.) ದೇವರ ಮಕ್ಕಳಿಗೆ ಮಹಿಮೆಯುಂಟಾಗುವಾಗ ಸರ್ವ ಸೃಷ್ಟಿಗೂ ಕ್ಷೇಮ ಉಂಟಾಗುವದು. ಅವುಗಳೆಲ್ಲಾ ಗರ್ಭವೇದನೆ ಪಡುವ ಸ್ತ್ರೀಯ ಹಾಗೆ ಬಹಳ ವೇದನೆಯಿಂದ ನರಳುವದರಿಂದ ಇಂಥಾ ಕ್ಷೇಮಕಾಲವು ಅವಶ್ಯವಾಗಿ ಬರ ಬೇಕು. (೨೨. ವ.) ಇನ್ನು ಮಹಿಮೆಯುಂಟಾಗುವದು ಎಂಬುವ ನಿಶ್ಚಯವನ್ನೂ ನಂಬಿಕೆಯನ್ನೂ ಹೊಂದಿರುವ ದೇವಭಕ್ತರು ಸಹ (೨ ಕೊರಿ. ೧. ೨೧, ೨೨.) ತಮ್ಮ ದೇಹವು ಸಮಾಧಿಯನ್ನು ಬಿಟ್ಟಿದ್ದು, ಪಾಪದ ಆಳಿಕೆಗೆ ಪೂರ್ಣವಾಗಿ ತೊಲಗಿ ಸುಖ ಹೊಂದುವ ಮಟ್ಟಿಗೂ ಬೇರೆ ಸೃಷ್ಟಿಗಳಂತೆಯೇ ನರಳುತ್ತಾರೆ.

5. ಮಾಯೆಗೆ ಬಿಡುಗಡೆಯಾಗುವದು, ಇನ್ನು ಮೇಲೆ ದೇವಭಕ್ತರಿಗುಂಟಾಗುವ ಮಹಿಮೆಯಲ್ಲಿ ಒಂದು ಭಾಗವಾಗಿದೆ.

6. ಇಸ್ರಯೇಲ್ಯರು ವರ್ಷಾಂತರ ಅರ್ಪಿಸಿದ ಪ್ರಥಮ ಫಲವು, ತರುವಾಯ ಉಂಟಾಗುವ ಬೆಳೆಗೆ ಗುರುತಾಗಿತ್ತು. (ದ್ವಿತೀಯ ನ್ಯಾ. ೨೬. ೧—೧೧.) ಆದದರಿಂದ ಪ್ರಥಮ ಫಲವೆಂಬುವದು ಒಂದು ಕಾರ್ಯದ ಮೊದಲನ್ನೂ ನಿಶ್ಚಯವನ್ನೂ ತೋರಿಸುತ್ತದೆ. (೧ ಕೊರಿ. ೧೫. ೨೦.) ಪರಿಶುದ್ಧಾತ್ಮನು ಭಕ್ತರ ಹೃದಯದಲ್ಲಿ ವಾಸ ಮಾಡುವದು, ಇನ್ನು ಮೇಲೆ ಅವರಿಗುಂಟಾಗುವ ಬಾಧ್ಯತೆ ಎಂಬ ಬೆಳೆಗೆ ಪ್ರಥಮ ಫಲದಂತೆಯೂ ಆಧಾರದಂತೆಯೂ ಇರುತ್ತದೆ.

7. ನಾವು ಸಹ ಎಂಬುವದು, ಪೌಲನನ್ನೂ ಆತನ ಹಾಗೆ ಇರುವ ಎಲ್ಲಾ ನಿಜ ಭಕ್ತರನ್ನೂ ಕುರಿತು ಹೇಳಲ್ಪಟ್ಟದೆ.

೨೪ ಪುತ್ರಸ್ವೀಕಾರವನ್ನು ಎದುರು ನೋಡುತ್ತಾ, ನಮ್ಮೊಳಗೆ ನಾವೇ ಮೂಲುಗುತ್ತೇವೆ. ಯಾಕಂದರೆ [1]ನಿರೀಕ್ಷೆ
ಯಲ್ಲಿ ರಕ್ಷಿಸಲ್ಪಟ್ಟಿದ್ಧೇವೆ; ಆದರೆ ಕಾಣಲ್ಪಡುವ ನಿರೀಕ್ಷೆಯು ನಿರೀಕ್ಷೆಯಲ್ಲ. ಯಾಕಂದರೆ ಒಬ್ಬನು ಕಾಣು
೨೫ ವದನ್ನು ಇನ್ನು ನಿರೀಕ್ಷಿಸುವದು ಯಾಕೆ? ಆದರೆ ನಾವು ಕಾಣದೆ ಇರುವದನ್ನು ನಿರೀಕ್ಷಿಸಿದರೆ, ತಾಳ್ಮೆ
ಯಿಂದ ಎದುರು ನೋಡುತ್ತೇವೆ.

೨೬ ಹಾಗೆಯೇ ಆತ್ಮವು ಸಹ ನಮ್ಮ ಅಶಕ್ತಿಗಳಿಗೆ ಕೂಡ ಸಹಾಯ ಮಾಡುತ್ತದೆ. ಹ್ಯಾಗಂದರೆ, ನಾವು
ಯುಕ್ತವಾಗಿ [2]ಏನು ಬೇಡಿ ಕೊಳ್ಳ ಬೇಕೋ, ಅರಿಯೆವು. ಆದರೆ ಆತ್ಮವು ತಾನೇ [3]ಉಚ್ಚರಿಸಲಾರದ ಮೂ
೨೭ ಲುಗುವಿಕೆಗಳಿಂದ ನಮಗೋಸ್ಕರ ವಿಜ್ಞಾಪನೆ ಮಾಡುತ್ತದೆ. ಆದರೆ ಹೃದಯಗಳನ್ನು ಶೋಧಿಸುವವನು,
ಆತ್ಮದ ಮನಸ್ಸು ಏನೆಂದು, ಬಲ್ಲನು. ಯಾಕಂದರೆ ದೇವರಿಗೆ ತಕ್ಕ ಹಾಗೆ ಪರಿಶುದ್ಧರಿಗೋಸ್ಕರ ವಿಜ್ಞಾಪನೆ
ಮಾಡುತ್ತದೆ.

೨೮ ಇದಲ್ಲದೆ ನಿರ್ಣಯದ ಪ್ರಕಾರ ಕರೆಯಲ್ಪಟ್ಟವರಾಗಿ ದೇವರನ್ನು ಪ್ರೀತಿ ಮಾಡುವವರಿಗೆ ಮೇಲಿಗಾಗಿ
೨೯ [4]ಎಲ್ಲವುಗಳು ಕೈಕೂಡಿ ಬರುತ್ತವೆಂದು, ಬಲ್ಲೆವು. ಯಾಕಂದರೆ ಅವನು ಅನೇಕ ಸಹೋದರರಲ್ಲಿ ಚೊಚ್ಚಲ
ವನಾಗಿರುವ ಹಾಗೆ, ತಾನು ಮುಂತಿಳಿದವರನ್ನು [5]ತನ್ನ ಮಗನ ಹೋಲಿಕೆಯ ಸಾರೂಪ್ಯವುಳ್ಳವರಾಗ
೩೦ ಮುನ್ನೇಮಿಸಿದನು. ಮತ್ತು ಯಾರನ್ನು [6]ಮುನ್ನೇಮಿಸಿದನೋ, ಅವರನ್ನು ಕರೆದನು; ಯಾರನ್ನು ಕರೆ
ದನೋ, ಅವರನ್ನು ನೀತಿನಿರ್ಣಯ ಪಡಿಸಿದನು; ಯಾರನ್ನು ನೀತಿನಿರ್ಣಯ ಪಡಿಸಿದನೋ, ಅವರನ್ನು ಮಹಿಮೆ
ಪಡಿಸಿದನು.

---

1. ನಾವು ನಿರೀಕ್ಷೆಯಲ್ಲಿ ರಕ್ಷಿಸಲ್ಪಟ್ಟಿರುವದರಿಂದ ತಾಳ್ಮೆಯಿಂದ ಎದುರು ನೋಡುತ್ತೇವೆ. (೧೮—೨೩. ವ.) ನಮ್ಮ ರಕ್ಷಣೆಯು ಬಹುಶಾ ಮುಂದೆ ಬರುವ ಕಾಲಕ್ಕೆ ಸಮ್ಮಂಥ ಪಟ್ಟದ್ದಾಗಿಯೂ, ತತ್ಕಾಲದಲ್ಲಿ ನಮ್ಮ ಕಣ್ಣಿಗೆ ತೋರದ್ದಾಗಿಯೂ ಇರುವದರಿಂದ, ಅದು ಬರುತ್ತದೆ ಎಂಬ ನಂಬಿಕೆಯಿಂದ ಈಗಲಿರುವ ಉಪದ್ರವನ್ನು ತಾಳ್ಮೆಯಿಂದ ಸಹಿಸ ಬೇಕಾಗಿದೆ. (೨೫. ವ.) ಹೀಗೆ ತಾಳ್ಮೆಯಿಂದ ಸಹಿಸುವದಕ್ಕೆ ಪರಿಶುದ್ಧಾತ್ಮನು ಸಹಾಯ ಮಾಡುತ್ತಾನೆ. (೨೬. ವ.)

2. ನಾವು ಅನುಭವಿಸುವ ಉಪದ್ರದ ಭಾರವನ್ನು ಹೊರುವದಕ್ಕೆ ನಮಗುಂಟಾಗಿರುವ ಬಲಹೀನತ್ವದಲ್ಲಿ ಪರಿಶುದ್ಧಾತ್ಮನು ನಾವು ಮಾಡ ಬೇಕಾದ ಪ್ರಾರ್ಥನೆಗೆ ಸಹಾಯ ಕೊಟ್ಟು ಆ ಭಾರವನ್ನು ನಮ್ಮ ಸಂಗಡ ಕೂಡ ಹೊರುತ್ತಾನೆ.

3. ಒಬ್ಬ ವಕೀಲನು ತನ್ನ ಪಕ್ಷದ ವ್ಯಾಜ್ಯಗಾರನಿಗೆ ಯೋಚನೆ ಹೇಳಿ ಕೊಟ್ಟು ಸಹಾಯ ಮಾಡುವ ಪ್ರಕಾರ, ಪರಿಶುದ್ಧಾತ್ಮನು ಭಕ್ತರ ಮನಸ್ಸಿನಲ್ಲಿ ಉನ್ನತವಾದ ವಾಂಛೆಗಳನ್ನು ಎಬ್ಬಿಸಿ ಸಹಾಯ ಮಾಡುತ್ತಾನೆ. ಅವು ನಮಗೆ ಪೂರ್ಣವಾಗಿ ವಿಶದವಾಗದೆ ಇದ್ದರೂ, ಸರ್ವಸಾಕ್ಷಿಯಾದ ದೇವರಿಗೆ ತಿಳಿಯುವದು. ಪರಿಶುದ್ಧಾತ್ಮನ ಪುಣ್ಯಕ್ರಿಯೆಯಾದ ಈ ಫಲವನ್ನು ಆತನು ಅಂಗೀಕರಿಸುವನು. (೨೬, ೨೭. ವ.) ಮಾತಾಡ ತಿಳಿಯದೆ ಅಥವಾ ತಮ್ಮ ಮನೋಭೀಷ್ಟವನ್ನು ತಿಳಿಸ ತಕ್ಕ ಮಾತು ತಿಳಿಯದೆ ಮೂಲುಗುವವರ ಪ್ರಾರ್ಥನೆ ಸಹ ಆತನಿಗೆ ತಕ್ಕ ಸುವಾಸನೆಯಾದ ಕಾಣಿಕೆಯಾಗಿಯೇ ಇರುತ್ತದೆ. ಭಕ್ತರಿಗೆ ಈ ಕಾಲದಲ್ಲಿ ಉಂಟಾಗುವ ಆಶೀರ್ವಾದಗಳಲ್ಲಿ ಇದೇ ಮುಖ್ಯವಾದದ್ದು. ಅವರಿಗೆ ಆದರಣೆಯನ್ನೂ ಆನಂದವನ್ನೂ ಉಂಟು ಮಾಡುವ ಬೇರೆ ಆಶೀರ್ವಾದಗಳನ್ನು ಅವರು ತರುವಾಯ ಹೊಂದುವರು. (೨೮—೩೦. ವ.)

4. ಎಲ್ಲಾ ಕಷ್ಟಗಳೂ ಸುಖ ದುಃಖಗಳೂ, ಸಹಿಸ ಕೂಡದ ಶ್ರಮೆಗಳೂ, ದೇವರ ಆಲೋಚನೆಯ ಪ್ರಕಾರ, ದೇವರ ಮೇಲೆ ಪೂರ್ಣ ಪ್ರೀತಿ ಇದ್ದ ಕ್ರಿಸ್ತನಿಗೆ ಮೇಲಿಗಾಗಿ ಅನುಕೂಲಿಸಿದವು. ಆತನ ಹೋಲಿಕೆಯನ್ನು ಅಲಂಕಾರವಾಗಿ ಧರಿಸಿ ಕೊಂಡು ಆತನಂತೆ ನಡಿಯುವವರಿಗೆ ಸಕಲವೂ ಮೇಲಿಗಾಗಿ ಕೈಕೂಡಿ ಬರುವವು. ಸುಖವೂ ದುಃಖವೂ, ಐಶ್ವರ್ಯವೂ ಬಡತನವೂ, ಜೀವವೂ ಮರಣವೂ ಆದ ಸಮಸ್ತವೂ ಭಕ್ತರಿಗೆ ಅನುಕೂಲವಾಗಿ ಮುಗಿಯುವವು. ಕ್ರಿಸ್ತನ ಹೋಲಿಕೆಯನ್ನು ಧರಿಸಿದವರು ಆತನ ಮಹಿಮೆಯಲ್ಲಿ ಪಾಲು ಹೊಂದುವದು ದೇವರ ನಿರ್ಣಯವು. ಅನೇಕ ಸಹೋದರರಲ್ಲಿ ಚೊಚ್ಚಲವನಾಗಿಯೂ ಮಹಿಮೆಯ ಸ್ವರೂಪನಾಗಿಯೂ ತೋರಿದ ಕ್ರಿಸ್ತನು ತನ್ನ ಮಹಿಮೆಯನ್ನು ತನ್ನ ಸಹೋದರರಿಗೂ ಕೊಡುತ್ತಾನೆ.

5. ಅನೇಕ ಸಹೋದರರೆಂಬುವದು ಒಬ್ಬರು ಎಣಿಸ ಕೂಡದ ಲೆಖ್ಖವನ್ನು ತೋರಿಸುತ್ತದೆ. (ಪ್ರಕಟ. ೭. ೪, ೯.)

6. ಮುಂತಿಳಿಯುವದು, ಮುನ್ನೇಮಿಸುವದು, ಕರೆಯುವದು, ನೀತಿನಿರ್ಣಯಿಸುವದು, ಮಹಿಮೆ ಪಡಿಸುವದು, ಈ ಐದು ಬಳೆಗಳುಳ್ಳ ಚಿನ್ನದ ಸರಪಣಿಯು ಸರ್ವಶಕ್ತನ ಕೈಯಲ್ಲಿ ಇರುತ್ತದೆ. ಈ ಸರಪಣಿಯು ಸರ್ವಶಕ್ತನ ಕೈಯಲ್ಲಿರುವಾಗ ಆತನಿಗೆ ವಿಘ್ನವುಂಟಾಗುವದು ಹ್ಯಾಗೆ? ಉತ್ತಮ ಭಕ್ತನು ನಿತ್ಯಾನಂದದಲ್ಲಿ ಸೇರುವ ಮಟ್ಟಿಗೂ ಆ ಕಟ್ಟು ಬಿಚ್ಚಿ ಹೋಗದು.



೩೧ ಹಾಗಾದರೆ ಇವುಗಳನ್ನು ಕುರಿತು ಏನು ಹೇಳುವ? ದೇವರು ನಮ್ಮ ಕಡೆಯವನಾದರೆ, [1]ನಮಗೆದುರು
೩೨ ಯಾರು? [2]ಸ್ವಂತ ಮಗನನ್ನು ಕನಿಕರಿಸದೆ, ಅವನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿ ಕೊಟ್ಟವನು [3]ಅವನ
೩೩ ಸಂಗಡ ನಮಗೆ ಎಲ್ಲಾ ದಯಪಾಲಿಸದೆ ಇರುವದು ಹ್ಯಾಗೆ? ದೇವರು ಆದು ಕೊಂಡವರ ಮೇಲೆ ತಪ್ಪು
೩೪ ಹೊರಿಸುವವನ್ಯಾರು? [4]ನೀತಿನಿರ್ಣಯಿಸುವವನು ದೇವರೇ. ಆಜ್ಞೆನಿರ್ಣಯಿಸುವವನ್ಯಾರು? ಸತ್ತವನು,
ಅದಲ್ಲದೆ ಎದ್ದವನು, ದೇವರ ಬಲಪಾರ್ಶ್ವದಲ್ಲಿ ಇರುವವನು, ನಮಗೋಸ್ಕರ ವಿಜ್ಞಾಪನೆ ಮಾಡುವವನು,
ಕ್ರಿಸ್ತನೇ.

೩೫ [5]ಕ್ರಿಸ್ತನ ಪ್ರೀತಿಗೆ ನಮ್ಮನ್ನು ಅಗಲಿಸುವವನ್ಯಾರು? ಉಪದ್ರವೋ? ಸಂಕಟವೋ? ಹಿಂಸೆಯೋ? ಬರವೋ?
೩೬ ಬೆತ್ತಲೆಯೋ? ಗಂಡಾಂತರವೋ? ಖಡ್ಗವೋ?— ನಿನ್ನ ನಿಮಿತ್ತ ದಿನವೆಲ್ಲಾ ಕೊಲ್ಲಲ್ಪಡುತ್ತೇವೆ, ಕೊ
ಯ್ಯಲ್ಪಡುವ ಕುರಿಗಳಂತ ಎಣಿಸಲ್ಪಟ್ಟಿದ್ಧೇವೆಂದು (ಕೀರ್ತ. ೪೪. ೨೨.) [6]ಬರೆದಿರುವ ಪ್ರಕಾರವೇ.
೩೭ ಆದರೆ ಇವೆಲ್ಲವುಗಳಲ್ಲಿ ನಮ್ಮನ್ನು ಪ್ರೀತಿ ಮಾಡಿದವನ ಮುಖಾಂತರ ಅಧಿಕ [7]ಜಯಶಾಲಿಗಳಾಗುತ್ತೇವೆ.
೩೮ ಯಾಕಂದರೆ ಮರಣವಾದರೂ, ಜೀವವಾದರೂ, ದೂತರಾದರೂ, ಅಧಿಕಾರಗಳಾದರೂ, ಬಲಗಳಾದರೂ,
೩೯ ಇರುವವುಗಳಾದರೂ, ಬರುವವುಗಳಾದರೂ, ಎತ್ತರವಾದರೂ, ಆಳವಾದರೂ, ಬೇರೆ ಯಾವ ಸೃಷ್ಟಿಯಾ
ದರೂ, ನಮ್ಮನ್ನು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ದೇವರ ಪ್ರೀತಿಗೆ ಅಗಲಿಸಲಾರದೆಂದು,
[8]ನಿಶ್ಚಯಿಸಿ ಕೊಂಡಿದ್ಧೇನೆ.

---

1. ನಮಗೆ ವಿರೋಧಿಗಳಾದ ಶತ್ರುಗಳು ಅನೇಕರಿದ್ದಾರೆ. ಆದಾಗ್ಯೂ ನಮ್ಮ ಪಕ್ಷವಾಗಿರುವ ದೇವರು ಎಲ್ಲರಿಗಿಂತ ಬಲಿಷ್ಠನಾಗಿದ್ದಾನೆ. (ಕೀರ್ತ. ೧೨೪.) ಆತನು ತನ್ನ ಸ್ವಂತ ಮಗನನ್ನು ಕೊಟ್ಟದ್ದರಿಂದ, ಬೇರೆ ಮೇಲುಗಳನ್ನೆಲ್ಲಾ ಕೊಡುವನೆಂಬುವದು ನಿಶ್ಚಯವಾಯಿತು. (೩೨. ವ.) ದೊಡ್ಡ ಮೇಲು ಮಾಡಿದವನು ಅಲ್ಪ ಮೇಲುಗಳನ್ನು ಮಾಡಲಾರನೆಂದು ಹ್ಯಾಗೆ ಹೇಳ ಬಹುದು?

2. ಯೋಹಾ. ೫. ೧೮; ೩. ೧೬. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.

3. ಹೆಚ್ಚಾದ ದೊಡ್ಡ ಉಪಕಾರ ಮಾಡಿದವನು ನಮ್ಮ ಮೇಲಿಗೆ ಅನುಕೂಲವಾದ ಆಶೀರ್ವಾದಗಳನ್ನೆಲ್ಲಾ ಕೊಡುವನೆಂಬುವದಕ್ಕೆ ಸಂದೇಹವಿಲ್ಲ. (೧ ಕೊರಿ. ೩. ೨೨.)

4. ಪ್ರಶ್ನೆಯಾಗಿಯೂ ಉತ್ತರವಾಗಿಯೂ ಪೌಲನು ಹೇಳಿದ ವಿಷಯಗಳು ಒಂದಕ್ಕೊಂದು ಬಹಳ ಸಮ್ಮಂಧವುಳ್ಳವುಗಳಾಗಿವೆ. ಸರ್ವಶಕ್ತನಾದ ದೇವರು ಆದುಕೊಂಡವರ ಮೇಲೆ ತಪ್ಪು ಹೊರಿಸಲೂ, ಅವರನ್ನು ಆಜ್ಞೆನಿರ್ಣಯಿಸಲೂ ಯಾರಿಂದಲಾಗುವದು? ದೇವರು ಅವರನ್ನು ನೀತಿವಂತರಾಗ ಮಾಡಿ, ಅವರು ನಿರಪರಾಧಿಗಳೆಂದು ತೀರಿಸುವವನು. ಆತನ ಸ್ವಂತ ಕುಮಾರನು ಅವರಿಗಾಗಿ ಸತ್ತು ಜೀವದಿಂದ ಎದ್ದು, ದೇವರ ಬಲಪಾರ್ಶ್ವದಲ್ಲಿ ಆಸೀನನಾಗಿದ್ದು, ಅವರಿಗೋಸ್ಕರ ವಹಿಸಿ ಮಾತಾಡುವವನು. ಹೀಗಿರಲಾಗಿ ಅವರ ಮೇಲೆ ತಪ್ಪು ನಿರ್ಣಯಿಸುವವನ್ಯಾರು?

5. ಇದು ಕ್ರಿಸ್ತನು ತನ್ನ ಭಕ್ತರ ಮೇಲೆ ಇಟ್ಟಿರುವ ಪ್ರೀತಿಯು. (೩೪, ೩೭, ೩೯. ವ.) ಅವರು ಪಡುವ ಯಾವ ಉಪದ್ರವಾದರೂ, ಅವರನ್ನು ಬಾಧಿಸುವ ಯಾವ ಶತ್ರುವಾದರೂ, ಕ್ರಿಸ್ತನಲ್ಲಿ ಪ್ರಕಟವಾದ ದೇವರ ಪ್ರೀತಿಯನ್ನು ಮಾರ್ಪಡಿಸುವದಕ್ಕಾಗದು, ಎಂಬುವದೇ ಭಕ್ತರಿಗೆ ಬಹಳ ಆದರಣೆ ಸಮಾಧಾನಗಳನ್ನು ಕೊಡ ತಕ್ಕದ್ದಾಗಿದೆ. (ಯೋಹಾ. ೧೦. ೨೮—೩೦.)

6. ಪೂರ್ವ ಕಾಲದಲ್ಲಿದ್ದ ದೇವಭಕ್ತರ ಹಾಗೆ ನಾವೆಲ್ಲರು ಉಪದ್ರಗಳನ್ನು ಅನುಭವಿಸ ಬೇಕಾಗಿದೆ. (ಕೀರ್ತ. ೪೪. ೨೨.)

7. ನಾವು ಇವುಗಳನ್ನೆಲ್ಲಾ ಜಯಿಸುವದು ಮಾತ್ರವಲ್ಲ, ಜಯೋತ್ಸವ ಮಾಡುತ್ತೇವೆ. ಇವೆಲ್ಲಾ ನಮಗೆ ನಷ್ಟ ಉಂಟು ಮಾಡಲಾರವು. ಮತ್ತು ನಮ್ಮ ಮೇಲಿಗಾಗಿ ಕೈಕೂಡಿ ಬರುವವು. (೨೮. ವ.; ೫. ೩.) ಇಂಥಾ ಜಯವು ಜಯಶಾಲಿಯಾದ ಕ್ರಿಸ್ತನಿಂದ ನಮಗುಂಟಾಗುತ್ತದೆ.

8. ಕಡೇ ಶತ್ರುವಾದ ಮರಣವಾಗಲಿ, ಅದರ ತರುವಾಯ ಬರುವ ಜೀವವಾಗಲಿ, ಮೇಲಾದ ಸೃಷ್ಟಿಗಳಾದ ದುರಾತ್ಮಗಳಾಗಲಿ, ಕಾಲಕ್ಕೊಳಪಟ್ಟ ಕಾರ್ಯಗಳಾಗಲಿ, ಸ್ಥಳಕ್ಕೆ ಒಳಪಟ್ಟ ಕಾರ್ಯಗಳಾಗಲಿ, ಕಣ್ಣಿಗೆ ತೋರಿದ್ದೂ ಮನಸ್ಸಿನಿಂದ ಗ್ರಹಿಸ ಕೂಡುವದೂ ಆದ ಮತ್ತ್ಯಾವ ವಸ್ತುವಾಗಲಿ, ಕ್ರಿಸ್ತನಲ್ಲಿ ಪ್ರಕಟವಾದ ದೇವರ ಮಾರ್ಪಡದ ಪ್ರೀತಿಯಿಂದ ಆತನ ಭಕ್ತರನ್ನು ಅಗಲಿಸುವದಿಲ್ಲ. ಕ್ರೈಸ್ತನೇ! ನೀನು ಪೌಲನ ಸಂಗಡ, ಜಯ! ಜಯವೆಂದು ಆರ್ಭಟಿಸು.

ಯೆಹೂದ್ಯರನ್ನು ತಳ್ಳಿ ಬಿಟ್ಟದರಲ್ಲಿ ತೋರಿದ ದೇವರ ನೀತಿಯೂ, ರಾಜತ್ವದ ಸ್ವಾಧೀನವೂ ಸರಿ ಎಂದು ನಿರೂಪಿಸಿದ್ದು.

9. [1]ಕ್ರಿಸ್ತನಲ್ಲಿ ಸತ್ಯವನ್ನು ಹೇಳುತ್ತೇನೆ, ಸುಳ್ಳಾಡುವದಿಲ್ಲ; ನನ್ನ [2]ಮನಸ್ಸಾಕ್ಷಿ ಪರಿಶುದ್ಧಾತ್ಮದಲ್ಲಿ ನನಗೆ
೨ ಕೂಡ ಸಾಕ್ಷಿ ಕೊಡುತ್ತದೆ. ಏನಂದರೆ, ನನಗೆ ಮಹಾ ದುಃಖವೂ, ನನ್ನ ಹೃದಯಕ್ಕೆ ಎಡೆಬಿಡದ
೩ ನೋವೂ, ಉಂಟು. ಯಾಕಂದರೆ ಮಾಂಸದ ಪ್ರಕಾರ ನನ್ನ ನೆಂಟರಾದ ನನ್ನ ಸಹೋದರರಿಗೋಸ್ಕರ
೪ ನಾನೇ [3]ಕ್ರಿಸ್ತನಿಂದ ಶಾಪಗ್ರಸ್ತನಾಗಿರ ಇಚ್ಛೈಸ್ಯೇನು. ಅವರು ಇಸ್ರಯೇಲ್ಯರಾಗಿದ್ದಾರೆ; [4]ಪುತ್ರಸ್ವೀಕಾ

1. ಕ್ರಿಸ್ತನನ್ನು ವಿಶ್ವಾಸಿಸುವವರಿಗೆ ಮಾತ್ರ ರಕ್ಷಣೆಯುಂಟೆಂದು ಪೌಲನು ನಿರೂಪಿಸಿದ ತರುವಾಯ, ಯೆಹೂದ್ಯರಿಗೂ ಜನಾಂಗಗಳವರಿಗೂ ಇರುವ ಸಮ್ಮಂಧವನ್ನು ಎತ್ತಿ ತೋರಿಸುತ್ತಾನೆ. (ಸಂಧಿ. ೯—೧೧.) ಕ್ರಿಸ್ತನನ್ನು ವಿಶ್ವಾಸದಿಂದ ಹೊಂದಿಕೊಳ್ಳುವವರು ಮಾತ್ರ ರಕ್ಷಿಸಲ್ಪಡುವರು ಅಂದರೆ, ಯೆಹೂದ್ಯರಲ್ಲಿ ಹೆಚ್ಚಾದವರು ಅದನ್ನು ಕಳಕೊಳ್ಳುವರೆಂದು ಹೇಳ ಬೇಕಾಯಿತಲ್ಲ? ಎಂಬುವದನ್ನು ಕುರಿತು ಪೌಲನು ಅಧಿಕ ಕ್ಲೇಷ ಪಡುತ್ತಾನೆ. (೯. ೧—೫.) ಆದಾಗ್ಯೂ ದೇವರ ವಾಗ್ದತ್ತವು ಅಬ್ರಹಾಮನ ಮಕ್ಕಳಾದವರೆಲ್ಲರಿಗೂ ಸಲ್ಲುವದಿಲ್ಲವಾದ ಕಾರಣ, ಅದು ಪೂರ್ಣವಾಗಿ ವ್ಯರ್ಥವಾಯಿತೆಂದು ಹೇಳ ಕೂಡದು. (೬—೧೩. ವ.) ಮನುಷ್ಯರು ಪರಲೋಕವನ್ನೈದುವದು ಸ್ವಂತ ಪುಣ್ಯದಿಂದ ಅಲ್ಲ, ದೇವರ ಉಚಿತವಾದ ಕೃಪೆಯಿಂದಲೇ ಪರಲೋಕವು ದೊರಕುತ್ತದೆ ಎಂಬುವದು ಆತನ ನೀತಿಗೆ ಕುಂದಲ್ಲ. ಆತನ ಕನಿಕರವು ಈಡಿಲ್ಲದ್ದಾದ್ದರಿಂದ ಕೆಲವರು ಅದನ್ನು ಹೊಂದುವದೂ, ಫರೋನನಂತೆ ಕೆಲವರು ಅದನ್ನು ಹೊಂದದೆ ಇರುವದೂ ಅನ್ಯಾಯವಲ್ಲ. (೧೪—೧೮. ವ.) ಇದರಿಂದ ಮನುಷ್ಯನ ಉತ್ತರವಾದವು ತಪ್ಪಿ ಹೋಯಿತೆಂದು ಹೇಳಲಾಗದು. ದೇವರು ತನ್ನ ಚಿತ್ತದ ಪ್ರಕಾರ ಎಲ್ಲವನ್ನು ಮಾಡ ತಕ್ಕ ಸ್ವಾಧೀನವುಳ್ಳವನಾಗಿದ್ದರೂ, ಆತನು ಆ ಸ್ವಾಧೀನವನ್ನು ತನ್ನ ನೀತಿಗೂ ಕನಿಕರಕ್ಕೂ ಭಂಗವಾಗುವ ಪ್ರಕಾರ ಮಾಡುವದಿಲ್ಲ. (೧೯—೨೪.ವ.) ರಕ್ಷಣೆಯ ವಿಷಯದಲ್ಲಿ ಯೆಹೂದ್ಯರೂ ಜನಾಂಗಗಳವರೂ ಒಂದೇ ಪ್ರಕಾರವಾಗಿದ್ದಾರೆ. ವಿಶ್ವಾಸಿಗಳಿಗೆ ಭಾಗ್ಯವೂ, ಯೆಹೂದ್ಯರಾಗಿದ್ದರೂ ಅವಿಶ್ವಾಸಿಗಳಿಗೆ ದೌರ್ಭಾಗ್ಯವೂ ಉಂಟಾಗುವದು. (೨೫—೨೯. ವ.) ಯೆಹೂದ್ಯರು ತಳ್ಳಲ್ಪಡುವದು ದೇವರ ನಿರ್ಣಯದಲ್ಲಿ ಅಡಕವಾಗಿದ್ದರೂ, ಅವಿಶ್ವಾಸದಿಂದಲೇ ಹಾಗೆ ತಳ್ಳಲ್ಪಟ್ಟರೆಂಬುವದು ಪ್ರಕಟವಾಗಿದೆ. (೩೦—೩೩ ವ.; ೧೦. ೧—೧೩.) ಅವರೆಲ್ಲರೂ ರಕ್ಷಣೆಯ ವಾಕ್ಯವನ್ನು ಕೇಳಿದ್ದದರಿಂದ, ಕೇಳದ್ದನ್ನು ಹ್ಯಾಗೆ ವಿಶ್ವಾಸಿಸುವರೆಂದು ನೆವನು ಹೇಳ ಸ್ಥಳವಿಲ್ಲ. (೧೪—೧೭. ವ.) ಅವರು ಸತ್ಯವನ್ನು ಅಂಗೀಕರಿಸದೆ ಹೋದದ್ದು ಪ್ರವಾದನೆಯ ಪ್ರಕಾರ ಅವರ ಅವಿಶ್ವಾಸವಾದ ಅವಗುಣದಿಂದಲೇ ಹೊರ್ತು ಅಜ್ಞಾನದಿಂದಲ್ಲ. (೧೮—೨೧. ವ.) ಯೆಹೂದ್ಯರು ತಳ್ಳಲ್ಪಟ್ಟರೆಂಬುವದರಲ್ಲಿ ಎಲ್ಲರೂ ಅಲ್ಲ, ಅವರಲ್ಲಿ ಕೆಲವರು ರಕ್ಷಿಸಲ್ಪಟ್ಟರೆಂದು ತೋರುತ್ತದೆ. ಆ ರಕ್ಷಣೆ ಹೊಂದುವದಕ್ಕೆ ಕೆಲವರು ಉಳಿಸಲ್ಪಟ್ಟಿದ್ದಾರೆ. (೧೧. ೧—೧೦.) ಅದನ್ನು ಹೊಂದದೆ ಇರುವವರು ಸಹ ಆ ಅಂಧಕಾರದ ಸ್ಥಿತಿಯಲ್ಲಿ ಎಂದಿಗೂ ಇರುವರೆಂದು ಹೇಳಲಾಗದು. ಜನಾಂಗಗಳವರು ಕರೆಯಲ್ಪಡುವದೂ, ಲೋಕದಲ್ಲಿ ಸುವಾರ್ತೆ ಪ್ರಸಿದ್ಧವಾಗುವದೂ, ಆದ ತರುವಾಯ ಯೆಹೂದ್ಯರೆಲ್ಲರೂ ಗುಣ ಪಡುವರು. ಅವರಲ್ಲಿ ಕೆಲವರು ಈಗ ದೇವಾನುಗ್ರಹವನ್ನು ಹೊಂದಿರುವದು ಅದಕ್ಕೆ ತಕ್ಕ ದೃಷ್ಟಾಂತವಾಗಿದೆ. (೧೧—೧೬. ವ.) ಇದರಿಂದ ಗುಣಪಟ್ಟ ಜನಾಂಗಗಳವರು ಹೆಚ್ಚಳ ಪಡದೆ, ಮನೋದೀನತ್ವವೂ, ಭಯಭಕ್ತಿಯೂ, ಕೃತಜ್ಞತೆಯೂ ಉಳ್ಳವರಾಗಿ ನಡೆದು ಕೊಳ್ಳ ತಕ್ಕದ್ದು. (೧೬—೨೪. ವ.) ಕಡೆಯಲ್ಲಿ ಇಸ್ರಯೇಲ್ಯರೆಲ್ಲರೂ ರಕ್ಷಿಸಲ್ಪಡುವರು. (೨೫—೩೨. ವ.) ಆದರಿಂದ ದೇವರ ಅಪರಿಮಿತವಾದ ಜ್ಞಾನವೂ ಪ್ರೀತಿಯೂ ಪ್ರಕಾಶಮಾನವಾಗಿ ತೋರುವವು. (೩೩—೩೬. ವ.)

2. ದೇವರ ಆತ್ಮನ ಕೃಪೆಯಿಂದ ಬೆಳಗಿಸಲ್ಪಟ್ಟ ಪೌಲನ ಮನಸ್ಸಾಕ್ಷಿಯು ಅವನು ಹೇಳುವದು ಸತ್ಯವೆಂದು ಸಾಕ್ಷಿ ಕೊಡುತ್ತದೆ. ಈ ಪತ್ರಿಕೆಯ ಮೊದಲನೇ ಭಾಗದಲ್ಲಿ ಪೌಲನು ಹೇಳಿದ ನ್ಯಾಯಗಳಿಂದ ತಮ್ಮನ್ನು ಮರೆತು ಬಿಟ್ಟನೆಂದು ತನ್ನ ಸ್ವಜಾತಿಯವರಾದ ಯೆಹೂದ್ಯರು ನೆನಸದ ಹಾಗೆ, ಅವರನ್ನು ಕುರಿತು ತನಗುಂಟಾಗಿದ್ದ ಮಹಾ ಚಿಂತೆಯನ್ನೂ ಮನೋವ್ಯಾಕುಲವನ್ನೂ ತಿಳಿಸುತ್ತಾನೆ.

3. ಕ್ರಿಸ್ತನು ತನ್ನ ಜನರ ಪಾಪಪರಿಹಾರದ ನಿಮಿತ್ತ ತಂದೆಯ ಮುಂದೆ ಶಾಪಗ್ರಸ್ತನಾಗಿ ನಿಂತ ಪ್ರಕಾರ, ಪೌಲನು ಸಹ ತನ್ನ ಜನರ ಪಾಪಪರಿಹಾರಕ್ಕಾಗಿಯೂ, ಅವರಿಗೆ ಆತ್ಮಸುಖವುಂಟಾಗ ತಕ್ಕದ್ದಾಗಿಯೂ, ಕ್ರಿಸ್ತನಿಂದ ತಾನೇ ಶಾಪಗ್ರಸ್ತನಾಗ ಮನಸ್ಸಾಗಿದ್ದನು, ಅನ್ನುತ್ತಾನೆ. (ಹೊರ. ೩೨. ೩೦. ದ್ವಿತೀಯ ನ್ಯಾ. ೭. ೨೬. ೧ ಕೊರಿ. ೧೬. ೨೨. ಗಲಾ. ೧. ೮.) ಮೋಶೆಯು ಸಹ ಇಸ್ರಯೇಲ್ಯರಿಗಾಗಿ ಇಂಥಾ ಕೋರಿಕೆಯುಳ್ಳವನಾಗಿದ್ದನೆಂದು ನೋಡುತ್ತೇವೆ. (ಹೊರ. ೩೨. ೩೨.) ತಾನು ಶಾಪ ಹೊಂದುವದು ದೇವರ ಚಿತ್ತಕ್ಕೆ ಸಮರ್ಪಕವಾಗಿಯೂ, ಯೆಹೂದ್ಯರ ಮೇಲಿಗೆ ಹೇತುವೆಯಾಗಿಯೂ ಇರುವದಾದರೆ, ಹಾಗೆ ಆಗುವದು ತನಗೆ ಇಷ್ಟವೆಂದು ಪೌಲನು ಹೇಳಿದಂತೆ ನೆನಸ ಬಹುದು. ಕ್ರಿಸ್ತನ ಮಾರ್ಗವು ಸ್ವಜನರ ಬಂಧುತ್ವದ ಕಟ್ಟನ್ನು ಮುರಿದು ಹಾಕದೆ ಅದನ್ನು ಬಲ ಪಡಿಸುವಂಥಾದ್ದಾಗಿದೆ. ಕ್ರಿಸ್ತನ ಅಮೋಘವಾದ ಪ್ರೀತಿಯನ್ನು ರುಚಿ ನೋಡಿದವರಲ್ಲಿ ಮಾತ್ರ ಇಂಥಾ ಪ್ರೀತಿ ಹುಟ್ಟುವದು.

4. ಅವರ ವಿಷಯ ತನ್ನಲ್ಲಿ ಇದ್ದ ಮನೋದುಃಖವನ್ನು ಹೇಳಿದ ತರುವಾಯ ಅವರಿಗುಂಟಾಗಿದ್ದ ಮಿರಾಶಿಗಳನ್ನು ಕುರಿತು ಹೇಳುತ್ತಾನೆ. ಅವರು ದೇವರ ಆಶೀರ್ವಾದವನ್ನು ಹೊಂದಿದ ಇಸ್ರಯೇಲ್ ಎಂಬ ಶ್ರೇಷ್ಠ ಹೆಸರು ಹೊಂದಿದ ಯಾಕೋಬನ ಸಂತತಿಯವರಾದ ಇಸ್ರಯೇಲ್ಯರು, ದೇವರ ಮಕ್ಕಳೆಂಬ ಪುತ್ರಸ್ವೀಕಾರ ಹೊಂದಿದವರು. (ಹೊರ. ೪. ೨೨. ದ್ವಿತೀಯ ನ್ಯಾ. ೧೪. ೧. ಯೆರೆ. ೩೧. ೯. ಹೊಶೇ. ೧೧. ೧.) ಪುತ್ರಸ್ವೀಕಾರ ಹೊಂದಿದ ಅವರು ಮಹಿಮೆಯನ್ನು ಸಹ ಹೊಂದಿದ್ದರು. ಇದು ದೇವಸನ್ನಿಧಿಗೆ ಗುರುತಾದ ಕೃಪಾಸನವನ್ನು ಮುಚ್ಚಿದ್ದ ಷೆಕೀನಾ ಎಂಬುವ ಪ್ರಕಾಶವುಳ್ಳ ಮೇಘವನ್ನು ಕುರಿತದ್ದು. (ಹೊರ. ೧೩. ೨೨; ೪೦. ೩೪. ೧ ಅರ. ೮. ೧೦.) ಒಡಂಬಡಿಕೆಗಳೂ ಅವರಿಗೆ ಸ್ವಂತವಾಗಿದ್ದವು. ಇದು ದೇವರು ಅಬ್ರಹಾಮ, ಇಸಾಕ, ಯಾಕೋಬ ಮುಂತಾದ ಅವರ ಪಿತೃಗಳ ಸಂಗಡ ಮಾಡಿದ್ದೂ, ಕಡೆಯಲ್ಲಿ



ರವೂ, ಮಹಿಮೆಯೂ, ಒಡಂಬಡಿಕೆಗಳೂ, ನ್ಯಾಯನೇಮಕವೂ, ಆರಾಧನೆಯೂ, ವಾಗ್ದತ್ತಗಳೂ ಅವ
೫ ರವು; ಪಿತೃಗಳು ಅವರ ಪಿತೃಗಳೇ. [1]ಅವರಿಂದ ಮಾಂಸದ ಪ್ರಕಾರ ಕ್ರಿಸ್ತನು; ಅವನು ಎಂದೆಂದಿಗೂ
ಸ್ತುತಿಸ ತಕ್ಕ ಸರ್ವಕ್ಕೂ ಮೇಲಾದ ದೇವರೇ. ಆಮೆನ್.
೬ ಆದರೆ [2]ದೇವರ ವಾಕ್ಯವು ಬಿದ್ದು ಹೋಯಿತು ಅಂತಲ್ಲ. ಯಾಕಂದರೆ ಇಸ್ರಯೇಲಿನವರೆಲ್ಲರು ಇಸ್ರಯೇಲಲ್ಲ.
೭ ಮತ್ತು ಅಬ್ರಹಾಮನ ಬೀಜವಾಗಿರುವದರಿಂದ ಎಲ್ಲರು ಮಕ್ಕಳಲ್ಲ; ಆದರೆ [3]ಇಸಾಕನಲ್ಲಿ ನಿನಗೆ ಬೀಜವು
೮ ಕರೆಯಲ್ಪಡುವದು. (ಉತ್ಪ. ೨೧. ೧೨.) ಏನಂದರೆ, ಮಾಂಸದ ಮಕ್ಕಳು ದೇವರ ಮಕ್ಕಳಲ್ಲ, [4]ವಾಗ್ದ
೯ ತ್ತದ ಮಕ್ಕಳೇ ಬೀಜವೆಂದು ಎಣಿಸಲ್ಪಡುತ್ತಾರೆ. ಯಾಕಂದರೆ ವಾಗ್ದತ್ತದ ಮಾತು ಇದೇ—ಈ ಸಮ
ಯಕ್ಕೆ ಬರುವೆನು, ಆಗ ಸಾರಳಿಗೆ ಮಗನು ಇರುವನು. (ಉತ್ಪ. ೧೮. ೧೦.)
೧೦ [5]ಅದು ಮಾತ್ರವಲ್ಲ, ರೆಬೆಕ್ಕಳು ಸಹ ನಮ್ಮ ತಂದೆಯಾದ ಇಸಾಕನೊಬ್ಬನಿಂದಲೇ ಗರ್ಭವತಿಯಾಗಿರಲಾಗಿ,
೧೧ ಆಯುವಿಕೆಯ ಪ್ರಕಾರವಾದ ದೇವರ ನಿರ್ಣಯವು ಕ್ರಿಯೆಗಳಿಂದಲ್ಲ, ಕರೆಯುವವನಿಂದಲೇ ನಿಲ್ಲುವ ಹಾಗೆ,
೧೨ ಯಾಕೋಬನನ್ನು ಪ್ರೀತಿ ಮಾಡಿ, ಏಸಾವನನ್ನು [6]ಹಗೆ ಮಾಡಿದ್ದೇನೆಂದು, (ಮಲಕಿ. ೧. ೨, ೩.) ಬರೆದಿ
೧೩ ರುವ ಪ್ರಕಾರ, ಅವರು ಇನ್ನು ಹುಟ್ಟದೆ, ಒಳ್ಳೇದು ಕೆಟ್ಟದ್ದು ಏನೂ ಮಾಡದೆ ಇರುವಾಗ, ಅಣ್ಣನು ತಮ್ಮ
ನಿಗೆ ದಾಸನಾಗಿರುವನೆಂದು, (ಉತ್ಪ. ೨೫. ೨೩.) ಅವಳಿಗೆ ಹೇಳಲ್ಪಟ್ಟಿತು.

ಸೀನಾಯ ಪರ್ವತದಲ್ಲಿ ದೃಢ ಪಡಿಸಿದ್ದೂ ಆದ ಒಡಂಬಡಿಕೆಗಳನ್ನು ಕುರಿತದ್ದು. ಪರಿಛೇದನೆಯು ಅದಕ್ಕೆ ಗುರುತಾಗಿತ್ತು. ಅದೇ ಪ್ರಕಾರ ನ್ಯಾಯಪ್ರಮಾಣವೂ ಅವರಿಗೆ ಕೊಡಲ್ಪಟ್ಟ ಮಿರಾಶಿಗಳಲ್ಲಿ ಒಂದಾಗಿತ್ತು. (ದ್ವಿತೀಯ ನ್ಯಾ. ೪. ೮.) ದೇವಾರಾಧನೆ ಸಹ ಅವರಿಗುಂಟಾಗಿದ್ದ ಒಂದು ಆಶೀರ್ವಾದವಾಗಿತ್ತು. ಇದು ಅವರ ದೇವಾಲಯದಲ್ಲಿ ನಡಿಸಲ್ಪಟ್ಟ ಆಚರಣೆಗಳನ್ನೆಲ್ಲಾ ಕುರಿತದ್ದು. ಅವರು ಹೊಂದಿದ ಮೇಲುಗಳಲ್ಲಿ ವಾಗ್ದತ್ತಗಳು ಒಂದಾಗಿತ್ತು. ಎಲ್ಲಾ ವಾಗ್ದತ್ತಗಳಲ್ಲಿಯೂ ಮೆಸ್ಸೀಯನೆಂಬ ಲೋಕರಕ್ಷಕನನ್ನು ಕುರಿತ ವಾಗ್ದತ್ತಗಳೇ ಶ್ರೇಷ್ಠವಾದವುಗಳು. (ಗಲಾ. ೩. ೧೬.) ಪಿತೃಗಳೂ ಅವರ ಪಿತೃಗಳೇ. ಅಬ್ರಹಾಮನು ಮುಂತಾದ ಪೂರ್ವ ಪಿತೃಗಳೆಲ್ಲಾ ಅವರಿಗೆ ಸ್ವಂತವು.

1. ಲೋಕರಕ್ಷಕನಾದ ಕ್ರಿಸ್ತನು ಅಬ್ರಹಾಮನ ಸಂತತಿಯಲ್ಲಿ ಅದ್ಭುತವಾಗಿ ಜನ್ಮಿಸಿದ್ದೇ ಅವರು ಹೊಂದಿ ಇದ್ದ ಎಲ್ಲಾ ಶ್ಲಾಘ್ಯಗಳಲ್ಲಿಯೂ ಮೇಲಾದ ಶ್ಲಾಘ್ಯವು. ಆತನು ಮಾಂಸದ ಪ್ರಕಾರ ಅಥವಾ ಮನುಷ್ಯತ್ವದ ಪ್ರಕಾರ ಹುಟ್ಟಿದನು ಎಂಬುವದರಲ್ಲಿ ಆತನಿಗೆ ದೇವತ್ವವೆಂಬ ಬೇರೊಂದು ಶ್ರೇಷ್ಠ ಸ್ವಭಾವವು ಇತ್ತೆಂಬುವದು ಪ್ರತ್ಯಕ್ಷವಾಗಿದೆ. ಅದರಿಂದಲೇ ಪೌಲನು ಈ ವಚನದಲ್ಲಿ ಆತನು ಎಂದೆಂದಿಗೂ ಸ್ತುತಿಸಲ್ಪಡ ತಕ್ಕ ಸರ್ವಕ್ಕೂ ಮೇಲಾದ ದೇವರೆಂದು ಹೇಳಿ, ಆಮೆನ್ ಎಂದು ಮಹಾ ಭಕ್ತಿವಿನಯದಿಂದ ಮುಗಿಸುತ್ತಾನೆ.

2. ತನಗೆ ಪ್ರಿಯರಾದ ಸ್ವದೇಶದವರು ತಳ್ಳಲ್ಪಟ್ಟದ್ದನ್ನು ಕುರಿತು ಪೌಲನು ಅಧಿಕವಾದ ಕ್ಲೇಷವುಳ್ಳವನಾಗಿದ್ದರೂ, ಅವರ ವಿಷಯವಾದ ದೇವರ ವಾಕ್ಯವು ಮಾರ್ಪಡಲಿಲ್ಲವೆಂದು ಹೇಳುತ್ತಾನೆ. ಇಸ್ರಯೇಲನ ಸಂತತಿಯವರೆಲ್ಲರೂ ದೇವರ ವಾಗ್ದತ್ತವನ್ನು ಹೊಂದಿದ ನಿಜವಾದ ಇಸ್ರಯೇಲ್ಯರಲ್ಲ. (ಯೆಶಾ. ೬೬. ಸಂಧಿ.) ಅಬ್ರಹಾಮನ ಸಂತತಿಯಲ್ಲಿ ಕೆಲವರು ಮಾತ್ರ ತನ್ನ ಆಶೀರ್ವಾದಗಳನ್ನು ಹೊಂದುವರೆಂದು ದೇವರು ಆದಿಯಲ್ಲಿಯೇ ಹೇಳಿ ಇದ್ದನು. (೬—೧೩. ವ.)

3. ಅಬ್ರಹಾಮನ ಮಕ್ಕಳಾದ ಇಷ್ಮಯೇಲನು ಇಸಾಕನು ಎಂಬವರಲ್ಲಿ ಇಸಾಕನೇ ಒಡಂಬಡಿಕೆಯ ಆಶೀರ್ವಾದಕ್ಕೆ ಬಾಧ್ಯನಾದನು. (ಉತ್ಪ. ೨೧. ೧೨.) ಕೃಪೆಯಿಂದ ಆಯಲ್ಪಟ್ಟವರಿಗೆ ಇಸಾಕನ ಸಂಗತಿಯು ಒಂದು ಉದಾಹರಣೆಯಾಗಿ ಪೌಲನು ಹೇಳುತ್ತಾನೆ. (೧೧, ೨೪. ವ.; ಸಂಧಿ. ೧೧. ೫. ಮತ್ತು ಇದೇ ಸಂಧಿ. ೩೦—೩೩ ವಚನಗಳನ್ನೂ ೧೧. ೨೫. ವಚನವನ್ನೂ ಸರಿ ನೋಡು.) ಇಸ್ರಯೇಲ್ಯರನ್ನು ದೇವರು ನಡಿಸುತ್ತಾ ಬಂದ ತನ್ನ ಸ್ವಾಧಿಕಾರದ ಕ್ರಿಯೆಯನ್ನು ತೋರಿಸುವ ಉದ್ದಿಶ್ಯ ಇಸಾಕನು ಯಾಕೋಬನು ಎಂಬವರ ದೃಷ್ಟಾಂತವನ್ನು ಹೇಳಿದ್ದಾನೆ. (೧೦—೧೩. ವ.)

4. ದೇವರ ವಾಗ್ದತ್ತದ ಪ್ರಕಾರ ಹುಟ್ಟಿದವರೇ ಆಶೀರ್ವಾದಕ್ಕೆ ಬಾಧ್ಯಸ್ಥರು. ಕರುಣೆಯುಳ್ಳ ದೇವರ ಕೃಪೆಯಿಂದ ಆತನ ಮಕ್ಕಳಾದವರಿಗೆ ವಾಗ್ದತ್ತದ ಪ್ರಕಾರ ಹುಟ್ಟಿದ ಇಸಾಕನು ಗುರುತಾಗಿದ್ದನು. (೯. ವ. ಗಲಾ. ೪. ೨೩.)

5. ಸಾರಳ ಮಗನು ಮಾತ್ರವಲ್ಲ, ರೆಬೆಕ್ಕಳ ಮಕ್ಕಳು ಸಹ ಇದಕ್ಕೆ ದೃಷ್ಟಾಂತವಾಗಿದ್ದಾರೆ. ಇವರು ಒಬ್ಬನೇ ತಂದೆಯಿಂದಲೂ, ಒಬ್ಬಳೇ ತಾಯಿಯಿಂದಲೂ ಒಂದೇ ಸಮಯದಲ್ಲಿ ಹುಟ್ಟಿದಂಥ ಮಕ್ಕಳಾಗಿದ್ದಾಗ್ಯೂ, ದೇವರ ಆಶೀರ್ವಾದವು ಹಿರಿಯನಾದ ಏಸಾವನಿಗೆ ದೊರಕದೆ, ಕಿರಿಯನಾದ ಯಾಕೋಬನಿಗೆ ದೊರಕಿತು. ಇವರು ಹುಟ್ಟುವದಕ್ಕಿಂತ ಮುಂಚೆಯೇ ಇವರ ಅಂತ್ಯವು ಪ್ರವಾದನೆಯಾಗಿ ಹೇಳಲ್ಪಟ್ಟಿತು. (ಹೊಶೇ. ೧೨. ೩.) ಇದನ್ನು ಯೋಚಿಸುವಾಗ ಇವರು ದೇವರ ಸ್ವಾಧೀನಚಿತ್ತದಿಂದಲೇ ಹೊರ್ತು, ತಮ್ಮ ಪುಣ್ಯಕ್ರಿಯೆಗಳಿಂದ ಆರಿಸಿ ಕೊಳ್ಳಲ್ಪಡಲಿಲ್ಲವೆಂದು ಪ್ರತ್ಯಕ್ಷವಾಗಿ ತೋರುತ್ತದೆ. ಉತ್ಪ. ೨೫. ೨೩. ವಚನವನ್ನೂ ಮಲಕಿ. ೧. ೨, ೩. ವಚನಗಳನ್ನೂ ಇಲ್ಲಿ ಎತ್ತಿ ಹೇಳಿರುವದನ್ನು ನೋಡುವಾಗ, ಏಸಾವ ಯಾಕೋಬ ಎಂಬವರ ಸಂತತಿಯವರನ್ನು ಕುರಿತೇ ಹೀಗೆ ಹೇಳಲ್ಪಟ್ಟಿದೆ ಎಂದು ತಿಳಿಯ ಬಹುದು.

6. ಇದರಿಂದ ಯಾಕೋಬನ ಮೇಲೆಯೂ ಅವನ ಸಂತತಿಯವರ ಮೇಲೆಯೂ ದೇವರ ದಯವೂ, ಏಸಾವನ ಮೇಲೆಯೂ ಅವನ ಸಂತತಿಯವರ ಮೇಲೆಯೂ ದೇವರ ಕೋಪವೂ ಪ್ರಕಟವಾಯಿತೆಂದು ತಿಳಿಯ ಬಹುದು. (ಮಲಕಿ. ೧. ೪.)

೧೪, ೧೫ ಹಾಗಾದರೆ, ಏನು ಹೇಳುವ? ದೇವರ ಬಳಿಯಲ್ಲಿ ಅನ್ಯಾಯ ಉಂಟೋ? ಆಗದು. ಯಾಕಂದರೆ
ನಾನು ಕರುಣಿಸುವವನನ್ನು ಕರುಣಿಸುವೆನು, ನಾನು ಕನಿಕರಿಸುವವನನ್ನು ಕನಿಕರಿಸುವೆನು ಎಂದು,
೧೬ ಮೋಶೆಗೆ ಹೇಳುತ್ತಾನೆ. (ಹೊರ. ೩೩. ೧೯.) ಆದದರಿಂದ ಇಚ್ಛೈಸುವವನಿಂದಲ್ಲ, ಓಡುವವನಿಂದಲ್ಲ,
೧೭ [1]ಕರುಣಿಸುವ ದೇವರಿಂದಲೇ. [2]ಯಾಕಂದರೆ ನಿನ್ನಲ್ಲಿ ನನ್ನ ಬಲವನ್ನು ತೋರಿಸುವ ಹಾಗೆಯೂ, ಸರ್ವ
ಭೂಮಿಯಲ್ಲಿ ನನ್ನ ನಾಮವು ಪ್ರಸಿದ್ಧವಾಗುವ ಹಾಗೆಯೂ, ಇದಕ್ಕೋಸ್ಕರವೇ [3]ನಿನ್ನನ್ನು ಎಬ್ಬಿಸಿದ್ದೇನೆಂದು
೧೮ ಬರಹವು ಫರೋನನಿಗೆ ಹೇಳುತ್ತದೆ. ಹಾಗಾದರೆ, [4]ಬೇಕಾದವನನ್ನು ಕರುಣಿಸುತ್ತಾನೆ, ಬೇಕಾದವನನ್ನು
ಕಠಿಣ ಪಡಿಸುತ್ತಾನೆ.
೧೯ ಹೀಗಿರಲಾಗಿ, ಇನ್ನು ಯಾಕೆ ತಪ್ಪು ಹಿಡಿಯುತ್ತಾನೆ? ಅವನ ಚಿತ್ತವನ್ನು ಎದುರಿಸಿದವನ್ಯಾರೆಂದು, ನನಗೆ
೨೦ ಹೇಳುವಿ. ಛೀ! ಮನುಷ್ಯನೇ, ದೇವರಿಗೆ ಎದುರಾಡುವ ನೀನ್ಯಾರು? [5]ನಿರ್ಮಾಣವು ನಿರ್ಮಾಣಿಕನಿಗೆ,
೨೧ ನನ್ನನ್ನು ಹೀಗೆ ಮಾಡಿದ್ದೇನೆಂದು ಹೇಳುವದುಂಟೋ? ಏನು! ಒಂದೇ ಮುದ್ದೆಯಿಂದ, ಮಾನಕ್ಕೆ ಒಂದು
ಪಾತ್ರೆಯನ್ನೂ, ಅವಮಾನಕ್ಕೆ ಮತ್ತೊಂದನ್ನೂ ಮಾಡ, ಮಣ್ಣಿನ ಮೇಲೆ ಕುಂಬಾರನಿಗೆ ಅಧಿಕಾರವಿಲ್ಲವೋ?
೨೨ [6]ದೇವರು ತನ್ನ ಕೋಪವನ್ನು ತೋರಿಸಲೂ, ತನಗೆ ಸಾಧ್ಯವಾದದ್ದನ್ನು ತಿಳಿಯ ಮಾಡಲೂ, ಮನಸ್ಸಾಗಿದ್ದು,

1. ದೇವರು ತನ್ನ ಸ್ವಾಧೀನಚಿತ್ತದ ಪ್ರಕಾರ ತನಗೆ ಇಷ್ಟವಾದವರನ್ನು ಆದು ಕೊಂಡು, ಅವರಿಗೆ ತನ್ನ ಕನಿಕರವನ್ನು ತೋರಿಸುತ್ತಾನೆ ಎಂಬುವದರಲ್ಲಿ ದೇವರ ನೀತಿಗೆ ಸ್ವಲ್ಪವಾದರೂ ಕುಂದು ಆಗಲಿಲ್ಲವೆಂದು ಈ ವಚನಗಳಲ್ಲಿ ದೃಷ್ಟಾಂತ ಪಡಿಸಿ ಇದೆ. ಆತನು ತನಗೆ ಸ್ವಂತವಾದದರಲ್ಲಿ ತನ್ನ ಚಿತ್ತದ ಪ್ರಕಾರ ಕೆಲವರಿಗೆ ವರಗಳನ್ನು ಕೊಡುತ್ತಾನೆಂಬುವದರಲ್ಲಿ ಅಸತ್ಯವೇನು ಇದೆ? ಕೃಪೆ ಬೇಕೆಂದು ಆಶೆಯಿಂದ ಪ್ರಾರ್ಥಿಸುವವರಿಗೆ ಅದು ದೊರಕದೆ ಇರದು. ಆದಾಗ್ಯೂ ಇಂಥಾ ಆಶೆಯು ಸಮಸ್ತ ಮೇಲಿಗೆ ಬುಗ್ಗೆಯಾಗಿರುವ ದೇವರ ಸ್ವಾಧೀನವಾದ ಕನಿಕರದಿಂದಲೇ ಉಂಟಾಗ ಬೇಕು. ಆದದರಿಂದ ನಾವು ಆತನನ್ನು ಯಥಾರ್ಥವಾಗಿ ಬೇಡುವ.

2. ದೇವರ ನೀತಿಗೆ ನ್ಯೂನತೆ ಇಲ್ಲದೆ, ದೇವರ ಚಿತ್ತದ ಪ್ರಕಾರ ಪ್ರಕಟವಾದ ದಂಡನೆಯನ್ನು ತೋರಿಸುವ ನಿಮಿತ್ತ ಫರೋನನ ದೃಷ್ಟಾಂತವನ್ನು ತೋರಿಸಿ ಇರುತ್ತದೆ. (೧೭. ವ.)

3. ಫರೋನನೆಂಬ ಕ್ರೂರ ಅರಸನು ದೇವರ ಕೃಪೆಯನ್ನೂ ತಾಳ್ಮೆಯನ್ನೂ ಹೀನೈಸಿ, ಮಹಾ ಪಾತಕನಾಗಿ ನಡಿಯುವನೆಂದು ದೇವರು ಮುಂತಿಳಿದಿದ್ದಾಗ್ಯೂ, ತನ್ನ ಅಪರಿಮಿತವಾದ ಜ್ಞಾನದ ಪ್ರಕಾರ ಅವನನ್ನು ಐಗುಪ್ತದ ಅರಸನಾಗಿ ಏರ್ಪಡಿಸಿ, ಗುಣ ಪಡದ ಕಠಿಣ ಹೃದಯವುಳ್ಳ ಪಾಪಿಗಳಿಗೆ ಬರುವ ದಂಡನೆಗೆ ಮುಂಗುರುತಾಗಿ ಅವನ ಮೇಲೆ ತನ್ನ ಉಗ್ರ ಕೋಪವನ್ನು ತೋರಿಸುವ ಹಾಗೆ ಅವನನ್ನು ಸಿಂಹಾಸನದ ಮೇಲೆ ನಿಲ್ಲಿಸಿದನು. ದೇವರ ದೀರ್ಘಶಾಂತಿಯಿಂದ ಅವನಿಗೆ ಮೇಲು ಉಂಟಾಗಲಿಲ್ಲ, ಕೇಡೇ ಉಂಟಾಯಿತೆಂದು ನೋಡುತ್ತೇವೆ. (೨೨. ವ. ಹೊರ. ೮. ೧೫; ೯. ೩೪, ೩೫. ರೋಮಾ. ೨. ೨, ೪. ೨ ಪೇತ್ರ. ೩. ೪, ೯, ೧೫, ೧೬.)

4. ಮೋಶೆಯ ವಿಷಯದಲ್ಲಿ ದೇವರ ದಯವೂ, ಫರೋನನ ವಿಷಯದಲ್ಲಿ ದೇವರ ದಂಡನೆಯೂ ಪ್ರಕಟವಾದದ್ದನ್ನು ಯೋಚಿಸುವಾಗ ದೇವರು ತನ್ನ ಸ್ವಾಧೀನವಾದ ಚಿತ್ತದ ಪ್ರಕಾರ ಸಕಲವನ್ನೂ ನಡಿಸುತ್ತಾನೆಂದು ತಿಳಿಯ ಬಹುದು. (ಹೊರ. ೪. ೨೧. ಯೆಶಾ. ೬. ೯.) ದೇವರು ಸ್ಥಳ ಕೊಡಲಾಗಿ ನಡಿಯುವ ಕಾರ್ಯವನ್ನು ಆತನೇ ನಡಿಸಿದನೆಂದು ವೇದದಲ್ಲಿ ಆಗಾಗ್ಯೆ ಹೇಳಿರುವದುಂಟು. ಸಮಸ್ತ ಮನುಷ್ಯರು ರಕ್ಷಿಸಲ್ಪಡುವದೂ, ಸತ್ಯವನ್ನು ಗ್ರಹಿಸುವದೂ ಇದೇ ದೇವರ ಚಿತ್ತವು. (೧ ತಿಮೋ. ೨. ೩, ೪.) ಈ ದಯಾಳ ಚಿತ್ತವು ಪರಿಶುದ್ಧಾತ್ಮನ ಕ್ರಿಯೆಯಿಂದಲೇ ಫಲಿತವಾಗ ಬೇಕು. ಆ ಆತ್ಮನನ್ನು ಎದುರಿಸುವವರು ತಮಗೆ ಕೇಡಾಗುವಂತೆ ದೇವರ ಆಲೋಚನೆಯನ್ನು ಅಲಕ್ಷ್ಯ ಮಾಡುತ್ತಾರೆ. (ಲೂಕ. ೭. ೩೦.) ಹೀಗೆ ಅದನ್ನು ಅಲಕ್ಷ್ಯ ಮಾಡುವವರು ದೇವರ ದಂಡನೆಗೆ ಹೇತುವೆಯಾಗುತ್ತಾರೆ. ಗುಣ ಪಡದ ಪಾಪಿಷ್ಠರು ದಂಡನೆ ಹೊಂದುವದು ದೇವರ ಚಿತ್ತವಾಗಿರುವದರಿಂದ, ಬೇಕಾದವನನ್ನು ಕಠಿಣ ಪಡಿಸುತ್ತಾನೆಂದು ಹೇಳಿ ಇದೆ. ಗುಣ ಪಡುವದಕ್ಕೆ ಇಷ್ಟವಿಲ್ಲದವನು ಗುಣ ಪಡ ಶಕ್ತಿ ಇಲ್ಲದವನಾಗುತ್ತಾನೆ. ಕಲಹಗುಣವುಳ್ಳ ಪಾಪಿಯು ಕಠಿಣ ಮನಸ್ಸುಳ್ಳ ಪಾಪಿಯಾಗುತ್ತಾನೆ. ಇಂಥಾ ಪ್ರಮಾಣವನ್ನು ಮನುಷ್ಯನಲ್ಲಿ ಇಟ್ಟವನು ಈ ಪ್ರಮಾಣದ ಪ್ರಕಾರ ಕೆಲ ಸಮಯಗಳಲ್ಲಿ ಹಲವು ಕಾರ್ಯಗಳನ್ನು ಸಂಭವಿಸ ಮಾಡುವಾಗ ಆತನೇ ಅವುಗಳನ್ನು ಮಾಡಿದನೆಂದು ಹೇಳಲ್ಪಡುತ್ತದೆ.

5. ಈ ವಚನದಲ್ಲಿರುವ ಎರಡು ಪ್ರಶ್ನೆಗಳಲ್ಲಿ ಮೊದಲನೇ ಪ್ರಶ್ನೆ ಯೆಶಾ. ೪೫. ೯. ವಚನಕ್ಕೆ ಸರಿಯಾಗಿಯೂ, ಎರಡನೇ ಪ್ರಶ್ನೆ ಯೆರೆ. ೧೮. ೪—೬. ವಚನಗಳಿಗೆ ಸರಿಯಾಗಿಯೂ ಇರುತ್ತವೆ. ದೇವರ ಸ್ವಾಧೀನಚಿತ್ತವು ಮನುಷ್ಯನ ಉತ್ತರವಾದವನ್ನು ನಾಶ ಮಾಡುವದಿಲ್ಲವೋ? ಎಂದು, ಗುಣ ಪಡದ ಪಾಪಿಯು ೧೯ನೇ ವಚನದಲ್ಲಿ ಕೇಳಿದ ಪ್ರಶ್ನೆಗೆ ಪೌಲನು, ದೇವರು ತನ್ನ ಇಷ್ಟದ ಪ್ರಕಾರ ಸಕಲವನ್ನೂ ಮಾಡ ತಕ್ಕವನಾಗಿದ್ದಾನೆ ಎಂಬ ನ್ಯಾಯವನ್ನು ಹೇಳಿ ಅದನ್ನು ನಿರಾಕರಿಸುತ್ತಾನೆ.

6. ಹೀಗೆ ಖಂಡಿಸಿದ ತರುವಾಯ ಆಕ್ಷೇಪಣೆಗೆ ಸಮಾಧಾನ ಹೇಳುತ್ತಾನೆ. ಕುಂಬಾರನು ತನ್ನ ಇಷ್ಟದ ಪ್ರಕಾರ ಜೇಡು ಮಣ್ಣಿನಲ್ಲಿ ಒಂದು ಭಾಗವನ್ನು ಘನವಾದ ಪಾತ್ರೆಯಾಗಿಯೂ, ಇನ್ನೊಂದು ಭಾಗವನ್ನು ಹೀನವಾದ ಪಾತ್ರೆಯಾಗಿಯೂ ಮಾಡ ತಕ್ಕ ಸ್ವತಂತ್ರವುಳ್ಳವನಾಗಿರುವ ಪ್ರಕಾರ, ದೇವರು ಸಹ ತನ್ನ ಸ್ವಾಧೀನ ಚಿತ್ತದ ಪ್ರಕಾರ, ಬದಲೇನೂ ಇಲ್ಲದೆ ಕೆಲವರಿಗೆ ತನ್ನ ದಯವನ್ನು ಅನುಗ್ರಹಿಸಿ, ಆತನ ಕೃಪೆಯನ್ನು ಗ್ರಹಿಸದೆ ಮತ್ತೂ ಮತ್ತು ಪಾಪ ಮಾಡುತ್ತಾ ಬಂದ ಕಠಿಣ ಪಾಪಿಗಳಾದ ಕೆಲವರಿಗೆ ದಂಡನೆ ವಿಧಿಸಿದರೆ, ಅನೀತಿ ಎಂದು ಯಾರು ಹೇಳ ಬಹುದು? ದೇವರು



೨೩ ನಾಶಕ್ಕೆ ಸಿದ್ಧ ಮಾಡಲ್ಪಟ್ಟ ಕೋಪದ ಪಾತ್ರೆಗಳನ್ನು ಬಹು ದೀರ್ಘಶಾಂತಿಯಿಂದ ತಾಳಿ ಕೊಂಡು, ತಾನು
ಮುಂಚೆ ಮಹಿಮೆಗೆ ಸಿದ್ಧ ಮಾಡಿದ ಕೃಪೆಯ ಪಾತ್ರೆಗಳ ಮೇಲೆ ತನ್ನ ಮಹಿಮೈಶ್ವರ್ಯವನ್ನು ತಿಳಿಯ
೨೪ ಮಾಡಿದರೇನು? ಯೆಹೂದ್ಯರಿಂದ ಮಾತ್ರವಲ್ಲ, ಜನಾಂಗಗಳಿಂದ ಸಹ ಅವನು ಕರೆದ ನಮ್ಮ ಮೇಲೆಯೇ.
೨೫ ಹಾಗೆಯೇ, [1]ಹೊಶೇಯನಲ್ಲಿ ಹೇಳುತ್ತಾನೆ—ನನ್ನ ಪ್ರಜೆಯಲ್ಲದ್ದನ್ನು ನನ್ನ ಪ್ರಜೆ ಎಂದೂ, ಪ್ರಿಯಳಲ್ಲದವ
೨೬ ಳನ್ನು ಪ್ರಿಯಳೆಂದೂ, ಕರೆಯುವೆನು. (ಹೊಶೇ. ೨. ೨೩.) ಮತ್ತು ಆಗುವದೇನಂದರೆ, ಯಾವ ಸ್ಥಳ
ದಲ್ಲಿ, ನೀವು ನನ್ನ ಪ್ರಜೆ ಅಲ್ಲವೆಂದು ಅವರಿಗೆ ಹೇಳಲ್ಪಟ್ಟಿತೋ, ಅಲ್ಲಿ ಜೀವವುಳ್ಳ ದೇವರ ಮಕ್ಕಳೆಂದು ಕರೆ
ಯಲ್ಪಡುವರು. (ಹೊಶೇ. ೧. ೧೦.)
೨೭ ಆದರೆ, ಯೆಶಾಯನು ಇಸ್ರಯೇಲನ್ನು ಕುರಿತು ಕೂಗುವದೇನಂದರೆ—ಇಸ್ರಯೇಲನ ಮಕ್ಕಳ ಲೆಖ್ಖವು
೨೮ ಸಮುದ್ರದ ಮರಳಿನ ಹಾಗಿದ್ದರೂ, [2]ಉಳುವು ರಕ್ಷಿಸಲ್ಪಡುವದು. ಹ್ಯಾಗಂದರೆ, [3]ಕಾರ್ಯವನ್ನು ನೀತಿ
ಯಿಂದ ತೀರಿಸಿ, ಅಡಕ ಮಾಡುವನು; ಯಾಕಂದರೆ ಕರ್ತನು ಭೂಮಿಯಲ್ಲಿ ಅಡಕವಾದ ಕಾರ್ಯವನ್ನು
೨೯ ಮಾಡುವನು. (ಯೆಶಾ. ೧೦. ೨೨, ೨೩.) ಮತ್ತು ಯೆಶಾಯನು [4]ಮುಂಚೆ ಹೇಳಿದ ಹಾಗೆ [5]ಸೈನ್ಯಗಳ
ಕರ್ತನು ನಮಗೆ ಬೀಜವನ್ನು ಉಳಿಸದಿದ್ದರೆ, ಸೊದೋಮಿನ ಹಾಗೆ ಆಗುತ್ತಿದ್ದೆವು, ಗಮೋರಕ್ಕೆ ಸಮಾನ
ಮಾಡಲ್ಪಡುತ್ತಿದ್ದೆವು. (ಯೆಶಾ. ೧. ೯.)
೩೦ ಹಾಗಾದರೆ, ಏನು ಹೇಳುವ? ನೀತಿಯನ್ನು ಹಿಂದಟ್ಟದ ಜನಾಂಗಗಳು ನೀತಿಯನ್ನು, ವಿಶ್ವಾಸದಿಂದಾಗುವ
೩೧ ನೀತಿಯನ್ನೇ, ಹಿಡಿದಿದ್ದಾರೆ. ಆದರೆ ನೀತಿಯ ಪ್ರಮಾಣವನ್ನು ಹಿಂದಟ್ಟಿದ ಇಸ್ರಯೇಲು ನೀತಿಯ ಪ್ರಮಾ
೩೨ ಣಕ್ಕೆ ಮುಟ್ಟಲಿಲ್ಲ. ಯಾಕೆ? ವಿಶ್ವಾಸದಿಂದಲ್ಲ, ನ್ಯಾಯಪ್ರಮಾಣದ ಕ್ರಿಯೆಗಳಿಂದಾದ ಹಾಗೆ ಹಿಂದಟ್ಟಿದ್ದ
೩೩ ರಿಂದಲೇ. ಯಾಕಂದರೆ ಎಡವುವ ಕಲ್ಲಿಗೆ [6]ಎಡವಿದರು. ಇದಕ್ಕೆ [7]ಬರೆದದ್ದೇನಂದರೆ, ಇಗೋ, ಚಿಯೋನಿ

ಹೀಗೆ ಮಾಡುವದಕ್ಕೆ ತಕ್ಕ ನ್ಯಾಯಗಳು ಇರುವವು. ದೇವರಿಗೆ ತಿಳಿದ ಈ ನ್ಯಾಯಗಳು ಮನುಷ್ಯರಿಗೆ ತಿಳಿಯದೆ ಇದ್ದಾಗ್ಯೂ, ಆತನ ಮೇಲೆ ನ್ಯೂನತೆ ಎಣಿಸುವದು ಸರಿಯಲ್ಲ. ಕೋಪಾಜ್ಞೆಯ ಪಾತ್ರೆಗಳಾಗಿರುವದು ಮನುಷ್ಯರ ತಪ್ಪೇ ಹೊರ್ತು, ದೇವರ ತಪ್ಪಲ್ಲ. ಮನುಷ್ಯರು ದೇವರ ವರಗಳನ್ನು ಅಲಕ್ಷ್ಯ ಮಾಡಿ ಗುಣ ಪಡದೆ ಹೋಗುವದರಿಂದಲೇ ಕೋಪಾಜ್ಞೆಯ ಪಾತ್ರೆಗಳಾಗುತ್ತಾರೆ. ಅವರು ಗುಣ ಪಡುವ ಹಾಗೆ ಅವರಿಗೆ ಸಮಯವನ್ನು ಕೊಡುವದೂ, ಗುಣ ಪಡದ ಪಕ್ಷದಲ್ಲಿ ದಂಡನೆ ವಿಧಿಸುವದೂ ದೇವರ ನೀತಿಗೆ ಸರಿಯಲ್ಲವೆಂದು ಯಾರು ಹೇಳ ಬಹುದು?

1. ಇಲ್ಲಿ ಹೇಳಿರುವ ಹೊಶೇಯ. ೧. ೯, ೧೦; ೨. ೨೩. ವಚನಗಳು ದೇವದ್ರೋಹಿಗಳಾಗಿದ್ದ ಹತ್ತು ಗೋತ್ರಗಳವರನ್ನು ಕುರಿತ ಪ್ರವಾದನೆಯಾಗಿದ್ದಾಗ್ಯೂ, ಬೇರೆ ಪ್ರವಾದನೆಗಳ ಹಾಗೆಯೇ ಇವು ಸಹ ಉಭಯಾರ್ಥವುಳ್ಳವುಗಳಾಗಿವೆ. ದೇವದ್ರೋಹಿಗಳಾಗಿದ್ದ ಜನಾಂಗಗಳವರನ್ನು ದೇವರು ತನ್ನ ಸ್ವಂತ ಮಕ್ಕಳಾಗಿ ಶೇರಿಸಿ ಕೊಳ್ಳುತ್ತಾನೆಂಬುವ ಸತ್ಯವು ತೋರುವ ಉದ್ದಿಶ್ಯ, ಈ ಪೂರ್ವ ಪ್ರವಾದನೆಯ ವಚನಗಳನ್ನು ಪೌಲನು ಇಲ್ಲಿ ತೆಗೆದು ಹೇಳುತ್ತಾನೆ.

2. ಸಮುದ್ರದ ಮರಳಿನ ಹಾಗೆ ಅಭಿವೃದ್ಧಿಯಾಗಿದ್ದ ಇಸ್ರಯೇಲರಲ್ಲಿ ದೇವರ ಕೃಪೆಯಿಂದ ನಾಶಕ್ಕೆ ತಪ್ಪಿ ಉಳಿದ ಕೆಲವರು ಮಾತ್ರ ರಕ್ಷಿಸಲ್ಪಡುವರು.

3. ಪ್ರವಾದಿಯಾದ ಯೆಶಾಯನ ಪುಸ್ತಕದಿಂದ ತೆಗೆದು ಬರೆಯಲ್ಪಟ್ಟ ಈ ವಚನದ ಅರ್ಥವೇನಂದರೆ—ಪೂರ್ವದಲ್ಲಿ, ಇಸ್ರಯೇಲ ಜನರು ಅನ್ಯ ದೇಶದಲ್ಲಿ ಶೆರೆಯಾಗಿರುವಾಗ, ದೇವರು ಯಾವ ಪ್ರಕಾರ ಅಸೀರಿಯರನ್ನು ನಾಶ ಮಾಡಿ, ಯೆಹೂದ್ಯರಲ್ಲಿ ಉಳಿದವರನ್ನು ರಕ್ಷಿಸುವದರಿಂದ, ತನ್ನ ಮಾತನ್ನು ಅತಿ ಶೀಘ್ರವಾಗಿ ಈಡೇರಿಸಿದನೋ, ಅದೇ ಪ್ರಕಾರ ಈಗ ಉಳಿದಿರುವವರ ಲೆಖ್ಖವನ್ನು ಶೀಘ್ರವಾಗಿ ಮುಗಿಸಿ ಕಾರ್ಯವನ್ನು ಈಡೇರಿಸುವನು. ಹೇರಳವಾದ ಜನರಲ್ಲಿ ಕೆಲವರು ಮಾತ್ರ ರಕ್ಷಿಸಲ್ಪಡುವರೆಂದು ತೋರುತ್ತದೆ. (ಯೆಶಾ. ೧೦. ೨೧—೨೩.)

4. ಮುಂಚೆ ಹೇಳಿದ ಹಾಗೆ, ಎಂಬುವದು, ಮುಂಚಿನ ಒಂದು ವಚನದಲ್ಲಿ ಹೇಳಿದ ಹಾಗೆ ಎಂದು ಅರ್ಥವಾಗುತ್ತದೆ. (ಯೆಶಾ. ೧. ೯.) ಎಲ್ಲಾ ಕಾಲಗಳಲ್ಲಿಯೂ ಯೆಹೂದ್ಯರಲ್ಲಿ ಉತ್ತಮ ಭಕ್ತರಾದವರ ಲೆಖ್ಖವು ನಿಜಕ್ರೈಸ್ತರ ಲೆಖ್ಖದಂತೆಯೇ ಬಹು ಕ್ಲುಪ್ತವಾಗಿಯೇ ಇತ್ತು.

5. ಸೈನ್ಯಗಳೆಂಬ ಪದವು ಸೂರ್ಯ ಚಂದ್ರ ನಕ್ಷತ್ರಗಳಾದ ಆಕಾಶದ ಸೈನ್ಯಗಳಿಗೂ, ದೇವದೂತರಾದ ಪರಮ ಸೈನ್ಯಗಳಿಗೂ ಹೆಸರಾಗಿದೆ. (ದ್ವಿತೀಯ ನ್ಯಾ. ೪. ೧೯; ೧೭. ೩. ೨ಅರ. ೧೭. ೧೬. ೧ ಅರ. ೨೨. ೧೯. ಕೀರ್ತ. ೧೦೩. ೨೧; ೧೪೮. ೨.) ಇವುಗಳನ್ನೆಲ್ಲಾ ಸೃಷ್ಟಿಸಿ ನಡಿಸುವ ಸರ್ವಕ್ಕೂ ಯಜಮಾನನಾದ ದೇವರಿಗೆ ಸೈನ್ಯಗಳ ಕರ್ತನೆಂಬ ಹೆಸರು ತಕ್ಕದ್ದಾಗಿದೆ.

6. ಲೋಕರಕ್ಷಕನಾದ ಕ್ರಿಸ್ತನನ್ನು ಭಕ್ತಿವಿಶ್ವಾಸದಿಂದ ಹೊಂದಿ ಕೊಳ್ಳುವವರೇ ನೀತಿವಂತರಾಗುವರು ಎಂಬುವ ಸತ್ಯವು ಬೇರೆ ಅನೇಕ ಜಾತಿಗಳವರಿಗೆ ಇರುವ ಪ್ರಕಾರವೇ ಯೆಹೂದ್ಯರಿಗೆ ಸಹ ಎಡವುವ ಕಲ್ಲಿನ ಹಾಗಿತ್ತು. ಅವರು ವಿಶ್ವಾಸದಿಂದಾಗುವ ನೀತಿಯನ್ನು ಹುಡುಕದೆ, ನ್ಯಾಯಪ್ರಮಾಣದಿಂದಾಗುವ ಸ್ವಂತ ನೀತಿಯನ್ನು ಹುಡುಕಿದ್ದರಿಂದ ಅದನ್ನು ಹೊಂದದೆ ಹೋದರು. (೧೦. ೩, ೫.) ನ್ಯಾಯಪ್ರಮಾಣದ ನೀತಿ ಅಥವಾ ಸ್ವಂತ ನೀತಿಯನ್ನು ಹುಡುಕದ ಜನಾಂಗಗಳವರು ಕ್ರಿಸ್ತನ ಮಹಾ ಪುಣ್ಯವನ್ನು ವಿಶ್ವಾಸದಿಂದ ಬರುವ ಆ ಶ್ರೇಷ್ಠ ನೀತಿಯನ್ನು ಹೊಂದಿದರು. ಯಾವ ಕುಲ, ಭಾಷೆ, ದೇಶದವರಾದಾಗ್ಯೂ, ಕ್ರಿಸ್ತನನ್ನು ಭಕ್ತಿವಿಶ್ವಾಸದಿಂದ ಹೊಂದಿ ಕೊಳ್ಳುವವರೇ ಕೃಪೆ ಹೊಂದಿದ ನಿಜವಾದ ಇಸ್ರಯೇಲ್ಯರು.

7. ಈ ಸಂಧಿಯ ಕಡೆಯಲ್ಲಿ ಪೌಲನು ಪೇತ್ರನ ಹಾಗೆ (೧ ಪೇತ್ರ. ೨. ೬—೮.) ಯೆಶಾಯನ ಪ್ರವಾದನೆಯಲ್ಲಿ ಎರಡು ವಚನಗಳ

ನಲ್ಲಿ ಎಡವುವ ಕಲ್ಲನ್ನೂ ಆತಂಕದ ಬಂಡೆಯನ್ನೂ ಇಡುತ್ತೇನೆ. ಮತ್ತು ಅದರ ಮೇಲೆ ವಿಶ್ವಾಸವಿಡುವ
ಯಾವನಾದರೂ ನಾಚಿಕೆ ಪಡುವದಿಲ್ಲ. (ಯೆಶಾ. ೮. ೧೪; ೨೮. ೧೬.)

ರಕ್ಷಣೆಗೆ ವಿಶ್ವಾಸವು ಅವಶ್ಯವೆಂಬುವದನ್ನು ಹಳೇ ಒಡಂಬಡಿಕೆಯಿಂದ ನಿರೂಪಿಸಿದ್ದು.

**10.** ಸಹೋದರರೇ, ಇಸ್ರಯೇಲಿಗೋಸ್ಕರ ನನ್ನ [1]ಹೃದಯದ ಅಪೇಕ್ಷೆಯೂ ದೇವರಿಗೆ ಮಾಡುವ ವಿಜ್ಞಾಪ
೨ ನೆಯೂ ರಕ್ಷಣೆಗಾಗಿವೆ. ಯಾಕಂದರೆ ದೇವರಾಸಕ್ತಿಯುಳ್ಳವರಾಗಿದ್ದಾರೆಂದು, ಅವರಿಗೆ ಸಾಕ್ಷಿ ಕೊಡು
೩ ತ್ತೇನೆ. ಆದರೆ [2]ತಿಳುವಿಕೆಯ ಪ್ರಕಾರವಲ್ಲ. ಹ್ಯಾಗಂದರೆ, ಅವರು ದೇವರ ನೀತಿಯನ್ನು ತಿಳಿಯದೆ, ತಮ್ಮ
೪ ನೀತಿಯನ್ನು ಸ್ಥಾಪಿಸ ಹುಡುಕಿ, ದೇವರ ನೀತಿಗೆ ವಿಧೇಯರಾಗಲಿಲ್ಲ. ಯಾಕಂದರೆ ಕ್ರಿಸ್ತನು ವಿಶ್ವಾಸಿಸು
ವವರೆಲ್ಲರಿಗೆ ನೀತಿಗೋಸ್ಕರ ನ್ಯಾಯಪ್ರಮಾಣದ [3]ಅಂತ್ಯವಾಗಿದ್ದಾನೆ.
೫ ಯಾಕಂದರೆ ಮೋಶೆ ನ್ಯಾಯಪ್ರಮಾಣದಿಂದಾಗುವ ನೀತಿಯನ್ನು ಕುರಿತು, [4]ಅವುಗಳನ್ನು ಮಾಡುವ
೬ ಮನುಷ್ಯನು ಅವುಗಳಿಂದ ಬದುಕುವನೆಂದು (ಲೇವಿಕ. ೧೮. ೫.) ಬರೆಯುತ್ತಾನೆ. ಆದರೆ ವಿಶ್ವಾಸದಿಂ
ದಾಗುವ ನೀತಿಯು [5]ಹೀಗೆ ಹೇಳುತ್ತದೆ—ಕ್ರಿಸ್ತನನ್ನು ಕೆಳಗೆ ತರ ಬೇಕೆಂಬುವ ಹಾಗೆ ಯಾವನು ಪರಲೋ
೭ ಕಕ್ಕೆ ಏರುವನೆಂದೂ, ಇಲ್ಲವೆ ಸತ್ತವರೊಳಗಿಂದ ಕ್ರಿಸ್ತನನ್ನು ಮೇಲಕ್ಕೆ ತರ ಬೇಕೆಂಬುವ ಹಾಗೆ ಯಾವನು
೮ ಅಗಾಧಕ್ಕೆ ಇಳಿಯುವನೆಂದೂ, ನಿನ್ನ ಹೃದಯದಲ್ಲಿ ಅಂದು ಕೊಳ್ಳ ಬೇಡ. ಮತ್ತೇನು ಹೇಳುತ್ತದೆ? ಮಾತು

ನ್ನು ಒಂದಾಗಿ ಕೂಡಿಸಿ, ವಿಶ್ವಾಸಿಗಳ ನಂಬಿಕೆಯಾದ ಕ್ರಿಸ್ತನು ಅವಿಶ್ವಾಸಿಗಳಿಗೆ ಆತಂಕದ ಬಂಡೆ ಎಂದು ನಿರೂಪಿಸುತ್ತಾನೆ. ಮನುಷ್ಯಜಾತಿಯವರೆಲ್ಲರೂ ವಿಶ್ವಾಸದಿಂದ ದೃಷ್ಟಿಸ ಬೇಕಾದ ಮೂಲೆಯ ಕಲ್ಲಾಗಿರುವ ಕ್ರಿಸ್ತನು ತನ್ನನ್ನು ಹೊಂದಿ ಕೊಳ್ಳುವವರಿಗೆ ರಕ್ಷಣೆಯ ಬಂಡೆಯಾಗಿಯೂ, ತನ್ನನ್ನು ಹೊಂದಿ ಕೊಳ್ಳದೆ ಇರುವವರಿಗೆ ಆತಂಕದ ಬಂಡೆಯಾಗಿಯೂ ಇದ್ದಾನೆ. ನಮಗೆ ಆತನು ರಕ್ಷಣೆಯ ಬಂಡೆಯಾಗಿರುವಂತೆ ಆತನನ್ನು ವಿಶ್ವಾಸದಿಂದ ಹೊಂದಿ ಕೊಳ್ಳುವ.

1. ತನ್ನ ಸಹೋದರರಾದ ಇಸ್ರಯೇಲ್ಯರು ತನ್ನ ಪ್ರಾರ್ಥನೆಯ ಪ್ರಕಾರ ರಕ್ಷಿಸಲ್ಪಡುವದೇ ಪೌಲನು ಅಪೇಕ್ಷಿಸಿದ ಕಾರ್ಯವು. (೧೧. ೨೬.) ಕ್ರಿಸ್ತನನ್ನು ತಳ್ಳಿ ಬಿಟ್ಟ ಅಪರಾಧಕ್ಕಾಗಿ ಯೆಹೂದ್ಯರು ತಳ್ಳಲ್ಪಟ್ಟಾಗ್ಯೂ, ಅವರು ರಕ್ಷಿಸಲ್ಪಡ ಬೇಕೆಂದು ಪೌಲನು ಅವರಿಗೋಸ್ಕರ ಪ್ರಾರ್ಥನೆ ಮಾಡಿದನು. ಮತ್ತು ಅವರಲ್ಲಿ ಅನೇಕರು ರಕ್ಷಣೆ ಹೊಂದುವದಕ್ಕೆ ತಾನು ತಕ್ಕ ಆಯುಧವಾಗಿದ್ದನು.

2. ದೇವರನ್ನು ಸೇವಿಸ ಬೇಕೆಂಬ ಆಸಕ್ತಿ ಅವರಿಗೆ ಉಂಟಾಗಿತ್ತೆಂದು ಪೌಲನು ತನ್ನ ಸ್ವಂತ ಅನುಭವದಿಂದ ಹೇಳ ತಕ್ಕದ್ದಾಗಿತ್ತು. (ಫಿಲಿ. ೩. ೬.) ಆದಾಗ್ಯೂ ಆ ವೈರಾಗ್ಯವು ಸರಿಯಾದದ್ದಲ್ಲ. ಅವರು ದೇವರ ವಾಕ್ಯಕ್ಕಿಂತ ಪಾರಂಪರೆಯ ನ್ಯಾಯಗಳನ್ನು ಮುಖ್ಯ ಪಡಿಸಿದ್ದರಿಂದಲೂ, (ಮಾರ್ಕ. ೭. ೩—೮.) ಕ್ರಿಸ್ತನಲ್ಲಿ ಪ್ರಕಟವಾದ ದೇವರ ನೀತಿಯನ್ನು ಅಲಕ್ಷ್ಯ ಮಾಡಿ, ತಮ್ಮ ಸ್ವಂತ ಕ್ರಿಯೆಗಳಿಂದ ನ್ಯಾಯಪ್ರಮಾಣದ ನೀತಿಯನ್ನು ಸಂಪಾದಿಸ ಹುಡುಕಿದ್ದರಿಂದಲೂ, ಅವರ ಆಸಕ್ತಿಯು ತಿಳುವಿಕೆಯ ಪ್ರಕಾರವಲ್ಲ. ಅದರಿಂದ ಅವರು ತಳ್ಳಲ್ಪಟ್ಟರು.

3. ಕ್ರಿಸ್ತನು ನ್ಯಾಯಪ್ರಮಾಣದ ಅಂತ್ಯವಾಗಿದ್ದಾನೆಂಬುವದನ್ನು ಮೂರು ವಿಧವಾಗಿ ಅರ್ಥ ಮಾಡ ಬಹುದು. ಮೊದಲನೇದು, ಕ್ರಿಸ್ತನು ನ್ಯಾಯಪ್ರಮಾಣವನ್ನು ಕೈಕೊಂಡು ಕ್ರಿಯೆಗಳ ಒಡಂಬಡಿಕೆಯನ್ನು ಮುಗಿಸಿದನು. (೬. ೧೪; ೭. ೪, ೬.) ಅದರಿಂದ ಆತನನ್ನು ವಿಶ್ವಾಸದಿಂದ ಹೊಂದಿ ಕೊಳ್ಳುವವರು ಆತನ ಮೂಲಕವಾಗಿ ನ್ಯಾಯಪ್ರಮಾಣದ ದಂಡನೆಗೆ ತಪ್ಪಿ, ದೇವರ ಮುಂದೆ ನೀತಿವಂತರಾಗಿ ಕಾಣಿಸುತ್ತಾರೆ. ಎರಡನೇದು, ನಮಗೆ ನೀತಿಯನ್ನು ಸಂಪಾದಿಸಿದ ಕ್ರಿಸ್ತನ ಅವತಾರವೂ, ಪುಣ್ಯ ಮರಣವೂ, ನ್ಯಾಯಪ್ರಮಾಣದ ನಿಜ ವಸ್ತುವೂ ಸಾರಾಂಶವೂ ಆಗಿರುವದರಿಂದ ಆತನು ನ್ಯಾಯಪ್ರಮಾಣದ ಅಂತ್ಯವಾಗಿದ್ದಾನೆಂದು ಹೇಳ ಬಹುದು. (ಗಲಾ. ೩. ೨೩, ೨೪. ತೀತ. ೩. ೫—೭.) ಮೂರನೇದು, ನ್ಯಾಯಪ್ರಮಾಣವನ್ನು ಕೈಕೊಂಡು ಅದರಿಂದ ಉಂಟಾಗುವ ಭಾಗ್ಯವನ್ನು, ಕ್ರಿಸ್ತನು ತನ್ನ ಭಕ್ತರಿಗೋಸ್ಕರ ಸಂಪಾದಿಸಿರುವದರಿಂದ ಆತನು ನ್ಯಾಯಪ್ರಮಾಣದ ಅಂತ್ಯವಾಗಿದ್ದಾನೆಂದು ಹೇಳ ಬಹುದು. (೫—೧೦. ವ.)

4. ನ್ಯಾಯಪ್ರಮಾಣವು, ಇವುಗಳನ್ನು ಮಾಡಿ ಬದುಕು ಎಂದೂ, ಸುವಾರ್ತೆಯ ಪ್ರಮಾಣವು, ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಬದುಕಿ ಇವುಗಳನ್ನು ಮಾಡು ಎಂದೂ ಹೇಳುತ್ತದೆ. ದೇವರ ಕೃಪೆಯಿಂದ ಬದುಕುವವರೇ ನ್ಯಾಯಪ್ರಮಾಣದ ಪ್ರಕಾರ ನಡಿಯ ತಕ್ಕವರು.

5. ನ್ಯಾಯಪ್ರಮಾಣವನ್ನು ಕೊಟ್ಟ ಮೋಶೆಯು ಅದರ ಅಂತ್ಯವಾಗಿರುವ ಕ್ರಿಸ್ತನನ್ನು ವಿಶ್ವಾಸದ ಕಣ್ಣಿನಿಂದ ದರ್ಶಿಸಿದವನಾಗಿ, ಆತನನ್ನು ಮನಸ್ಸಿನಲ್ಲಿ ವಿಶ್ವಾಸಿಸಿ, ಬಾಯಿಯಿಂದ ಅರಿಕೆ ಮಾಡುವವರೆಲ್ಲರಿಗೆ ಆತನಿಂದುಂಟಾಗುವ ಆಶೀರ್ವಾದಗಳು ಸಮೀಪವಾಗಿರುತ್ತವೆಂದು ಹೇಳುತ್ತಾನೆ. ಆ ಪುಣ್ಯಕ್ರಿಯೆಯು ಈಡೇರಿ ಮುಗಿಯಿತು. ಪರಲೋಕವು ಸಾಕ್ಷಾತ್ ವಿಮೋಚಕನನ್ನು ಕಳುಹಿಸಿ ಕೊಟ್ಟಿತು. ಪಾತಾಳಲೋಕವು ಜಯಶಾಲಿಯಾದ ಆತನನ್ನು ತಿರಿಗಿ ಕೊಟ್ಟು ಬಿಟ್ಟಿತು. ದೇವರ ನೀತಿಯನ್ನು ಸಂಪಾದಿಸುವದಕ್ಕೆ ಮನುಷ್ಯರು ಮತ್ತೇನೂ ಮಾಡ ಬೇಕಾದದ್ದಿಲ್ಲ. ಈ ಸತ್ಯವನ್ನು ಅರಿಕೆ ಮಾಡುವದೂ, ವಿಶ್ವಾಸದಿಂದ ಅಂಗೀಕರಿಸ ತಕ್ಕದ್ದೂ ಆದ ಮಾತು ಸಮೀಪವಾಗಿದೆ. ಅದನ್ನು ಮನಸ್ಸಿನಲ್ಲಿ ಗ್ರಹಿಸಿ, ಬಾಯಿಯಿಂದ ಅರಿಕೆ ಮಾಡುವವರಿಗೆ ಅದರ ಭಾಗ್ಯವು ದೊರಕುವದು. (ದ್ವಿತೀಯ ನ್ಯಾ. ೩೦. ೧೨—೧೪.)



ನಿನ್ನ ಸಮೀಪದಲ್ಲಿ, ನಿನ್ನ ಬಾಯಿಯಲ್ಲಿಯೂ, ನಿನ್ನ ಹೃದಯದಲ್ಲಿಯೂ ಇದೆ. (ದ್ವಿತೀಯ ನ್ಯಾ. ೩೦.
೯ ೧೨—೧೪.) ಅದು ನಾವು ಪ್ರಸಂಗಿಸುವ ವಿಶ್ವಾಸದ ಮಾತೇ. ಏನಂದರೆ, ನಿನ್ನ ಬಾಯಿಯಿಂದ ಕರ್ತ
ನಾದ ಯೇಸುವನ್ನು [1]ಅರಿಕೆ ಮಾಡಿ, ದೇವರು ಸತ್ತವರೊಳಗಿಂದ ಅವನನ್ನು ಎಬ್ಬಿಸಿದನೆಂದು, ನಿನ್ನ ಹೃದ
೧೦ ಯದಲ್ಲಿ ವಿಶ್ವಾಸಿಸಿದರೆ, ರಕ್ಷಿಸಲ್ಪಡುವಿ. ಯಾಕಂದರೆ ಹೃದಯದಿಂದ ನೀತಿಗಾಗಿ ವಿಶ್ವಾಸಿಸುವದೂ,
ಬಾಯಿಯಿಂದ ರಕ್ಷಣೆಗಾಗಿ ಅರಿಕೆ ಮಾಡುವದೂ, ಉಂಟು.
೧೧ ಯಾಕಂದರೆ ಆವನ ಮೇಲೆ ವಿಶ್ವಾಸವಿಡುವವರೆಲ್ಲರು ನಾಚಿಕೆ ಪಡುವದಿಲ್ಲವೆಂದು, (ಯೆಶಾ. ೨೮. ೧೬.)
೧೨ [2]ಬರಹವು ಹೇಳುತ್ತದೆ. ಯೆಹೂದ್ಯನಿಗೂ, ಗ್ರೇಕನಿಗೂ, [3]ವ್ಯತ್ಯಾಸವಿಲ್ಲ. ಯಾಕಂದರೆ ಎಲ್ಲರಿಗೂ ಒಬ್ಬನೇ
೧೩ ಕರ್ತನಾಗಿರುವವನು ತನ್ನನ್ನು ಕರೆಯುವವರೆಲ್ಲರಿಗೆ ಐಶ್ವರ್ಯವುಳ್ಳವನಾಗಿದ್ದಾನೆ. ಯಾಕಂದರೆ ಯಾರು
[4]ಕರ್ತನ ಹೆಸರನ್ನು ಕರೆಯುವರೋ, ಅವರೆಲ್ಲರು ರಕ್ಷಿಸಲ್ಪಡುವರು. (ಯೋವೇಲ. ೨. ೩೨.)
೧೪ ಹಾಗಾದರೆ, ತಾವು ವಿಶ್ವಾಸಿಸದವನನ್ನು [5]ಹ್ಯಾಗೆ ಕರೆಯುವರು? ತಾವು ಕೇಳದವನನ್ನು ಹ್ಯಾಗೆ ವಿಶ್ವಾಸಿ
೧೫ ಸುವರು? ಸಾರುವವನಿಲ್ಲದೆ, ಹ್ಯಾಗೆ ಕೇಳುವರು? ಕಳುಹಿಸಲ್ಪಡದಿದ್ದರೆ, ಹ್ಯಾಗೆ ಸಾರುವರು? ಇದಕ್ಕೆ
ಬರೆದದ್ದೇನಂದರೆ, ಸಮಾಧಾನದ ಸುವಾರ್ತೆಯನ್ನೂ, ಒಳ್ಳೆಯವುಗಳ ಸುವಾರ್ತೆಯನ್ನೂ ಪ್ರಸಂಗಿಸುವವರ
ಪಾದಗಳು ಎಷ್ಟೋ ಅಂದವಾಗಿವೆ. (ಯೆಶಾ. ೫೨. ೭.)
೧೬ ಆದರೆ ಎಲ್ಲರೂ ಸುವಾರ್ತೆಗೆ ವಿಧೇಯರಾಗಲಿಲ್ಲ; ಏನಂದರೆ, ಯೆಶಾಯನು, ಕರ್ತನೇ, ನಮ್ಮ ಸುದ್ದಿಯನ್ನು
೧೭ ವಿಶ್ವಾಸಿಸಿದವನ್ಯಾರೆಂದು, (ಯೆಶಾ. ೫೩. ೧.) ಹೇಳುತ್ತಾನೆ. ಹಾಗಾದರೆ ವಿಶ್ವಾಸವು ಕೇಳ್ವಿಕೆಯಿಂದ,
ಕೇಳ್ವಿಕೆಯು ದೇವರ ಮಾತಿನಿಂದ ಆಗುತ್ತದೆ.
೧೮ ಆದರೆ ಅವರು ಕೇಳಲಿಲ್ಲವೋ? ಅನ್ನುತ್ತೇನೆ. ಸಂದೇಹವೇನು? ಅವರ ಶಬ್ದವು [6]ಸಮಸ್ತ ಭೂಮಿಗೂ,
ಅವರ ಮಾತುಗಳು ಲೋಕಾಂತಗಳಿಗೂ, ಹೊರಟವೆ. (ಕೀರ್ತ. ೧೯. ೪.)

1. ೯ನೇ ವಚನದಲ್ಲಿ ಬಾಯಿಯನ್ನು ಮೊದಲಾಗಿಯೂ, ಹೃದಯವನ್ನು ಹಿಂದೆಯೂ ತೋರಿಸಿರುವದರಿಂದ, ಅದೇ ಕ್ರಮವಾಗಿ ಈ ವಚನದಲ್ಲಿ ಬಾಯಿಯಿಂದಾಗುವ ಅರಿಕೆಯನ್ನು ಮುಂದಾಗಿಯೂ, ಹೃದಯದಿಂದುಂಟಾಗುವ ವಿಶ್ವಾಸವನ್ನು ಹಿಂದಾಗಿಯೂ ಹೇಳಿ ಇದೆ. ೧೦ನೇ ವಚನದಲ್ಲಿ ಈ ಕ್ರಮವನ್ನು ಮಾರ್ಪಡಿಸಿ ಕ್ರಮವಾಗಿ ತೋರಿಸಿ ಇದೆ. ಇದರಲ್ಲಿ ಹೇಳಿರುವ ಅರಿಕೆಯೂ ವಿಶ್ವಾಸವೂ, ೬, ೭ನೇ ವಚನಗಳಲ್ಲಿರುವ ಎರಡು ಪ್ರಶ್ನೆಗಳಿಗೂ, ೮ನೇ ವಚನದಲ್ಲಿರುವ ವಾಗ್ದತ್ತಕ್ಕೂ ಸಮ್ಮಂಧ ಪಟ್ಟವುಗಳಾಗಿವೆ. ೭ನೇ ವಚನದಲ್ಲಿ ಸೂಚಿಸಿರುವ ಕ್ರಿಸ್ತನ ಅವತಾರ ಪುನರುತ್ಥಾನಗಳೆಂಬ ಸತ್ಯಗಳನ್ನು ಮನಸ್ಸಿನಲ್ಲಿ ವಿಶ್ವಾಸಿಸಿ, ಬಾಯಿಯಿಂದ ಅರಿಕೆ ಮಾಡುವವರಿಗೆ ಈ ವಚನದಲ್ಲಿ ಹೇಳಲ್ಪಟ್ಟ ರಕ್ಷಣೆ ಉಂಟಾಗುವದು. ಹೃದಯದಲ್ಲಿ ವಿಶ್ವಾಸಿಸುವವರು ನೀತಿವಂತರಾಗುವರು. ಹೀಗೆ ನೀತಿವಂತರಾದವರು ಕ್ರಿಸ್ತನನ್ನು ಯಥಾರ್ಥವಾಗಿಯೂ ದೃಢವಾಗಿಯೂ ಅರಿಕೆ ಮಾಡಿದರೆ, ಕಡೆಯಲ್ಲಿ ಪರಮಪದವಿ ಹೊಂದುವರು. (೧೦. ವ.)

2. ಯೆಹೂದ್ಯರಾದರೂ ಸರಿ, ಜನಾಂಗಗಳವರಾದರೂ ಸರಿ, ವಿಶ್ವಾಸಿಗಳಿಗೆ ರಕ್ಷಣೆಯೂ, ಅವಿಶ್ವಾಸಿಗಳಿಗೆ ನಾಶನವೂ ಬರುವದೆಂದು ಮೋಶೆ ಹೇಳಿರುವ ಪ್ರಕಾರ ಪ್ರವಾದಿಗಳು ಸಹ ಹೇಳಿ ಇದ್ದಾರೆ. (೧೧—೨೧. ವ.) ಇದರಲ್ಲಿ ಹೇಳಿರುವ ಪ್ರವಾದನೆಗಳೆಲ್ಲಾ ಮೆಸ್ಸೀಯನಾದ ಲೋಕರಕ್ಷಕನ ಕಾಲವನ್ನು ಕುರಿತವುಗಳಾಗಿವೆ. (ಯೆಶಾ. ೨೮. ೧೬; ೫೧. ೧, ೯; ೫೨. ೧೩; ೫೩. ೧; ೬೫. ೧, ೨. ಯೋವೇಲ. ೨. ೨೮, ೩೨.)

3. ಸರ್ವಕ್ಕೂ ಕರ್ತನಾದ ಕ್ರಿಸ್ತನ ಆಳಿಕೆಗೆ ಒಳಪಟ್ಟವರಾದ ಯೆಹೂದ್ಯರು ಜನಾಂಗಗಳು ಎಂಬ ಸರ್ವರಲ್ಲಿಯೂ ಆತನ ಪ್ರಮಾಣವನ್ನು ಮೀರಿದ್ದರಲ್ಲಿ ವ್ಯತ್ಯಾಸವಿಲ್ಲದ ಪ್ರಕಾರ, ಅದಕ್ಕೆ ಬರ ತಕ್ಕ ದಂಡನೆಯಲ್ಲಿ ಸಹ ವ್ಯತ್ಯಾಸವಿಲ್ಲ. (೩. ೩೦.) ಕೃಪೆಯಲ್ಲಿ ಐಶ್ವರ್ಯವುಳ್ಳ ಆತನು ತನ್ನನ್ನು ಭಕ್ತಿವಿಶ್ವಾಸದಿಂದ ಹಿಂಬಾಲಿಸುವವರಿಗೆ ತನ್ನ ಆಶೀರ್ವಾದಗಳನ್ನು ಕೊಡುವದರಲ್ಲಿ ಸಹ ವ್ಯತ್ಯಾಸವು ಇರಲಾರದು.

4. ಈ ವಚನದಲ್ಲಿ ಹೇಳಲ್ಪಟ್ಟ ಕರ್ತನು ಕ್ರಿಸ್ತನೇ. ವಿಶ್ವಾಸಿಸದವರು ಆತನ ಹೆಸರನ್ನು ಕರೆಯಲಾರರೆಂದೂ, ಪ್ರಸಂಗಿಸುವವನಿಲ್ಲದೆ ವಿಶ್ವಾಸಿಸಲಾರರೆಂದೂ (೧೪. ವ.) ವಿಶ್ವಾಸವಿನಯದಿಂದ ಆತನನ್ನು ಆರಾಧಿಸುವವರು ರಕ್ಷಿಸಲ್ಪಡುವರೆಂದೂ ಹೇಳಿರುವದರಿಂದ ಕ್ರಿಸ್ತನು ದೇವರೆಂದು ಪ್ರತ್ಯಕ್ಷವಾಗಿದೆ. ಎಲ್ಲರಿಂದ ಆರಾಧಿಸಲ್ಪಡುವವನೂ ಸಮಸ್ತ ಮೇಲುಗಳನ್ನು ಕೊಡುವವನೂ ದೇವರೆಂಬುವದಕ್ಕೆ ಸಂದೇಹವಿಲ್ಲ.

5. ಕರ್ತನ ಹೆಸರನ್ನು ಕರೆಯುವವರು ಆತನ ದಾಸರು ಸಾರುವ ಸತ್ಯವನ್ನು ನಂಬುವವರಾಗಿರ ಬೇಕು. ಹಾಗೆ ನಂಬದೆ ಅವಿಶ್ವಾಸಿಗಳಾಗಿರುವ ಅನೇಕರ ದೃಷ್ಟಾಂತದಿಂದ ಪ್ರವಾದನೆಗಳ ನಿಶ್ಚಯವು ತೋರುವದು. (೧೪, ೧೭. ವ.) ಎಲ್ಲರೂ ಆ ವಾಕ್ಯವನ್ನು ಕೇಳಿದವರಾಗಿದ್ದರೂ, (೧೮.ವ.) ತಿಳಿಯದ್ದರಿಂದ ಅಲ್ಲ, ಅವಿಶ್ವಾಸದಿಂದ ಅದನ್ನು ಅಂಗೀಕರಿಸದವರಿಗೆ ಉಪದ್ರ ಬರುವದು. (೧೯—೨೧. ವ.)

6. ಆಕಾಶಗಳು ದೇವರ ಮಹಿಮೆಯನ್ನು ಸಮಸ್ತ ಭೂಮಿಗೂ ತಿಳಿಸುವ ಪ್ರಕಾರ, ದೇವರು ತನ್ನ ದಾಸರಿಂದ ತನ್ನ ಸುವಾರ್ತೆಯ ವಾಕ್ಯವನ್ನು ಸಕಲ ಜಾತಿಗಳವರಿಗೂ ತಿಳಿಯ ಪಡಿಸಿದ್ದಾನೆ. (ಕೊಲೊ. ೧. ೨೧.) ಆದದರಿಂದ ಯಾರಿಗೂ ನೆವವಿಲ್ಲ. (ರೋಮಾ. ೧. ೨೦.)

೧೯ ಆದರೆ ಇಸ್ರಯೇಲು [1]ತಿಳಿದು ಕೊಳ್ಳಲಿಲ್ಲವೋ? ಅನ್ನುತ್ತೇನೆ. ಮೊದಲು ಮೋಶೆ, ನಾನು ಪ್ರಜೆ ಅಲ್ಲದ್ದ
ರಿಂದ ನಿಮ್ಮನ್ನು ಆಸಕ್ತಿ ಪಡಿಸುವೆನು; ಬುದ್ಧಿ ಇಲ್ಲದ ಜನಾಂಗದಿಂದ ನಿಮಗೆ ಕೋಪವೆಬ್ಬಿಸುವೆನೆಂದು,
೨೦ (ದ್ವಿತೀಯ ನ್ಯಾ. ೩೨. ೨೧.) ಹೇಳುತ್ತಾನೆ. ಆದರೆ, ಯೆಶಾಯನು ಬಹು ಧೈರ್ಯವಾಗಿ, ನನ್ನನ್ನು
ಹುಡುಕದವರಿಗೆ ಶಿಕ್ಕಿದೆನು, ನನ್ನನ್ನು ವಿಚಾರಿಸದವರಿಗೆ ಪ್ರತ್ಯಕ್ಷವಾದೆನೆಂದು, (ಯೆಶಾ. ೬೫. ೧.) ಹೇಳುತ್ತಾನೆ.
೨೧ ಆದರೆ [2]ಇಸ್ರಯೇಲಿಗೆ, ದಿನವೆಲ್ಲಾ ಅವಿಧೇಯವಾದ ಎದುರಾಡುವ ಜನರಿಗೆ ನನ್ನ ಕೈಗಳನ್ನು ಚಾಚಿದೆನೆಂದು
(ಯೆಶಾ. ೬೫. ೧, ೨.) ಹೇಳುತ್ತಾನೆ.

ಯೆಹೂದ್ಯರು ತಳ್ಳಲ್ಪಟ್ಟದ್ದು ಪೂರ್ಣವಾಗಿ ಅಲ್ಲ, ನಿತ್ಯವಾಗಿ ಅಲ್ಲ; ಅವರ ವಿಮೋಚನೆಯು
ಲೋಕಕ್ಕೆ ಜೀವವು; ಕಡೆಯಲ್ಲಿ ಜನಾಂಗಗಳೆಲ್ಲಾ ಗುಣ ಪಡುವರು.

11. ಹಾಗಾದರೆ, ದೇವರು [3]ತನ್ನ ಜನರನ್ನು ತಳ್ಳಿ ಬಿಟ್ಟಿದ್ದಾನೋ? ಅನ್ನುತ್ತೇನೆ; ಆಗದು. ಯಾಕಂದರೆ
೨ [4]ನಾನೂ ಇಸ್ರಯೇಲ್ಯನಾಗಿದ್ದೇನೆ—ಅಬ್ರಹಾಮನ ಬೀಜದವನು, ಬೆನ್ಯಮೀನನ ಕುಲದವನು. ದೇವರು
ತಾನು ಮುಂತಿಳಿದ ತನ್ನ ಜನರನ್ನು ತಳ್ಳಿ ಬಿಡಲಿಲ್ಲ. ಏನು! [5]ಎಲೀಯನ ವಿಷಯ ಬರಹವು ಹೇಳುವದನ್ನು
೩ ಅರಿಯರಾ? ಏನಂದರೆ, ಅವನು, ಕರ್ತನೇ, ನಿನ್ನ ಪ್ರವಾದಿಗಳನ್ನು ಕೊಂದು, ನಿನ್ನ ಪೀಠಗಳನ್ನು ಕೆಡವಿ
ಬಿಟ್ಟಿದ್ದಾರೆ, ನಾನೊಬ್ಬನೇ ಉಳಿದಿದ್ದೇನೆ, ನನ್ನ ಪ್ರಾಣವನ್ನು ಸಹ ಹುಡುಕುತ್ತಾರೆ ಎಂದು, (೧ ಅರ. ೧೯.
೪ ೧೪.) ಇಸ್ರಯೇಲಿಗೆ ವಿರೋಧವಾಗಿ ದೇವರ ಮುಂದೆ ಬರುತ್ತಾನೆ. ಆದರೆ ದೈವೋತ್ತರವು ಅವನಿಗೆ ಏನು
ಹೇಳುತ್ತದೆ? [6]ಬಾಳನ ವಿಗ್ರಹಕ್ಕೆ ಮೊಣಕಾಲೂರದ ಏಳು ಸಾವಿರ ಮನುಷ್ಯರನ್ನು ನನಗೆ ಉಳಿಸಿ ಕೊಂಡಿ
೫ ದ್ದೇನೆ. (೧ ಅರ. ೧೯. ೧೮.) [7]ಹಾಗೆಯೇ, ಈಗಿನ ಕಾಲದಲ್ಲಿ ಕೃಪೆಯ ಆಯುವಿಕೆಯ ಪ್ರಕಾರ ಉಳಿವು

1. ಮೋಶೆ ಯೆಶಾಯ ಮುಂತಾದ ಪ್ರವಾದಿಗಳು, ಅವಿಶ್ವಾಸದ ನಿಮಿತ್ತವಾಗಿ ಇಸ್ರಯೇಲ್ಯರು ತಳ್ಳಲ್ಪಡುವರೆಂದೂ, ಅವರಿಂದ ಹೀನೈಸಲ್ಪಟ್ಟ ಅನ್ಯ ಜಾತಿಗಳವರು ವಿಶ್ವಾಸದಿಂದ ದೇವರ ಆಶೀರ್ವಾದಗಳನ್ನು ಹೊಂದುವರೆಂದೂ ಪ್ರವಾದಿಸಿದ್ದ ಸತ್ಯವನ್ನು ಅವರು ತಿಳಿಯಲಿಲ್ಲವೋ? ಹೌದು, ತಿಳಿದಿರುವರೆಂದನ್ನುತ್ತಾನೆ.

2. ಜನಾಂಗಗಳವರು ಕರೆಯಲ್ಪಡುವದನ್ನು ಕುರಿತು ಮೊದಲು ಮೋಶೆಯೂ, ತರುವಾಯ ಯೆಶಾಯನೂ ಪ್ರವಾದಿಸಿದ್ದನ್ನು ಎತ್ತಿ ಹೇಳಿ, ಇಸ್ರಯೇಲ್ಯರು ತಳ್ಳಲ್ಪಡುವದನ್ನು ಕುರಿತು ಯೆಶಾಯನು ತಾನೇ ಪ್ರವಾದಿಸಿದ ವಾಕ್ಯವನ್ನು ಎತ್ತಿ ತೋರಿಸಿದ್ದಾನೆ. ಅವರು ತಳ್ಳಲ್ಪಟ್ಟದ್ದಕ್ಕೆ ಅವರ ಅವಿಧೇಯತ್ವ, ಎದುರಾಡುವಿಕೆ ಎಂಬ ದುರ್ಗುಣಗಳೇ ಕಾರಣವು. ದೇವರು ತನ್ನ ಕೃಪೆಯ ಕರಗಳನ್ನು ಚಾಚಿ ಕೊಂಡಿರುವಾಗ ಆತನ ಬಳಿಗೆ ಬಾರದಿದ್ದರೆ, ಆತನು ತನ್ನ ನೀತಿಯ ಕರಗಳನ್ನು ಚಾಚಿ, ಕಠಿಣರಾದ ಪಾಪಿಗಳನ್ನು ದಂಡಿಸುವನೆಂಬುವದಕ್ಕೆ ಸಂದೇಹವಿಲ್ಲ.

3. ೧ನೇ ಸಂಧಿಯಲ್ಲಿ ಹೇಳಿದ ಸಂಗತಿಗಳಿಂದ ದೇವರು ತನ್ನ ಜನರನ್ನು ಪೂರ್ಣವಾಗಿ ತಳ್ಳಿ ಬಿಟ್ಟನೆಂದಾಗಲಿ, (೧—೧೦. ವ.) ಕಡೇ ಮಟ್ಟಿಗೂ ತಳ್ಳಿ ಬಿಟ್ಟನೆಂದಾಗಲಿ, (೧೧—೩೬. ವ.) ಹೇಳಕೂಡದು. ಅವರು ತಳ್ಳಲ್ಪಟ್ಟದ್ದು ಜನಾಂಗಗಳು ರಕ್ಷಣೆ ಹೊಂದುವದಕ್ಕೆ ಹೇತುವೆಯಾಗಿಯೂ, ಜನಾಂಗಗಳವರು ಮಾನಸಾಂತರಪಡುವದು ಇಸ್ರಯೇಲ್ಯರು ಗುಣ ಪಡುವದಕ್ಕೆ ಹೇತುವೆಯಾಗಿಯೂ ಇರುವದು. (ಕೀರ್ತ. ೯೪. ೧೪ಲ್ಲಿ) ದೇವರು ತನ್ನ ಜನರನ್ನು ತಳ್ಳಿ ಬಿಡಲಾರನೆಂದು ಹೇಳಿರುತ್ತದೆ. ಆ ಮಾತು ವ್ಯರ್ಥವಾಗುತ್ತದೋ ಎಂಬ ಆಕ್ಷೇಪಣೆಗೆ ಈ ಸಂಧಿಯಲ್ಲಿ ಸಮಾಧಾನ ಹೇಳಿ ಇದೆ.

4. ಇಸ್ರಯೇಲ್ಯರೆಲ್ಲರೂ ತಳ್ಳಲ್ಪಡಲಿಲ್ಲವೆಂಬುವದಕ್ಕೆ ಪೌಲನು ತನ್ನನ್ನೇ ದೃಷ್ಟಾಂತವಾಗಿ ತೋರಿಸುತ್ತಾನೆ. ನಾನು ಜನಾಂಗಗಳ ಅಪೊಸ್ತಲನಾಗಿದ್ದಾಗ್ಯೂ, ಹುಟ್ಟುವಿಕೆಯ ಪ್ರಕಾರ ಇಸ್ರಯೇಲ್ಯನಾಗಿಯೂ, ಅಬ್ರಹಾಮನ ಸಂತತಿಯವನಾಗಿಯೂ, ಕೀರ್ತಿ ಹೊಂದಿದ ಬೆನ್ಯಮೀನನ ಗೋತ್ರದವನಾಗಿಯೂ ಇದ್ದೇನೆ. (ಫಿಲಿ. ೩. ೫.) ಇಸ್ರಯೇಲ್ಯರೆಲ್ಲರೂ ತಳ್ಳಲ್ಪಟ್ಟರೆಂದು ನಾನು ಸಾಧಿಸಿದರೆ, ನನ್ನ ಜಾತಿಗೆ ಹೀನವುಂಟು ಮಾಡುವವನಾಗಿಯೂ, ನನ್ನ ನಂಬಿಕೆಯನ್ನು ನಾಶ ಮಾಡುವವನಾಗಿಯೂ ಇರುವೆನೆಂದು ಹೇಳಿ, ದೇವರು ತಾನು ಮುಂತಿಳಿದ ಜನರನ್ನು ತಳ್ಳಿ ಬಿಡಲಿಲ್ಲವೆಂದು ದೃಢ ಪಡಿಸುತ್ತಾನೆ. ದೇವರು ತನ್ನ ಸ್ವಾಧೀನ ಕೃಪೆಯ ಪ್ರಕಾರ ಅಬ್ರಹಾಮನನ್ನು ಕರೆದದ್ದೂ, (ಅಪೊ. ಕ್ರಿ. ೭. ೨.) ಆ ಕರೆಯುವಿಕೆಗೆ ಅವನು ವಿಧೇಯನಾದದ್ದೂ (ಇಬ್ರೀ. ೧೧. ೮.) ಸರ್ವಜ್ಞನಾದ ದೇವರಿಗೆ ಮುಂಚಿತಾಗಿಯೇ ತಿಳಿದಿತ್ತು. ಆ ಆಶ್ಚರ್ಯವಾದ ಮುಂತಿಳುವಿಕೆಯ ಪ್ರಕಾರ ದೇವರು ಆದು ಕೊಂಡ ಜನರು ತಳ್ಳಲ್ಪಡುವದು ಅಸಾಧ್ಯವು. (ರೋಮಾ. ೮. ೨೯.)

5. ಎಲೀಯನ ಚರಿತ್ರೆಯನ್ನು ನೋಡಿದರೆ, ಈ ಸತ್ಯವು ಚನ್ನಾಗಿ ತಿಳಿಯ ಬರುವದು. (೧ ಅರ. ೧೯. ೧೦—೧೮.)

6. ಎಲೀಯನ ಕಾಲದಲ್ಲಿ ಹತ್ತು ಗೋತ್ರಗಳವರಲ್ಲಿ ಅಧಿಕವಾದ ಜನರು ಬಾಳನೆಂಬ ವಿಗ್ರಹವನ್ನು ಪೂಜಿಸುವವರಾಗಿದ್ದಾಗ್ಯೂ, ಅದರ ಮುಂದೆ ಮೊಣಕಾಲೂರದೆ ಯೆಹೋವನನ್ನು ಆರಾಧಿಸಿದ ಪುರುಷರು ಮಾತ್ರ ಏಳು ಸಾವಿರ ಮಂದಿ ಇದ್ದರು. ಸ್ತ್ರೀಯರನ್ನೂ ಮಕ್ಕಳನ್ನೂ ಕೂಡಿಸಿದರೆ, ಹೆಚ್ಚು ಲೆಖ್ಖವಾಗುವದು.

7. ಎಲೀಯನ ಕಾಲದಲ್ಲಿದ್ದ ಪ್ರಕಾರ, ಈ ಕಾಲದಲ್ಲಿಯೂ ದೇವರಿಗೆ ಭಯ ಪಡುವ ಒಂದು ಜನಸಮೂಹವು ಅಬ್ರಹಾಮನ



೬ ಉಂಟು. ಆದರೆ ಕೃಪೆಯಿಂದಾದರೆ, ಇನ್ನು [1]ಕ್ರಿಯೆಗಳಿಂದಲ್ಲ; ಇಲ್ಲದಿದ್ದರೆ, ಕೃಪೆಯು ಇನ್ನು ಕೃಪೆ
ಯಾಗಿರದು. ಇದಲ್ಲದೆ ಕ್ರಿಯೆಗಳಿಂದಾದರೆ, ಇನ್ನು ಕೃಪೆಯಲ್ಲ; ಇಲ್ಲದಿದ್ದರೆ, ಕ್ರಿಯೆಯು ಇನ್ನು
ಕ್ರಿಯೆಯಲ್ಲ.
೭ ಹಾಗಾದರೇನು? ಇಸ್ರಯೇಲು [2]ಹುಡುಕುವದನ್ನು ಹೊಂದಲಿಲ್ಲ; ಆದರೆ ಆಯುವಿಕೆ ಹೊಂದಿತು; ಮಿಕ್ಕ
೮ ವರು [3]ಕಠಿಣರಾದರು. ಅದಕ್ಕೆ ಬರೆದದ್ದೇನಂದರೆ, ದೇವರು ತೂಕಡಿಕೆಯ ಆತ್ಮವನ್ನೂ, ಕಾಣದ ಕಣ್ಣುಗ
ಳನ್ನೂ, ಕೇಳದ ಕಿವಿಗಳನ್ನೂ ಇಂದಿನ ಮಟ್ಟಿಗೂ ಅವರಿಗೆ ಕೊಟ್ಟಿದ್ದಾನೆ. (ಯೆಶಾ. ೨೯. ೧೦.)
೯ ಮತ್ತು ದಾವೀದನು, ಅವರ ಮೇಜು ಅವರಿಗೆ [4]ಉರುಲೂ, ಬೋನೂ, ಆತಂಕವೂ, ಮುಯ್ಯಿಗೆ ಮುಯ್ಯೂ
೧೦ ಆಗಲಿ; ಅವರ ಕಣ್ಣುಗಳು ಕಾಣದ ಹಾಗೆ, ಅಂಧಕಾರವಾಗಲಿ; ಅವರ ಬೆನ್ನನ್ನು ಯಾವಾಗಲೂ ಬೊ
ಗ್ಗಿಸಿ ಬಿಡು, (ಕೀರ್ತ. ೬೯. ೨೨, ೨೩.) ಎಂದು ಹೇಳುತ್ತಾನೆ.
೧೧ ಹಾಗಾದರೆ, ಬೀಳುವ ಹಾಗೆ ಎಡವಿದ್ದಾರೋ? ಅನ್ನುತ್ತೇನೆ. ಆಗದು. ಆದರೆ ಅವರನ್ನು ಆಸಕ್ತಿ ಪಡಿಸು
೧೨ ವದಕ್ಕೋಸ್ಕರ, ಅವರ ಬೀಳ್ವಿಕೆಯಿಂದ ಜನಾಂಗಗಳಿಗೆ ರಕ್ಷಣೆ ಆಯಿತು. ಆದರೆ [5]ಅವರ ಬೀಳ್ವಿಕೆಯು
ಲೋಕದ ಐಶ್ವರ್ಯವೂ, ಅವರ ಕೊರತೆಯು ಜನಾಂಗಗಳ ಐಶ್ವರ್ಯವೂ ಆದರೆ, ಎಷ್ಟೋ ಹೆಚ್ಚಾಗಿ ಅವರ
೧೩ ಪೂರ್ಣತೆಯು! ಯಾಕಂದರೆ, [6]ಜನಾಂಗಗಳವರಾದ ನಿಮಗೆ ಹೇಳುತ್ತೇನೆ. ಹ್ಯಾಗಾದರೂ ನನ್ನ ಮಾಂ
೧೪ ಸವನ್ನು ಆಸಕ್ತಿ ಪಡಿಸಿ, ಅವರಲ್ಲಿ ಕೆಲವರನ್ನು ರಕ್ಷಿಸುವೆನೇನೋ? ಅಂತ, ನಾನು ಜನಾಂಗಗಳ ಅಪೊಸ್ತಲ
೧೫ ನಾಗಿರುವದರಿಂದ ನನ್ನ ಸೇವೆಯನ್ನು ಮಹಿಮೆ ಪಡಿಸುತ್ತೇನೆ. ಯಾಕಂದರೆ ಅವರ ಬಿಸಾಡುವಿಕೆಯು
ಲೋಕದ [7]ಅನ್ಯೋನ್ಯವಾದರೆ, ಅವರ ಅಂಗೀಕಾರವು ಸತ್ತವರೊಳಗಿಂದ ಜೀವವೇ ಹೊರ್ತು, ಮತ್ತೇನು?

ಸಂತತಿಯವರಲ್ಲಿ ಉಳಿದಿದ್ದಾರೆ. ಅಧಿಕವಾದ ಜನರು ಕ್ರಿಸ್ತನನ್ನು ತಳ್ಳಿ ಬಿಟ್ಟ ಕಾರಣ, ದೇವರಿಂದ ಅವರು ತಳ್ಳಲ್ಪಟ್ಟಾಗ್ಯೂ, ಕೃಪೆಯಿಂದ ಉಳಿದಿರುವವರು ಆತನ ಅಂಗೀಕಾರವನ್ನೂ ಆಶೀರ್ವಾದವನ್ನೂ ಹೊಂದುವರು.

1. ಆದು ಕೊಳ್ಳುವದಕ್ಕೆ ದೇವರ ಕೃಪೆಯೇ ಕಾರಣವಾದರೆ, ಮನುಷ್ಯನ ಕ್ರಿಯೆಗಳೂ ಪುಣ್ಯವೂ ಕಾರಣವಲ್ಲವೆಂಬುವದು ಪ್ರತ್ಯಕ್ಷವಾಗಿದೆ. ರಕ್ಷಣೆ ದೇವರ ಕೃಪೆಯಿಂದಲಾದರೂ ಮನುಷ್ಯನ ಪುಣ್ಯದಿಂದಲಾದರೂ ಉಂಟಾಗ ಬೇಕು. ಮನುಷ್ಯನ ಪುಣ್ಯದಿಂದಲಾದರೆ, ಕೃಪೆಯಿಂದ ಆದದ್ದಲ್ಲ; ಕೃಪೆಯಿಂದಲಾದರೆ, ಪುಣ್ಯದಿಂದ ಆದದ್ದಲ್ಲ. (೪. ೪.)

2. ಇಸ್ರಯೇಲ್ಯರು ನೀತಿಯನ್ನು ಹುಡುಕಿದರು. (೯. ೩೧; ೧೦. ೩.) ಅದನ್ನು ತಮ್ಮ ಸ್ವಂತ ಪುಣ್ಯದಿಂದ ಹೊಂದ ನೋಡಿದ್ದರಿಂದ ಅವರು ಅದನ್ನು ಹೊಂದಲಿಲ್ಲ.

3. ದೇವರು ತನ್ನ ಪ್ರವಾದಿಗಳ ಮಾತಿನ ಪ್ರಕಾರ (೮. ವ.) ಅವರನ್ನು ಕೈ ಬಿಟ್ಟದ್ದರಿಂದ ಅವರ ಹೃದಯವು ಕಲ್ಲಿನಂತೆ ಘಟ್ಟಿಯಾಯಿತು. ಅದರಿಂದ ಸತ್ಯದ ಮಹಿಮೆಯನ್ನೂ ಸುವಾರ್ತೆಯ ಅಮೂಲ್ಯತ್ವವನ್ನೂ ಗ್ರಹಿಸದೆ ಹೋದರು. (ಯೆಶಾ. ೬. ೯; ೨೯. ೯—೨೪. ದ್ವಿತೀಯ ನ್ಯಾ. ೨೯. ೪. ಮತ್ತಾ. ೧೩. ೧೪, ೧೫. ವಚನಗಳನ್ನೂ ಕೀರ್ತ. ೬೯. ೨೨, ೨೩. ೨ ಥೆಸ್ಸ. ೨. ೧೧, ೧೨. ವಚನಗಳನ್ನೂ ಸರಿ ನೋಡಿದರೆ, ಇಲ್ಲಿ ಹೇಳಿರುವ ಹಳೇ ಒಡಂಬಡಿಕೆಯ ವಚನಗಳು ವಾಕ್ಯಕ್ಕೆ ಸರಿಯಾಗಿ ಅಲ್ಲ, ತಾತ್ಪರ್ಯಕ್ಕೆ ಸರಿಯಾಗಿವೆ ಎಂದು ತಿಳಿಯ ತಕ್ಕದ್ದು.)

4. ಕ್ರಿಸ್ತನ ಕಷ್ಟಗಳನ್ನು ಎಣಿಸದೆ, ಆತನಿಗೆ ವಿರೋಧವಾಗಿ ಪಾಪ ಮಾಡುವ ಪಾತಕರು ಅನುಭವಿಸುವ ಆಶೀರ್ವಾದಗಳು ಶಾಪವಾಗಿ ಮಾರ್ಪಡಲು ಅವರು ನಾಶ ಹೊಂದುವರು. ಪಾಪಿಷ್ಠರಿಗೆ ಇಂಥಾ ನಾಶ ಬರುವದೆಂದು ದೇವರ ವಾಕ್ಯದಲ್ಲಿ ಹೇಳಿರುವದೇ ಪಾಪಿಗಳಿಗೆ ದೇವರು ತೋರಿಸುವ ದೊಡ್ಡ ಕನಿಕರವಾಗಿದೆ. ಈ ಎಚ್ಚರಿಕೆಯನ್ನು ಕೇಳಿಯೂ ಗುಣ ಪಡದವರಿಗೆ ನಾಶ ಬರುವದು ಆಶ್ಚರ್ಯವಲ್ಲ.

5. ಯೆಹೂದ್ಯರು ವಿಶ್ವಾಸದ ಉಪದೇಶವನ್ನು ಅನುಸರಿಸದೆ ಎಡವಿಬೀಳುವದು ದೇವರ ನಿರ್ಣಯವೋ? ಎಂದು ಕೇಳಿದರೆ, ಹಾಗಲ್ಲ, ಅವರು ಎಡವಿಬಿದ್ದ ಮಾರ್ಗದಿಂದ ಜನಾಂಗಗಳವರಿಗೆ ರಕ್ಷಣೆ ಬರುವದೂ, ತಿರಿಗಿ ಅದು ಯೆಹೂದ್ಯರಿಗೆ ಶೇರುವದೂ ದೇವರ ನಿರ್ಣಯವು. ಅವರು ಎಡವಿಬಿದ್ದದರಿಂದಲೂ ತಳ್ಳಲ್ಪಟ್ಟದರಿಂದಲೂ ಲೋಕಕ್ಕೆ ಇಷ್ಟು ಮೇಲು ಬರುವದಾದರೆ, ಅವರು ಗುಣ ಪಡುವದರಿಂದ ಇನ್ನೆಷ್ಟು ದೊಡ್ಡ ಮೇಲು ಬರುವದೆಂದು ತೋರಿಸುವದೇ ೧೨, ೧೩ನೇ ವಚನಗಳ ತಾತ್ಪರ್ಯವು.

6. ೧೩, ೧೪ನೇ ವಚನಗಳ ತಾತ್ಪರ್ಯವನ್ನು ಹೀಗೆ ಹೇಳಬಹುದು. ಹ್ಯಾಗಂದರೆ, ಇಸ್ರಯೇಲ್ಯರ ವಿಷಯವಾದ ದೇವರ ನಿರ್ಣಯಗಳನ್ನು ಜನಾಂಗಗಳವರಾದ ನಿಮಗೆ ನಾನು ಹೇಳುವದು ಆಶ್ಚರ್ಯವಲ್ಲ. ನನ್ನ ಸ್ವಂತ ಜನರನ್ನು ಎಬ್ಬಿಸಿ, ಅವರಲ್ಲಿ ಕೆಲವರು ರಕ್ಷಣೆ ಹೊಂದುವ ಹಾಗೆ ಮಾಡುವದರಿಂದ ನಿಮ್ಮ ಅಪೊಸ್ತಲನಾದ ನನ್ನ ಉದ್ಯೋಗವನ್ನು ಮಹಿಮೆ ಪಡಿಸುತ್ತೇನೆ. ಅವರು ತಳ್ಳಲ್ಪಟ್ಟದ್ದರಿಂದ ನಿಮಗುಂಟಾದ ಆಶೀರ್ವಾದವು ದೊಡ್ಡದಾದಾಗ್ಯೂ, ಅವರು ಗುಣ ಪಡುವದರಿಂದ ಉಂಟಾಗ ಹೋಗುವ ಮೇಲಿಗೆ ಅದು ಸಮಾನವಲ್ಲ. (ಎಜೇಕಿ. ೩೭. ೧—೧೪.)

7. ಈ ಅನ್ಯೋನ್ಯವಾಗುವಿಕೆಯನ್ನು ಕುರಿತು ಎಫೇ. ೨. ೧೧—೨೨. ವಚನಗಳ ವರಿಗೂ ನೋಡ ಬೇಕು.

೧೬ ಇದಲ್ಲದೆ, [1]ಪ್ರಥಮ ಫಲವು ಪರಿಶುದ್ಧವಾದರೆ, ಮುದ್ದೆಯೂ ಹಾಗೆಯೇ. ಮತ್ತು ಬೇರು ಪರಿಶುದ್ಧವಾ
೧೭ ದರೆ, ಕೊಂಬೆಗಳೂ ಹಾಗೆಯೇ. ಆದರೆ ಕೊಂಬೆಗಳಲ್ಲಿ ಕೆಲವು ಮುರಿದು ಹಾಕಲ್ಪಟ್ಟು, ಕಾಡಿಪ್ಪೆಯಾದ
೧೮ ನೀನು [2]ಅವುಗಳಲ್ಲಿ ಅಂಟಿಕ್ಕಲ್ಪಟ್ಟು, ಇಪ್ಪೆಯ ಬೇರಿನಲ್ಲಿಯೂ ಸಾರದಲ್ಲಿಯೂ ಪಾಲುಗೊಂಡಿದ್ದರೆ, ಕೊಂಬೆ
ಗಳ ಮೇಲೆ ಹೆಚ್ಚಳ ಪಡ ಬೇಡ; ಹೆಚ್ಚಳ ಪಟ್ಟರೆ, ನೀನು ಬೇರನ್ನಲ್ಲ, ಬೇರು ನಿನ್ನನ್ನೇ ಆತುಕೊಳ್ಳುತ್ತದೆ.
೧೯ ಹಾಗಾದರೆ, ನಾನು ಅಂಟಿಕ್ಕಲ್ಪಡುವ ಹಾಗೆ ಕೊಂಬೆಗಳು ಮುರಿದು ಹಾಕಲ್ಪಟ್ಟವೆಂದು ಹೇಳುವಿ.
೨೦ ಒಳ್ಳೇದು; ಅವಿಶ್ವಾಸದಿಂದ ಮುರಿದು ಹಾಕಲ್ಪಟ್ಟವು; ನೀನು ವಿಶ್ವಾಸದಿಂದ ನಿಂತು ಕೊಳ್ಳುತ್ತೀ. ಉಬ್ಬಿದ
೨೧ ಮನಸ್ಸಾಗಿರದೆ, ಭಯ ಪಡು. ಯಾಕಂದರೆ ದೇವರು ಸ್ವಭಾವವಾದ ಕೊಂಬೆಗಳನ್ನು ಕನಿಕರಿಸದೆ ಇದ್ದರೆ,
ಒಂದು ವೇಳೆ ನಿನ್ನನ್ನು ಕನಿಕರಿಸದೆ ಇದ್ದಾನು.
೨೨ ಹಾಗಾದರೆ, ದೇವರ ದಯವನ್ನೂ ಕಾಠಿಣ್ಯವನ್ನೂ ನೋಡು! ಬಿದ್ದವರ ಮೇಲೆ ಕಾಠಿಣ್ಯವನ್ನೂ, ನಿನ್ನ
ಮೇಲೆ ದಯವನ್ನೂ—ಅವನ [3]ದಯದಲ್ಲಿ ನೆಲೆಯಾಗಿದ್ದರೆ; ಇಲ್ಲದಿದ್ದರೆ, ನೀನು ಸಹ ಕಡಿದು ಹಾಕಲ್ಪಡುವಿ.
೨೩ ಆದರೆ ಅವರೂ ಅವಿಶ್ವಾಸದಲ್ಲಿ ನಿಲ್ಲದೆ ಇದ್ದರೆ, ಅಂಟಿಕ್ಕಲ್ಪಡುವರು; ಯಾಕಂದರೆ ದೇವರು ಅವರನ್ನು
೨೪ ತಿರಿಗಿ ಅಂಟಿಕ್ಕ ಬಲ್ಲನು. ಯಾಕಂದರೆ ನೀನು ಸ್ವಭಾವವಾದ ಕಾಡಿಪ್ಪೆಯಿಂದ ಕಡಿಯಲ್ಪಟ್ಟು, ಸ್ವಭಾವಕ್ಕೆ
ವಿರೋಧವಾಗಿ ಒಳ್ಳೇ ಇಪ್ಪೆಯಲ್ಲಿ ಅಂಟಿಕ್ಕಲ್ಪಟ್ಟಿದ್ದರೆ, [4]ಎಷ್ಟೋ ಹೆಚ್ಚಾಗಿ ಸ್ವಭಾವದವರಾದ ಇವರು ತಮ್ಮ
ಸ್ವಂತ ಇಪ್ಪೆಯಲ್ಲಿ ಅಂಟಿಕ್ಕಲ್ಪಡುವರು.
೨೫ ಯಾಕಂದರೆ, ಸಹೋದರರೇ, ನಿಮ್ಮನ್ನು ನೀವೇ ಬುದ್ಧಿವಂತರೆಂದು ನೆನಸಿ ಕೊಳ್ಳದ ಹಾಗೆ, ನೀವು ಈ
ಮರ್ಮವನ್ನು [5]ಅರಿಯದಿರ ನನಗೆ ಮನಸ್ಸಿಲ್ಲ. ಏನಂದರೆ, ಜನಾಂಗಗಳ [6]ಪೂರ್ಣತೆಯು ಒಳಗೆ ಶೇರುವ
೨೬ ಮಟ್ಟಿಗೂ, ಇಸ್ರಯೇಲಿಗೆ ಪಾಲಾಗಿ [7]ಕಾಠಿಣ್ಯವು ಆಯಿತು. ಮತ್ತು ಹೀಗೆ ಚಿಯೋನಿನಿಂದ ವಿಮೋಚ
ಕನು ಬಂದು, ಯಾಕೋಬನಿಗೆ ಭಕ್ತಿಹೀನತ್ವಗಳನ್ನು ನಿವಾರಣೆ ಮಾಡುವನೆಂದೂ, (ಯೆಶಾ. ೨೭. ೯.)

1. ದೇವರಿಗೆ ಕಾಣಿಕೆಯಾಗಿ ಅರ್ಪಿಸಲ್ಪಟ್ಟ ಹಿಟ್ಟಿನಲ್ಲಿ ಮೊದಲನೇ ಭಾಗವು ಪರಿಶುದ್ಧವಾಗಿದ್ದರೆ, ಉಳಿದ ಭಾಗವೂ ಹಾಗೆಯೇ ಇರುವದು. (ಅಂಕೆ. ೧೫. ೨೦.) ಒಂದು ಮರದ ಬೇರು ಪರಿಶುದ್ಧವಾಗಿದ್ದರೆ, ಅದರ ಕೊಂಬೆಗಳು ಹಾಗೆಯೇ ಇರುವವು. ಈ ಎರಡು ಉಪಮಾನಗಳಿಂದಲೂ ಅಬ್ರಹಾಮು, ಇಸಾಕ, ಯಾಕೋಬ ಮುಂತಾದ ಮೂಲ ಪಿತೃಗಳು ದೇವರಿಗೆ ದಾಸರಾಗಿದ್ದದ್ದು, ಅವರ ಸಂತತಿಯವರೆಲ್ಲರೂ ಆತನಿಗೆ ದಾಸರಾಗುವರೆಂಬುವದಕ್ಕೆ ಮುಂಗುರುತಾಗಿತ್ತೆಂದು ತಿಳಿಯ ಬೇಕು. (೨೮. ವ. ೧ಕೊರಿ. ೭. ೧೪.)

2. ಮೇಲೆ ಹೇಳಿದ ಸತ್ಯವನ್ನು ವಿವರಿಸುವದಕ್ಕೂ ಜನಾಂಗಗಳವರಿಗೆ ದೀನತ್ವವನ್ನು ಕಲಿಸುವದಕ್ಕೂ ತಕ್ಕಂಥಾ ಅಂಟಿಕ್ಕದ ಮರವನ್ನು ಕುರಿತ ಇನ್ನೊಂದು ಉಪಮಾನವು ಹೇಳಲ್ಪಟ್ಟದೆ. ಕಾಡಿಪ್ಪೆಯ ಸಸಿಯನ್ನು ಬಲಿತ ಒಳ್ಳೇ ಇಪ್ಪೆಯ ಮರದಲ್ಲಿ ಅಂಟಿಕ್ಕಿದ್ದರೆ, ಒಳ್ಳೇ ಮರದ ಸಾರವು ಕಾಡಿಪ್ಪೆಯ ಸಸಿಯಲ್ಲಿ ಏರಿ, ಅದು ಸಹ ಒಳ್ಳೇ ಮರವಾಗುವದು. ಇಸ್ರಯೇಲ್ಯರು ಒಳ್ಳೇ ಇಪ್ಪೆಯ ಮರಗಳು; ಜನಾಂಗಗಳವರು ಕಾಡಿಪ್ಪೆಯ ಮರಗಳಿಗೆ ಸಮಾನವಾದವರು. ಒಳ್ಳೇ ಇಪ್ಪೆಯಾದ ಯೆಹೂದ್ಯರ ಮೂಲಕವಾಗಿ ಮೇಲನ್ನು ಹೊಂದಿದ ಕಾಡಿಪ್ಪೆಯಾದ ಜನಾಂಗಗಳವರು ಅವರನ್ನು ಕುರಿತು ಹೀನವಾಗಿಯೂ ತಮ್ಮನ್ನು ಕುರಿತು ಘನವಾಗಿಯೂ ನೆನಸುವದು ಸರಿಯಲ್ಲ. ಸ್ವಭಾವದಲ್ಲಿ ಒಳ್ಳೇ ಮರಕ್ಕೆ ಸಮಾನವಾಗಿರುವ ಯೆಹೂದ್ಯರು ಅವಿಶ್ವಾಸದ ನಿಮಿತ್ತ ತಳ್ಳಲ್ಪಟ್ಟರೆ, ಕಾಡು ಮರಕ್ಕೆ ಸಮಾನವಾಗಿದ್ದ ಜನಾಂಗಗಳವರು ಅಹಂಕಾರದಿಂದ ನಡೆದರೆ, ತಳ್ಳಲ್ಪಡುವರೆಂಬುವದು ಬಹು ನಿಶ್ಚಯವಾಗಿದೆ. ಆದದರಿಂದ ಅವರು ತಮ್ಮನ್ನು ತಗ್ಗಿಸಿ ಕೊಂಡು ಭಯದಿಂದ ನಡಿಯ ಬೇಕು.

3. ದೇವರು ದಯವಾಗಿ ಅನುಗ್ರಹಿಸಿದ ವಿಶ್ವಾಸದಲ್ಲಿ ಸ್ಥಿರವಾಗಿರ ಬೇಕೆಂಬುವದೇ ಇದರ ತಾತ್ಪರ್ಯವು.

4. ಜನಾಂಗಗಳವರು ಕ್ರಿಸ್ತನ ಸಭೆಯಲ್ಲಿ ಶೇರುವದು ನಿಜವಾದರೆ, ಯೆಹೂದ್ಯರು ಅದರಲ್ಲಿ ಶೇರುವದು ಅಧಿಕ ನಿಶ್ಚಯವೆಂದು ಹೇಳ ಬಹುದು. (೧೬. ವಚನದ ವ್ಯಾಖ್ಯಾನ ನೋಡ ಬೇಕು.)

5. ಯೆಹೂದ್ಯರನ್ನು ಕುರಿತು ಅನೇಕ ಸಂವತ್ಸರಗಳಿಂದ ಮರೆಯಾಗಿದ್ದ ದೇವರ ನಿರ್ಣಯವಾದ ರಹಸ್ಯವನ್ನು ಪೌಲನು ಪ್ರಕಟ ಮಾಡುತ್ತಾನೆ. (ಮತ್ತಾ. ೧೩. ೧೧. ವಚನದ ವ್ಯಾಖ್ಯಾನ ನೋಡ ಬೇಕು.)

6. ಪೂರ್ಣತೆ ಎಂಬುವದು ಜನಾಂಗಗಳವರಲ್ಲಿ ಒಂದು ದೊಡ್ಡ ಸಂಖ್ಯೆಯನ್ನು ಸೂಚಿಸುತ್ತದೆ. ದೇವರ ನಿರ್ಣಯದ ಪ್ರಕಾರ ಇವರು ಯೆಹೂದ್ಯರು ಗುಣ ಪಡುವದಕ್ಕಿಂತ ಮುಂಚೆ ಸಭೆಯಲ್ಲಿ ಶೇರುವರು. ಅವರೆಲ್ಲರೂ ಗುಣ ಪಡುವಾಗ ಜನಾಂಗಗಳವರಲ್ಲಿ ಸುವಾರ್ತೆಯ ಮಹಿಮೆ ಪೂರ್ಣವಾಗಿ ತೋರುವದು. (೧೨—೧೫. ವ.)

7. ಇಂಥಾ ಆಶೀರ್ವಾದವು ಜನಾಂಗಗಳವರಿಗೆ ಉಂಟಾಗುವ ಮಟ್ಟಿಗೂ, ಇಸ್ರಯೇಲ್ಯರ ಒಂದು ಭಾಗಕ್ಕೆ ದೇವರ ಸತ್ಯವನ್ನು ಗ್ರಹಿಸದ ಹಾಗೆ ಅವರ ಹೃದಯವು ಕಠಿಣವಾಗಿರುವದು. ಆದರೆ ಎಲ್ಲಾ ಯೆಹೂದ್ಯರಿಗೆ ಅಲ್ಲ, ಎಲ್ಲಾ ಕಾಲದಲ್ಲಿಯೂ ಅಲ್ಲ.



೨೭ ನಾನು ಅವರ ಪಾಪಗಳನ್ನು ಪರಿಹರಿಸುವಾಗ, ಅವರಿಗೆ ನನ್ನಿಂದ ಉಂಟಾದ ಒಡಂಬಡಿಕೆ ಇದೇ ಎಂದೂ,
೨೮ (ಯೆಶಾ. ೫೯. ೨೦, ೨೧.) [1]ಬರೆದಿರುವ ಪ್ರಕಾರ, ಇಸ್ರಯೇಲೆಲ್ಲಾ ರಕ್ಷಿಸಲ್ಪಡುವದು. ಸುವಾರ್ತೆಯ
ವಿಷಯವಾಗಿ ನಿಮ್ಮ ನಿಮಿತ್ತ [2]ಶತ್ರುಗಳಾಗಿದ್ದಾರೆ; ಆದರೆ ಆಯುವಿಕೆಯ ವಿಷಯವಾಗಿ ಪಿತೃಗಳ ನಿಮಿತ್ತ
೨೯ ಪ್ರಿಯರಾಗಿದ್ದಾರೆ. ಯಾಕಂದರೆ ದೇವರ ವರಗಳೂ ಕರೆಯುವಿಕೆಯೂ ಪಶ್ಚಾತ್ತಾಪವಿಲ್ಲದವುಗಳೇ.
೩೦ ಯಾಕಂದರೆ ಯಾವ ಪ್ರಕಾರ ನೀವು ಮುಂಚೆ ದೇವರಿಗೆ ಅವಿಧೇಯರಾಗಿದ್ದು, ಇವರ ಅವಿಧೇಯತ್ವದಿಂದ
೩೧ ಈಗ ಕರುಣಿಸಲ್ಪಟ್ಟಿರೋ, ಅದೇ ಪ್ರಕಾರ ಇವರೂ ನಿಮಗೆ ಉಂಟಾದ ಕರುಣೆಯಿಂದ ಕರುಣಿಸಲ್ಪಡುವ
೩೨ ಹಾಗೆ, ಅವರು ಸಹ ಈಗ ಅವಿಧೇಯರಾದರು. ಯಾಕಂದರೆ ದೇವರು ಎಲ್ಲರನ್ನು ಕರುಣಿಸುವ ಹಾಗೆ,
[3]ಎಲ್ಲರನ್ನು ಅವಿಧೇಯತ್ವದಲ್ಲಿ ಮುಚ್ಚಿ ಹಾಕಿದ್ದಾನೆ.
೩೩ [4]ಓ ದೇವರ ಜ್ಞಾನ ತಿಳುವಿಕೆಗಳ ಐಶ್ವರ್ಯದ ಅಗಾಧವೇ! ಅವನ ನ್ಯಾಯತೀರ್ವಿಕೆಗಳು ಎಷ್ಟೋ ಅಶೋ
೩೪ ಧ್ಯವಾಗಿವೆ! ಅವನ ಹಾದಿಗಳು ಎಷ್ಟೋ ಅಮಾರ್ಗ್ಯವಾಗಿವೆ! ಯಾಕಂದರೆ ಕರ್ತನ ಮನಸ್ಸನ್ನು ತಿಳಿದವ
೩೫ ನ್ಯಾರು? ಇಲ್ಲವೆ ಅವನಿಗೆ ಆಲೋಚನೆ ಹೇಳಿದವನ್ಯಾರು? (ಯೆಶಾ. ೪೦. ೧೩.) ಇಲ್ಲವೆ ತನಗೆ ತಿರಿಗಿ
೩೬ ಕೊಡಲ್ಪಡುವ ಹಾಗೆ, ಅವನಿಗೆ ಮುಂಕೊಟ್ಟವನ್ಯಾರು? ಯಾಕಂದರೆ ಅವನ ದೆಸೆಯಿಂದಲೂ, ಅವನ
ಮೂಲವಾಗಿಯೂ, ಅವನಿಗಾಗಿಯೂ [5]ಸಮಸ್ತವು ಉಂಟು. ಅವನಿಗೆ ಎಂದೆಂದಿಗೂ ಮಹಿಮೆ ಆಗಲಿ.
ಆಮೆನ್.

ದೇವರಿಗೆ ತಮ್ಮನ್ನು ಪೂರ್ಣವಾಗಿ ಅರ್ಪಿಸಿ ಸಕಲ ಕೆಲಸಗಳನ್ನೂ ಪೂರೈಸುವದು.

12. [6]ಆದದರಿಂದ, ಸಹೋದರರೇ, ನಿಮ್ಮ ಶರೀರಗಳನ್ನು ಬದುಕುವಂಥ, ಪರಿಶುದ್ಧವಾದಂಥ, ದೇವರಿಗೆ ಸಮ
ರ್ಪಕವಾದಂಥ ಬಲಿಯಾಗಿ ಅರ್ಪಿಸ ಬೇಕೆಂದು, [7]ದೇವರ ಕನಿಕರಗಳ ನಿಮಿತ್ತ ನಿಮ್ಮನ್ನು ಬೇಡಿ ಕೊಳ್ಳುತ್ತೇನೆ;

1. ದೇವರು ತನ್ನ ಜನರ ಸಂಗಡ ಮಾಡಿದ ಒಡಂಬಡಿಕೆಯಲ್ಲಿ, ವಿಶ್ವಾಸದಿಂದ ಅವರ ಪಾಪಗಳು ಮನ್ನಿಸಲ್ಪಟ್ಟು ಸುವಾರ್ತೆಯ ಮೇಲುಗಳನ್ನು ಹೊಂದಿ ಅನುಭವಿಸುವ ಕಾಲವು ಬರುವದೆಂದು ಸೂಚಿಸಿ ಅದೆ. (ಜೆಕ. ೧೨. ೧೦—೧೪. ಯೆಶಾ. ೬೦. ೨೧, ೨೨.)

2. ವಿಶ್ವಾಸಿಗಳು ಅವಿಶ್ವಾಸಿಗಳು ಎಂಬ ಭೇದವೇ ಹೊರ್ತು ಬೇರೆ ವ್ಯತ್ಯಾಸವನ್ನು ಕಲಿಸದೆ ಇರುವ ಸುವಾರ್ತೆಯ ಪ್ರಕಾರ ಜನಾಂಗಗಳವರು ದೇವರ ಆಶೀರ್ವಾದಗಳನ್ನು ಪೂರ್ಣವಾಗಿ ಹೊಂದುವ ಉದ್ದಿಶ್ಯ ಯೆಹೂದ್ಯರು ಅದಕ್ಕೆ ತೊಲಗಿಸಲ್ಪಟ್ಟರು. ಆದರೆ ದೇವರ ಅನಾದಿ ನಿರ್ಣಯವಾದ ಆಯುವಿಕೆಯ ಪ್ರಕಾರ ಅವರು ಇನ್ನೂ ಪ್ರಿಯರಾಗಿಯೂ, ಆತನ ಕೃಪೆಯ ವರಗಳನ್ನು ಹೊಂದುವವರಾಗಿಯೂ ಇರುವರು. ದೇವರ ಕೃಪೆಯ ವರಗಳೂ ಕರೆಯುವಿಕೆಯೂ ಮಾರ್ಪಡುವದಿಲ್ಲವಾದದರಿಂದ, ಆತನು ಅವರ ಪಿತೃಗಳಿಗೆ ಕೊಟ್ಟ ವಾಗ್ದತ್ತವು ಸಂಪೂರ್ಣವಾಗಿ ಈಡೇರುವದೆಂಬುವದಕ್ಕೆ ಸಂದೇಹವಿಲ್ಲ. (೨೯. ವ.)

3. ಯೆಹೂದ್ಯರೂ ಜನಾಂಗಗಳವರೂ ಆದ ಎಲ್ಲರನ್ನೂ ದೇವರು ಏಕವಾಗಿ ಅವಿಧೇಯತ್ವದಲ್ಲಿ ಮುಚ್ಚಿ ಹಾಕಿದ್ದಾನೆ. ಆದದರಿಂದ ಅವರಲ್ಲಿ ಯಾರಾದರೂ ರಕ್ಷಿಸಲ್ಪಟ್ಟರೆ, ಅವರು ದೇವರ ಸ್ವಾಧೀನವೂ ಆಶ್ಚರ್ಯವೂ ಆದ ಕೃಪೆಯಿಂದಲೇ ರಕ್ಷಿಸಲ್ಪಡ ಬೇಕು.

4. ದೇವರ ಅತಿಶಯವಾದ ಕರುಣೆಯನ್ನೂ ನೀತಿಯನ್ನೂ ಕುರಿತು ಪೌಲನು ಅನೇಕ ನ್ಯಾಯಗಳನ್ನು ಹೇಳಿದ ತರುವಾಯ, ಇನ್ನೂ ಅವೆಲ್ಲಾ ತನಗೆ ನಿಲುಕದವುಗಳಾಗಿವೆ ಎಂದು ಗ್ರಹಿಸಿ, ಸರ್ವಸುಗುಣಗಳು ನಿತ್ಯವಾಗಿರುವ ದೇವರನ್ನು ಅತ್ಯಂತ ಭಕ್ತಿಯಿಂದ ಸ್ತುತಿಸುತ್ತಾನೆ. ಆತನ ಜ್ಞಾನ ತಿಳುವಿಕೆ ಕೃಪೆಗಳ ಐಶ್ವರ್ಯವು ಮಹಾ ಅಗಾಧವಾಗಿದೆ. (೩೩. ವ.) ಇಂಥಾ ಆದಿಮೂಲ ವಸ್ತುವನ್ನು ಯಾವ ಸೃಷ್ಟಿ ಸಂಪೂರ್ಣವಾಗಿ ತಿಳಿಯ ಬಹುದು? ಆತನಿಗೆ ಮೇಲಾದ ಆಲೋಚನೆ ಹೇಳಲೂ, ಆತನಿಗೆ ಸಮಾನವಾದ ಅಧಿಕಾರ ಸಲ್ಲಿಸಲೂ ಯಾರಿಂದಲಾಗುವದು?

5. ಸಮಸ್ತ ಕಾರ್ಯಗಳೂ ಸೃಷ್ಟಿಕರ್ತನಾದ ಆತನಿಂದ ಆರಂಭಿಸುವವುಗಳಾಗಿಯೂ, ಸರ್ವಪ್ರಭುವಾದ ಆತನಿಂದ ಆಳಲ್ಪಡುವವುಗಳಾಗಿಯೂ, ಆದ್ಯಂತವಿಲ್ಲದ ಆತನಲ್ಲಿ ಮುಗಿಯುವವುಗಳಾಗಿಯೂ ಇರುತ್ತವೆ. ತನಗೆ ಸಮಾನವಿಲ್ಲದ ಈ ನಿತ್ಯ ದೇವರಿಗೆ ಸದಾಕಾಲವೂ ಸ್ತೋತ್ರವಾಗಲಿ. ಆಮೆನ್.

6. ೧೨ನೇ ಸಂಧಿಯಿಂದ, ೧೫ನೇ ಸಂಧಿ, ೧೩ನೇ ವಚನದ ವರಿಗೂ ಹೇಳಲ್ಪಟ್ಟ ಸತ್ಯಗಳನ್ನು ಕ್ರೈಸ್ತರು ಅನುಸರಿಸಿ ನಡಿಯ ಬೇಕೆಂದು ಪೌಲನು ಬುದ್ಧಿ ಹೇಳುತ್ತಾನೆ. ದೇವರ ಸೇವೆಗೆ ತಮ್ಮನ್ನು ಒಪ್ಪಿಸುವವರು ಎಂಥಾ ಗುಣವೂ ಗುರಿಯೂ ಉಳ್ಳವರಾಗಿರ ಬೇಕೆಂದೂ, (೧೨. ೧—೩.) ಸಭೆಯಲ್ಲಿ ಯಾವ ಪ್ರಕಾರ ನಡಿಯ ಬೇಕೆಂದೂ, (೪—೧೩. ವ.) ಲೋಕದಲ್ಲಿ ಹ್ಯಾಗೆ ನಡೆದು ಕೊಳ್ಳ ಬೇಕೆಂದೂ, (೧೪—೨೧. ವ.) ತೋರಿಸಿ ಇದೆ. ತರುವಾಯ ಮನೋದೀನತ್ವ, ದೇವಭಕ್ತಿ, ವೈರಾಗ್ಯ, ಸಹೋದರಸ್ನೇಹ, ಪರೋಪಕಾರಚಿಂತೆ, ದೇವರ ಚಿತ್ತಕ್ಕೆ ಒಳಬೀಳುವದು, ಮನ್ನಿಸುವ ಗುಣ, ಧರ್ಮಚಿಂತೆ ಮುಂತಾದ, ಕ್ರೈಸ್ತರನ್ನು ಅಲಂಕರಿಸುವ ಸದ್ಗುಣಗಳನ್ನೆಲ್ಲಾ ಹೇಳಿ, ಅಧಿಕಾರಿಗಳಿಗೆ ವಿಧೇಯರಾಗಿ ನಡಿಯ ಬೇಕೆಂದೂ, (೧೩. ೧—೭.) ಹೀಗೆ ನಡಿಯುವದಕ್ಕೆ ನೆರೆಯವರ ಪ್ರೀತಿಯೂ, (೮—೧೦. ವ.) ರಕ್ಷಣೆ ಸಮೀಪವಾಗಿದೆ ಎಂಬುವ ಗ್ರಹಿಕೆಯೂ, (೧೧—೧೪. ವ.) ಇರ ಬೇಕೆಂದು ಹೇಳಿ ಇದೆ.

7. ಇದು ೩—೮. ವರಿಗಿರುವ ಸಂಧಿಗಳಲ್ಲಿ ಹೇಳಲ್ಪಟ್ಟ ಕನಿಕರಗಳನು ಸೂಚಿಸುತ್ತದೆ. ಈ ಕನಿಕರಗಳನ್ನು ಹೊಂ

೨ ಇದು ನಿಮ್ಮ ಬುದ್ಧಿಯುಳ್ಳ ಆರಾಧನೆ. ಮತ್ತು ಒಳ್ಳೇದೂ, ಸಮರ್ಪಕವೂ, ಪೂರ್ಣವೂ ಆಗಿರುವ ದೇವರ
ಚಿತ್ತವು ಏನೆಂದು ನೀವು [1]ಪರೀಕ್ಷಿಸುವದಕ್ಕೋಸ್ಕರ ಈ [2]ಯುಗಕ್ಕೆ ಅನುಕೂಲವಾಗದೆ, ನಿಮ್ಮ ಮನಸ್ಸಿನ
ನವೀಕರಣದಿಂದ ರೂಪಾಂತರವಾಗಿರಿ.
೩ ಯಾಕಂದರೆ ನನಗೆ ಕೊಡಲ್ಪಟ್ಟ ಕೃಪೆಯಿಂದ ನಿಮ್ಮಲ್ಲಿರುವ ಒಬ್ಬೊಬ್ಬನಿಗೆ, ಎಣಿಸ ತಕ್ಕದ್ದಕ್ಕಿಂತ ಹೆಚ್ಚಾಗಿ
ಎಣಿಸದೆ, ದೇವರು ಒಬ್ಬೊಬ್ಬನಿಗೆ [3]ವಿಶ್ವಾಸದ ಅಳತೆಯನ್ನು ಹಂಚಿ ಕೊಟ್ಟ ಪ್ರಕಾರ, ಸ್ವಸ್ಥ ಬುದ್ಧಿಯಾಗಿ
೪ ಎಣಿಸ ಹೇಳುತ್ತೇನೆ. ಯಾಕಂದರೆ ಯಾವ ಪ್ರಕಾರ ಒಂದೇ ಶರೀರದಲ್ಲಿ ಅನೇಕ ಅಂಗಗಳು ನಮಗೆ ಇರ
೫ ಲಾಗಿ, ಎಲ್ಲಾ ಅಂಗಗಳಿಗೆ ಒಂದೇ ಕೆಲಸವಿರುವದಿಲ್ಲವೋ, ಅದೇ ಪ್ರಕಾರ [4]ಅನೇಕರಾದ ನಾವು ಕ್ರಿಸ್ತ
೬ ನಲ್ಲಿ ಒಂದೇ ಶರೀರವಾಗಿದ್ದು, ಒಬ್ಬರಿಗೊಬ್ಬರು ಅಂಗಗಳಾಗಿದ್ದೇವೆ. ನಮಗೆ ಕೊಡಲ್ಪಟ್ಟ ಕೃಪೆಯ ಪ್ರಕಾರ
ಬೇರೆ ಬೇರೆ ವರಗಳುಳ್ಳವರಾಗಿದ್ದೇವೆ. [5]ಪ್ರವಾದನೆಯಾದರೆ, [6]ವಿಶ್ವಾಸಪ್ರಮಾಣದ ಪ್ರಕಾರವಾಗಿಯೂ;
೭,೮ [7]ಸೇವೆಯಾದರೆ, ಸೇವೆಯಲ್ಲಿಯೂ; ಬೋಧಿಸುವವನಾದರೆ, ಬೋಧನೆಯಲ್ಲಿಯೂ; ಬುದ್ಧಿ ಹೇಳುವವ
ನಾದರೆ, ಬುದ್ಧಿ ಹೇಳುವದರಲ್ಲಿಯೂ, ಇರಲಿ. [8]ಹಂಚಿ ಕೊಡುವವನು ಯಥಾರ್ಥವಾಗಿ, ಅಧಿಕಾರ ಮಾಡು
ವವನು ಜಾಗ್ರತೆಯಾಗಿ, ಕರುಣಿಸುವವನು ಸಂತೋಷವಾಗಿ, ಮಾಡಲಿ.

ದಿದ್ದಕ್ಕೆ ಸ್ತೋತ್ರಬಲಿಯಾಗಿ (ಲೇವಿ. ೨. ೧; ೩. ೧.) ದೇವರು ತನ್ನ ದಾಸರಿಂದ, ಕಳಂಕವಿಲ್ಲದ ನಿರ್ಜೀವವಾದ ಮೃಗಗಳನ್ನಲ್ಲ, ಒಂದು ಕಾಲ ಪಾಪದಿಂದ ಕಳಂಕವಾದದ್ದೂ, (೧. ೨೪; ೬. ೧೨.) ತರುವಾಯ ಪರಿಶುದ್ಧಾತ್ಮನ ಮಂದಿರವಾಗಿಯೂ, (೧ಕೊರಿ. ೬. ೧೯. ರೋಮಾ. ೮. ೯.) ಇರುವ ಶರೀರವಾದ ಜೀವವುಳ್ಳ ಬಲಿಯನ್ನು ಅಪೇಕ್ಷಿಸುತ್ತಾನೆ. ನಿರ್ಮಲವಾದ ಮನಸ್ಸಿನಿಂದಾಗುವ ಇಂಥಾ ಬುದ್ಧಿಯುಳ್ಳ ಆರಾಧನೆಯನ್ನು ಅಪೇಕ್ಷಿಸುವ ದೇವರಿಗೆ ಇಂಥಾ ಜೀವವುಳ್ಳ ಬಲಿಯೇ ಪರಿಶುದ್ಧವೂ ಪ್ರಿಯವೂ ಆಗಿದೆ. ಇಂಥಾ ಬಲಿಯನ್ನು ನಾವು ಅರ್ಪಿಸುವದಕ್ಕೆ ಆತನ ಕರುಣೆ, ಅಥವಾ ಪ್ರೀತಿ ನಮ್ಮನ್ನು ಪ್ರೇರೇಪಿಸ ಬೇಕು. (೨ಕೊರಿ. ೫. ೧೪, ೧೫.)

1. ನಮ್ಮ ವಿಷಯವಾದ ದೇವರ ಚಿತ್ತವು ಏನೆಂದೂ, (೧ಥೆಸ್ಸ. ೪. ೩.) ಆತನಿಗೆ ಸಮರ್ಪಕವೂ ಪ್ರಿಯವೂ ಪೂರ್ಣವೂ ಆದ ಕಾರ್ಯವು ಯಾವದೆಂದೂ, (ಯೋಹಾ. ೬. ೧೬.) ಚನ್ನಾಗಿ ಪರೀಕ್ಷಿಸಿ ತಿಳಿದು ಅನುಸರಿಸಿ ನಡಿಯ ಬೇಕು. ಆ ಒಳ್ಳೇ ಪ್ರಿಯವಾದ ಚಿತ್ತವು ನಮ್ಮಲ್ಲಿ ಈಡೇರಿದರೆ, ಸಕಲ ಸದ್ಗುಣಗಳೂ ನಮ್ಮಲ್ಲಿ ಸಂಪೂರ್ಣ ಹೊಂದುವವು. ಲೋಕಕ್ಕೆ ಸರಿಯಾಗಿ ನಡಿಯದೆ, ಮನಸ್ಸು ಮಾರ್ಪಟ್ಟು ಪರಮ ಚಿಂತೆಯಿಂದ ನಡಿಯುವವರೇ ದೇವರ ಚಿತ್ತವನ್ನು ಈಡೇರಿಸುವವರು.

2. ಈ ಯುಗವೆಂಬುವದು, ಸತ್ಯಮಾರ್ಗದ ಸಾರವನ್ನು ಗ್ರಹಿಸದ ಲೌಕಿಕ ಮನುಷ್ಯರು ಬಾಳುವ ಕಾಲ, ಅಥವಾ ಪ್ರಪಂಚವನ್ನು ಸೂಚಿಸುತ್ತದೆ. ಪಿತುರಾಚಾರದ ಪ್ರಕಾರ ನಡಿಯ ಬೇಕೆಂಬ ಈ ದೇಶಸ್ಥರ ಪದ್ಧತಿಯು ಈ ಕಟ್ಟಳೆಗೆ ಪೂರ್ಣ ವಿರೋಧವಾಗಿದೆ.

3. ವಿಶ್ವಾಸ ಎಂಬುವದು, ದೇವರನ್ನು ಪೂರ್ಣವಾಗಿ ಹೊಂದಿಕೊಂಡು ಆತನ ಮೇಲೆ ಇಡ ತಕ್ಕ ಪೂರ್ಣ ನಂಬಿಕೆಯು. ಇಂಥಾ ವಿಶ್ವಾಸವುಳ್ಳವರು ಯಾರೋ ಅವರೇ ದೇವರು ಅನುಗ್ರಹಿಸುವ ಆತ್ಮವರಗಳನ್ನು ಪೂರ್ಣವಾಗಿ ಹೊಂದ ತಕ್ಕವರು. ಅವರಲ್ಲಿ ಮೊದಲು ಉಂಟಾಗುವ ಸದ್ಗುಣವೇ ಮನೋದೀನತ್ವವು. ಲೋಕದ ಅಳತೆಯ ಪ್ರಕಾರವಾದರೆ, ಸುಖವೂ ಭೋಗವೂ ಹಮ್ಮೂ ಶ್ರೇಷ್ಠವಾದವುಗಳು. ವಿಶ್ವಾಸದ ಅಳತೆಯ ಪ್ರಕಾರ ಮನೋದೀನತ್ವವೇ ಶ್ರೇಷ್ಠವಾದದ್ದು.

4. ನಾವು ಅನೇಕರಾಗಿದ್ದಾಗ್ಯೂ, ಎಲ್ಲರೂ ಕ್ರಿಸ್ತನ ಕೃಪೆಯಿಂದಲೇ ಜೀವ ಹೊಂದುವದರಿಂದ, ಒಂದೇ ಶರೀರಕ್ಕೆ ಶೇರಿದ ಒಂದೇ ಸಮ್ಮಂಧವಾದ ಅಂಗಗಳಾಗಿದ್ದೇವೆ. ಶರೀರದ ಅವಯವಗಳ ಹಾಗೆ ಉತ್ತಮ ಭಕ್ತರೆಲ್ಲರೂ ಒಬ್ಬರ ಸಂಗಡಲೊಬ್ಬರು ಹೊಂದಿಕೆಯಾಗಿಯೂ, ಒಬ್ಬರಿಗೊಬ್ಬರು ಉಪಯೋಗವಾಗಿಯೂ ಇದ್ದು, ಅವರವರು ಹೊಂದಿದ ನಾನಾ ವರಗಳಿಗೆ ತಕ್ಕದ್ದಾಗಿ, ಅವರವರಿಗೆ ಇರುವ ಉದ್ಯೋಗಗಳನ್ನು ಎಲ್ಲರ ಪ್ರಯೋಜನಕ್ಕಾಗಿ ಮಾಡುತ್ತಾ ಬರ ಬೇಕು. (೬—೯.)

5. ಪ್ರವಾದನೆಯ ವರವು ಅಂದರೆ, ಭವಿಷ್ಯತ್ಕಾರ್ಯಗಳನ್ನು ಮುಂತಿಳಿಸುವದನ್ನು ಅಲ್ಲ, ಪ್ರಸಂಗಿಸುವ ವರವನ್ನು ಕುರಿತದ್ದು.

6. ವಿಶ್ವಾಸಪ್ರಮಾಣವಂದರೆ, ಮುಂಚೆ ತಿಳಿಸಲ್ಪಟ್ಟ ಉಪದೇಶಗಳನ್ನಾದರೂ, ೩ನೇ ವಚನದಲ್ಲಿ ಹೇಳಿದ ವಿಶ್ವಾಸದ ಅಳತೆಯನ್ನಾದರೂ ಕುರಿತದ್ದು. ನಾವು ವಿಶ್ವಾಸಿಸುವ ಹಾಗೆ ದೇವರು ಯಾವವುಗಳನ್ನು ಪ್ರಕಟ ಮಾಡಿದ್ದಾನೋ ಅವುಗಳಿಗೆ ನಾವು ಹೆಚ್ಚು ಕೂಡಿಸದೆ, ಏನೂ ಕಡಿಮೆ ಮಾಡದೆ ಪ್ರಸಂಗಿಸ ಬೇಕು. ಸತ್ಯದ ವಾಕ್ಯವನ್ನು ಸರಿಯಾಗಿ ಭಾಗಿಸಿ, (೨ತಿಮೋ. ೨. ೧೫.) ನಮಗೆ ಮಾತ್ರ ಪ್ರಿಯವಾದ ಕಾರ್ಯಗಳನ್ನು ಹೇಳದೆ ದೇವರ ಚಿತ್ತವನ್ನೆಲ್ಲಾ ಮರೆ ಮಾಡದೆ ಹೇಳುವವರಾಗಿರ ಬೇಕು. (ಅ. ಕ್ರಿ. ೨೦. ೨೭.)

7. ಸೇವೆ ಅಂದರೆ ಸಭೆಯಲ್ಲಿ ಮಾಡುವ ಯಾವ ಕೆಲಸವಾದರೂ ಸೇವೆಯೇ. ಆದರೆ ಬೇರೆ ಬೇರೆ ಕೆಲಸಗಳನ್ನು ಗೊತ್ತಾಗಿ ಹೇಳಿರುವದರಿಂದ, ದೇವರ ವಾಕ್ಯವನ್ನು ಸಾರುವದು (ಅಪೊ. ಕ್ರಿ. ೬. ೧—೪.) ಅಥವಾ ಸಹಾಯ ಮಾಡುವದು ಇವುಗಳನ್ನು ಕುರಿತದ್ದು. (ಫಿಲಿ. ೧. ೧.)

8. ದೇವರು ತನಗೆ ಕೊಟ್ಟಿರುವ ದಾನಗಳನ್ನು ಮತ್ತೊಬ್ಬರಿಗೆ ಹಂಚಿ ಕೊಡುವವನು, ಮನಸ್ಸಿನಲ್ಲಿ ವಂಚನೆ ಇಲ್ಲದೆ, ಸ್ವಪ್ರಯೋಜನವನ್ನು ಹುಡುಕದೆ ಕೊಡ ಬೇಕು. (೨ಕೊರಿ. ೮. ೨; ೯. ೧೧, ೧೩.) ಅಧಿಕಾರ ಮಾಡುವವನು ಅಂದರೆ—ಕುಟುಂಬದ ಯಜಮಾನನಾಗಿದ್ದರೂ ಸರಿ, (೧ತಿಮೋ. ೩. ೪.) ಲೋಕದಲ್ಲಾಗ್ಯದರೂ ಸಭೆಯಲ್ಲಾಗ್ಯದರೂ ಮುಖ್ಯಸ್ಥನಾಗಿದ್ದರೂ ಸರಿ, (೧ಥೆಸ್ಸ. ೫. ೧೨.) ಅವನು ಜಾಗ್ರತೆಯಾಗಿ ನಡಿಯ ಬೇಕು. ಕನಿಕರಿಸುವವನು ಉತ್ಸಾಹದಿಂದ ಮಾಡ ಬೇಕು. ಉತ್ಸಾಹದಿಂದ ಕೊಡುವವನ ಮೇಲೆ ದೇವರು ಸಂತೋಷ ಪಡುತ್ತಾನೆ. (೨ಕೊರಿ. ೯. ೭.)



೯,೧೦ [1]ಪ್ರೀತಿಯು ನಿಷ್ಕಪಟವಾಗಿರಲಿ; ಕೆಟ್ಟತನವನ್ನು ಅಸಹಿಸಿರಿ; ಒಳ್ಳೇದನ್ನು ಅಂಟಿ ಕೊಳ್ಳಿರಿ. ಸಹೋದರ
ಸ್ನೇಹದಲ್ಲಿ ಒಬ್ಬರ ಮೇಲೊಬ್ಬರು ವಾತ್ಸಲ್ಯವುಳ್ಳವರಾಗಿದ್ದು, ಮರ್ಯಾದೆಯಲ್ಲಿ ಒಬ್ಬರಿಗೊಬ್ಬರು ಮುಂ
೧೧ ಕೊಂಡು, [2]ಜಾಗ್ರತೆಯಲ್ಲಿ ಮೈಗಳ್ಳರಾಗಿರದೆ, ಆತ್ಮದಲ್ಲಿ ಚುರುಕಾಗಿದ್ದು, ಕರ್ತನಿಗೆ ಸೇವೆ ಮಾಡಿ, ನಿರೀ
೧೨,೧೩ ಕ್ಷೆಯಲ್ಲಿ ಸಂತೋಷ ಪಟ್ಟು, ಉಪದ್ರದಲ್ಲಿ ತಾಳಿ ಕೊಂಡು, ಪ್ರಾರ್ಥನೆಯಲ್ಲಿ ನೆಲೆಗೊಂಡು, ಪರಿಶುದ್ಧರ
ಕೊರತೆಗಳಿಗೆ ಸಹಾಯ ಮಾಡಿ, ಆತಿಥ್ಯವನ್ನು ಅಭ್ಯಾಸಿಸಿರಿ.
೧೪,೧೫ [3]ನಿಮ್ಮನ್ನು ಹಿಂಸಿಸುವವರನ್ನು ಆಶೀರ್ವದಿಸಿರಿ; ಶಪಿಸದೆ ಆಶೀರ್ವದಿಸಿರಿ. ಸಂತೋಷ ಪಡುವವರ ಸಂಗಡ ಸಂ
೧೬ ತೋಷ ಪಡಿರಿ; ಅಳುವವರ ಸಂಗಡ ಅಳಿರಿ. ಒಬ್ಬರಿಗೊಬ್ಬರು ಒಂದೇ ಮನಸ್ಸುಳ್ಳವರಾಗಿರ್ರಿ. ಉನ್ನತವಾದವು
ಗಳ ಮೇಲೆ ಮನಸ್ಸಿಡದೆ, ದೀನವಾದವುಗಳಿಗೆ [4]ಬೊಗ್ಗಿ ಕೊಳ್ಳಿರಿ. ನಿಮಗೆ ನೀವೇ [5]ಬುದ್ಧಿವಂತರಾಗ ಬೇಡಿರಿ.
೧೭ ಯಾವನಿಗಾದರೂ ಕೇಡಿಗೆ ಕೇಡು ಮಾಡ ಬೇಡಿರಿ. ಎಲ್ಲಾ ಮನುಷ್ಯರ ಮುಂದೆ [6]ಒಳ್ಳೆಯವುಗಳನ್ನು
೧೮ ಮುನ್ನೆನಸಿರಿ. (ಸಾಮತಿ. ೩. ೪.) ಸಾಧ್ಯವಾದರೆ, ನಿಮ್ಮಿಂದಾಗುವ ಮಟ್ಟಿಗೂ, [7]ಎಲ್ಲಾ ಮನುಷ್ಯರ
೧೯ ಸಂಗಡ ಸಮಾಧಾನವಾಗಿರ್ರಿ. ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ಕೊಡ ಬೇಡಿರಿ; ಆದರೆ [8]ಕೋ
ಪಕ್ಕೆ ಸ್ಥಳ ಬಿಡಿರಿ; ಯಾಕಂದರೆ ಮುಯ್ಯಿಗೆ ಮುಯ್ಯಿ ಕೊಡುವದು ನನ್ನದು, ನಾನೇ ಬದಲು ಕೊಡುವೆ
೨೦ ನಂತ ಕರ್ತನು ಹೇಳುತ್ತಾನೆಂದು (ದ್ವಿತೀಯ ನ್ಯಾ. ೩೨. ೩೫.) ಬರೆದದೆ. ಹಾಗಾದರೆ, ನಿನ್ನ ಶತ್ರುವಿಗೆ
ಹಸಿವೆಯಾದರೆ, ಅವನಿಗೆ ಉಣ್ಣ ಕೊಡು; ದಾಹವಾದರೆ, ಅವನಿಗೆ ಕುಡಿಯ ಕೊಡು. ಯಾಕಂದರೆ
ಇದನ್ನು ಮಾಡಿದರೆ, [9]ಅವನ ತಲೆಯ ಮೇಲೆ ಉರಿಕೆಂಡಗಳನ್ನು ಕುಪ್ಪೆ ಹಾಕುವಿ. (ಸಾಮತಿ. ೨೫. ೨೧, ೨೨.)
೨೧ ಕೆಟ್ಟದ್ದರಿಂದ ಜಯಿಸಲ್ಪಡದೆ, ಒಳ್ಳೇದರಿಂದ ಕೆಟ್ಟದ್ದನ್ನು ಜಯಿಸು.

ಧೊರೆತನದವರಿಗೆ ಒಳಪಟ್ಟು ಸನ್ಮಾರ್ಗವಾಗಿ ನಡಿಯುವದಕ್ಕೆ ತಕ್ಕ ಕಟ್ಟಳೆಗಳು.

**13.** ಒಬ್ಬೊಬ್ಬ ಮನುಷ್ಯನು ಮೇಲಾಗಿರುವ ಅಧಿಕಾರಗಳಿಗೆ ವಿಧೇಯನಾಗಿರಲಿ. ಯಾಕಂದರೆ [10]ದೇವರಿಂ
ದಲೇ ಹೊರ್ತು, ಯಾವ ಅಧಿಕಾರವೂ ಇಲ್ಲ; ಇರುವ ಅಧಿಕಾರಗಳು ದೇವರಿಂದ ನೇಮಿಸಲ್ಪಟ್ಟವೆ.

1. ನಿಷ್ಕಪಟವಾದ ಪ್ರೀತಿಯನ್ನು ತೋರಿಸುವದರಲ್ಲಿಯೂ ಮರ್ಯಾದೆ ಮಾಡುವದರಲ್ಲಿಯೂ ಒಬ್ಬೊಬ್ಬರು ಮುಂಕೊಳ್ಳ ಬೇಕು.

2. ಈ ವಚನದ ಮೊದಲನೇ ಭಾಗದಲ್ಲಿ ನಿಜ ಕ್ರೈಸ್ತರ ಹೊರಗಿನ ನಡತೆಯನ್ನೂ, ಎರಡನೇ ಭಾಗದಲ್ಲಿ ಒಳಗಿನ ಆತ್ಮವನ್ನೂ, ಮೂರನೇ ಭಾಗದಲ್ಲಿ ಅವನ ಗುರಿಯನ್ನೂ ತೋರಿಸಿ ಇದೆ. ಕೆಲಸದಲ್ಲಿ ಜಾಗ್ರತೆಯೂ, ಆತ್ಮದಲ್ಲಿ ಚುರುಕೂ, ಕರ್ತನ ಸೇವೆಯಲ್ಲಿ ಅಧಿಕ ಚಿಂತೆಯೂ ಉಳ್ಳವರಾಗಿರ ಬೇಕು.

3. ಇದು ಕರ್ತನು ಪರ್ವತಪ್ರಸಂಗದಲ್ಲಿ ಹೇಳಿದ ವಚನದ ಹಾಗಿದೆ. (ಮತ್ತಾ. ೫. ೪೪. ಲೂಕ. ೬. ೨೭, ೨೮.)

4. ಇದು ಬಡ ಸ್ಥಿತಿಯಲ್ಲಿರುವವರನ್ನು ಕನಿಕರಿಸಿ ಅವರಿಗೆ ಉಪಕಾರ ಮಾಡ ತಕ್ಕ ವಿಷಯವನ್ನು ಸೂಚಿಸುತ್ತದೆ. ಗರ್ವ ಪಡದೆ ಬಡವರ ಸಂಗಡ ಚಿಂತಿಸಿ ಅವರಿಗೆ ಸಹಾಯ ಮಾಡ ಬೇಕು.

5. ಮತ್ತೊಬ್ಬರಿಗಿಂತ ನೀವೇ ಬುದ್ಧಿವಂತರೆಂದು ನಿಮ್ಮನ್ನು ಎಣಿಸ ಬಾರದೆಂಬ ತಾತ್ಪರ್ಯವು.

6. ಕ್ರಿಸ್ತನ ಮಾರ್ಗದ ಉತ್ತಮತ್ವವು ತೋರಲ್ಪಡುವದಕ್ಕೆ ಅದನ್ನು ಅನುಸರಿಸುವವರ ನಡತೆ ಯೋಗ್ಯವಾಗಿರ ಬೇಕು.

7. ಕೆಲವು ಮನುಷ್ಯರ ಸಂಗಡ ಸಮಾಧಾನವಾಗಿರುವದು ಅಸಾಧ್ಯವಾಗಿದೆ. ಆದಾಗ್ಯೂ ಕರ್ತನನ್ನು ಅನುಸರಿಸಿ ನಡಿಯುವ ಉತ್ತಮರು ಅಂಥವರ ಸಂಗಡ ಸಮಾಧಾನವಾಗಿರ ತಮ್ಮಿಂದಲಾಗುವ ಮಟ್ಟಿಗೂ ಪ್ರಯಾಸ ಪಡುವರು.

8. ಮುಯ್ಯಿಗೆ ಮುಯ್ಯಿ ಕೊಡುವದು ದೇವರ ಕಾರ್ಯವಾದದರಿಂದ ಆತನ ಕೋಪಕ್ಕೆ ಸ್ಥಳ ಬಿಡ ಬೇಕೇ ಹೊರ್ತು, ನಾವೇ ಮುಯ್ಯಿಗೆ ಮುಯ್ಯಿ ಕೊಡ ಬಾರದು. (ದ್ವಿತೀಯ ನ್ಯಾ. ೩೨. ೩೫.) ಇಲ್ಲವೆ ಇದು ಎದುರಾಳಿ ಕೋಪವಾಗಿರುವಾಗ ಅದಕ್ಕೆ ಸ್ಥಳ ಬಿಟ್ಟು ಶಾಂತವಾಗಿದ್ದರೆ, ಅದು ಶೀಘ್ರವಾಗಿ ಆರಿ ಹೋಗುವದು, ಎಂಬ ತಾತ್ಪರ್ಯವಾಗಿರ ಬಹುದು.

9. ಕೇಡು ಮಾಡುವವರಿಗೆ ಮೇಲು ಮಾಡಿದರೆ, ಆ ಮೇಲು ಬೆಂಕಿಯ ಕೆಂಡಗಳು ಲೋಹವನ್ನು ಕರಗಿಸುವ ಪ್ರಕಾರ, ಅವನ ಕಲ್ಲಾದ ಹೃದಯವನ್ನು ಕರಗಿಸಿ ಬಿಡುವದು. ಒಂದೊಂದು ಮೇಲೂ ಒಂದೊಂದು ಕೆಂಡದಂತಿರುತ್ತದೆ. (ಸೊಲೊ. ಗೀತ. ೮. ೬.) ಇಂಥಾ ಮೇಲಿನಿಂದ ಮನಸ್ಸು ಕರಗದವನನ್ನು ದೇವರ ಕೋಪವೆಂಬ ಬೆಂಕಿಯು ಕರಗಿಸಿ ಉರಿದು ಬಿಡುವದು. ಆದದರಿಂದ ಅವನ ಹಗೆಯು ನಿನ್ನ ಪ್ರೀತಿಯನ್ನು ಗೆಲ್ಲಲಾರದೆ, ನಿನ್ನ ಪ್ರೀತಿಯು ಅವನ ಹಗೆಯನ್ನು ಗೆಲ್ಲುವಂತೆ ನೋಡಿ ಕೊಳ್ಳ ಬೇಕು. ದೇವರು ಸಹ ಪ್ರೀತಿಯಿಂದಲೇ ಲೋಕದ ಹಗೆಯನ್ನು ಜಯಿಸುತ್ತಾನೆ.

10. ಕ್ರೈಸ್ತರು ಸಭೆಯಲ್ಲಿಯೂ ಲೋಕದಲ್ಲಿಯೂ ನಡಿಯ ಬೇಕಾದ ವಿಧವನ್ನು ಹೇಳಿದ ತರುವಾಯ, ಧೊರೆತನದವರಿಗೆ ಅವರು ಸಲ್ಲಿಸ ಬೇಕಾದವುಗಳನ್ನು ಕುರಿತು ಹೇಳಲ್ಪಟ್ಟದೆ. ರಾಜಾಂಗವು ದೇವರ ನೇಮಕವಾಗಿರುವದರಿಂದ, ಅದು ಏರ್ಪಡಿಸುವ ನ್ಯಾಯನಿಬಂಧನೆಗಳಿಗೆಲ್ಲಾ ಅವಶ್ಯವಾಗಿ ವಿಧೇಯವಾಗಿರ ಬೇಕು. (ಅಪೊ. ಕ್ರಿ. ೫. ೨೯.) ರೋಮಪುರಿಯ ಕ್ರೈಸ್ತರಲ್ಲಿ ಈ ವಿಷಯ ತಪ್ಪಾದ ಯೋಚನೆ ಇದ್ದದರಿಂದ ಪೌಲನು ಅದನ್ನು ನಿವರ್ತಿಸುವದಕ್ಕಾಗಿ ಈ ಸಂಧಿಯಲ್ಲಿರುವ ನ್ಯಾಯಗಳನ್ನು ಹೇಳಿದನೆಂದು ತೋರುತ್ತದೆ.

೨ ಹೀಗಿರುವದರಿಂದ ಅಧಿಕಾರವನ್ನು ಎದುರಿಸುವವನು ದೇವರ ನೇಮಕವನ್ನು ಎದುರಿಸುತ್ತಾನೆ. ಆದರೆ ಎದು
೩ ರಿಸುವವರು ತಮಗೆ ತಾವೇ [1]ಆಜ್ಞೆನಿರ್ಣಯವನ್ನು ಹೊಂದುವರು. ಯಾಕಂದರೆ ಅಧಿಪತಿಗಳು ಒಳ್ಳೇ
ಕ್ರಿಯೆಗಳಿಗಲ್ಲ, [2]ಕೆಟ್ಟವುಗಳಿಗೆ ಭಯಂಕರವಾಗಿದ್ದಾರೆ. ಹಾಗಾದರೆ, ಅಧಿಕಾರಕ್ಕೆ ಭಯ ಪಡದೆ ಇರ
೪ ಬೇಕೋ? ಒಳ್ಳೇದನ್ನು ಮಾಡು, ಆಗ ಅದರಿಂದ ಹೊಗಳಿಕೆಯನ್ನು ಹೊಂದುವಿ; ಯಾಕಂದರೆ ನಿನಗೆ
ಮೇಲಿಗಾಗಿ ದೇವರ ಸೇವಕನಾಗಿದ್ದಾನೆ. ಆದರೆ ಕೆಟ್ಟದ್ದನ್ನು ಮಾಡಿದರೆ, ಭಯ ಪಡು; ಯಾಕಂದರೆ
ಸುಮ್ಮನೆ [3]ಕತ್ತಿಯನ್ನು ಧರಿಸಿ ಕೊಳ್ಳುವದಿಲ್ಲ; ಕೆಟ್ಟದ್ದನ್ನು ನಡಿಸುವವನಿಗೆ ಕೋಪಕ್ಕಾಗಿ ತೀರ್ಪು ಮಾಡುವ
೫ ದೇವರ ಸೇವಕನಾಗಿದ್ದಾನೆ. ಆದ ಕಾರಣ [4]ಕೋಪದ ನಿಮಿತ್ತ ಮಾತ್ರವಲ್ಲ, ಮನಸ್ಸಾಕ್ಷಿಯ ನಿಮಿತ್ತವೂ
ವಿಧೇಯವಾಗಿರುವದು ಅವಶ್ಯವು.
೬ ಇದಕ್ಕೋಸ್ಕರವೇ [5]ತೆರಿಗೆ ಕೊಡುತ್ತೀರಿ. ಯಾಕಂದರೆ ದೇವರ ಸೇವಕರಾಗಿ ಇದೇ ಕೆಲಸಕ್ಕೆ ಯಾವಾ
೭ ಗಲೂ ಸಿದ್ಧವಾಗಿದ್ದಾರೆ. ಆದದರಿಂದ ಎಲ್ಲರಿಗೂ ಸಲ್ಲಿಸ ತಕ್ಕವುಗಳನ್ನು ಸಲ್ಲಿಸಿರಿ—ಯಾರಿಗೆ ತೆರಿಗೆಯೋ,
ತೆರಿಗೆಯನ್ನೂ; ಯಾರಿಗೆ ಸುಂಕವೋ, ಸುಂಕವನ್ನೂ; ಯಾರಿಗೆ ಭಯವೋ, ಭಯವನ್ನೂ; ಯಾರಿಗೆ ಮಾ
ನವೋ, ಮಾನವನ್ನೂ.
೮ [6]ಒಬ್ಬರನ್ನೊಬ್ಬರು ಪ್ರೀತಿ ಮಾಡುವದಕ್ಕೆ ಹೊರ್ತು, ಯಾವನಿಗಾದರೂ ಯಾವ ಹಂಗಿನಲ್ಲಿರ ಬೇಡಿರಿ;
೯ ಯಾಕಂದರೆ ಮತ್ತೊಬ್ಬನನ್ನು ಪ್ರೀತಿ ಮಾಡುವವನು ನ್ಯಾಯಪ್ರಮಾಣವನ್ನು ಪೂರೈಸಿದ್ದಾನೆ. ಹ್ಯಾಗಂದರೆ,
ವ್ಯಭಿಚಾರ ಮಾಡ ಬೇಡ, ಕೊಲ್ಲ ಬೇಡ, ಕದಿಯ ಬೇಡ, ಆಪಸಾಕ್ಷಿ ಹೇಳ ಬೇಡ, ಆಶಿಸ ಬೇಡ, ಎಂಬು
ವದು, (ಹೊರ. ೨೦. ೧೩—೧೭.) ಮತ್ತು ಬೇರೊಂದು ಕಟ್ಟಳೆ ಇದ್ದರೆ, ನಿನ್ನ ನೆರೆಯವನನ್ನು ನಿನ್ನ
೧೦ ಹಾಗೆಯೇ ಪ್ರೀತಿ ಮಾಡು (ಲೇವಿಕ. ೧೯. ೧೮.) ಎಂಬ ಈ ವಾಕ್ಯದಲ್ಲಿ ಅಡಕವಾಗಿದೆ. ಪ್ರೀತಿಯು
ನೆರೆಯವನಿಗೆ ಕೇಡು ಮಾಡದು; ಆದದರಿಂದ ಪ್ರೀತಿಯು ನ್ಯಾಯಪ್ರಮಾಣದ ಪೂರ್ತಿಯಾಗಿದೆ.
೧೧ ಮತ್ತು ನಾವು [7]ನಿದ್ರೆಯಿಂದ ಎಚ್ಚರ ಪಡುವದಕ್ಕೆ ಇದೇ ವೇಳೆ ಎಂದು, ಸಮಯ ತಿಳಿದು, ಇದನ್ನು
ಮಾಡುವ. ಯಾಕಂದರೆ ನಾವು ವಿಶ್ವಾಸಿಸಿದ ಸಮಯಕ್ಕಿಂತ ಈಗ ನಮ್ಮ ರಕ್ಷಣೆಯು ಸಮೀಪವಾಗಿದೆ.
೧೨ ರಾತ್ರಿ ಕಳೆದು ಹೋಗಿ, ಹಗಲು ಸಮೀಪವಾಯಿತು; ಆದದರಿಂದ ಅಂಧಕಾರದ ಕ್ರಿಯೆಗಳನ್ನು ತೆಗೆದು

1. ಅಧಿಕಾರಿಗಳಿಗೆ ಅವಶ್ಯವಾಗಿ ವಿಧೇಯವಾಗಿರ ಬೇಕೆಂದು ಮೊದಲನೇ ವಚನದಲ್ಲಿ ಹೇಳಿದ ತರುವಾಯ, ಈ ವಚನದಲ್ಲಿ ಹಾಗೆ ವಿಧೇಯವಾಗಿರದೆ ಎದುರಿಸುವವರಿಗೆ ಆಜ್ಞೆ ಬರುವದೆಂದು ಹೇಳಿ ಇದೆ. ಅಧಿಕಾರಿಗಳಿಂದಲೂ ಅವರನ್ನು ನೇಮಿಸಿದ ದೇವರಿಂದಲೂ ಸಹ ಆಜ್ಞೆನಿರ್ಣಯವಾಗುವದು.

2. ದುಷ್ಕ್ರಿಯೆಗಳಿಗೆ ದಂಡನೆ ಕೊಡುವದು ನೀತಿಯುಳ್ಳ ಧೊರೆತನದ ಲಕ್ಷಣವು. ಆದಾಗ್ಯೂ ಅನೇಕ ರಾಜ್ಯಗಳಲ್ಲಿ ಈ ಕ್ರಮವಿಲ್ಲದೆ ದುಷ್ಕ್ರಿಯೆಗಳು ನಡಿಯುವದುಂಟು. ಹಾಗೆಯೇ ಆ ಕಾಲದಲ್ಲಿ ನೇರೋ ಎಂಬ ರೋಮರಾಜ್ಯದ ಚಕ್ರವರ್ತಿಯು ಸಭೆಯನ್ನು ಕ್ರೂರವಾಗಿ ಹಿಂಸೆ ಪಡಿಸಿ, ಸಜ್ಜನರಿಗೆ ಭಯಂಕರ ಉಂಟು ಮಾಡಿದನು.

3. ಕೆಲವು ಸಮಯಗಳಲ್ಲಿ ಅಧಿಕಾರಿಗಳೂ, ಕೆಲವು ಸಮಯಗಳಲ್ಲಿ ಅವರ ಸೇವಕರೂ ಕಟ್ಟಿ ಕೊಂಡಿರುವ ಕತ್ತಿಯು ಅಪರಾಧಿಗಳಿಗೆ ಮರಣಾಜ್ಞೆ ವಿಧಿಸ ತಕ್ಕ ಅಧಿಕಾರಕ್ಕೆ ಗುರುತಾಗಿದೆ.

4. ದೇವರ ಸೇವಕರಾದ ಅಧಿಕಾರಿಗಳ ಕೋಪಕ್ಕೆ ಭಯ ಪಡುವದರಿಂದ ಮಾತ್ರವಲ್ಲ, ಒಳ್ಳೇ ಮನಸ್ಸಾಕ್ಷಿಯನ್ನು ಕಾದು ಕೊಳ್ಳುವ ಉದ್ದಿಶ್ಯವಾಗಿಯೂ ವಿಧೇಯರಾಗಿರ ಬೇಕು.

5. ಪ್ರಜೆಗಳ ಮೇಲಿಗಾಗಿರುವ ರಾಜಾಂಗವು ನೆಲೆಯಾಗಿರುವದಕ್ಕೆ ತೆರಿಗೆ ಅವಶ್ಯವಾಗಿ ಕೊಡ ಬೇಕು. ಅಜ್ಞಾನ ಅರಸರಿಗೆ ತೆರಿಗೆ ಕೊಡುವದು ನ್ಯಾಯವಲ್ಲವೆಂದು ಹೇಳಿದ ಯೆಹೂದ್ಯ ಕ್ರೈಸ್ತರಿಗೆ ಇದು ತಕ್ಕ ಬೋಧನೆ. (ಮತ್ತಾ. ೨೨. ೧೭. ಅಪೊ. ಕ್ರಿ. ೫. ೩೭.) ತೆರಿಗೆ ಎಂಬುವದು ಭೂಮಿಯ ಕಂದಾಯವನ್ನೂ, ಸುಂಕವೆಂಬುವದು ವ್ಯಾಪಾರದ ಸುಂಕವನ್ನೂ ಕುರಿತದ್ದು. ಅಧಿಕಾರಿಗಳಿಗೆ ಭಯ ಪಡುವದೂ, ದೊಡ್ಡ ಮನುಷ್ಯರಿಗೆ ಘನ ಕೊಡುವದೂ ತಕ್ಕದ್ದಾಗಿದೆ.

6. ಈ ಕ್ಲುಪ್ತವಾದ ಕಟ್ಟಳೆಯಲ್ಲಿ ಆಳವಾದ ಅಭಿಪ್ರಾಯ ಉಂಟು. ಅಧಿಕಾರಿಗಳಿಗೂ ಬೇರೆ ದೊಡ್ಡವರಿಗೂ ನಾವು ಸಲ್ಲಿಸ ತಕ್ಕವುಗಳನ್ನು ಒಂದು ಸಾಲವೆಂದೆಣಿಸಿ ನಡಿಯ ಬೇಕು. ಪ್ರೀತಿ ಎಂಬ ಸಾಲವನ್ನು ಮಾತ್ರ ಯಾವಾಗಲೂ ಸಲ್ಲಿಸ ಬೇಕು. ಇದನ್ನು ಎಷ್ಟಾಗಿ ತೀರಿಸುವದಕ್ಕೆ ನೋಡಿದರೂ ತೀರಿಸಿ ಮುಗಿಯುವದಿಲ್ಲ. ನ್ಯಾಯಪ್ರಮಾಣವು ಸಂಪೂರ್ಣವಾಗಿ ಈಡೇರುವ ಮಟ್ಟಿಗೂ ಈ ಸಾಲ ತೀರದು. (೯, ೧೦. ವ.)

7. ಕಾಲವು ಘಾಳಿಯ ಹಾಗೆ ಆರಿ ಹೋಗುವದನ್ನೂ ರಕ್ಷಣೆ ಪೂರ್ವಕವಾಗಿ ಪ್ರಕಟವಾಗುವ ನಿತ್ಯಕಾಲವು ತೀವ್ರವಾಗಿ ಬರುವದನ್ನೂ ನೆನಸಿ, ನಾವು ಒಬ್ಬರಲ್ಲೊಬ್ಬರು ಪ್ರೀತಿಯುಳ್ಳವರಾಗಿ, ನಾವು ಮಾಡ ಬೇಕಾದ ಕೆಲಸಗಳನ್ನು ಎಲ್ಲಾ ಜಾಗ್ರತೆಯಿಂದ ಮಾಡ ಬೇಕೆಂಬುವದೇ ಈ ವಚನದ ತಾತ್ಪರ್ಯವು.



೧೩ ಹಾಕಿ, ಬೆಳಕಿನ ಆಯುಧಗಳನ್ನು ಧರಿಸಿ ಕೊಳ್ಳುವ. ಹಗಲಿಗೆ ತಕ್ಕ ಹಾಗೆ [1]ಯುಕ್ತವಾಗಿ ನಡಿಯುವ.
ದುಂದೌತನಗಳಲ್ಲಿಯೂ ಅಮಲುಗಳಲ್ಲಿಯೂ, ಅಲ್ಲ; ಸೂಳೆತನಗಳಲ್ಲಿಯೂ, ಬಂಡುತನಗಳಲ್ಲಿಯೂ, ಅಲ್ಲ;
೧೪ ಜಗಳದಲ್ಲಿಯೂ, ಹೊಟ್ಟೆಕಿಚ್ಚಿನಲ್ಲಿಯೂ, ಅಲ್ಲ. ಆಶೆಗಳಿಗಾಗಿ ಮಾಂಸಕ್ಕೆ ಮುಂಚಿಂತೆ ಮಾಡದೆ, ಕರ್ತ
ನಾದ ಯೇಸು ಕ್ರಿಸ್ತನನ್ನು [2]ಧರಿಸಿ ಕೊಳ್ಳಿರಿ.

### ಅಭಿಪ್ರಾಯವನ್ನೂ ಅಭ್ಯಾಸವನ್ನೂ ಕುರಿತ ಪ್ರಮಾಣಗಳು.

14. [3]ವಿಶ್ವಾಸದಲ್ಲಿ ಬಲಹೀನನನ್ನು ಅಂಗೀಕರಿಸಿರಿ; [4]ಸಂದೇಹವಾದ ತರ್ಕಗಳಿಗಲ್ಲ. (೨) ಒಬ್ಬನು, ಎಲ್ಲಾ
೩ ಉಣ್ಣ ಬಹುದೆಂದು ನಂಬುತ್ತಾನೆ; ಆದರೆ ಬಲಹೀನನು [5]ಪಲ್ಯಗಳನ್ನು ತಿನ್ನುತ್ತಾನೆ. ತಿನ್ನುವವನು ತಿನ್ನದ
ವನನ್ನು ಅಸಡ್ಡೆ ಮಾಡದೆ ಇರಲಿ; ತಿನ್ನದವನು ತಿನ್ನುವವನಿಗೆ ನ್ಯಾಯ ತೀರಿಸದೆ ಇರಲಿ. ಯಾಕಂದರೆ
೪ ದೇವರು ಅವನನ್ನು ಅಂಗೀಕರಿಸಿದ್ದಾನೆ. [6]ಮತ್ತೊಬ್ಬನ ಊಳಿಗದವನಿಗೆ ನ್ಯಾಯ ತೀರಿಸುವವನಾದ
ನೀನ್ಯಾರು? ಸ್ವಂತ ಯಜಮಾನನಿಗೆ ನಿಲ್ಲುವನು, ಇಲ್ಲವೆ ಬೀಳುವನು; ಆದರೆ ನಿಲ್ಲಿಸಲ್ಪಡುವನು; ಯಾಕಂ
ದರೆ ದೇವರು ಅವನನ್ನು ನಿಲ್ಲಿಸ ಬಲ್ಲನು.
೫ ಒಬ್ಬನು ದಿನಕ್ಕಿಂತ ದಿನವನ್ನು ವಿಶೇಷ ಮಾಡುತ್ತಾನೆ; ಮತ್ತೊಬ್ಬನು ಎಲ್ಲಾ ದಿನಗಳನ್ನು ವಿಶೇಷ ಮಾಡು
೬ ತ್ತಾನೆ. [7]ಒಬ್ಬೊಬ್ಬನಿಗೆ ಸ್ವಂತ ಮನಸ್ಸಿನಲ್ಲಿ ಪೂರ್ಣ ನಿಶ್ಚಯವಿರಲಿ. ದಿನವನ್ನು ಲಕ್ಷ್ಯ ಮಾಡುವವನು

1. ರಾತ್ರಿಯಲ್ಲಿ ಕುಡಿದು ಮತ್ತರಾಗಿ ದುಷ್ಕ್ರಿಯೆಗಳನ್ನು ನಡಿಸುವ ದುರ್ಜನರ ಹಾಗಿರದೆ, ಹಗಲಿನಲ್ಲಿ ನಡಿಯುವವರ ಪ್ರಕಾರ ಯುಕ್ತವಾಗಿ ನಡೆದು ಬೆಳಕಿನಂತೆ ಪ್ರಕಾಶಿಸುವವರಾಗಿರ ಬೇಕು. ಕ್ರೈಸ್ತನಲ್ಲಿ ಇರ ತಕ್ಕ ಸದ್ಗುಣಗಳನ್ನು ಆಯುಧಗಳಿಗೆ ಉಪಮಾನವಾಗಿ ಹೇಳಿ ಇದೆ. (೧೨, ೧೪. ವ.)

2. ಯೇಸು ಕ್ರಿಸ್ತನ ಪರಿಶುದ್ಧ ಹೋಲಿಕೆಯನ್ನು ಅಲಂಕಾರ ವಸ್ತ್ರದಂತೆ ಧರಿಸಿ ಕೊಳ್ಳ ಬೇಕು. (ಗಲಾ. ೩. ೨೭.) ಮಾಂಸೇಚ್ಛೆಗಳಿಗೆ ಸ್ಥಳ ಕೊಡದೆ, ಮನೋದೀನತ್ವ, ವಿಶ್ವಾಸ, ಪ್ರೀತಿ, ಪರಿಶುದ್ಧತ್ವ, ಎಂಬ ಸದ್ಗುಣಗಳನ್ನು ಭೂಷಣವಾಗಿ ಧರಿಸಿ ಕೊಳ್ಳ ಬೇಕು. ಎಲ್ಲಾ ಸದ್ಗುಣಗಳಿಗೂ ಪ್ರೀತಿಯೇ ಮುಖ್ಯ ಪ್ರೇರಣೆಯು. (೧೦. ವ.) ಕ್ರಿಸ್ತನೇ ಇದಕ್ಕೆ ತಕ್ಕ ಮಾದ್ರಿಯಾಗಿದ್ದಾನೆ.

3. ಸಾಮಾನ್ಯ ವಿಷಯಗಳಲ್ಲಿ ಒಬ್ಬೊಬ್ಬರು ತಮ್ಮ ಮನಸ್ಸಾಕ್ಷಿ ಒಪ್ಪಿ ಕೊಳ್ಳುವ ಅಭಿಪ್ರಾಯವನ್ನೂ ಅಭ್ಯಾಸವನ್ನೂ ಅನುಸರಿಸಿ ನಡಿಯುವದನ್ನು ಆಕ್ಷೇಪಿಸಲಾಗದು. ಮೋಶೆಯ ನ್ಯಾಯಪ್ರಮಾಣವನ್ನು ಅನುಸರಿಸಿ ನಡಿಯ ತಕ್ಕದ್ದೆಂದು ಹೇಳುವ ಬಲಹೀನ ವಿಶ್ವಾಸವುಳ್ಳ ಸಹೋದರರನ್ನಾಗಲಿ, ಅವುಗಳನ್ನು ಅನುಸರಿಸ ಅವಶ್ಯವಿಲ್ಲವೆಂದು ಹೇಳುವ ಸ್ಥಿರವಾದ ವಿಶ್ವಾಸವುಳ್ಳ ಸಹೋದರರನ್ನಾಗಲಿ ತಿರಸ್ಕರಿಸ ಬಾರದು. ಸರ್ವಕ್ಕೂ ನ್ಯಾಯಾಧಿಪತಿಯಾಗಿರುವ ದೇವರು ಅವರನ್ನು ಅಂಗೀಕರಿಸ ಬಲ್ಲನು. (೧೪. ೧—೧೨.) ಬಲಹೀನರಾದ ಸಹೋದರರ ಮನಸ್ಸಾಕ್ಷಿಗೆ ನೋವು ಕೊಡುವಂಥ ಕಾರ್ಯಗಳನ್ನು ಎಲ್ಲರೂ ಬಿಟ್ಟು ಬಿಡುವದು ಅವಶ್ಯವಾಗಿದೆ. (೧೩—೨೩. ವ.) ಎಲ್ಲರಿಗೂ ಉಪಕಾರಿಯಾದ ಕ್ರಿಸ್ತನ ಶ್ರೇಷ್ಠ ಮಾದ್ರಿಯನ್ನೂ, ಎಲ್ಲರ ಭಕ್ತಿ ಅಭಿವೃದ್ಧಿ ಪಡಿಸುವ ಸತ್ಯವಾಕ್ಯದ ಗುರಿಯನ್ನೂ ಯೋಚಿಸಿ ಮೇಲೆ ಹೇಳಿದ ಪ್ರಕಾರ ನಡಿಯ ಬೇಕು. (೧೫. ೧—೭.) ಮತ್ತು ಯೆಹೂದ್ಯರನ್ನೂ ಜನಾಂಗಗಳವರನ್ನೂ ಒಂದಾಗಿ ಜೋಡಿಸುವ ದೇವರ ಕಟಾಕ್ಷವನ್ನು ನೆನಸಿ ಹೀಗೆ ಮಾಡ ಬೇಕು. (೮—೧೩. ವ.) ವಿಶ್ವಾಸದಲ್ಲಿ ಬಲಹೀನನೆಂಬುವದು, ಹಬ್ಬಗಳನ್ನೂ ಅಶುಚಿಯಾದ ಭೋಜನವನ್ನೂ ಕುರಿತ ಸಂದೇಹಗಳನ್ನು ನಿವರ್ತಿಸ ತಕ್ಕ ಸ್ಥಿರವಾದ ವಿಶ್ವಾಸವಿಲ್ಲದವನನ್ನು ಕುರಿತದ್ದು.

4. ಬಲಹೀನ ವಿಶ್ವಾಸವುಳ್ಳವನ ಮನಸ್ಸಿನ ಸಂದೇಹಗಳನ್ನು ತೀರಿಸಲೂ, ಅವನ ಅಭಿಪ್ರಾಯಗಳನ್ನು ಕುರಿತು ತರ್ಕಿಸಲೂ ತಕ್ಕ ಯೋಚನೆಯಿಂದ ಅವನನ್ನು ಅಂಗೀಕರಿಸ ಬಾರದು. ಹಾಗೆ ಮಾಡಿದರೆ, ಅವನ ಮನಸ್ಸಿಗೆ ನೋವೂ, ಅವನ ತಪ್ಪಾದ ಯೋಚನೆಗೆ ದೃಢತ್ವವೂ ಉಂಟು ಮಾಡುವದು.

5. ಅಜ್ಞಾನ ದೇಶಗಳಲ್ಲಿ ವಾಸ ಮಾಡಿದ ದೇವಭಕ್ತರಾದ ಯೆಹೂದ್ಯರು ಮಾಂಸವನ್ನು ಉಣ್ಣದೆ, ದ್ರಾಕ್ಷೇ ರಸವನ್ನು ಕುಡಿಯದೆ, ಕಾಯಿಪಲ್ಯಗಳನ್ನು ಮಾತ್ರ ತಿನ್ನುವರು. ವಿಗ್ರಹಗಳಿಗೆ ಅರ್ಪಿಸಿದವುಗಳನ್ನೂ ಅಶುದ್ಧ ಮೃಗಗಳ ಮಾಂಸವನ್ನೂ ಭೋಜಿಸ ಬೇಕಾದೀತೆಂಬ ಯೋಚನೆಯಿಂದ ಅವರು ಹೀಗೆ ಮಾಡಿದರು. (ದಾನಿ. ೧. ೮.) ವಿಶ್ವಾಸದಲ್ಲಿ ಸ್ಥಿರವಾದವರೂ ಬಲಿಷ್ಠರೂ ಶುದ್ಧವಾದ ಮೃಗಗಳು ಅಶುದ್ಧವಾದ ಮೃಗಗಳು ಎಂಬ ಭೇದವಿಲ್ಲದೆ ತಕ್ಕದ್ದನ್ನು ಉಣ್ಣುವರು. ಬಲಹೀನ ವಿಶ್ವಾಸಿಗಳು ಮಾತ್ರ ಇಂಥಾ ವ್ಯತ್ಯಾಸಗಳನ್ನು ಯೋಚಿಸಿ ನಡಿಯುವರು. ಮನಸ್ಸು ಶುದ್ಧವಾಗಿದ್ದರೆ, ದೇವರು ಉಭಯತ್ರರನ್ನೂ ಅಂಗೀಕರಿಸುವನು. ದೇವರು ಅಂಗೀಕರಿಸುವವರನ್ನು ಮನುಷ್ಯನು ಸಹ ಅಂಗೀಕರಿಸುವದು ನ್ಯಾಯವೇ.

6. ಮತ್ತೊಬ್ಬನ ಊಳಿಗದವನು ಅಂದರೆ, ಕ್ರಿಸ್ತನ ಸೇವಕನೆಂಬ ತಾತ್ಪರ್ಯವು. ಆತನೇ ತನ್ನ ದಾಸರನ್ನು ನ್ಯಾಯ ತೀರಿಸ ತಕ್ಕವನು. ನಿಜಸ್ಥರು ಯಾರೆಂದೂ ಅಪರಾಧಿಗಳು ಯಾರೆಂದೂ ಆತನ ತೀರ್ಪಿನಿಂದಲೇ ನಿಶ್ಚಯವಾಗುವದು. ಈ ವಿಷಯದಲ್ಲಿ ಆತನು ಒಬ್ಬನನ್ನೂ ಅಪರಾಧಿ ಎಂದು ತೀರಿಸುವದಿಲ್ಲ.

7. ರಕ್ಷಣೆಗೆ ಅವಶ್ಯವಿಲ್ಲದ ಸಾಮಾನ್ಯ ವಿಷಯಗಳಲ್ಲಿ ಅವನವನು ತನ್ನ ಮನೋಸಾಕ್ಷಿಯ ಪ್ರಕಾರ ನಡಿಯ ಬಹುದು. ನಮ್ಮ ಅಭಿಪ್ರಾಯಕ್ಕೆ ಒಡಂಬಡದವರನ್ನು ಬಲಾತ್ಕಾರ ಮಾಡುವದು ಸರಿಯಲ್ಲ. ನಾವೆಲ್ಲರೂ ಒಬ್ಬನೇ ಯಜಮಾನನಿಗೆ ಒಳ ಪಟ್ಟವರಾಗಿದ್ದೇವೆ. (೬—೯. ವ.)

ಕರ್ತನಿಗೆ ಅದನ್ನು ಲಕ್ಷ್ಯ ಮಾಡುತ್ತಾನೆ; ದಿನವನ್ನು ಲಕ್ಷ್ಯ ಮಾಡದವನು ಕರ್ತನಿಗೆ ಅದನ್ನು ಲಕ್ಷ್ಯ
ಮಾಡದೆ ಇದ್ದಾನೆ. ತಿನ್ನುವವನು ಕರ್ತನಿಗೆ ತಿನ್ನುತ್ತಾನೆ; ಯಾಕಂದರೆ ದೇವರನ್ನು ಸ್ತುತಿಸುತ್ತಾನೆ; ತಿನ್ನದ
ವನು ಕರ್ತನಿಗೆ ತಿನ್ನದೆ ಇದ್ದಾನೆ; ಮತ್ತು [1]ದೇವರನ್ನು ಸ್ತುತಿಸುತ್ತಾನೆ.
೭ ಯಾಕಂದರೆ [2]ನಮ್ಮಲ್ಲಿ ಯಾವನಾದರೂ ತನಗೆ ಬದುಕುವದಿಲ್ಲ, ಮತ್ತು ಯಾವನಾದರೂ ತನಗೆ ಸಾಯು
೮ ವದಿಲ್ಲ. ಹ್ಯಾಗಂದರೆ ಬದುಕಿದರೆ, ಕರ್ತನಿಗೆ ಬದುಕುತ್ತೇವೆ; ಸತ್ತರೆ, ಕರ್ತನಿಗೆ ಸಾಯುತ್ತೇವೆ. ಹಾಗಾ
೯ ದರೆ, ಬದುಕಿದರೂ, ಸತ್ತರೂ, ಕರ್ತನವರಾಗಿದ್ದೇವೆ. ಯಾಕಂದರೆ, ಸತ್ತವರಿಗೂ ಬದುಕುವವರಿಗೂ
ಕರ್ತನಾಗುವ ಹಾಗೆ, ಇದಕ್ಕೋಸ್ಕರ ಕ್ರಿಸ್ತನು ಸತ್ತು, ಎದ್ದು, ತಿರಿಗಿ ಬದುಕಿದನು.
೧೦ ಆದರೆ ನೀನು ನಿನ್ನ ಸಹೋದರನಿಗೆ ನ್ಯಾಯ ತೀರಿಸುವದೇನು? ಇಲ್ಲವೆ ನೀನು ನಿನ್ನ ಸಹೋದರನನ್ನು ಅಸಡ್ಡೆ
೧೧ ಮಾಡುವದೇನು? ಎಲ್ಲರು [3]ಕ್ರಿಸ್ತನ ನ್ಯಾಯಾಸನದ ಮುಂದೆ ನಿಲ್ಲುವೆವಲ್ಲ? ಯಾಕಂದರೆ, ನನ್ನ ಜೀವದಾಣೆ,
ಎಲ್ಲಾ ಮೊಣಕಾಲುಗಳು ನನಗೆ ಊರುವವು, ಎಲ್ಲಾ ನಾಲಿಗೆಗಳು ದೇವರಿಗೆ ಅರಿಕೆ ಮಾಡುವವು ಎಂದು,
೧೨ (ಯೆಶಾ. ೪೫. ೨೩.) ಕರ್ತನು ಹೇಳುತ್ತಾನೆಂಬದಾಗಿ [4]ಬರೆದದೆ. ಹಾಗಾದರೆ, ನಿಮ್ಮಲ್ಲಿ ಒಬ್ಬೊಬ್ಬನು
ತನ್ನನ್ನು ಕುರಿತು ದೇವರಿಗೆ ಲೆಖ್ಖ ಒಪ್ಪಿಸುವನು.
೧೩ ಆದದರಿಂದ ಇನ್ನು ಮೇಲೆ ಒಬ್ಬರಿಗೊಬ್ಬರು ನಿರ್ಣಯ ಮಾಡದೆ ಇರುವ; ಅದನ್ನು ಬಿಟ್ಟು, ಸಹೋದರ
೧೪ ನಿಗೆ [5]ಎಡತಡೆಯನ್ನಾದರೂ, ಆತಂಕವನ್ನಾದರೂ ಇಡದೆ ಇರುವದನ್ನೇ ನಿರ್ಣಯಿಸಿ ಕೊಳ್ಳಿರಿ. ಯಾವದಾ
ದರೂ ತನ್ನಲ್ಲಿ ಹೊಲೆಯಾದದ್ದಲ್ಲವೆಂದು, [6]ಕರ್ತನಾದ ಯೇಸುವಿನಿಂದ ತಿಳಿದು, ನಿಶ್ಚಯಿಸಿ ಕೊಂಡಿದ್ದೇನೆ.
೧೫ ಯಾವದನ್ನಾದರೂ ಹೊಲೆ ಎಂದೆಣಿಸುವವನಿಗೆ ಮಾತ್ರ ಅದು ಹೊಲೆಯೇ. ಆದರೆ ಆಹಾರದ ವಿಷಯ
ನಿನ್ನ ಸಹೋದರನು ದುಃಖ ಪಟ್ಟರೆ, ಈಗ ಪ್ರೀತಿಯ ಪ್ರಕಾರ ನಡೆಯದೆ ಇದ್ದೀ. [7]ನಿನ್ನ ಆಹಾರದಿಂದ ಅವ
೧೬ ನನ್ನು ಕೆಡಿಸ ಬೇಡ; ಅವನಿಗೋಸ್ಕರ ಕ್ರಿಸ್ತನು ಸತ್ತನಲ್ಲ? ಹಾಗಾದರೆ, ನಿಮ್ಮ [8]ಮೇಲು ದೂಷಿಸಲ್ಪಡದಿರಲಿ.

1. ಮಾಂಸವನ್ನು ಉಣ್ಣುವವನೂ ಪಲ್ಯಗಳನ್ನು ಭೋಜಿಸುವವನೂ ತಾವು ಭೋಜಿಸುವ ಪದಾರ್ಥಗಳು ದೇವರು ಕೊಟ್ಟ ಆಹಾರವೆಂದೆಣಿಸಿ ಭೋಜಿಸುವದರಿಂದ, ಜೀವದಲ್ಲಿಯೂ ಮರಣದಲ್ಲಿಯೂ ತಾವು ದೇವರ ಸೇವೆಗೆ ಅರ್ಪಿಸಲ್ಪಟ್ಟವರೆಂಬುವದನ್ನು ತೋರಿಸುವದಾಗಿದೆ. (೭, ೮. ವ.) ದೇವರು ತಮಗೆ ಮಾಡಿದ ಮೇಲನ್ನು ಗ್ರಹಿಸಿ ಕೊಂಡವರಾಗಿಯೂ, (೯. ವ.) ತಮ್ಮ ಮೇಲೆ ಆತನಿಗಿರುವ ಬಾಧ್ಯತೆಯನ್ನೂ ಅಧಿಕಾರವನ್ನೂ ತಿಳಿದವರಾಗಿಯೂ ಹೀಗೆ ಮಾಡುತ್ತಾರೆ. (೧೦—೧೨. ವ.)

2. ಗುಣ ಪಡುವದಕ್ಕಿಂತ ಮುಂಚೆ ತಮಗೋಸ್ಕರ ಬದುಕಿದವರು ಗುಣ ಪಟ್ಟ ತರುವಾಯ ತಮಗೋಸ್ಕರ ಬದುಕದೆ, ತಮ್ಮನ್ನು ಕೊಂಡು ಕೊಂಡ ಕರ್ತನಿಗೆ ಬದುಕುತ್ತಾರೆ. (೨ ಕೊರಿ. ೫. ೧೪, ೧೫.) ಬದುಕಿದರೂ ಆತನವರೇ; ಸತ್ತರೂ ಆತನವರೇ. ಕ್ರಿಸ್ತನೇ ಅವರ ಜೀವವು. ಅಗಲಿ ಹೋಗಿ ಆತನ ಸಂಗಡ ಇರುವದೇ ಅವರ ಜೀವಾಂತ್ಯ ಕೋರಿಕೆ. ಇಹದಲ್ಲಿಯೂ ಪರದಲ್ಲಿಯೂ ಆತನವರೇ. ಇದಕ್ಕಾಗಿಯೇ ಕ್ರಿಸ್ತನು ಸತ್ತು ಎದ್ದು ಬದುಕುತ್ತಾ ಇದ್ದಾನೆ. ಆತನೇ ಸತ್ತವರಿಗೂ ಜೀವಿಸುವವರಿಗೂ ಕರ್ತನಾಗಿದ್ದಾನೆ. ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಸರ್ವಾಧಿಪತಿಯು ಆತನೇ.

3. ಈ ವಚನವನ್ನೂ ೨ ಕೊರಿ. ೫. ೧೦. ವಚನವನ್ನೂ ಸರಿ ನೋಡುವಾಗ ಕ್ರಿಸ್ತನು ಸಾಕ್ಷಾತ್‌ದೇವರೆಂದೂ ಸರ್ವ ಲೋಕದ ನ್ಯಾಯಾಧಿಪತಿ ಎಂದೂ ಪ್ರಕಟವಾಗಿದೆ. ಆತನ ನ್ಯಾಯಾಸನದ ಮುಂದೆ ನಿಂತು ಲೆಖ್ಖ ಒಪ್ಪಿಸ ಬೇಕಾದವರು ಮತ್ತೊಬ್ಬರಿಗೆ ವಿರೋಧವಾಗಿ ತೀರಿಸುವದು ಸರಿಯಲ್ಲ.

4. ಯೆಶಾ. ೪೫. ೨೩. ವಚನದ ಅರ್ಥವನ್ನು ಇಲ್ಲಿ ಹೇಳಿ ಇದೆ. ನನ್ನ ಮೇಲೆ ನಾನು ಆಣೆ ಇಟ್ಟಿನು ಎಂಬ ಪ್ರವಾದನಾ ವಾಕ್ಯವನ್ನು ಅದಕ್ಕೆ ಸರಿಯಾದ ಶಬ್ದದಿಂದ ನನ್ನ ಜೀವದಾಣೆ ಎಂದು ಭಾಷಾಂತರ ಮಾಡಲ್ಪಟ್ಟದೆ. ಪ್ರವಾದಿಗಳ ಮೂಲಕವಾಗಿ ತಿಳಿಯ ಮಾಡಿದ ದೇವರು ಯೇಸು ಕ್ರಿಸ್ತನೇ ಎಂದು ಪೌಲನು ಈ ವಚನದಲ್ಲಿ ತೋರಿಸುತ್ತಾನೆ.

5. ಮಾರ್ಕ. ೯. ೪೨. ವಚನದ ವ್ಯಾಖ್ಯಾನದಲ್ಲಿ ನೋಡಬೇಕು.

6. ಯೇಸು ಕ್ರಿಸ್ತನ ಪ್ರಕಟಣೆಯಿಂದಲೂ ಕಟ್ಟಳೆಯಿಂದಲೂ ಈ ಸತ್ಯವು ಚನ್ನಾಗಿ ತೋರುತ್ತದೆ. (ಮಾರ್ಕ. ೭. ೧೫.) ಶುದ್ಧ ಭೋಜನವು ಅಶುದ್ಧ ಭೋಜನವು ಎಂಬ ಭೇದಾಭೇದವಿಲ್ಲದೆ ನಡಿಯುವ ಸ್ಥಿರವಾದ ವಿಶ್ವಾಸವುಳ್ಳ ಸಹೋದರರಿಗೆ ಅನುಸಾರವಾಗಿ ಪೌಲನು ತನ್ನ ಅಭಿಪ್ರಾಯವನ್ನು ಹೇಳುತ್ತಾನೆ. (೧೫. ೧.)

7. ಒಬ್ಬ ಸಹೋದರನ ಭೋಜನದಿಂದ ಇನ್ನೊಬ್ಬ ಸಹೋದರನ ಮನಸ್ಸಾಕ್ಷಿಯು ಕೆಡುವದು ಸರಿಯಲ್ಲ. ಒಬ್ಬನ ಮನಸ್ಸಿಗೆ ಉಪದ್ರವನ್ನು ಉಂಟು ಮಾಡಿ ಸಂಪಾದಿಸುವ ಸುಖವು ಒಳ್ಳೇದಲ್ಲ. ಇಂಥಾ ಸುಖವನ್ನು ಹುಡುಕಿದರೆ, ರಕ್ಷಕನ ಪ್ರೀತಿಯ ಪ್ರಮಾಣವು ಭಂಗವಾಗುವದು. ಆತನು ತನ್ನ ಮರಣದಿಂದ ವಿಮೋಚಿಸಿದ ಸಹೋದರನ ಆತ್ಮವು ಕೆಟ್ಟು ಹೋಗುವದು. (೧ ಕೊರಿ. ೮. ೭—೧೨.) ಕ್ರಿಸ್ತನ ಪ್ರಾಣಕ್ಕಿಂತ ನಿನ್ನ ಅಲ್ಪವಾದ ಭೋಜನವು ಹೆಚ್ಚಾದದ್ದಲ್ಲವಲ್ಲ?

8. ಕ್ರೈಸ್ತರಿಗುಂಟಾಗಿರುವ ಸ್ವಾತಂತ್ರ್ಯವು ಶ್ರೇಷ್ಠವಾದ ಮೇಲಾಗಿದೆ. ಆದಾಗ್ಯೂ ಅದರಿಂದ ಕೇಡೂ ನಷ್ಟವೂ ಉಂಟಾಗುವದಾದರೆ, ಅದು ದೂಷಿಸಲ್ಪಡುವದಕ್ಕೆ ಹೇತುವೆಯಾಗಿರುವದೇ ಹೊರ್ತು ಮೇಲು ಆಗಿರಲಾರದು.



೧೭ ಯಾಕಂದರೆ [1]ದೇವರ ರಾಜ್ಯವು ಆಹಾರವೂ ಪಾನವೂ ಅಲ್ಲ, ನೀತಿಯೂ, ಸಮಾಧಾನವೂ, ಪರಿಶುದ್ಧಾತ್ಮ
೧೮ ದಿಂದಾಗುವ ಸಂತೋಷವೂ ಆಗಿದೆ. ಯಾಕಂದರೆ [2]ಇವುಗಳಲ್ಲಿ ಕ್ರಿಸ್ತನಿಗೆ ಸೇವೆ ಮಾಡುವವನು ದೇವ
ರಿಗೆ ಸಮರ್ಪಕನಾಗಿಯೂ, ಮನುಷ್ಯರಿಗೆ ಪರೀಕ್ಷಿತನಾಗಿಯೂ, ಇದ್ದಾನೆ.
೧೯ ಹಾಗಾದರೆ, ಸಮಾಧಾನದವುಗಳನ್ನೂ ಒಬ್ಬರಿಗೊಬ್ಬರು ಆತ್ಮವೃದ್ಧಿ ಮಾಡ ತಕ್ಕವುಗಳನ್ನೂ ಹಿಂದಟ್ಟುವ.
೨೦ ಆಹಾರಕ್ಕೋಸ್ಕರ ದೇವರ ಕೆಲಸವನ್ನು [3]ಕೆಡಿಸ ಬೇಡ. ಎಲ್ಲಾ ಪವಿತ್ರವೇ, ಆದರೆ [4]ಎಡತಡೆಯಾಗಿ ತಿನ್ನುವ
೨೧ ಮನುಷ್ಯನಿಗೆ ಕೆಟ್ಟದ್ದಾಗಿದೆ. ಬಾಡು ಉಣ್ಣದೆ ಇರುವದೂ, ದ್ರಾಕ್ಷೇ ರಸವನ್ನು ಕುಡಿಯದೆ ಇರುವದೂ,
ಯಾವದರಿಂದ ನಿನ್ನ ಸಹೋದರನು ಎಡವುತ್ತಾನೋ, ಇಲ್ಲವೆ ಆತಂಕ ಪಡುತ್ತಾನೋ, ಇಲ್ಲವೆ ಬಲಹೀನ
೨೨ ನಾಗುತ್ತಾನೋ, ಅದನ್ನು ಬಿಡುವದು ಒಳ್ಳೇದು. ನಿನಗೆ [5]ವಿಶ್ವಾಸ ಉಂಟೋ? ನಿನ್ನಲ್ಲಿಯೇ ದೇವರ
ಮುಂದೆ ಇರಲಿ. ತಾನು ಒಪ್ಪುವದರಲ್ಲಿ ತನ್ನ ಮೇಲೆ ತಪ್ಪು ಹೊರಿಸಿ ಕೊಳ್ಳದವನು ಭಾಗ್ಯವಂತನು.
೨೩ ಅನುಮಾನ ಪಡುವವನು ಉಂಡರೆ, ಆಜ್ಞೆನಿರ್ಣಯ ಪಟ್ಟಿದ್ದಾನೆ. ಯಾಕಂದರೆ ಅದು ವಿಶ್ವಾಸದಿಂದಲ್ಲ;
ವಿಶ್ವಾಸದಿಂದುಂಟಾಗದ್ದೆಲ್ಲಾ ಪಾಪವಾಗಿದೆ.

ಕ್ರಿಸ್ತನ ಶ್ರೇಷ್ಠವಾದ ಮಾದ್ರಿಯಿಂದ ಕ್ರೈಸ್ತರು ಐಕ್ಯವಾಗಿರುವಂತೆ ಪ್ರೇರೇಪಿಸಿದ್ದು.

**15.** ಆದರೆ ಬಲವುಳ್ಳವರಾದ ನಾವು ನಮ್ಮನ್ನು ಮೆಚ್ಚಿಸಿ ಕೊಳ್ಳದೆ, ಬಲಹೀನರ ಅಶಕ್ತಿಗಳನ್ನು ತಾಳಿ ಕೊಳ್ಳ ತಕ್ಕದ್ದು.
೨, ೩ ನಮ್ಮಲ್ಲಿ ಒಬ್ಬೊಬ್ಬನು ಮೇಲಿಗಾಗಿ ಆತ್ಮವೃದ್ಧಿಗೋಸ್ಕರ, ತನ್ನ [6]ನೆರೆಯವನನ್ನು ಮೆಚ್ಚಿಸಲಿ. ಯಾಕಂದರೆ
ಕ್ರಿಸ್ತನು ಸಹ ತನ್ನನ್ನು ಮೆಚ್ಚಿಸಿ ಕೊಳ್ಳಲಿಲ್ಲ; ಆದರೆ, ನಿನ್ನನ್ನು ನಿಂದಿಸುವವರ ನಿಂದೆಗಳು ನನ್ನ ಮೇಲೆ ಬಿದ್ದ
೪ ವೆಂದು, (ಕೀರ್ತ. ೬೯. ೯.) [7]ಬರೆದಿರುವ ಪ್ರಕಾರವೇ. ಯಾಕಂದರೆ [8]ತಾಳ್ಮೆಯಿಂದಲೂ ಬರಹಗಳ ಆದ

1. ಭಕ್ತರ ಅಂತರ್ಯದಲ್ಲಿ ಸ್ಥಾಪಿಸಲ್ಪಟ್ಟಿರುವ ದೇವರ ರಾಜ್ಯವು ಅಥವಾ ಆಳಿಕೆಯು ಉಣ್ಣುವದು ಕುಡಿಯುವದು ಮುಂತಾದ ಹೊರಗಿನ ಆಚಾರಗಳಿಗೆ ಸಮ್ಮಂಧ ಪಟ್ಟದ್ದಾಗಿರದೆ ಆತ್ಮನ ವರಪ್ರಸಾದಗಳಿಗೆ ಸಮ್ಮಂಧ ಪಟ್ಟದ್ದಾಗಿದೆ. (೫. ೧—೫.)

2. ಇವುಗಳಲ್ಲಿ ಅಂದರೆ, ೧೭ನೇ ವಚನದಲ್ಲಿ ಹೇಳಿದ ನೀತಿ, ಸಮಾಧಾನ, ಸಂತೋಷ, ಎಂಬುವ ಶ್ರೇಷ್ಠ ಲಕ್ಷಣಗಳು. ಈ ಲಕ್ಷಣಗಳುಳ್ಳ ಭಕ್ತನ ನಡತೆಯು ದೇವರಿಗೂ ಮನುಷ್ಯರಿಗೂ ಪ್ರಿಯವಾದದ್ದಾಗಿರುವದು.

3. ೧೫ನೇ ವಚನದಲ್ಲಿ ಹೇಳಿರುವದಕ್ಕೂ ಈ ವಚನದಲ್ಲಿ ಹೇಳಿರುವದಕ್ಕೂ ವ್ಯತ್ಯಾಸವುಂಟು. ೧೫ಲ್ಲಿ ಅನ್ಯೋನ್ಯದ ಭಕ್ತಿಯ ಅಭಿವೃದ್ಧಿಯನ್ನು ಕೆಡಿಸ ಬೇಡವೆಂಬುವದೇ ಅದರ ಅಭಿಪ್ರಾಯವು. ಈ ವಚನದಲ್ಲಿ ಬಲಹೀನ ವಿಶ್ವಾಸವುಳ್ಳ ಸಹೋದರನ ಆತ್ಮದಲ್ಲಿಯೂ, ಲೋಕದಲ್ಲಿರುವ ದೇವರ ಸಭೆಯಲ್ಲಿಯೂ ದೇವರು ಕಟ್ಟುವದನ್ನು, ತನ್ನ ಸ್ವಂತ ಸೌಖ್ಯವನ್ನು ಕೋರಿ ಅಲ್ಪ ಭೋಜನದ ನಿಮಿತ್ತ ಯಾವನೂ ಕೆಡವ ಬಾರದು, ಎಂಬುವದೇ ಅಭಿಪ್ರಾಯವು.

4. ದೇವರು ಶುದ್ಧ ಮಾಡಿದವುಗಳೆಲ್ಲಾ ಶುದ್ಧವೇ. (ಅಪೊ. ಕ್ರಿ. ೧೦. ೧೫.) ಆದರೆ ಅವುಗಳಿಂದ ಮತ್ತೊಬ್ಬರಿಗೆ ಎಡತಡೆಯಾದರೆ, ಅದು ಕೇಡಿಗೆ ಹೇತುವೆಯಾಗಿರುವದು. (೧೩. ವ.)

5. ನೀನು ಮಾಡುವದು ಸರಿ ಎಂದು ನಿನ್ನಲ್ಲಿ ನಿಶ್ಚಯವಾಗಿದ್ದರೆ, ದೇವರ ಮುಂದೆ ನಿನಗೆ ಸಮಾಧಾನ ಉಂಟಾಗುವದಕ್ಕಾಗಿ ಹಾಗೆ ಮಾಡ ಬಹುದು. ಆದರೆ ಅದನ್ನು ಕುರಿತು ಸಂದೇಹವಿರುವಾಗ ಅದನ್ನು ಮಾಡಿದರೆ, ಅದು ಅಪರಾಧವಾಗಿರುವದು. (೨೩. ವ.) ನೀನು ಮಾಡುವದು ಸರಿಯೋ ಸರಿಯಲ್ಲವೋ? ಎಂಬುವದನ್ನು ಕುರಿತು ಮನಸ್ಸಿನಲ್ಲಿ ಬಹಳ ಸಂದೇಹವಿರುವಾಗ ಅದನ್ನು ನೋಡದೆ ಮಾಡಿದರೆ, ಅದು ಪಾಪವಾಗುವದು. (೧೪. ವ.) ಮನಸ್ಸಾಕ್ಷಿ ನುಡಿಯುವವುಗಳನ್ನೆಲ್ಲಾ ಮಾಡುವದು ಯಾವಾಗಲೂ ಸರಿಯಾಗಿರಲಾರದು. ಅದು ಸಂದೇಹಿಸುವವುಗಳನ್ನಾದರೆ ಮಾಡುವದು ಯಾವಾಗ್ಯೂ ತಪ್ಪಾಗಿರುವದು. ಆದದರಿಂದ ನಮಗೆ ಒಳ್ಳೇ ಮನಸ್ಸಾಕ್ಷಿಯನ್ನು ಕೊಡುವ ಹಾಗೆ ಪರಿಶುದ್ಧಾತ್ಮನನ್ನು ಬೇಡಿ ಕೊಳ್ಳುವದು ಅವಶ್ಯವು.

6. ಈ ವಚನಗಳು ಹಿಂದಿನ ಸಂಧಿಗೆ ಸಮ್ಮಂಧ ಪಟ್ಟವುಗಳಾಗಿವೆ. ಸ್ಥಿರವಾದವರು ಸ್ಥಿರವಿಲ್ಲದವರನ್ನು ಶೇರಿಸಿ ಕೊಳ್ಳ ಬೇಕೆಂದೂ, ಅವರಿಗೆ ಪ್ರೀತಿಯಾಗಿ ನಡಿಯ ಬೇಕೆಂದೂ ತೋರಿಸಿದ ತರುವಾಯ, ಅವರ ಭಕ್ತಿ ವೃದ್ಧಿಯಾಗುವದಕ್ಕೆ ಹೇತುವೆಯಾಗಿಯೇ ಹೀಗೆ ಮಾಡ ಬೇಕೆಂದು ಹೇಳಿರುತ್ತದೆ. ಬೇರೆ ಕಾರ್ಯಗಳಲ್ಲಿ ದೇವರಿಗೆ ಪ್ರಿಯವಾಗಿ ನಡಿಯ ಬೇಕೇ ಹೊರ್ತು ಮನುಷ್ಯರಿಗೆ ಪ್ರಿಯವಾಗಿ ನಡಿಯ ಬಾರದು. (ಗಲಾ. ೧. ೧೦.)

7. ಮೇಲೆ ಹೇಳಿದ ಕಟ್ಟಳೆಯನ್ನು ಎಲ್ಲರೂ ಕೈಕೊಳ್ಳ ತಕ್ಕದ್ದಾಗಿ ಪ್ರವಾದನಾವಾಕ್ಯದಲ್ಲಿ ಹೇಳಿರುವ ಕ್ರಿಸ್ತನ ಶ್ರೇಷ್ಠ ಮಾದ್ರಿಯನ್ನು ತೋರಿಸಿ ಇದೆ. ದೇವರ ಮಹಿಮೆ ಪ್ರಕಟವಾಗಲೂ, ಮನುಷ್ಯರಿಗೆ ತಗಲಿರುವ ಪೀಡೆ ನಿವರ್ತಿಯಾಗಲೂ ತಕ್ಕದ್ದಾಗಿ, ಕ್ರಿಸ್ತನು ದುರ್ಮಾರ್ಗರಿಂದ ಬಂದ ಎಲ್ಲಾ ನಿಂದೆಗಳನ್ನು ತಾಳ್ಮೆಯಿಂದ ಸಹಿಸಿದನೆಂಬುವ ಸತ್ಯವು ಕೀರ್ತ. ೬೯. ೯ಲ್ಲಿ ಚನ್ನಾಗಿ ತೋರುತ್ತದೆ. ಆತನ ಸುಮಾದ್ರಿಯನ್ನು ಯೋಚಿಸಿ ಆತನ ದಾಸರು ತಾಳ್ಮೆ ಪ್ರೀತಿಗಳಿಂದ ನಡಿಯ ಬೇಕು.

8. ವೇದವಾಕ್ಯಗಳನ್ನು ಓದಿ ಧ್ಯಾನಿಸುವ ಭಕ್ತರಿಗೆ ದೇವರು ತಾಳ್ಮೆಯನ್ನೂ ಆದರಣೆಯನ್ನೂ ಕೊಡುತ್ತಾನೆ. ಈ ವರಗಳನ್ನು ಹೊಂದುವವರು ಕ್ರಿಸ್ತನಲ್ಲಿದ್ದ ಮನಸ್ಸನ್ನು ಭೂಷಣವಾಗಿ ಧರಿಸಿ ಕೊಂಡವರಿಗೆ ಹೊಂದಿಕೆಯಾಗಿ ನಡಿಯುವದರಿಂದ ಅವರ ನಂಬಿಕೆ ಸ್ಥಿರ ಪಡುತ್ತದೆ. ಹಳೇ ಒಡಂಬಡಿಕೆಯ ಗ್ರಂಥಗಳೆಲ್ಲಾ ಭಕ್ತಿಯ ಅಭಿವೃದ್ಧಿಗೆ ಹೇತುವೆಯಾದವುಗಳೆಂದು ಇದರಿಂದ ತಿಳಿಯ ಬಹುದು.

ರಣೆಯಿಂದಲೂ ನಮಗೆ ನಿರೀಕ್ಷೆ ಉಂಟಾಗುವ ಹಾಗೆ, ಮುಂಬರೆದವುಗಳಷ್ಟು ನಮ್ಮ ಬೋಧನೆಗೋಸ್ಕರ
೫ ಮುಂಬರೆಯಲ್ಪಟ್ಟವು. ಮತ್ತು ನೀವು ಏಕ ಚಿತ್ತವಾಗಿ ಒಂದೇ ಬಾಯಿಯಿಂದ ನಮ್ಮ ಕರ್ತನಾದ ಯೇಸು
೬ ಕ್ರಿಸ್ತನ ತಂದೆಯಾದ ದೇವರನ್ನು ಮಹಿಮೆ ಪಡಿಸುವ ಹಾಗೆ, ತಾಳ್ಮೆ ಆದರಣೆಗಳ ದೇವರು, ನಿಮಗೆ ಕ್ರಿಸ್ತ
೭ ಯೇಸುವಿನ ಪ್ರಕಾರ, ಒಬ್ಬರಲ್ಲೊಬ್ಬರು ಒಂದೇ ಮನಸ್ಸಾಗಿರುವ ಹಾಗೆ ದಯ ಪಾಲಿಸಲಿ. ಆದ ಕಾರಣ
ಕ್ರಿಸ್ತನು ದೇವರ [1]ಮಹಿಮೆಗೆ ನಮ್ಮನ್ನು ಅಂಗೀಕರಿಸಿದ ಹಾಗೆ, ಒಬ್ಬರನ್ನೊಬ್ಬರು ಅಂಗೀಕರಿಸಿರಿ.
೮ [2]ಮತ್ತು ಯೇಸು ಕ್ರಿಸ್ತನು ದೇವರ ಸತ್ಯದ ನಿಮಿತ್ತ ಪಿತೃಗಳಿಗಾದ ವಾಗ್ದತ್ತಗಳನ್ನು ದೃಢ ಪಡಿಸುವ
ಹಾಗೆ, ಪರಿಛೇದನೆಯ ಸೇವಕನಾದನೆಂದೂ, ಜನಾಂಗಗಳು ಕರುಣೆಯ ನಿಮಿತ್ತ ದೇವರನ್ನು ಮಹಿಮೆ ಪಡಿ
೯ ಸುತ್ತಾರೆಂದೂ, ಹೇಳುತ್ತೇನೆ. ಇದಕ್ಕೆ [3]ಬರೆದದ್ದೇನಂದರೆ, ಈ ಕಾರಣದಿಂದ ಜನಾಂಗಗಳಲ್ಲಿ ನಿನಗೆ ಅರಿಕೆ
೧೦ ಮಾಡಿ, ನಿನ್ನ ನಾಮಕ್ಕೆ ಹಾಡುವೆನು. (ಕೀರ್ತ. ೧೮. ೪೯.) ಮತ್ತೂ, ಜನಾಂಗಗಳೇ, ಅವನ ಪ್ರಜೆಯ
೧೧ ಸಂಗಡ ಆನಂದ ಪಡಿರಿ, ಅನ್ನುತ್ತಾನೆ. (ದ್ವಿತೀಯ ನ್ಯಾ. ೩೨. ೪೩.) ಮತ್ತೂ, ಸಕಲ ಜನಾಂಗಗಳೇ,
ಕರ್ತನನ್ನು ಹೊಗಳಿರಿ; ಸಕಲ ಪ್ರಜೆಗಳೇ, ಅವನನ್ನು ಕೊಂಡಾಡಿರಿ, ಅನ್ನುತ್ತಾನೆ. (ಕೀರ್ತ. ೧೧೭. ೧.)
೧೨ ಮತ್ತೂ, ಇಶಾಯನ ಬೇರೂ, ಜನಾಂಗಗಳನ್ನು ಆಳ ಏಳುವವನೂ ಇರುವನು; ಅವನನ್ನು ಜನಾಂಗಗಳು
ನಿರೀಕ್ಷಿಸುವರು ಎಂದು ಯೆಶಾಯನು ಹೇಳುತ್ತಾನೆ. (ಯೆಶಾ. ೧೧. ೧೦.)
೧೩ ಹೀಗಿರಲಾಗಿ, [4]ನಿರೀಕ್ಷೆಯ ದೇವರು, ನೀವು ಪರಿಶುದ್ಧಾತ್ಮದ ಬಲದಿಂದ ನಿರೀಕ್ಷೆಯಲ್ಲಿ ಹೆಚ್ಚುವ ಹಾಗೆ,
ವಿಶ್ವಾಸಿಸುವದರಲ್ಲಿ ಎಲ್ಲಾ ಸಂತೋಷದಿಂದಲೂ ಸಮಾಧಾನದಿಂದಲೂ ನಿಮ್ಮನ್ನು ತುಂಬಿಸಲಿ.

### ಪೌಲನ ಊಳಿಗವನ್ನು ಕುರಿತ ಸಂಗತಿಗಳು.

೧೪ ಇದಲ್ಲದೆ, [5]ನನ್ನ ಸಹೋದರರೇ, ನೀವೇ ಒಳ್ಳೇತನದಿಂದ ಭರಿತರಾಗಿಯೂ, ಎಲ್ಲಾ ತಿಳುವಿಕೆಯಿಂದ ತುಂಬಿ
ದವರಾಗಿಯೂ, ಒಬ್ಬರಿಗೊಬ್ಬರು ಬುದ್ಧಿ ಹೇಳ ಶಕ್ತರಾಗಿಯೂ ಇದ್ದೀರೆಂದು, ನಿಮ್ಮನ್ನು ಕುರಿತು [6]ನನ್ನಿಂದ
೧೫ ನಾನೇ ನಿಶ್ಚಯಿಸಿ ಕೊಂಡಿದ್ದೇನೆ. ಆದರೂ, ಸಹೋದರರೇ, ಜನಾಂಗಗಳ ಕಾಣಿಕೆಯು ಪರಿಶುದ್ಧಾತ್ಮದಿಂದ
ಪರಿಶುದ್ಧ ಮಾಡಲ್ಪಟ್ಟು, ಸಮರ್ಪಕವಾಗುವ ಹಾಗೆ, ನಾನು ದೇವರ [7]ಸುವಾರ್ತೆಯಲ್ಲಿ ಯಾಜಕಸೇವೆ

1. (ಯೋಹಾ. ೧೭. ೨೦—೨೩. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.) ತಾಳ್ಮೆ ಆದರಣೆ ಮುಂತಾದ ಸಕಲ ವರಗಳಿಗೂ ಬುಗ್ಗೆಯಾಗಿರುವ ದೇವರಿಂದ ಸಹೋದರರೊಳಗೆ ಐಕ್ಯ ಉಂಟಾಗುವಾಗ, ಆ ಐಕ್ಯವು ಅವರು ಮಾಡುವ ಆರಾಧನೆಯಲ್ಲಿ ತೋರುವದು. ಅವರು ದೇವರ ಮಹಿಮೆಯನ್ನು ಕೋರಿ ಮನಸ್ಸೂ ವಾಕ್ಕೂ ಒಂದಾಗಿ ಏಕ ಚಿತ್ತವುಳ್ಳವರಾಗಿ ಆರಾಧಿಸುವರು. ಇಂಥಾ ಆರಾಧನೆ ಪರಲೋಕದಲ್ಲಿ ಸಹ ಆಗುವದು. (ಪ್ರಕಟ. ೫. ೮—೧೪; ೧೯. ೧—೭.)

2. ಯೆಹೂದ್ಯರಲ್ಲಿ ದೇವರ ಸತ್ಯವೂ, ಅನ್ಯಜನಾಂಗಗಳಲ್ಲಿ ಆತನ ಕೃಪೆಯೂ ಪ್ರಕಟವಾಗುವಂತೆ ಕ್ರಿಸ್ತನು ಒಬ್ಬ ದಾಸನ ಹಾಗೆ ನೀಚ ರೂಪವನ್ನು ಧರಿಸಿದವನಾಗಿ ಬಂದನು. (ಮತ್ತಾ. ೨೦. ೨೮.) ಆದದರಿಂದ ಉಭಯತ್ರರೂ ಏಕ ಚಿತ್ತದಿಂದ ಸಂತೋಷಿಸುವದು ನ್ಯಾಯವಾಗಿದೆ.

3. ಇಲ್ಲಿ ಹೇಳಲ್ಪಟ್ಟ ಪ್ರವಾದನಾವಾಕ್ಯಗಳೆಲ್ಲಾ, ನ್ಯಾಯಪ್ರಮಾಣ, ಪ್ರವಾದನೆ, ಕೀರ್ತನೆ ಮುಂತಾದ ಗ್ರಂಥಗಳಿಂದ ತೆಗೆದು ಬರೆಯಲ್ಪಟ್ಟವು. ಯೆಹೂದ್ಯರೂ ಜನಾಂಗಗಳವರೂ ಏಕ ಚಿತ್ತದಿಂದ ದೇವರನ್ನು ಆರಾಧಿಸುವರೆಂಬ ಸತ್ಯವು ಹಳೇ ಒಡಂಬಡಿಕೆಯಲ್ಲಿ ಪೂರ್ಣವಾಗಿ ಪ್ರವಾದನೆಯಾಗಿ ಹೇಳಲ್ಪಟ್ಟದೆ ಎಂದು ಇದರಿಂದ ತಿಳಿಯ ಬಹುದು. (ದ್ವಿತೀಯ ನ್ಯಾ. ೩೨. ೧.)

4. ಇಶಾಯನ ಬೇರಾದ ಯೇಸು ಕ್ರಿಸ್ತನಲ್ಲಿ ಜನಾಂಗಗಳವರು ಇಡುವ ನಂಬಿಕೆಗೂ ಕಾರಣನು ದೇವರೇ. ಇಂಥಾ ನಂಬಿಕೆ ಸಂತೋಷ ಸಮಾಧಾನ ಮುಂತಾದ ಸದ್ಗುಣಗಳು ಪರಿಶುದ್ಧಾತ್ಮನ ಅನುಗ್ರಹದಿಂದ ಭಕ್ತರಲ್ಲಿ ಹೆಚ್ಚೆಚ್ಚಾಗಿ ವೃದ್ಧಿ ಹೊಂದುವವು.

5. ಈ ಪತ್ರಿಕೆಯ ಕಡೇ ಭಾಗದಲ್ಲಿ ಪೌಲನು ತನಗೂ ಜನಾಂಗಗಳವರಿಗೂ ಉಂಟಾಗಿರುವ ಸಮ್ಮಂಧವನ್ನೂ ಅವರೊಳಗೆ ತನ್ನ ಪ್ರಯಾಸದಿಂದ ಉಂಟಾದ ಕಾರ್ಯಸಿದ್ಧಿಯನ್ನೂ ಹೇಳುತ್ತಾನೆ. (೧೪—೨೧. ವ.) ಯೆರೂಸಲೇಮಿಗೆ ಹೋದ ಮೇಲೆ ರೋಮಪುರಿಗೂ ಸ್ಪಾನ್ಯಕ್ಕೂ ಹೋಗುವದಕ್ಕೆ ಉಂಟಾಗಿರುವ ತನ್ನ ಕೋರಿಕೆಯನ್ನು ತಿಳಿಸಿ, (೨೨—೨೯. ವ.) ಯೆರೂಸಲೇಮಿನಲ್ಲಿ ತನಗೆ ಸಂಭವಿಸಲಿಕ್ಕಿರುವ ಉಪದ್ರವನ್ನು ಮುಂತಿಳಿದವನಾಗಿ, ರೋಮಪುರಿಯ ಕ್ರೈಸ್ತರು ತನಗೋಸ್ಕರ ಪ್ರಾರ್ಥಿಸ ಕೇಳಿ ಕೊಳ್ಳುತ್ತಾನೆ. (೩೦—೩೩. ವ.) ಇದರ ತರುವಾಯ ಕೆಲವು ಸಹೋದರರಿಗೆ ವಂದನೆಯನ್ನೂ, ಭೇದ ಮಾಡುವವರಿಗೆ ಎಚ್ಚರಿಕೆಯನ್ನೂ ಹೇಳಿ, (೧೬. ೧—೨೩.) ಸ್ತೋತ್ರದೊಡನೆ ಮುಗಿಸುತ್ತಾನೆ. (೨೪—೨೭. ವ.)

6. ನಿಮ್ಮಲ್ಲಿ ಸದ್ಗುಣ ಸತ್ಕ್ರಿಯೆಗಳು ಇಲ್ಲವೆಂಬ ಯೋಚನೆಯಿಂದಲ್ಲ, ಜನಾಂಗಗಳ ಅಪೊಸ್ತಲನಾದ ನನ್ನ ಹಂಗನ್ನು ಪೂರೈಸಲೂ, ನಿಮ್ಮ ಬಳಿಗೆ ಬರ ಶಕ್ತಿ ಇಲ್ಲದವನಾಗಿರುವದಕ್ಕೆ ಒಂದು ಪರಿಹಾರವಾಗಿಯೂ ಇವುಗಳನ್ನು ಬರೆದಿದ್ದೇನೆಂದು ಹೇಳುತ್ತಾನೆ.

7. ಕ್ರಿಸ್ತನೇ ಪ್ರಧಾನ ಯಾಜಕನು; ಪೌಲನು ಆತನ ಕೈಕೆಳಗೆ ಊಳಿಗ ಮಾಡುವ ಯಾಜಕನು. ಭಕ್ತಿಯುಳ್ಳ ಜನಾಂಗಗಳವರು ದೇವರಿಗೆ ಅರ್ಪಿಸಲ್ಪಡುವ ಬಲಿ. ಪರಿಶುದ್ಧಾತ್ಮನ ಕೃಪೆಯು ಆ ಬಲಿಯ ಮೇಲೆ ಹೊಯ್ಯಲ್ಪಡುವ ಎಣ್ಣೆಯ ಹಾಗಿರುವದು. ಹೀಗೆ ಜನಾಂಗಗಳು ಪರಿಶುದ್ಧಾತ್ಮನಿಂದ ಪರಿಶುದ್ಧ ಮಾಡಲ್ಪಟ್ಟು ದೇವರಿಗೆ ಸಮರ್ಪಕವಾದ ಜೀವದ ಬಲಿಯಾಗಿರುವಂತೆ ಮಾಡುತ್ತದೆ. ಸುವಾರ್ತೆಯ ಊಳಿಗವು ಯಾಜಕ ಊಳಿಗಕ್ಕೆ ಸಮಾನವಾದದ್ದೆಂದು ಪೌಲನು ಹೇಳುತ್ತಾನೆ. (೧೨. ೧, ೨.) ಈ ಒಂದೇ ಸ್ಥಳದಲ್ಲಿ ಮಾತ್ರ, ಬಲಿಯರ್ಪಿಸಿದ ಪೂರ್ವಯಾಜಕರ ಊಳಿಗವು ಸುವಾರ್ತೆಯ ಊಳಿಗಕ್ಕೆ ಸಮಾನ ಮಾಡಲ್ಪಟ್ಟದೆ. ಇದು ಒಂದು ಉಪಮಾನವಾಗಿ ಹೇಳಲ್ಪಟ್ಟದೆ.



೧೬ ಮಾಡುತ್ತಾ, ಜನಾಂಗಗಳಿಗೋಸ್ಕರ ಯೇಸು ಕ್ರಿಸ್ತನ ಸೇವಕನಾಗಿರುವದಕ್ಕೆ, ದೇವರಿಂದ ನನಗೆ ಕೊಡ
ಲ್ಪಟ್ಟ [1]ಕೃಪೆಯ ಮುಖಾಂತರ ನಿಮಗೆ ಜ್ಞಾಪಕ ಮಾಡುವವನಾಗಿ, ಸ್ವಲ್ಪ ಹೆಚ್ಚಾದ [2]ಧೈರ್ಯದಿಂದ
೧೭ ನಿಮಗೆ ಬರೆದಿದ್ದೇನೆ. ಆದದರಿಂದ, ದೇವರ ಕಾರ್ಯಗಳಲ್ಲಿ ಯೇಸು ಕ್ರಿಸ್ತನಲ್ಲಿ ನನಗೆ ಹೆಚ್ಚಳ ಉಂಟು.
೧೮ ಯಾಕಂದರೆ ಕ್ರಿಸ್ತನು ಜನಾಂಗಗಳ ವಿಧೇಯತ್ವಕ್ಕಾಗಿ ಮಾತಿನಿಂದಲೂ, ಕ್ರಿಯೆಯಿಂದಲೂ, ಲಕ್ಷಣ
ಅದ್ಭುತಗಳ ಬಲದಿಂದ, ದೇವರ ಆತ್ಮದ ಬಲದಿಂದ, [3]ನನ್ನ ಮುಖಾಂತರ ಮಾಡಿದವುಗಳೇ ಹೊರ್ತು, ಏನಾ
೧೯ ದರೂ ಮಾತಾಡ ಧೈರ್ಯ ಪಡುವದಿಲ್ಲ. ಹೀಗೆ, ನಾನು ಯೆರೂಸಲೇಮಿನಿಂದ ಇಲ್ಲುರಿಕದ ಮಟ್ಟಿಗೂ
೨೦ ಸುತ್ತಲಾಗಿ ಕ್ರಿಸ್ತನ ಸುವಾರ್ತೆಯ ಕಾರ್ಯವನ್ನು ಪೂರೈಸಿದೆನು. ಈ ಮೇರೆಗೆ ಪ್ರಯಾಸ ಪಟ್ಟು,
[4]ಸುವಾರ್ತೆ ಪ್ರಸಂಗಿಸುತ್ತೇನೆ; ಮತ್ತೊಬ್ಬನ ಅಸ್ತಿವಾರದ ಮೇಲೆ ಕಟ್ಟದ ಹಾಗೆ, ಕ್ರಿಸ್ತನ ಹೆಸರು ಹೇಳಲ್ಪ
೨೧ ಟ್ಟಲ್ಲಿ ಅಲ್ಲ, ಆದರೆ ಅವನ ಸಮಾಚಾರ ತಿಳಿಯದವರು ನೋಡುವರು, ಕೇಳದವರು ಗ್ರಹಿಸುವರು, ಎಂದು
(ಯೆಶಾ. ೫೨. ೧೫.) [5]ಬರೆದಿರುವ ಪ್ರಕಾರವೇ.
೨೨, ೨೩ ಆದದರಿಂದ, ನಿಮ್ಮ ಬಳಿಗೆ ಬರ ಬಹುಶಾ [6]ತಡೆಯಲ್ಪಟ್ಟೆನು. ಆದರೆ ಈಗ ಈ ಶೀಮೆಗಳಲ್ಲಿ ನನಗೆ
[7]ಸ್ಥಳವಿಲ್ಲದೆ ಇರುವದರಿಂದಲೂ, ನಿಮ್ಮ ಬಳಿಗೆ [8]ಬರ ನನಗೆ ಅನೇಕ ವರುಷಗಳಿಂದ ಅಭಿಲಾಷೆ ಇರುವದರಿಂ
೨೪ ದಲೂ, ನಾನು ಸ್ಪಾನ್ಯಕ್ಕೆ ಪಯಣ ಮಾಡುವಾಗ, ನಿಮ್ಮ ಬಳಿಗೆ ಬರುವೆನು. ಯಾಕಂದರೆ ಹಾದು
ಹೋಗುತ್ತಾ ನಿಮ್ಮನ್ನು ಕಂಡು, ಮೊದಲು ನಿಮ್ಮಿಂದ [9]ಸ್ವಲ್ಪ ತೃಪ್ತನಾದ ತರುವಾಯ, ಅಲ್ಲಿಗೆ ನಿಮ್ಮಿಂದ
ಮುಂಕಳುಹಿಸಲ್ಪಡ ನಿರೀಕ್ಷಿಸುತ್ತೇನೆ.

1. ಇಲ್ಲಿ ಕೃಪೆ ಎಂಬುವದು ಪೌಲನ ಅಪೊಸ್ತಲೋದ್ಯೋಗವನ್ನು ಕುರಿತದ್ದು. (೧. ೫, ೬.)

2. ಈ ಪತ್ರಿಕೆ ೧೧. ೧೮. ವ. ೧೨ನೇ ೧೪ನೇ ಸಂಧಿಗಳಲ್ಲಿರುವ ವಿಶೇಷಗಳನ್ನು ಹೇಳ ಧೈರ್ಯ ಪಟ್ಟೆನೆಂದು ಹೇಳುತ್ತಾನೆಂಬದಾಗಿ ತೋರುತ್ತದೆ.

3. ಜನಾಂಗಗಳವರು ಗುಣ ಪಟ್ಟ ವಿಷಯದಲ್ಲಿ ಕ್ರಿಸ್ತನು ಬೇರೊಬ್ಬರಿಂದ ನಡಿಸಿದವುಗಳನ್ನಲ್ಲ, ನನ್ನಿಂದ ನಡಿಸಿದವುಗಳನ್ನೇ ನಾನು ಹೇಳುವದರಿಂದ, ನನ್ನ ಊಳಿಗವೂ ಅದರಿಂದುಂಟಾದ ಕಾರ್ಯಸಿದ್ಧಿಯೂ ಮುಂತಾದ ದೇವರ ಸಮ್ಮಂಧವಾದವುಗಳನ್ನು ಕುರಿತು ಆತನಲ್ಲಿ ಧೈರ್ಯವಾಗಿ ಹೆಚ್ಚಳ ಪಡುತ್ತೇನೆ, ಅನ್ನುತ್ತಾನೆ. ಈ ಕಾರ್ಯಸಿದ್ಧಿಯು ಅದ್ಭುತ ಲಕ್ಷಣಗಳಿಂದಲೂ ಪರಿಶುದ್ಧಾತ್ಮನ ಬಲದಿಂದಲೂ ಅವನಿಗೆ ಪ್ರಾಪ್ತಿಯಾಯಿತು.

4. ಇದಕ್ಕೆ ಸುವಾರ್ತಿಕನ ಊಳಿಗವನ್ನು ಸಂಪೂರ್ಣವಾಗಿ ಈಡೇರಿಸಿದನೆಂಬ ಅರ್ಥವಾಗಿ ಹೇಳ ಬಹುದು. ಇಲ್ಲುರಿಕ ದೇಶವು ಮಕೆದೋನ್ಯ ದೇಶಕ್ಕೆ ಪಶ್ಚಿಮೋತ್ತರದಲ್ಲಿತ್ತು. ಈ ಪತ್ರಿಕೆಯನ್ನು ಬರಿಯುವದಕ್ಕೆ ಸ್ವಲ್ಪ ಕಾಲಕ್ಕೆ ಮುಂಚೆ ಪೌಲನು ಎರಡನೇ ಸಾರಿ ಪ್ರಯಾಣ ಮಾಡುವಾಗ ಮಕೆದೋನ್ಯ ದೇಶವನ್ನೆಲ್ಲಾ ಸಂಚರಿಸಿದಂತೆ ಅಪೊ. ಕ್ರಿ. ೨೦. ೨ಲ್ಲಿ ಹೇಳಿರುವದರಿಂದ ಇಲ್ಲುರಿಕಕ್ಕೆ ಸಮಿಾಪವಾಗಿ ಆದರೂ ಇಲ್ಲುರಿಕಕ್ಕೇ ಆದರೂ ಹೋಗಿರುವನೆಂದು ತೋರುತ್ತದೆ. ಹಾಗೆ ಹೋಗಿದ್ದರೆ, ಆ ಪ್ರಯಾಣ ಮುಗಿದ ಕೂಡಲೆ ಬರೆದ ಈ ಪತ್ರಿಕೆಯಲ್ಲಿ ಅದನ್ನು ಕುರಿತು ಬರೆದಿರುವದು ಸ್ವಾಭಾವಿಕವೇ.

5. ಎಂದಿಗೂ ಕೇಳದೆ ಇರುವವರಿಗೆ ಸುವಾರ್ತೆ ಪ್ರಸಂಗಿಸಲ್ಪಡುವದೆಂದು ಯೆಶಾಯನ ಪ್ರವಾದನಾವಾಕ್ಯದ ಅಭಿಪ್ರಾಯಕ್ಕೆ ಸರಿಯಾಗಿ ಪೌಲನು, ಮತ್ತೊಬ್ಬರು ಅಸ್ತಿವಾರ ಹಾಕಿದ ಸ್ಥಳಗಳಲ್ಲಿ ತಾನು ಪ್ರಸಂಗಿಸದೆ, ಸುವಾರ್ತೆಯ ಬೆಳಕು ತೋರದೆ ಇದ್ದಲ್ಲಿ ಪ್ರಸಂಗಿಸುವದಕ್ಕೆ ಪ್ರಯಾಸ ಪಟ್ಟನು. ಇದೇ ಅವನ ಮನೋಭಿಲಾಷೆಯು. (೨ ಕೊರಿ. ೧೦. ೧೪—೧೬.) ಇದು ಬಹಳ ಕಷ್ಟವೂ ಪ್ರಯಾಸವೂ ಆಗಿದ್ದಾಗ್ಯೂ, ಮೇಲೆ ಹೇಳಿದ ಪ್ರವಾದನಾವಾಕ್ಯದಿಂದ ಅವನು ಧೈರ್ಯ ಹೊಂದಿ, ಮೂಢತ್ವದಲ್ಲಿ ಮುಣುಗಿದ್ದ ಪಾಪಾತ್ಮರಿಗೆ ಸುವಾರ್ತೆಯನ್ನು ಪ್ರಸಂಗಿಸಿದನು.

6. ಇದರ ಅಭಿಪ್ರಾಯವು ಇದರ ಕೆಳಗೆ ಬರುವ ವಚನದಲ್ಲಿಯೂ, ೧. ೧೩. ವಚನದ ವ್ಯಾಖ್ಯಾನದಲ್ಲಿಯೂ ತಿಳಿಯಲಾಗುತ್ತದೆ.

7. ಮಕೆದೋನ್ಯ ದೇಶದಲ್ಲೆಲ್ಲಾ ಸುವಾರ್ತೆ ಪ್ರಕಟವಾಗಿದ್ದದರಿಂದ ಅದನ್ನು ಪ್ರಸಂಗಿಸುವದಕ್ಕೆ ಆ ದೇಶದಲ್ಲಿ ನೂತನವಾದ ಸ್ಥಳಗಳು ಇಲ್ಲದೆ ಇದ್ದವು.

8. ಅನೇಕ ವರುಷಗಳೆಂಬುವದು, ನಾಲ್ಕು ವರುಷಗಳಿಗೆ ಮುಂಚೆ ರೋಮಪುರಿಯಿಂದ ಬಂದಿದ್ದ ಅಕ್ವಿಲನನ್ನೂ ಅವನ ಹೆಂಡತಿಯಾದ ಪ್ರಿಸ್ಕಿಲ್ಲಳನ್ನೂ ಕಂಡು ಅವರ ಸಂಗಡ ಪರಿಚಿತಿ ಮಾಡಿದ ಕಾಲವನ್ನು ಸೂಚಿಸುತ್ತದೆ. (ಅಪೊ. ಕ್ರಿ. ೧೮. ೧—೩; ೧೯. ೨೧.)

9. ಸ್ವಲ್ಪ ಎಂಬುವದು ಅವನ ಕೋರಿಕೆಯ ಪ್ರಕಾರವಲ್ಲ, ಅವನಿಗೆ ಉಂಟಾಗಿದ್ದ ಶಕ್ತಿಯ ಪ್ರಕಾರ ಅವರೊಳಗೆ ಇರಲಿಕ್ಕಾಗುವದನ್ನು ಸೂಚಿಸುತ್ತದೆ.

೨೫, ೨೬ ಆದರೆ ಈಗ [1]ಪರಿಶುದ್ಧರ ಸೇವಕನಾಗಿ ಯೆರೂಸಲೇಮಿಗೆ ಪಯಣ ಮಾಡುತ್ತೇನೆ. ಯಾಕಂದರೆ
ಯೆರೂಸಲೇಮಿನಲ್ಲಿರುವ [2]ದರಿದ್ರ ಪರಿಶುದ್ಧರಿಗೆ ಏನಾದರೂ ಸಹಾಯ ಮಾಡ ಮಕೆದೋನ್ಯಕ್ಕೂ ಅಕಾ
೨೭ ಯಕ್ಕೂ ಮನಸ್ಸಾಯಿತು. ಅವರಿಗೆ ಮನಸ್ಸಾಯಿತು ಸರಿ; ಮತ್ತು ಅವರ [3]ಹಂಗಿನವರಾಗಿದ್ದಾರೆ.
ಯಾಕಂದರೆ ಜನಾಂಗಗಳು ಅವರ ಆತ್ಮದವುಗಳಲ್ಲಿ ಪಾಲು ಹೊಂದಿದ್ದರೆ, ಮಾಂಸದವುಗಳಿಂದ ಅವರಿಗೆ ಸೇವೆ
೨೮ ಮಾಡ ಹಂಗಿನಲ್ಲಿದ್ದಾರೆ. ಹೀಗಿರುವದರಿಂದ, ಇದನ್ನು ತೀರಿಸಿ, ಅವರಿಗೋಸ್ಕರ ಈ [4]ಫಲಕ್ಕೆ ಮುದ್ರೆ ಹಾಕಿ,
೨೯ ನಿಮ್ಮ ಮಾರ್ಗವಾಗಿ ಸ್ಪಾನ್ಯಕ್ಕೆ ಹೋಗುವೆನು. ಇದಲ್ಲದೆ, ನಿಮ್ಮ ಬಳಿಗೆ ಬರುವಾಗ್ಯೆ, ಕ್ರಿಸ್ತನ ಸುವಾ
ರ್ತೆಯ ಆಶೀರ್ವಾದದ [5]ಪರಿಪೂರ್ಣತೆಯೊಂದಿಗೆ ಬರುವೆನೆಂದು, ಬಲ್ಲೆನು.
೩೦ ಆದರೆ, ಸಹೋದರರೇ, ನಾನು ಯೆಹೂದದಲ್ಲಿರುವ ಅವಿಧೇಯರಿಗೆ ತಪ್ಪಿಸಲ್ಪಡುವ ಹಾಗೆಯೂ, ಯೆರೂ
೩೧ ಸಲೇಮಿಗೋಸ್ಕರವಾದ ನನ್ನ ಸೇವೆ [6]ಪರಿಶುದ್ಧರಿಗೆ ಸಮರ್ಪಕವಾಗುವ ಹಾಗೆಯೂ, ದೇವರ ಚಿತ್ತದಿಂದ
೩೨ ನಾನು ಸಂತೋಷವಾಗಿ ಬಂದು, ನಿಮ್ಮಲ್ಲಿ ವಿಶ್ರಮಿಸಿ ಕೊಳ್ಳುವ ಹಾಗೆಯೂ, ನೀವು ನನಗೋಸ್ಕರ
ದೇವರಿಗೆ ಮಾಡುವ ಪ್ರಾರ್ಥನೆಗಳಲ್ಲಿ ನನ್ನ ಕೂಡ ಹೋರಾಡ ಬೇಕೆಂದು, ನಮ್ಮ ಕರ್ತನಾದ ಯೇಸು
೩೩ ಕ್ರಿಸ್ತನ ನಿಮಿತ್ತವೂ, [7]ಆತ್ಮದ ಪ್ರೀತಿಯ ನಿಮಿತ್ತವೂ, ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ಸಮಾಧಾನದ
ದೇವರು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

ವಂದನೆಗಳು; ಭೇದಗಳನ್ನುಂಟು ಮಾಡುವವರನ್ನು ಎಚ್ಚರಿಸಿದ್ದು; ದೇವರನ್ನು ಸ್ತುತಿಸಿದ್ದು.

**16.** [8]ಕೆಂಕ್ರೆಯದಲ್ಲಿರುವ ಸಭೆಯ ಸೇವಕಳಾಗಿರುವ ನಮ್ಮ ಸಹೋದರಿಯಾದ ಫೊಯಿಬೆಯನ್ನು ನಿಮಗೆ
೨ ಒಪ್ಪಿಸುತ್ತೇನೆ. ಪರಿಶುದ್ಧರಿಗೆ ತಕ್ಕ ಹಾಗೆ ಅವಳನ್ನು ಕರ್ತನಲ್ಲಿ ಅಂಗೀಕರಿಸಿ, ಬೇಕಾದ ಯಾವ ಕೆಲಸದ

1. ಪರಿಶುದ್ಧರಿಗೆ ಸೇವೆ ಮಾಡುವದಕ್ಕೆ ಅವನು ಯೆರೂಸಲೇಮಿಗೆ ಪ್ರಯಾಣ ಮಾಡಿದ್ದನ್ನು ಕುರಿತು, ಅಪೊ. ಕ್ರಿ. ೧೯. ೨೧; ೨೦. ೨೨; ೨೪. ೧೭. ೨ಕೊರಿ. ೮. ೧—೬ಲ್ಲಿ ನೋಡ ಬಹುದು.

2. ಯೆರೂಸಲೇಮಿನಲ್ಲಿದ್ದ ಪರಿಶುದ್ಧರೆಲ್ಲರೂ ದರಿದ್ರರಲ್ಲವೆಂದೂ, ಅವರು ತಮ್ಮ ಆಸ್ತಿಗಳನ್ನು ಹುದುವಾಗಿ ಅನುಭವಿಸಿದ ವಾಡಿಕೆಯು (ಅಪೊ. ಕ್ರಿ. ೪. ೩೨—೩೭.) ಆ ಕಾಲದಲ್ಲಿ ಇರಲಿಲ್ಲವೆಂದೂ ಇದರಿಂದ ತಿಳಿಯ ಬಹುದು.

3. ಮಕೆದೋನ್ಯ ಅಕಾಯಾ ಸಭೆಗಳವರು ಮಾಡಿದ ಧರ್ಮವು ಅವರ ಪರೋಪಕಾರಚಿಂತೆಯನ್ನು ಮಾತ್ರವಲ್ಲ, ಅವರು ಹೊಂದಿದ ಆತ್ಮದ ಮೇಲುಗಳಿಗೆ ಅವರಲ್ಲಿ ತೋರಿದ ಕೃತಜ್ಞತೆಯ ಗುರುತಾಗಿಯೂ ಇತ್ತು. ಅವರ ಮಾದ್ರಿಯನ್ನು ರೋಮಪುರಿಯ ಸಭೆಯವರು ಸಹ ಅನುಸರಿಸಿ ನಡಿಯುವದು ಉತ್ತಮವೆಂದು ಅವರು ತಿಳಿದು ಕೊಳ್ಳುವದಕ್ಕೆ ಹೇತುವೆಯಾಗಿತ್ತು.

4. ಜನಾಂಗಗಳ ಕ್ರೈಸ್ತರು ಮಾಡಿದ ಧರ್ಮವು ಪ್ರೀತಿಯ ಫಲವೇ. ಆ ಪ್ರೀತಿಯು ಆತ್ಮನ ಫಲಗಳಲ್ಲಿ ಒಂದಾಗಿದೆ. ಅವನು ಅದನ್ನು ಯೆರೂಸಲೇಮಿನಲ್ಲಿರುವ ಪರಿಶುದ್ಧವಂತರ ಕೈಯಲ್ಲಿ ಭದ್ರವಾಗಿ ಒಪ್ಪಿಸ ಮನಸ್ಸಾಗಿದ್ದನು. ಹಣದ ಚೀಲಗಳಿಗೆ ಮುದ್ರೆ ಹಾಕಿ ಭದ್ರ ಪಡಿಸುವ ಪ್ರಕಾರ (೨ಅರ. ೧೨. ೧೦.) ಪೌಲನು ಪ್ರೀತಿಯ ಫಲವಾದ ಧರ್ಮದ ಬೊಕ್ಕಸವನ್ನು ಅವರ ಕೈಯಲ್ಲಿ ಭದ್ರವಾಗಿ ಒಪ್ಪಿಸ ಆಶೆಯುಳ್ಳವನಾಗಿದ್ದನು.

5. ಕ್ರಿಸ್ತನ ಸಂಪೂರ್ಣವಾದ ಆಶೀರ್ವಾದದೊಂದಿಗೆ ಬರುವೆನೆಂಬುವದು ಇದರ ಅಭಿಪ್ರಾಯ. ಇದು ಕ್ರಿಸ್ತನ ಪರಿಶುದ್ಧ ಸಾನ್ನಿಧ್ಯವನ್ನೂ, ಆತನ ಸುವಾರ್ತೆ ಜ್ಞಾನಬೋಧನೆಗಳನ್ನೂ ಕುರಿತದ್ದು. ಪೌಲನಲ್ಲಿದ್ದ ಈ ನಂಬಿಕೆಯು ಆತನ ಕೋರಿಕೆಗೆ ಅನುಸಾರವಾಗಿದೆ. (೧. ೧೧.)

6. ಜನಾಂಗಗಳವರಾದ ಕ್ರೈಸ್ತರಿಂದ ತಾನು ಯೆರೂಸಲೇಮಿಗೆ ತೆಗೆದು ಕೊಂಡು ಹೋಗುವ ಧರ್ಮಸಹಾಯವನ್ನು ಅವರು ಪ್ರೀತಿಯಿಂದ ಅಂಗೀಕರಿಸುವರೋ ಇಲ್ಲವೋ? ಎಂಬ ಸಂದೇಹವು ಪೌಲನ ಮನಸ್ಸಿನಲ್ಲಿ ಇತ್ತೆಂದು ತೋರುತ್ತದೆ. ಅವಿಶ್ವಾಸಿಗಳಾದ ಅವನ ಸ್ವದೇಶಸ್ಥರು ಅವನ ಮೇಲೆ ತಿರಸ್ಕಾರಭಾವವುಳ್ಳವರಾಗಿದ್ದದರಿಂದಲೂ, ಯೆಹೂದ್ಯರಾದ ಕ್ರೈಸ್ತರು ಜನಾಂಗಗಳ ಅಪೊಸ್ತಲನಾದ ತನ್ನ ಮೇಲೆ ಹೊಟ್ಟೇಕಿಚ್ಚು ಉಳ್ಳವರಾಗಿದ್ದದರಿಂದಲೂ ಅವನು ಹೀಗೆ ಸಂದೇಹ ಪಡುತ್ತಿದ್ದನೆಂದು ತೋರುತ್ತದೆ. (ಅಪೊ. ಕ್ರಿ. ೨೧. ೨೧—೨೭.) ಆದಾಗ್ಯೂ ಕೆಟ್ಟದ್ದನ್ನು ಒಳ್ಳೇತನದಿಂದ ಜಯಿಸ ಬೇಕೆಂಬುವ ದೇವರ ಕಟ್ಟಳೆಯ ಪ್ರಕಾರ ಅವರನ್ನು ಅವನು ಕ್ರೈಸ್ತರೆಂದು ಭಾವಿಸಿ ಪರಿಶುದ್ಧವಂತರೆಂದು ಕರೆಯುತ್ತಾನೆ.

7. ಇದು ಪರಿಶುದ್ಧಾತ್ಮನು ಭಕ್ತರ ಅಂತರ್ಯದಲ್ಲಿ ಹುಟ್ಟಿಸುವ ಪ್ರೀತಿಯನ್ನು ಕುರಿತದ್ದು. (ಫಿಲಿ. ೨. ೧. ಕೊಲೋ. ೧. ೮.) ಪರಿಶುದ್ಧಾತ್ಮನು ದೇವರೆಂದು ನಿರೂಪಿಸುವ ಅನೇಕ ವಚನಗಳಲ್ಲಿ ಇದು ಒಂದಾಗಿದೆ. ತನಗೋಸ್ಕರವಾಗಿಯೂ ಮತ್ತೊಬ್ಬರಿಗೋಸ್ಕರವಾಗಿಯೂ ಪ್ರಾರ್ಥನೆಯಲ್ಲಿ ಹೋರಾಡ ಬೇಕೆಂಬುವ ಸತ್ಯವು ಈ ವಚನದಲ್ಲಿ ಚನ್ನಾಗಿ ತೋರುತ್ತದೆ. ಆತ್ಮಶತ್ರುಗಳ ಸಂಗಡ ಮಾಡುವ ಹೋರಾಟದಲ್ಲಿ ಜಯ ಉಂಟಾಗುವದಕ್ಕೆ ಪ್ರಾರ್ಥನೆಯಲ್ಲಿ ಕರ್ತನ ಸಂಗಡ ಹೋರಾಡ ಬೇಕು.

8. ಕೆಂಕ್ರೆಯವು, ಕೊರಿಂಥ ಪಟ್ಣಕ್ಕೆ ಪೂರ್ವಕಡೆರೇವಾಗಿಯೂ, ಅದಕ್ಕೆ ಒಂಭತ್ತು ಮೈಲುಗಳ ದೂರದಲ್ಲಿದ್ದ ಊರಾಗಿಯೂ ಇತ್ತು. ಅಲ್ಲಿದ್ದ ಸಭೆಯಲ್ಲಿ ಫೊಯಿಬೆಯು ಸಹಾಯಕಳಾದ ಸೇವಕಳೆಂದು ತೋರುತ್ತದೆ. ಇಂಥಾ ಸಹಾಯಕರು ಪೂರ್ವಸಭೆಗಳಲ್ಲಿ ಇದ್ದರೆಂದು ಕಾಣುತ್ತದೆ. ವ್ಯಾಧಿಯಿಂದಲೂ ಕಷ್ಟದಿಂದಲೂ ಉಪದ್ರ ಪಡುವ ಸ್ತ್ರೀಯರನ್ನು ಕಂಡು ಅವರಿಗೆ ಸಹಾಯ ಮಾಡುವದು ಸಹಾಯಕರ ಕೆಲಸವಾಗಿರ ಬಹುದು. ಫೊಯಿಬೆ ಎಂಬುವಳು ಕೆಂಕ್ರೆಯ ಊರಿನಲ್ಲಿ ಸ್ಥಿತಿವಂತಳಾಗಿಯೂ ಪೌಲನನ್ನು ತನ್ನ ಮನೆಯಲ್ಲಿ ಅಂಗೀಕರಿಸಿ ಉಪಚರಿಸಿದವಳಾಗಿಯೂ ಇದ್ದಳೆಂದು ತೋರುತ್ತದೆ.



ಲ್ಲಿಯೂ ಅವಳಿಗೆ ಸಹಾಯ ಮಾಡಿರಿ. ಯಾಕಂದರೆ ಅವಳು ಅನೇಕರನ್ನೂ, [1]ನನ್ನನ್ನೂ ಪರಾಮರಿಸಿದವಳು.
೩, ೪ ಕ್ರಿಸ್ತ ಯೇಸುವಿನಲ್ಲಿ ನನ್ನ ಜತೆಕೆಲಸದವರಾದ ಪ್ರಿಸ್ಕಿಲ್ಲಳನ್ನೂ, ಅಕ್ವಿಲನನ್ನೂ [2]ವಂದಿಸಿರಿ. ಅವರು
[3]ನನ್ನ ಪ್ರಾಣಕ್ಕೋಸ್ಕರ ತಮ್ಮ ಕೊರಳು ಚಾಚಿದರು; ಅವರಿಗೆ ನಾನು ಮಾತ್ರವಲ್ಲ, ಜನಾಂಗಗಳ ಸಭೆಗ
೫ ಳೆಲ್ಲಾ ಸಹ ಸ್ತೋತ್ರ ಮಾಡುತ್ತವೆ. [4]ಅವರ ಮನೆಯಲ್ಲಿರುವ ಸಭೆಯನ್ನು ವಂದಿಸಿರಿ.
೬ [5]ಆಕಾಯದಲ್ಲಿ ಕ್ರಿಸ್ತನಿಗೆ ಪ್ರಥಮ ಫಲವಾಗಿರುವ ನನ್ನ ಪ್ರಿಯನಾದ ಎಪೈನೇತನನ್ನು ವಂದಿಸಿರಿ. ನಮ
೭ ಗೋಸ್ಕರ ಬಹು ಪ್ರಯಾಸ ಪಟ್ಟ [6]ಮರಿಯಳನ್ನು ವಂದಿಸಿರಿ. ನನ್ನ ನೆಂಟರಾಗಿಯೂ, ಜತೆಸೆರೆಯವರಾ
ಗಿಯೂ, ಇರುವ ಅಂದ್ರೋನಿಕನನ್ನೂ, ಯೂನ್ಯನನ್ನೂ ವಂದಿಸಿರಿ. ಅವರು ಅಪೊಸ್ತಲರಲ್ಲಿ [7]ಪ್ರಸಿದ್ಧರಾಗಿ
೮ ದ್ದಾರೆ; ಮತ್ತು ನನಗಿಂತ ಮುಂಚೆ ಕ್ರಿಸ್ತನಲ್ಲಿದ್ದರು. ಕರ್ತನಲ್ಲಿ ನನಗೆ ಪ್ರಿಯನಾದ ಅಂಪ್ಲಿಯನನ್ನು ವಂದಿಸಿರಿ.
೯ ಕ್ರಿಸ್ತನಲ್ಲಿ ನಮ್ಮ ಜತೆಕೆಲಸದವನಾದ ಉರ್ಬಾನನನ್ನೂ, ನನ್ನ ಪ್ರಿಯನಾದ ಸ್ತಾಕುಸನನ್ನೂ ವಂದಿಸಿರಿ.
೧೦ ಕ್ರಿಸ್ತನಲ್ಲಿ ಪರೀಕ್ಷಿತನಾದ ಅಪೆಲ್ಲನನ್ನು ವಂದಿಸಿರಿ. ಅರಿಸ್ತೊಬೂಲನವರಲ್ಲಿ ಇರುವವರನ್ನು ವಂದಿಸಿರಿ.
೧೧ ನನ್ನ ನೆಂಟನಾದ ಹೆರೋದ್ಯನನ್ನು ವಂದಿಸಿರಿ. ನರ್ಕಿಸ್ಸನವರೊಳಗೆ ಕರ್ತನಲ್ಲಿರುವವರನ್ನು ವಂದಿಸಿರಿ.
೧೨ ಕರ್ತನಲ್ಲಿ ಪ್ರಯಾಸ ಪಡುವವರಾದ ತ್ರುಫೈನಳನ್ನೂ ತ್ರುಫೋಸಳನ್ನೂ ವಂದಿಸಿರಿ. ಕರ್ತನಲ್ಲಿ ಬಹು ಪ್ರಯಾಸ
೧೩ ಪಟ್ಟ ಪ್ರಿಯಳಾದ ಪೆರ್ಸಿಸಳನ್ನು ವಂದಿಸಿರಿ. ಕರ್ತನಲ್ಲಿ ಆಯಲ್ಪಟ್ಟ [8]ರೂಫನನ್ನೂ, ನನ್ನ ತಾಯಿಯಾದ
೧೪ ಅವನ ತಾಯಿಯನ್ನೂ ವಂದಿಸಿರಿ. ಅಸುಂಕ್ರಿತನನ್ನೂ, ಫ್ಲೆಗೋನನನ್ನೂ, ಹೆರ್ಮನನ್ನೂ, ಪತ್ರೋಬನನ್ನೂ,
೧೫ ಹೆರ್ಮೆಯನ್ನೂ, ಅವರೊಂದಿಗಿರುವ ಸಹೋದರರನ್ನೂ ವಂದಿಸಿರಿ. ಫಿಲೊಲಗನನ್ನೂ, ಯೂಲ್ಯಳನ್ನೂ,
ನೇರ್ಯನನ್ನೂ, ಅವನ ಸಹೋದರಿಯನ್ನೂ, ಒಲುಂಪನನ್ನೂ, ಅವರೊಂದಿಗಿರುವ ಪರಿಶುದ್ಧರೆಲ್ಲರನ್ನೂ ವಂದಿಸಿರಿ.
೧೬ [9]ಪರಿಶುದ್ಧ ಮುದ್ದಿನಿಂದ ಒಬ್ಬರನ್ನೊಬ್ಬರು ವಂದಿಸಿರಿ. ಕ್ರಿಸ್ತನ ಸಭೆಗಳು ನಿಮ್ಮನ್ನು ವಂದಿಸುತ್ತವೆ.
೧೭ ಆದರೆ, ಸಹೋದರರೇ, ನೀವು ಕಲಿತ ಬೋಧನೆಗೆ ವಿರೋಧವಾಗಿ [10]ಭೇದಗಳನ್ನೂ, ಆಟಂಕಗಳನ್ನೂ ಮಾಡು
ವವರನ್ನು ಗುರುತಿಟ್ಟು, ಅವರ ಬಳಿಯಿಂದ ತೊಲಗಿ ಹೋಗಿರೆಂದು, ನಿಮ್ಮನ್ನು ಬೇಡಿ ಕೊಳ್ಳುತ್ತೇನೆ.

1. ಇದರಿಂದ ಅವಳ ಪರೋಪಕಾರಗುಣವು ತೋರುತ್ತದೆ. ಕ್ರೈಸ್ತರಿಗೆ ಇದು ಮುಖ್ಯ ಲಕ್ಷಣವು.

2. ೩ನೇ ವಚನದಿಂದ ೧೬ನೇ ವಚನದ ವರಿಗೂ ೨೮ ಭಕ್ತರ ಹೆಸರುಗಳು ಹೇಳಲ್ಪಟ್ಟವೆ. ತನ್ನ ಹಾಗೆ ಕ್ರಿಸ್ತನಿಗೆ ಸೇವೆ ಮಾಡಿ ಆತನಿಗಾಗಿ ಹಿಂಸೆ ತಾಳಿದವರನ್ನು ಪೌಲನು ವಿಶೇಷವಾಗಿ ವಂದಿಸುತ್ತಾನೆ. ಇವರಲ್ಲಿ ಅನೇಕರನ್ನು ಅವನು ಬೇರೆ ಸ್ಥಳಗಳಲ್ಲಿ ಕಂಡು ಪರಿಚಿತಿ ಮಾಡಿ ಕೊಂಡವನಾಗಿಯೂ, ಕೆಲವರನ್ನು ಅಕ್ವಿಲನ ಪ್ರಿಸ್ಕಿಲ್ಲಳ ಮೂಲಕವಾಗಿ ತಿಳಿದು ಕೊಂಡವನಾಗಿಯೂ ಇದ್ದನು.

3. ಪೌಲನ ಪ್ರಾಣವನ್ನು ಕಾಪಾಡುವದಕ್ಕೆ ಅವರು ತಮ್ಮ ಪ್ರಾಣವನ್ನು ಒಪ್ಪಿಸ ಸಿದ್ಧವಾಗಿದ್ದರು. ಇದು ಕೊರಿಂಥ ಪಟ್ಣದಲ್ಲಾದರೂ (ಅಪೊ. ಕ್ರಿ. ೧೮. ೬.) ಎಫೆಸ ಪಟ್ಣದಲ್ಲಾದರೂ (ಅಪೊ. ಕ್ರಿ. ೧೯. ೩೦. ೨ಕೊರಿ. ೧. ೮—೧೦.) ಸಂಭವಿಸಿರುವದು. ಹೀಗೆ ಅವರು ಯೋಹಾನನು ಹೇಳಿದ ಶ್ರೇಷ್ಠ ಮಾದ್ರಿಯ ಪ್ರಕಾರ ನಡೆದು ಕೊಂಡರು. (೧ ಯೋಹಾ. ೩. ೧೬.)

4. ಅಕ್ವಿಲನೂ ಅವನ ಹೆಂಡತಿ ಪ್ರಿಸ್ಕಿಲ್ಲಳೂ, (೧ಕೊರಿ. ೧೬. ೧೯.) ಇನ್ನೂ ಕೆಲವು ಕ್ರೈಸ್ತ ಕುಟುಂಬಗಳೂ, (ಕೊಲೊ. ೪. ೧೫. ಫಿಲೆ. ೨.) ತಮ್ಮ ಮನೆಗಳಲ್ಲಿ ಕ್ರೈಸ್ತರು ಸಭೆಯಾಗಿ ಕೂಡಿ ಬರುವ ಹಾಗೆ ಸ್ಥಳ ಕೊಟ್ಟರು. ಇಂಥಾ ಸಭೆಗಳನ್ನು ಕುರಿತೇ ೧೫ನೇ ವಚನದಲ್ಲಿ ಹೇಳಿ ಇರುತ್ತದೆಂದು ತೋರುತ್ತದೆ.

5. ದೇವರನ್ನು ಘನ ಪಡಿಸ ಮುಂಕೊಳ್ಳುವವರನ್ನು ಪೌಲನು ಸಹ ಘನ ಪಡಿಸುತ್ತಾನೆ.

6. ಈ ವಚನಗಳಲ್ಲಿ ಹೇಳಲ್ಪಟ್ಟ ಭಕ್ತರಲ್ಲಿ ಅನೇಕರು ಸ್ತ್ರೀಯರಾಗಿದ್ದರು. ಪ್ರಿಸ್ಕಿಲ್ಲಳು, ಮರಿಯಳು, ತ್ರುಫೈನಳು, ತ್ರುಫೋಸಳು, ಪೆರ್ಸಿಸಳು, ಯೂಲ್ಯಳು, ಫೊಯಿಬೆಯು ಒಂದು ವೇಳೆ ಯೂನ್ಯಳು, ಆದ ಇವರೆಲ್ಲರೂ ನಾರೀಶಿರೋಮಣಿಗಳಾಗಿದ್ದವರು. ಆದಿಯಲ್ಲಿ ಸಭೆ ವೃದ್ಧಿಯಾಗುವದಕ್ಕೆ ಸ್ತ್ರೀಯರು ಬಹು ಉಪಯೋಗವಾಗಿದ್ದರೆಂದು ಇದರಿಂದ ಪ್ರತ್ಯಕ್ಷವಾಗಿ ತೋರುತ್ತದೆ.

7. ಬಂಧುತ್ವದಿಂದಲೂ, ಕ್ರಿಸ್ತನಿಗಾಗಿ ಹಿಂಸೆ ತಾಳುವದರಿಂದಲೂ, ಅಪೊಸ್ತಲರಲ್ಲಿ ಪ್ರಸಿದ್ಧರಾಗಿರುವದರಿಂದಲೂ ಮುಂದಾಗಿ ಕರ್ತನ ದಾಸರಾಗುವದರಿಂದಲೂ, ಅಂದ್ರೋನಿಕನೂ ಯೂನ್ಯನೂ ಪೌಲನ ಸಂಗಡ ಬಂಧಿಸಲ್ಪಟ್ಟವರಾಗಿದ್ದರು.

8. ರೂಫನು ಒಂದು ವೇಳೆ ಕುರೇನ್ಯನಾದ ಸೀಮೋನನ ಮಗನಾಗಿ ಇರ ಬಹುದು. (ಮಾರ್ಕ. ೧೫. ೨೧.) ಈ ಭಕ್ತನ ತಾಯಿ ತನ್ನ ಸದ್ಗುಣ ಸತ್ಕ್ರಿಯೆಗಳಿಂದ ಪೌಲನಿಗೆ ಸಹ ತಾಯಿಯ ಹಾಗಿದ್ದಳು.

9. ಮುದ್ದಿನಿಂದ ವಂದಿಸುವದು ಆ ಕಾಲದಲ್ಲಿ ಆ ದೇಶದಲ್ಲಿ ಇದ್ದ ಜನರೊಳಗೆ ವಾಡಿಕೆಯಾಗಿತ್ತು. ಅವರಲ್ಲಿ ಸಾಧಾರಣವಾಗಿ ವಾಡಿಕೆಯಾಗಿದ್ದ ಮುದ್ದು ಕ್ರೈಸ್ತರಲ್ಲಿ ಪರಿಶುದ್ಧ ಮುದ್ದಾಗಿ ಬಳಿಸುವ ಹಾಗೆ ಕಟ್ಟಳೆ ಉಂಟಾಯಿತು. ಒಳಗಿನ ಪ್ರೀತಿಗೆ ಇದು ಹೊರಗಿನ ಒಳ್ಳೇ ಗುರುತಾಗಿತ್ತು.

10. ಈ ಪತ್ರಿಕೆಯ ಕಡೆಯಲ್ಲಿ ಪೌಲನು ತಿರಿಗಿ ತಾನು ಬರೆದ ಮುಖ್ಯವಾದ ಗುರಿಯನ್ನು ಹೇಳುತ್ತಾನೆ, ಏನಂದರೆ—ಯೆಹೂದ್ಯರಲ್ಲಿಯೂ ಜನಾಂಗಗಳವರಲ್ಲಿಯೂ ಕ್ರೈಸ್ತರಾದವರು ವಾಗ್ವಾದವಿಲ್ಲದೆ ಸಮಾಧಾನವಾಗಿರ ಬೇಕೆಂಬುವದೇ. ಭೇದ ಮಾಡುವವರನ್ನು ಅಗಲಿ ಇರುವದುತ್ತಮ.

೧೮ ಯಾಕಂದರೆ ಅಂಥವರು ನಮ್ಮ ಕರ್ತನಾದ ಯೇಸು ಕ್ರಿಸ್ತನಿಗಲ್ಲ, ತಮ್ಮ [1]ಹೊಟ್ಟೆಗೆ ಸೇವೆ ಮಾಡಿ, ನಯ
ಮಾತುಗಳಿಂದಲೂ, ಹೊಗಳಿಕೆಯಿಂದಲೂ, ಕೆಟ್ಟತನವಿಲ್ಲದವರ ಹೃದಯಗಳನ್ನು ಮೋಸಗೊಳಿಸುತ್ತಾರೆ.
೧೯ ನಿಮ್ಮ [2]ವಿಧೇಯತ್ವವು ಎಲ್ಲರಿಗೆ ಬೈಲಾಯಿತು; ಆದದರಿಂದ ನಿಮ್ಮ ನಿಮಿತ್ತ ಸಂತೋಷ ಪಡುತ್ತೇನೆ. ಆದರೆ
ನೀವು ಒಳ್ಳೇತನಕ್ಕೆ ಜ್ಞಾನಿಗಳಾಗಿಯೂ, ಕೆಟ್ಟತನಕ್ಕೆ [3]ನಿರ್ಮಲರಾಗಿಯೂ ಇರ ಬೇಕೆಂದು, ಇಚ್ಛೈಸುತ್ತೇನೆ.
೨೦ ಆದರೆ, ಸಮಾಧಾನದ ದೇವರು ಸೈತಾನನನ್ನು ಬೇಗ ನಿಮ್ಮ ಪಾದಗಳ ಕೆಳಗೆ [4]ಜಜ್ಜುವನು.
ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಸಂಗಡ ಇರಲಿ. [5]ಆಮೆನ್.
೨೧ ನನ್ನ ಜತೆಕೆಲಸದವನಾದ ತಿಮೊಥೆಯನೂ, ನನ್ನ ನೆಂಟರಾದ [6]ಲೂಕ್ಯನೂ, ಯಸೋನನೂ, ಸೋಸಿಪತ್ರನೂ,
೨೨ ನಿಮ್ಮನ್ನು ವಂದಿಸುತ್ತಾರೆ. [7]ಈ ಪತ್ರಿಕೆಯನ್ನು ಬರೆದ ತೆರ್ತ್ಯನೆಂಬ ನಾನು ಕರ್ತನಲ್ಲಿ ನಿಮ್ಮನ್ನು ವಂದಿಸುತ್ತೇನೆ.
೨೩ ನನಗೂ ಎಲ್ಲಾ ಸಭೆಗೂ ಉಪಚಾರಿಯಾದ [8]ಗಾಯನು ನಿಮ್ಮನ್ನು ವಂದಿಸುತ್ತಾನೆ. [9]ಪಟ್ಣದ ಉಗ್ರಾ
ಣಿಕನಾದ ಎರಸ್ತನೂ, ಸಹೋದರನಾದ ಕ್ವರ್ತನೂ ನಿಮ್ಮನ್ನು ವಂದಿಸುತ್ತಾರೆ.
೨೪ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.
೨೫ ಈಗ, ನನ್ನ ಸುವಾರ್ತೆಯ ಪ್ರಕಾರವಾಗಿಯೂ, ಯೇಸು ಕ್ರಿಸ್ತನ ಪ್ರಸಂಗದ ಪ್ರಕಾರವಾಗಿಯೂ, [10]ಆದಿ
೨೬ ಕಾಲಗಳಿಂದ ಮರೆಯಾಗಿದ್ದು, ಈಗ ಪ್ರತ್ಯಕ್ಷವಾಗಿ, [11]ಪ್ರವಾದಿಗಳ ಬರಹಗಳ ಮುಖಾಂತರ ನಿತ್ಯ ದೇವರ
ಅಪ್ಪಣೆಯ ಮೇರೆಗೆ, ವಿಶ್ವಾಸದ ವಿಧೇಯತ್ವಕ್ಕೋಸ್ಕರ ಸಮಸ್ತ ಜನಾಂಗಗಳಿಗೆ ತಿಳಿಯ ಮಾಡಲ್ಪಟ್ಟ ಮ
೨೭ ರ್ಮದ ಪ್ರಕಟಣೆಯ ಪ್ರಕಾರವಾಗಿಯೂ, ನಿಮ್ಮನ್ನು ಸ್ಥಿರ ಪಡಿಸ ಶಕ್ತನಾಗಿರುವ ಒಬ್ಬನೇ ಜ್ಞಾನಿಯಾದ
ದೇವರಿಗೆ, ಯೇಸು ಕ್ರಿಸ್ತನ ಮುಖಾಂತರ, ಎಂದೆಂದಿಗೂ ಮಹಿಮೆ ಆಗಲಿ. ಆಮೆನ್.

---

1. ಅಸತ್ಯವನ್ನು ಬೋಧಿಸಿ ಭೇದವನ್ನುಂಟು ಮಾಡಿದವರು, ತಮ್ಮ ಶರೀರದಿಚ್ಛೆಗಳ ಪ್ರಕಾರ ದ್ರವ್ಯವನ್ನೂ ಶ್ರೇಷ್ಠತ್ವವನ್ನೂ ಆಶಿಸಿ ನಡೆದವರಾಗಿದ್ದರು. ಇಂಥವರು ತಮ್ಮ ನಯನುಡಿಗಳಿಂದ ಕಪಟವಿಲ್ಲದವರನ್ನು ವಶ ಪಡಿಸಿ ಕೊಳ್ಳುವವರಾಗಿದ್ದರು.

2. ಪೌಲನು ತಾನು ಹೇಳುವ ಬೋಧನೆಗಳನ್ನು ಅವರು ಅಂಗೀಕರಿಸುವರೆಂಬ ನಂಬಿಕೆ ಅವನಿಗೆ ಇದ್ದಾಗ್ಯೂ, ಕಳ್ಳ ಬೋಧಕರು ಹೇಳುವ ಬೋಧನೆಗಳನ್ನು ಅವರು ಸುಲಭವಾಗಿ ಅಂಗೀಕರಿಸುವರೆಂಬ ಸಂದೇಹದಿಂದ ಹೀಗೆ ಹೇಳುತ್ತಾನೆ.

3. ನಿರ್ಮಲತ್ವ ಎಂಬುವದು ನಿರ್ದೋಷವೆಂದು, ಮತ್ತಾ. ೧೦. ೧೬. ವಚನದ ವ್ಯಾಖ್ಯಾನದಲ್ಲಿ ಕಾಣುವದು. ಕರ್ತನು ಹೇಳಿದ ಈ ವಾಕ್ಯವನ್ನು ಪೌಲನು ತನ್ನ ಮನಸ್ಸಿನಲ್ಲಿ ಇಟ್ಟು ಕೊಂಡು ಈ ಕಟ್ಟಳೆಯನ್ನು ಬರೆದನೆಂದು ತೋರುತ್ತದೆ.

4. ಸಮಾಧಾನದ ದೇವರು, ಸುಳ್ಳಿನ ತಂದೆಯೂ ಕಲಹ ಭೇದಗಳಿಗೆ ಕಾರಣನೂ ಆಗಿರುವ ಸೈತಾನನನ್ನು ಅತಿ ಶೀಘ್ರವಾಗಿ ಜಜ್ಜುವನು. ಆಗ ಉತ್ಪ. ೩. ೧೫ಲ್ಲಿ ಅಡಗಿರುವ ಆದಿ ಪ್ರವಾದನೆಯು ಸಂಪೂರ್ಣವಾಗಿ ಈಡೇರುವದು.

5. ಈ ಅಂತ್ಯೋಕ್ತಿಯಿಂದ ಪೌಲನು ಈ ಪತ್ರಿಕೆಯನ್ನು ಮುಗಿಸ ಯೋಚಿಸಿರುವನು. ತರುವಾಯ ಕೆಲವು ವಿಷಯಗಳನ್ನು ನೆನಸಿ ಕೊಂಡು ಅವುಗಳನ್ನು ಬರೆದಿರುವನು. ಇನ್ನು ಕೆಲವು ಪತ್ರಿಕೆಗಳಲ್ಲಿಯೂ ಹೀಗೆ ಬರೆದಿರುವದನ್ನು ನೋಡ ಬಹುದು. (೧ ಕೊರಿ. ೧೬. ೨೨—೨೪. ಫಿಲಿ. ೪. ೨೦—೨೩.)

6. ತಿಮೊಥೆಯನು ಪೌಲನ ಸಂಗಡ ಇದ್ದಾಗಲೆಲ್ಲಾ ಅವನ ಹೆಸರು ಬೇರೆ ಪತ್ರಿಕೆಗಳ ಮುಂಭಾಗದಲ್ಲಿ ಬರೆದಿರಲಾಗಿ ಈ ಪತ್ರಿಕೆಯಲ್ಲಿ ಮಾತ್ರ ಅವನ ಹೆಸರು ಮುಂಭಾಗದಲ್ಲಿ ಇಲ್ಲ. ಲೂಕ್ಯನು ಅಪೊ. ಕ್ರಿ. ೧೩. ೧ಲ್ಲಿ ಹೇಳಿದ ಕುರೇನೆ ಊರಿನವನಾಗಿರಬಹುದು. ಯಾಸೋನನು ಥೆಸ್ಸಲೊನೀಕ್ಯದವನೂ, ಸೋಸಿಪತ್ರನು ಬೆರೋಯದವನೂ ಆಗಿರ ಬಹುದು. (ಅಪೊ. ಕ್ರಿ. ೨೦. ೪.)

7. ಪೌಲನು ತನ್ನ ಪತ್ರಿಕೆಗಳನ್ನು ಬಹುಶಾ ಬೇರೊಬ್ಬರಿಂದ ಬರೆಸಿದನೆಂದು ತೋರುತ್ತದೆ. ಕಡೆಯಲ್ಲಿ ತಾನು ಹೇಳುವ ಆಶೀರ್ವಾದವನ್ನು ಮಾತ್ರ ತನ್ನ ಸ್ವಹಸ್ತದಿಂದ ಬರೆಯುವನು. (೧ ಕೊರಿ. ೧೬. ೨೧. ೨ ಥೆಸ್ಸ. ೩. ೧೭.) ಈ ಪತ್ರಿಕೆಯನ್ನು ಬರೆದ ತೆರ್ತ್ಯನೆಂಬವನು, ನಾನು ವಂದಿಸುತ್ತೇನೆಂದು ತನ್ನ ಸ್ವಹಸ್ತದಿಂದ ಬರೆಯುತ್ತಾನೆ.

8. ಗಾಯನಿಗೆ ಪೌಲನು ಸ್ನಾನ ಕೊಟ್ಟದ್ದನು. (೧ ಕೊರಿ. ೧. ೧೪.) ಪೌಲನು ಎರಡನೇ ಸಾರಿ ಕೊರಿಂಥಕ್ಕೆ ಹೋದಾಗ ಅವನ ಮನೆಯಲ್ಲಿ ತಂಗಿದ್ದನು. ಕ್ರೈಸ್ತರು ಅವನ ಮನೆಯಲ್ಲಿ ಸಭೆಯಾಗಿ ಕೂಡಿ ಬರುವರು.

9. ಎರಸ್ತನು ಕೊರಿಂಥ ಪಟ್ಣದ ಉಗ್ರಾಣಿಕನು. ಹೀಗೆ ಕ್ರಿಸ್ತನ ಮಾರ್ಗವು ಎಲ್ಲಾ ಅಂತಸ್ತಿನವರಲ್ಲಿ ಫಲ ಕೊಟ್ಟಿತು.

10. ಈ ರಹಸ್ಯವನ್ನು ಕುರಿತು ಪೂರ್ವಪ್ರವಾದಿಗಳು ಹೇಳಿದ್ದಾಗ್ಯೂ ಅವುಗಳನ್ನು ಯೆಹೂದ್ಯರು ಗ್ರಹಿಸದೆ ಜನಾಂಗಗಳವರು ಅರಿಯದೆ ಹೋದರು. ಸುವಾರ್ತೆಯ ಪ್ರಸಂಗದಿಂದ ಅದು ಎಲ್ಲಾ ದೇಶಗಳವರಿಗೂ ಪ್ರಕಟವಾಯಿತು.

11. ಪೌಲನು ಈ ಅಂತ್ಯೋಕ್ತಿಯಲ್ಲಿ ಪತ್ರಿಕೆಯ ಶ್ರೇಷ್ಠ ವಿಷಯವನ್ನೂ ಗುರಿಯನ್ನೂ ತಿಳಿಸುತ್ತಾನೆ. ಜನಾಂಗಗಳು ವಿಶ್ವಾಸಕ್ಕೆ ವಿಧೇಯರಾಗುವದೇ ಇದರ ಗುರಿಯು. ಆದಿಯಿಂದ ಮರೆಯಾಗಿದ್ದು ಪ್ರವಾದಿಗಳಿಂದ ಸಾರಲ್ಪಟ್ಟ ಈ ರಹಸ್ಯವು ಪ್ರಕಟವಾಯಿತು. ಈ ಪ್ರಕಟಣೆ ಸಮಸ್ತರನ್ನೂ ವಿಶ್ವಾಸಕ್ಕೆ ವಿಧೇಯರಾಗುವಂತೆ ಮಾಡ ಹೇತುವೆಯಾಯಿತು. ಇದರಿಂದ ತೋರುವ ದೇವರ ಕೃಪೆಯನ್ನು ನಾವು ಯಾವಾಗಲೂ ಸ್ತುತಿಸುವ. ಆಮೆನ್.

# THE FIRST EPISTLE OF PAUL THE APOSTLE TO THE CORINTHIANS.

## ಅಪೊಸ್ತಲನಾದ ಪೌಲನು ಕೊರಿಂಥ್ಯರಿಗೆ ಬರೆದ ಮೊದಲನೇ ಪತ್ರಿಕೆಯ ಪೀಠಿಕೆ.

ಗ್ರೀಕ ದೇಶವು ಪ್ರಖ್ಯಾತಿಯಾಗಿ ಬಾಳುವ ಕಾಲದಲ್ಲಿ ಕೊರಿಂಥ ಪಟ್ಣವು ಐಶ್ವರ್ಯದಲ್ಲಿಯೂ, ವಿದ್ಯದಲ್ಲಿಯೂ, ನಾಗರೀಕದಲ್ಲಿಯೂ, ಕೈಕೆಲಸಗಳಲ್ಲಿಯೂ ಕೀರ್ತಿ ಹೊಂದಿದ್ದಾಗಿತ್ತು.

ಅಪೊಸ್ತಲನಾದ ಪೌಲನು ಎರಡನೇ ಸಾರಿ ಪ್ರಸಂಗ ಮಾಡುವದಕ್ಕೆ ಪ್ರಯಾಣ ಮಾಡಿದಾಗ ಈ ಪಟ್ಣಕ್ಕೆ ಹೋಗಿ ಸುವಾರ್ತೆ ಪ್ರಸಂಗಿಸಿದನು. (೧೮. ಸಂಧಿ.) ದೇವಭಕ್ತಿಯುಳ್ಳ ಇಬ್ಬರು ಯೆಹೂದ್ಯರ ಸಂಗಡ ವಾಸ ಮಾಡಿ, ಸ್ವಂತ ಕೆಲಸದಿಂದ ಜೀವನ ಮಾಡಿ ಕೊಂಡು, ತನ್ನ ವಾಡಿಕೆಯ ಪ್ರಕಾರ ಮೊದಲು ಯೆಹೂದ್ಯರಿಗೆ ಕೆಲವು ವಾರಗಳು ಸಭೆಮನೆಯಲ್ಲಿ ಸುವಾರ್ತೆಯ ಬೋಧನೆಗಳನ್ನು ಬೋಧಿಸಿದ್ದರಿಂದ, ಅವರಿಂದ ಆತನಿಗೆ ಉಪದ್ರ ಸಂಭವಿಸಿತು. ಆದಾಗ್ಯೂ ಆಶ್ಚರ್ಯ ವಿಧವಾಗಿ ಆತನಿಗೆ ದೇವರ ಸಹಾಯ ಉಂಟಾದದರಿಂದ ಒಂದುವರೆ ಸಂವತ್ಸರ ಅಲ್ಲಿದ್ದು, ಕ್ರಿಸ್ತನ ಮಾರ್ಗವನ್ನು ಪ್ರಸಿದ್ಧಿ ಮಾಡಿದ್ದರಿಂದ ಅನೇಕರು ಗುಣ ಪಟ್ಟು ಸಭೆಯಲ್ಲಿ ಸೇರಿದರು.

ಪೌಲನು ಅಲ್ಲಿಂದ ಹೊರಟು ಹೋದ ತರುವಾಯ ಅಪೊಲ್ಲೋಸ್ ಎಂಬವನು ಅಲ್ಲಿಗೆ ಹೋಗಿ, ಆ ಮಾರ್ಗದ ವಿಷಯವನ್ನು ಕುರಿತು ಕ್ರೈಸ್ತರಿಗೂ ಯೆಹೂದ್ಯರಿಗೂ ಉಂಟಾದ ತರ್ಕಗಳಲ್ಲಿ ನಾನಾ ಪ್ರಕಾರ ಅನುಕೂಲ ಉಂಟು ಮಾಡಿದನು. (ಅಪೊ. ಕ್ರಿ. ೧೮. ೨೭, ೨೮.) ಇಂಥಾ ಸಹಾಯಗಳನ್ನೆಲ್ಲಾ ಹೊಂದಿದ ಆ ಸಭೆಯಲ್ಲಿ ಅನೇಕ ವಿಧವಾದ ತಾರುಮಾರುಗಳು ಉಂಟಾದವು. ಗ್ರೀಕರಲ್ಲಿ ಇದ್ದ ಹೆಚ್ಚಳವೂ, ಕಕ್ಷಿಯೂ, ಆ ಸಭೆಯವರಲ್ಲಿಯೂ ಉಂಟಾದದರಿಂದ ಸಭೆಯ ಸ್ಥಿತಿಯು ಬಹುಶಾ ಕೆಟ್ಟು ಹೋಯಿತು. ಬೋಧಕರ ಬೋಧನೆಗೆ ತಕ್ಕದ್ದಾಗಿ ನಾನಾ ಕಕ್ಷಿಗಾರರು ಎದ್ದರು. (೧. ೧೦—೧೨.) ಯೆಹೂದ್ಯ ಮತದ ಬೋಧಕರು ಪೌಲನ ಗುಣಾತಿಶಯಗಳನ್ನು ಕುರಿತೂ, ಕೆಲಸವನ್ನು ಕುರಿತೂ ಬಹಳವಾಗಿ ತಪ್ಪು ಹೊರಿಸುತ್ತಾ ಬಂದರು. ಒಂದು ಕಕ್ಷಿಗಾರರು ಸನ್ಮಾರ್ಗಕ್ಕೆ ಸ್ವಲ್ಪವಾದರೂ ಸರಿ ಬೀಳದ ಕಾರ್ಯಗಳನ್ನು ಮಾಡಿದರು; (೫, ೬. ಸಂಧಿ. ೯. ವ.) ಮತ್ತು ವಿಗ್ರಹಗಳಿಗೆ ನಡಿಯುವ ಉತ್ಸವಗಳಿಗೂ ಹೋದರು. (೮. ೪—೧೩; ೧೦. ೧೪—೩೩.) ಕೆಲವರು ತಮ್ಮ ಸಹೋದರರಿಗೆ ವಿರೋಧವಾಗಿ ಅಜ್ಞಾನ ನ್ಯಾಯಾಧಿಪತಿಗಳ ಬಳಿಯಲ್ಲಿ ಫಿರ್ಯಾದು ಮಾಡಿದರು. (೬. ೧—೮.) ಸ್ತ್ರೀಯರು ನಾಚಿಕೆ ಎಂಬ ಬೇಲಿಯನ್ನು ದಾಟಿದವರಾಗಿ ತಲೆಯ ಮೇಲೆ ಮುಸುಕಿಲ್ಲದೆ, ತೃಣೀಕಾರವಾಗಿ ಸಭೆಯಲ್ಲಿ ನಿಂತು ಪ್ರಸಂಗಿಸಿದರು. (೧೧. ೩—೧೦; ೧೪. ೩೪, ೩೫.) ಕರ್ತನ ರಾತ್ರಿಭೋಜನದ ಆಚರಣೆಯು ಒಂದು ಸಾಧಾರಣ ಔತಣದಂತೆ, ಸಭೆಯಲ್ಲಿ ತಾರುಮಾರಾಗಿ ನಡಿಯುತ್ತಾ ಇತ್ತು. (೧೧. ೨೦, ೩೪.) ಕ್ರಿಸ್ತನ ಮಾರ್ಗವು ಕಲಿಸುವ ಸದ್ಗುಣಗಳಿಗಿಂತ ಅದ್ಭುತವರಗಳು ಅಧಿಕ ಶ್ರೇಷ್ಠವೆಂದು ಅನೇಕರು ಎಣಿಸಿ ಕೊಂಡು ಭಕ್ತಿಯ ವೃದ್ಧಿಯನ್ನು ಕೋರದೆ, ಸ್ವಂತ ಹೊಗಳಿಕೆಯನ್ನು ಅಪೇಕ್ಷಿಸಿ, ಅವುಗಳನ್ನೇ ಪ್ರಯೋಗಿಸುತ್ತಾ ಬಂದರು. (೧೪. ಸಂಧಿ.) ಪುನರುತ್ಥಾನವೆಂಬ ಉಪದೇಶವು ಶಾಸ್ತ್ರಕ್ರಮಕ್ಕೆ ಸರಿ ಬೀಳದೆಂದು ಅನೇಕರು ಎಣಿಸಿ ಕೊಂಡು, ಅದನ್ನು ಕುರಿತು ಸಂದೇಹ ಪಟ್ಟು, ನಿರಾಕರಿಸುವದಕ್ಕೆ ಪ್ರಾರಂಭಿಸಿದರು. (೧೫. ೧೨.)

ಇಂಥಾ ತಾರುಮಾರುಗಳು ಉಂಟಾಗಿದ್ದ ಆ ಸಭೆಯಲ್ಲಿ ಉತ್ತಮ ಭಕ್ತರು ಅನೇಕರಿದ್ದದರಿಂದ, ಪೌಲನು ಅವರನ್ನು ಕುರಿತು ಸಾಧಾರಣವಾಗಿ ಮಾತಾಡುವಾಗ, ಕ್ರಿಸ್ತ ಯೇಸುವಿನಲ್ಲಿ ಪರಿಶುದ್ಧ ಮಾಡಲ್ಪಟ್ಟವರೆಂದು ಹೊಗಳಿ ಬರೆದಿರುವದು ನ್ಯಾಯವಾಗಿದೆ. ಅವರ ಸ್ಥಿತಿಯು ಅಜ್ಞಾನಾಂಧಕಾರದಿಂದ ಸುವಾರ್ತೆಯ ಆಶ್ಚರ್ಯವಾದ ಬೆಳಕಿನಲ್ಲಿ ಪ್ರವೇಶಿಸುವ ನೂತನ ಕ್ರೈಸ್ತರ ಸ್ಥಿತಿ. ಬಾಲ್ಯದಿಂದ ಅವರಲ್ಲಿ ಬೆಳದ ದುರ್ಗುಣಗಳು ಪೂರ್ಣ ನಿವರ್ತಿಯಾಗಿ, ಕ್ರಿಸ್ತನ ಮಾರ್ಗವು ಕಲಿಸುವ ಸದ್ಗುಣಗಳು ಅವರಲ್ಲಿ ಪೂರ್ಣ ಪ್ರಕಾಶ ಹೊಂದುವದಕ್ಕೆ ಬಹಳ ಕಾಲ ಹಿಡಿಯುವದೆಂಬುವದು ಸಹಜವಾದ ಕಾರ್ಯವೇ.

ಪೌಲನು ಎಫೆಸ ಪಟ್ಣದಲ್ಲಿ ವಾಸವಾಗಿದ್ದ ಕಡೇ ಕಾಲದಲ್ಲಿ ಕೊರಿಂಥ ಸಭೆಯವರಿಂದ ಆತನಿಗೆ ಒಂದು ಪತ್ರಿಕೆ ಬಂತೆಂದು ತೋರುತ್ತದೆ. ಅದರಲ್ಲಿ ತಮ್ಮೊಳಗಿದ್ದ ತಾರುಮಾರುಗಳನ್ನೂ ಕೆಟ್ಟತನಗಳನ್ನೂ ಕುರಿತು ಏನೂ ಹೇಳದೆ, ತಮ್ಮೊಳಗೆ ಹುಟ್ಟಿದ ನಾನಾ ತರ್ಕಗಳನ್ನು ಕುರಿತು ಆತನ ಅಭಿಪ್ರಾಯವನ್ನು ಕೇಳಿದ್ದರಿಂದ (೭. ೧; ೮. ೧. ವಚನಗಳ ವ್ಯಾಖ್ಯಾನದಲ್ಲಿ ನೋಡಬೇಕು.) ಆತನ ಬೋಧನೆಯ ಪ್ರಕಾರ ತಾವು ಇನ್ನೂ ನಡಿಯುತ್ತಾ ಇದ್ದೇವೆಂದು ತೋರಿಸಿದರು. (೧೧. ೨.) ಅವರೊಳಗಿದ್ದ ವಾಗ್ವಾದಗಳನ್ನು ಕುರಿತು ಪೌಲನು ಬೇರೊಬ್ಬರ ಮೂಲಕವಾಗಿ ಕೇಳಿ ಇದ್ದನು. (೧. ೧೧; ೫. ೧.) ತಿಮೊಥೆಯನಿಗೆ ತಕ್ಕ ಆಲೋಚನೆ ಹೇಳಿ, ಮಕೆದೋನ್ಯದಿಂದ ಕೊರಿಂಥಕ್ಕೆ ಹೋಗಿ ತಾನು ಸಭೆಯವರಿಗೆ ಹೇಳಿದ್ದ ಬೋಧನೆಗಳನ್ನೆಲ್ಲಾ ಅವರಿಗೆ ಜ್ಞಾಪಕ ಪಡಿಸಲೂ, (೪. ೧೭.) ತಾನು ಇನ್ನು ಸ್ವಲ್ಪ ಕಾಲದಲ್ಲಿ ಮಕೆದೋನ್ಯದ ಮಾರ್ಗವಾಗಿ ಹೋಗುವಾಗ